ಶುಕ್ರವಾರ, ಮಾರ್ಚ್ 13, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಜಾಗೃತಿ ಜಾಥಾ...
ಕಲಬುರಗಿಯ ಚಿರಾಯು ಆಸ್ಪತ್ರೆ ಸಿಬ್ಬಂದಿ ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಗುರುವಾರ ಜಾಗೃತಿ ಜಾಥಾ ನಡೆಸಿದರು

ದ್ರಾವಿಡ್‌ಗೆ ಗೌರವ
ಭಾರತ ಕ್ರಿಕೆಟ್ ದಂತಕತೆ ರಾಹುಲ್ ದ್ರಾವಿಡ್ ಅವರಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು 'ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ' ಪ್ರಶಸ್ತಿಯನ್ನು ಘೋಷಿಸಿದೆ

Think Plots.® Think KNS.

KNS® INFRA

ಕೆ.ಎನ್.ಎಸ್.
RERA Registered

Hosa Varusha. Hosa Harusha.

PLOT YOUR OWN STORY

YUGA UGADI
SUVARNA AVAKASHA

GET 20g GOLD.#

KNS® Ananta	KNS® Unnati	KNS® Samooha
At Kengeri	Off Mysore Magadi Exp Way	Nelamangala, Off Bengaluru - Tumkur Exp Way
From ₹72 Lakhs*	From ₹99 Lakhs*	From ₹72 Lakhs*

KNS® Sampada	KNS® Billore
Near Hejjala Toll, Mysuru Road	Off Doddaballapur Main Road
From ₹80 Lakhs*	From ₹60 Lakhs*

#Valid for first 30 bookings only
Offer valid till 31st March 2026

See it to believe it
Call for a site visit

079 4105 7091

KNS INFRASTRUCTURE PVT. LTD.
#1125/12, 1st Floor, Service Road, Hampinagar, Vijayanagar 2nd Stage, Bengaluru - 560 104

CREDAI BANGALORE

Scan for Details

*T&C Apply

ಸಮಸ್ಯೆ ತೀವ್ರ: ಹೋಟೆಲ್, ರೆಸ್ಟೋರೆಂಟ್ ಬಂದ್

ಕೈಗಾರಿಕೆ, ದೇವಸ್ಥಾನಕ್ಕೂ ತಟ್ಟಿದ ಎಲ್‌ಪಿಜಿ ಸಿಲಿಂಡರ್ ಬಿಸಿ
ಕಾಳಸಂತೆ ಮಾರಾಟದ ವಿರುದ್ಧ ಪೊಲೀಸ್ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯೊಂದಾಗಿ ನಗರದಲ್ಲಿ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ಬಂದ್ ಆಗುತ್ತಿವೆ. ಅಲ್ಲದೆ ಪೇಯಿಂಗ್ ಗೆಸ್ಟ್ (ಪಿ.ಜಿ) ಮತ್ತು ಸಣ್ಣ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿವೆ.

ಗುರುವಾರ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ. ಗಾಂಧಿ ಬಜಾರ್, ಮೆಜೆಸ್ಟಿಕ್, ಶ್ರೀರಾಮಪುರ, ವಿಜಯನಗರ, ಯಶವಂತಪುರ, ರಾಜಾಜಿನಗರ, ಮಾಗಡಿ ರಸ್ತೆ, ಮೈಸೂರು ರಸ್ತೆ ಮತ್ತು ಕನಕಪುರ ರಸ್ತೆಗಳಲ್ಲಿ ಸಣ್ಣ, ಮಧ್ಯಮ ಹೋಟೆಲ್‌ಗಳು ಬಂದ್ ಆಗಿವೆ. ಕೆಲವು ಹೋಟೆಲ್‌ಗಳು ವಿದ್ಯುತ್, ಕಲ್ಲಿದ್ದಲು, ಸೌದೆ ಬಳಸಿ ಅಡುಗೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿವೆ.

'ಗ್ರಾಹಕರಿಗೆ ಆಗುವ ಅನಾನುಕೂಲಕ್ಕೆ ವಿಷಾದಿಸುತ್ತೇವೆ' ಎಂಬ ಫಲಕವನ್ನು ಹಲವೆಡೆ ಹಾಕಲಾಗಿತ್ತು.

ಸಂಕಷ್ಟದಿಂದ ಪಾರಾಗಲು ಕೆಲವು ಹೋಟೆಲ್‌ಗಳ ಮೆನುವಿನಲ್ಲಿ ತಿಂಡಿಗಳ ಸಂಖ್ಯೆ ಕಡಿಮೆಯಾಗಿದೆ. ಜತೆಗೆ ಊಟ, ತಿಂಡಿಗಳ ದರದಲ್ಲಿ ಏರಿಕೆಯಾಗಿದೆ. ಕೆಲವರು ಸೌದೆ ಒಲೆಯಲ್ಲಿ ಅನ್ನ-ಸಾಂಬಾರ್ ತಯಾರಿಸುತ್ತಿದ್ದರೆ, ಇನ್ನೂ ಕೆಲವರು 'ಇಂಡಕ್ಷನ್ ಸ್ಟೌ'ಗಳ ಮೊರೆ ಹೋಗುತ್ತಿದ್ದಾರೆ.

'ಶೇಕಡ 30ರಷ್ಟು ದರ್ಶಿನಿಗಳನ್ನು ಬಂದ್ ಮಾಡಲಾಗಿದೆ. ಸಣ್ಣ ಹೋಟೆಲ್‌ಗಳಿಗೆ ಸಿಲಿಂಡರ್ ದಾಸ್ತಾನು ಸಾಮರ್ಥ್ಯ ಇಲ್ಲ. ಇಂದು ಗಳಿಸುವ ಹಣವನ್ನು ನಾಳೆಯ ವ್ಯವಹಾರಕ್ಕೆ ಹೂಡಿಕೆ ಮಾಡುತ್ತಾರೆ. ಸಣ್ಣ ಹೋಟೆಲ್‌ಗೆ ₹10 ಸಾವಿರದಿಂದ ₹50 ಸಾವಿರವರೆಗೆ ನಷ್ಟವಾಗುತ್ತಿದೆ' ಎಂದು ಹೋಟೆಲ್ ಮಾಲೀಕರೊಬ್ಬರು ತಿಳಿಸಿದ್ದಾರೆ.

ಹನುಮಾನ್ ನಗರದಲ್ಲಿ ಜೆಡಿಎಸ್ ಮುಖಂಡ ಟಿ.ಎ. ಶರವಣ ಆರಂಭಿಸಿದ್ದ 'ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್' ಅನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

'ಕಡಿಮೆ ಬೆಲೆಯಲ್ಲಿ ಊಟ, ತಿಂಡಿ ಒದಗಿಸುವ ಸಲುವಾಗಿ 2017ರಿಂದ ಕ್ಯಾಂಟೀನ್ ನಡೆಸುತ್ತಿದ್ದೇನೆ. ಸಿಲಿಂಡರ್ ಪೂರೈಕೆ ಯಥಾ ಸ್ಥಿತಿ ಮರಳಿದ ನಂತರ ಕ್ಯಾಂಟೀನ್ ಮರು ಪ್ರಾರಂಭವಾಗಲಿದೆ' ಎಂದು ಟಿ.ಎ.ಶರವಣ ಹೇಳಿದ್ದಾರೆ.

ಕೈಗಾರಿಕೋದ್ಯಮ ಬಿಸಿ: 'ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ವೆಲ್ಡಿಂಗ್, ಪೌಡರ್ ಕೋಟಿಂಗ್, ಆಹಾರ ಸಂಸ್ಕರಣೆ ಹಾಗೂ ವಿಶಿಷ್ಟ ಉತ್ಪಾದನೆಗಳು ಸಿಲಿಂಡರ್ ಮೇಲೆ ಹೆಚ್ಚು ಅವಲಂಬಿತವಾಗಿವೆ. ಈಗಿನ ಸಮಸ್ಯೆಯಿಂದ ಕೈಗಾರಿಕಾ ಕಾರ್ಯಾಚರಣೆಯು ನಿರಂತರತೆಗೆ ದೊಡ್ಡ ಹೊಡೆತ ಬಿದ್ದಿದೆ' ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಶಿವಪ್ಪ ತಿಳಿಸಿದ್ದಾರೆ.

ಪಿ.ಜಿ. ಮೆನು ಬದಲು: ಸಿಲಿಂಡರ್‌ಗಳ ದರ ಏರಿಕೆ ಮತ್ತು ಅಭಾವದಿಂದ ಪಿ.ಜಿಗಳಲ್ಲಿ ಹೊಸ ಮೆನು ಜಾರಿ ಮಾಡಲಾಗಿದೆ. ದೋಸೆ, ಪೂರಿ, ಇಡ್ಲಿ, ಚಪಾತಿ ಸೇರಿ ಕೆಲವು ಆಹಾರ ಪದಾರ್ಥಗಳನ್ನು ಸ್ಥಗಿತ ಮಾಡಲಾಗಿದೆ. ಕಡಿಮೆ ಇಂಧನ ಬಳಸಿ ತಯಾರಿಸುವ ಆಹಾರ ನೀಡಲು ಪಿ.ಜಿ ಮಾಲೀಕರ ಸಂಘ, ಎಲ್ಲ ಪಿ.ಜಿಗಳಿಗೆ ಸೂಚನೆ ನೀಡಿದೆ. ಕೆಲವು ಪಿ.ಜಿಗಳಲ್ಲಿ ಮಧ್ಯಾಹ್ನದ ಊಟವನ್ನು ನಿಲ್ಲಿಸಲಾಗಿದೆ.

ಪೊಲೀಸರ ಕಾರ್ಯಾಚರಣೆ: ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಕೃತಕ ಅಭಾವ ಸೃಷ್ಟಿಸುವವರು ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ. ನಗರ ವ್ಯಾಪ್ತಿಯಲ್ಲಿ ಪ್ರತಿಯೊಂದು ಗ್ಯಾಸ್ ಗೋದಾಮುಗಳಿಗೆ ಹೊಯ್ಸಳ ಸಿಬ್ಬಂದಿ ಭೇಟಿ ನೀಡಿ ತಪಾಸಣೆ ನಡೆಸುತ್ತಿದ್ದಾರೆ.

ಪಿಎಸ್ಐ ಶ್ರೇಣಿಯ ಅಧಿಕಾರಿಗಳು ಖುದ್ದಾಗಿಯೇ ನಗರದ ಗೋದಾಮುಗಳಲ್ಲಿ ಲಭ್ಯವಿರುವ ಸಿಲಿಂಡರ್‌ಗಳ ಸಂಖ್ಯೆ, ಬೇಡಿಕೆಯ ಪಟ್ಟಿ ಮತ್ತು ವಿತರಣೆಯ ಸಮಗ್ರವರದಿ ಸಿದ್ಧಪಡಿಸುತ್ತಿದ್ದಾರೆ.

ಸಿಲಿಂಡರ್‌ಗಳ ಕೊರತೆಯು ನಗರದ ವಲಸೆ ಕಾರ್ಮಿಕರ ಮೇಲೆ ಪರಿಣಾಮ ಬೀರುತ್ತಿದೆ. 'ಸಣ್ಣ ಸಿಲಿಂಡರ್‌ಗಳು (3 ಕೆ.ಜಿ ಯಿಂದ 5 ಕೆ.ಜಿ) ಲಭ್ಯವಾಗುತ್ತಿಲ್ಲ. ಕೆಲವೆಡೆ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿವೆ. ಹಿಂದೆ ₹400ಕ್ಕೆ ಸಿಗುತ್ತಿದ್ದ 5 ಕೆ.ಜಿ ರಿಫಿಲ್ ಈಗ ಕಾಳಸಂತೆಯಲ್ಲಿ ₹600ಕ್ಕೆ ಮಾರಲಾಗುತ್ತಿದೆ. ಜೀವನ ನಡೆಸುವುದು ಕಷ್ಟವಾಗಿದೆ' ಎಂದು ಬಿಹಾರದ ಕಾರ್ಮಿಕ ಬಿರೇಂದ್ರಸಿಂಗ್ ತಿಳಿಸಿದರು.

ಅದಮ್ಯ ಚೇತನ ಹಾಗೂ ಇಸ್ಕಾನ್‌ನಲ್ಲಿ ಎಲ್‌ಪಿಜಿ ಸಿಲಿಂಡರ್ ಬಳಸದೇ ನವೀಕರಿಸಬಹುದಾದ ಇಂಧನ ಬಳಸಿ ಅಡುಗೆ ತಯಾರಿಸಲಾಗುತ್ತದೆ.

ಹಲವು ಐಟಿ ಕಂಪನಿಗಳು ವರ್ಕ್ ಫ್ರಂ ಹೋಂಗೆ ಅವಕಾಶ ನೀಡುವ ಕುರಿತು ಚರ್ಚೆ ನಡೆಸುತ್ತಿವೆ ಎಂದು ಮೂಲಗಳು ತಿಳಿಸಿವೆ.

'ಪ್ರಸ್ತುತ ಈ ಕುರಿತು ಚರ್ಚೆಗಳು ಇನ್ನೂ ಪ್ರಾರಂಭಿಕ ಹಂತದಲ್ಲಿವೆ. ಕೆಲವು ಕಂಪನಿಗಳು ಈ ಬಗ್ಗೆ ಯೋಚಿಸುತ್ತಿವೆ. ಮುಂದಿನ ಕೆಲವು ವಾರಗಳವರೆಗೆ ಇದೇ ಪರಿಸ್ಥಿತಿ ಮುಂದುವರಿದರೆ ಈ ನಿರ್ಧಾರ ಕೈಗೊಳ್ಳಬಹುದು' ಎಂದು ಔಟರ್ ರಿಂಗ್ ರೋಡ್ ಕಂಪನೀಸ್ ಅಸೋಸಿಯೇಷನ್ (ಒಆರ್‌ಆರ್‌ಸಿಎ) ಪ್ರತಿನಿಧಿಯೊಬ್ಬರು ತಿಳಿಸಿದ್ದಾರೆ.

ಆಟೊ ಮತ್ತು ಕ್ಯಾಬ್‌ಗಳು ಲಭ್ಯತೆ ಇಲ್ಲದಿರುವುದನ್ನು ಉಲ್ಲೇಖಿಸಿ ಅನೇಕ ಉದ್ಯೋಗಿಗಳು ವರ್ಕ್ ಫ್ರಂ ಹೋಂ ನೀಡುವಂತೆ ಕೂಡ ಬೇಡಿಕೆ ಮುಂದಿಟ್ಟಿದ್ದಾರೆ.

'ಎರಡು ದಿನಗಳಿಂದ ಆಟೊ ಸೇವೆ ಸಹ ಸರಿಯಿಲ್ಲ. ಜೊತೆಗೆ ಪ್ರಯಾಣ ದರಗಳೂ ಹೆಚ್ಚಾಗಿವೆ. ಇದರಿಂದ ಕಚೇರಿಗೆ ಹೋಗುವುದು ಕಷ್ಟವಾಗಿದೆ' ಎಂದು ಐಟಿ ಉದ್ಯೋಗಿ ಸಹನಾ ಹೇಳಿದರು.

ವದಂತಿಗೆ ಕಿವಿಗೊಡಬೇಡಿ: ಡಿ.ಸಿ ಜಗದೀಶ್

ಬೆಂಗಳೂರು ನಗರ ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಮನವಿ ಮಾಡಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ. ಹಾಗಾಗಿ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಗೃಹಬಳಕೆ ಅಡುಗೆ ಅನಿಲಕ್ಕೆ ಸಂಬಂಧಿಸಿದಂತೆ ಕುಂದುಕೊರತೆ ಇದ್ದಲ್ಲಿ ಸಹಾಯವಾಣಿ: 9611404384 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ಲಭ್ಯವಿಲ್ಲದ ಕಾರಣ ನಗರದ ಗಾಂಧಿ ಬಜಾರ್‌ನ ಪೂರ್ವ ಆಂಜನೇಯ ಗುಡಿ ರಸ್ತೆಯ ಹೋಟೆಲ್‌ವೊಂದನ್ನು ಮುಚ್ಚಲಾಗಿತ್ತು
ಪ್ರಜಾವಾಣಿ ಚಿತ್ರ: ಎಂ. ಎಸ್ ಮಂಜುನಾಥ್

ಇಂದಿರಾ ಕ್ಯಾಂಟೀನ್‌ಗೆ ಬೀಗ

ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ನಗರ ಪಾಲಿಕೆಗಳು ನಿರ್ವಹಣೆ ಮಾಡುತ್ತಿರುವ ಬಹುತೇಕ ಇಂದಿರಾ ಕ್ಯಾಂಟೀನ್‌ಗಳು ಗುರುವಾರ ರಾತ್ರಿ ಊಟವನ್ನು ಪೂರೈಸಿಲ್ಲ. 'ಆಹಾರ ತಯಾರಿಸುವ ಅಡುಗೆ ಮನೆಗಳಲ್ಲಿ ಸಿಲಿಂಡರ್ ಕೊರತೆ ಉಂಟಾಗಿದ್ದು, ಎರಡು ದಿನಗಳಲ್ಲಿ ಆಹಾರ ತಯಾರಿಯನ್ನೇ ನಿಲ್ಲಿಸ ಲಾಗುತ್ತದೆ. ಸರ್ಕಾರ ಮಧ್ಯ ಪ್ರವೇಶಿಸಿ, ಕ್ರಮ ಕೈಗೊಳ್ಳಲು ಪತ್ರ ಬರೆದಿದ್ದೇವೆ' ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

ದರ ಹೆಚ್ಚಳಕ್ಕೆ ಗ್ರಾಹಕರ ಆಕ್ರೋಶ

ಕೆಲ ಹೋಟೆಲ್‌ಗಳಲ್ಲಿ ತಿಂಡಿ–ತಿನಿಸುಗಳ ದರವನ್ನು ಹೆಚ್ಚಿಸಿದ್ದು, ಇದಕ್ಕೆ ಗ್ರಾಹಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಪಿ.ಜಿಯಲ್ಲಿ ತಿಂಡಿ ಸಿಗದ ಕಾರಣ ಗ್ರಾಹಕರೊಬ್ಬರು 'ಮಿಸ್ಟರ್ ಆಂಧ್ರ ಮೀಲ್ಸ್ ಹೋಟೆಲ್'ಗೆ ತೆರಳಿ, ಊಟ ಮಾಡಿದ್ದರು. ಹೋಟೆಲ್ ಸಿಬ್ಬಂದಿ ಬಿಲ್‌ನಲ್ಲಿ ಹೆಚ್ಚುವರಿಯಾಗಿ ₹30 ವಸೂಲಿ ಮಾಡಿದ್ದಾರೆ. ಈ ಬಿಲ್ ಅನ್ನು ಗ್ರಾಹಕರು ಬೆಂಗಳೂರು ಪೊಲೀಸರಿಗೆ ಟ್ಯಾಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

'ಹೋಟೆಲ್‌ಗಳನ್ನು ತೆರೆಯಲು ಸಮಯ ನಿಗದಿ ಪಡಿಸಿದ್ದೇವೆ. ಬೆಳಿಗ್ಗೆ 6 ಗಂಟೆಗೆ ತೆರೆ ಯುತ್ತಿದ್ದ ಹೋಟೆಲ್‌ಗಳು ಈಗ ಬೆಳಿಗ್ಗೆ 10 ಗಂಟೆಗೆ ಶುರುವಾಗುತ್ತಿವೆ. ಕಾಫಿ–ಟೀ ಸೇರಿ ದಂತೆ ಅಗತ್ಯ ತಿಂಡಿ–ತಿನಿಸುಗಳನ್ನು ಮಾತ್ರ ತಯಾರಿಸುತ್ತಿದ್ದೇವೆ' ಎಂದು ನಗರದ ಹೋಟೆಲ್ ಮಾಲೀಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪರ್ಯಾಯ ಮಾರ್ಗದತ್ತ ಆಸ್ಪತ್ರೆ

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಕೊರತೆಯ ಬಿಸಿ ನಗರದ ಆಸ್ಪತ್ರೆಗಳಿಗೂ ತಟ್ಟ ಲಾರಂಭಿಸಿದ್ದು, ಅಲ್ಲಿನ ಕ್ಯಾಂಟೀನ್ ಮೆನುಗಳನ್ನು ಸೀಮಿತ ಗೊಳಿಸಲಾಗುತ್ತಿದೆ. ರೋಗಿಗಳಿಗೆ ಸಮಸ್ಯೆಯಾಗದಂತೆ ಸದ್ಯ ಆಹಾರ ಒದಗಿಸಲಾಗುತ್ತಿದೆ.

ಅನೇಕ ಆಸ್ಪತ್ರೆಗಳ ಕ್ಯಾಂಟೀನ್‌ಗಳು ಅಡುಗೆಗೆ ಎಲ್‌ಪಿಜಿ ಸಿಲಿಂಡರ್ ಬದಲು, ವಿದ್ಯುತ್ ಬಳಸಿ ಅಡುಗೆ ತಯಾರಿಸುವ ಪರ್ಯಾಯ ಮಾರ್ಗಗಳನ್ನು ಹುಡುಕುತ್ತಿವೆ. ನಗರದ ಆಯ್ದ ಸರ್ಕಾರಿ ಆಸ್ಪತ್ರೆಗಳಿಗೆ ಇಸ್ಕಾನ್ ಆಹಾರ ಪೂರೈಕೆ ಮಾಡುತ್ತಿದ್ದು, ರೋಗಿಗಳಿಗೆ ಈ ಮೊದಲಿನಂತೆ ಊಟ–ತಿಂಡಿ ದೊರೆಯುತ್ತಿದೆ.

'ರೋಗಿಗಳಿಗೆ ಆದ್ಯತೆಯ ಮೇರೆಗೆ ಆಹಾರ ಒದಗಿಸಲಾಗುತ್ತಿದೆ. ಸೀಮಿತ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಿಂದ ಆಹಾರ ವಿತರಣೆಯನ್ನು ಪರಿಣಾಮ ಕಾರಿಯಾಗಿ ನಿರ್ವಹಣೆ ಮಾಡಲಾಗುತ್ತಿದೆ. ಆಹಾರದ ಮೆನುವಿನಲ್ಲಿ ಕಡಿತ ಮಾಡಲಾಗಿದ್ದು, ವಿದ್ಯುತ್ ಆಧಾರಿತ ಅಡುಗೆ ಉಪಕರಣ ಅಳವಡಿಕೆಗೆ ಪೂರೈಕೆದಾರರೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ' ಎಂದು ವೈಟ್‌ಫೀಲ್ಡ್‌ನ ಆಸ್ಟರ್ ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಶ್ರೀಕಾಂತ್ ಸುಬುಧಿ ತಿಳಿಸಿದರು.

'ನಮ್ಮಲ್ಲಿನ ಎಲ್‌ಪಿಜಿ ಸಿಲಿಂಡರ್ ದಾಸ್ತಾನು ಶೀಘ್ರದಲ್ಲೇ ಮುಗಿಯಲಿದೆ. ಆದ್ದರಿಂದ ಆಹಾರ ಮೆನುಗಳನ್ನು ಕಡಿತಗೊಳಿಸುತ್ತಿದ್ದೇವೆ. ಅನಿಲವನ್ನು ಉಳಿಸಲು ಅಕ್ಕಿ ಪದಾರ್ಥಗಳನ್ನು ಮಾತ್ರ ನೀಡುತ್ತಿದ್ದೇವೆ' ಎಂದು ಸರ್ಕಾರಿ ಆಸ್ಪತ್ರೆಯೊಂದರ ಕ್ಯಾಂಟೀನ್ ಪ್ರತಿನಿಧಿ ವಿವರಿಸಿದರು.

'ಹೋಟೆಲ್ ಬಂದ್ ಮಾಡಬೇಡಿ'

ಎಲ್‌ಪಿಜಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತವಾಗಿರುವ ಕಾರಣ ಹೋಟೆಲ್ ಉದ್ಯಮಕ್ಕೆ ಹೊಡೆತ ಬಿದ್ದಿದೆ. ಆದರೆ, ಯಾವುದೇ ಕಾರಣಕ್ಕೂ ಹೋಟೆಲ್‌ಗಳನ್ನು ಬಂದ್ ಮಾಡಬಾರದು' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಮಾಲೀಕರ ಸಂಘದ ಗೌರವ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಗರದಲ್ಲಿ ಬಂದ್ ಮಾಡಿರುವ ಹೋಟೆಲ್‌ಗಳನ್ನು ತೆರೆಯುವಂತೆ ಮಾಲೀಕರಿಗೆ ಮನವಿ ಮಾಡುತ್ತಿದ್ದೇವೆ. ಎಲ್‌ಪಿಜಿಗೆ ಪರ್ಯಾಯವಾಗಿ ಇರುವ ಸೌದೆ ಒಲೆ, ಇಂಡಕ್ಷನ್ ಸ್ಟೌ, ಎಲೆಕ್ಟ್ರಿಕ್ ಉಪಕರಣಗಳನ್ನು ಬಳಸಿಕೊಂಡು ಕಾಫಿ–ಟೀ ಸೇರಿದಂತೆ ಅಗತ್ಯ ತಿಂಡಿ–ತಿನಿಸುಗಳನ್ನು ತಯಾರಿಸಬೇಕು. ನಮ್ಮ ಉದ್ಯಮವೂ ಉಳಿಯಬೇಕು, ಗ್ರಾಹಕರಿಗೂ ತೊಂದರೆ ಆಗದಂತೆ ನೋಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ನಗರದಲ್ಲಿ 78 ಹೋಟೆಲ್‌ಗಳನ್ನು ಮಾತ್ರ ಬಂದ್ ಮಾಡಲಾಗಿತ್ತು. ಅವುಗಳನ್ನು ತೆರೆಯುವಂತೆ ಆಯಾ ಹೋಟೆಲ್‌ಗಳ ಮಾಲೀಕರಿಗೆ ಮನವಿ ಮಾಡಿದ್ದೇವೆ. ಅಗತ್ಯ ಸೇವೆಗಳನ್ನು ಗ್ರಾಹಕರಿಗೆ ನೀಡಬೇಕು. ಇದರಿಂದ ಹೋಟೆಲ್‌ನಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಹಾಗೂ ಮಾಲೀಕರಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ' ಎಂದು ಅವರು ವಿವರಿಸಿದರು.

ಕೇಂದ್ರದ ಆದೇಶದಿಂದ ಉತ್ಪಾದನೆ ಮೇಲೆ ಪರಿಣಾಮ • ಪೂರೈಕೆಯಲ್ಲೂ ವ್ಯತ್ಯಯ ಸಾಧ್ಯತೆ

ಅನಿಲ ಆಧಾರಿತ ವಿದ್ಯುತ್ ಉತ್ಪಾದನೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದಲ್ಲಿ ಇರುವ 370 ಮೆಗಾವಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಸ್ಥಾವರಕ್ಕೆ ಅನಿಲ ಪೂರೈಕೆ ಸ್ಥಗಿತಗೊಂಡಿರುವ ಕಾರಣ, ವಿದ್ಯುತ್ ಉತ್ಪಾದನೆಯನ್ನು ನಿಲ್ಲಿಸಲಾಗಿದೆ. ಇದರಿಂದಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ.

ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆ ಗಳಿಂದಾಗಿ ನೈಸರ್ಗಿಕ ಅನಿಲ ಕೊರತೆ ನೀಗಿಸಲು ಕೇಂದ್ರ ಸರ್ಕಾರ ಕೈಗೊಂಡಿ ರುವ ಕ್ರಮಗಳಿಂದಾಗಿ ರಾಜ್ಯದ ವಿದ್ಯುತ್ ಉತ್ಪಾದನೆ ಮೇಲೂ ಪರಿಣಾಮ ಬೀರಿದೆ. ಯಲಹಂಕದಲ್ಲಿರುವ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಸ್ಥಾವರಕ್ಕೆ ಆರಂಭದಲ್ಲಿ ಶೇ 20ರಷ್ಟು ಅನಿಲ ಪೂರೈಕೆ ಕಡಿತಗೊಳಿಸಿದ್ದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ, ಗುರುವಾರ ದಿಂದ ಅನಿಲ ಪೂರೈಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದೆ.

ರಾಜ್ಯದಲ್ಲಿ ನಿತ್ಯ 355 ದಶಲಕ್ಷ ಯೂನಿಟ್ ವಿದ್ಯುತ್‌ಗೆ ಬೇಡಿಕೆ ಇದ್ದು, ಇದಕ್ಕೆ ಅನುಗುಣವಾಗಿ ಪೂರೈಕೆಯಾಗುತ್ತಿದೆ. ಬೆಂಗಳೂರು ನಗರದಲ್ಲಿ ಸದ್ಯಕ್ಕೆ 6 ಸಾವಿರ ಮೆಗಾವಾಟ್ ವರೆಗೂ ಬೇಡಿಕೆ ಇದೆ. ಬೇಡಿಕೆ ಅವಧಿಯಲ್ಲಿ ನಿಯಮಿತವಾಗಿ ವಿದ್ಯುತ್ ಪೂರೈಸಲು ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ರಾಜ್ಯ ಸರ್ಕಾರವು ಸಾಧ್ಯವಿರುವ ಎಲ್ಲ ಮೂಲಗಳಿಂದಲೂ ವಿದ್ಯುತ್ ಉತ್ಪಾದಿಸುತ್ತಿದೆ.

ರಾಜಧಾನಿ ಬೆಂಗಳೂರಿಗೆ ವಿದ್ಯುತ್ ಪೂರೈಸಲು ಯಲಹಂಕದಲ್ಲಿ ಅನಿಲ ಆಧಾರಿತ ವಿದ್ಯುತ್ ಘಟಕವನ್ನು ಸ್ಥಾಪಿಸಿದ್ದು, ಇಲ್ಲಿ ಕಳೆದ ಡಿಸೆಂಬರ್‌ನಿಂದ ನಿರಂತರವಾಗಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿತ್ತು. ಆದರೆ, ಈಗ ನೈಸರ್ಗಿಕ ಅನಿಲದ ಕೊರತೆಯಿಂದಾಗಿ ವಿದ್ಯುತ್ ಉತ್ಪಾದನೆ ಸ್ಥಗಿತವಾಗಿದೆ.

ರಾಜ್ಯದಲ್ಲಿನ ಶಾಖೋತ್ಪನ್ನ ಮತ್ತು ಜಲ ವಿದ್ಯುತ್ ಸ್ಥಾವರಗಳು, ಸೌರ ಮತ್ತು ಪವನ ವಿದ್ಯುತ್ ಸ್ಥಾವರಗಳ ಜತೆಗೆ ಕೇಂದ್ರ ಗ್ರಿಡ್‌ನಿಂದಲೂ ವಿದ್ಯುತ್ ಪೂರೈಕೆ ಆಗುತ್ತಿದೆ. ಇದಲ್ಲದೆ ಪಂಜಾಬ್, ಉತ್ತರ ಪ್ರದೇಶ ಮತ್ತು ಹರಿಯಾಣ ರಾಜ್ಯಗಳಿಂದ ವಿನಿಮಯ ಆಧಾರದ ಮೇಲೆ ವಿದ್ಯುತ್ ಪಡೆಯುವ ಮೂಲಕ ರಾಜ್ಯದಲ್ಲಿನ ವಿದ್ಯುತ್ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ಇಷ್ಟಾದರೂ, ಬರುವ ದಿನಗಳಲ್ಲಿ ಬೇಡಿಕೆ ಹೆಚ್ಚಾಗಲಿದ್ದು, ಅದಕ್ಕೆ ಅನುಗುಣವಾಗಿ ಪೂರೈಕೆ ಮಾಡುವುದು ಕಷ್ಟವಾಗಬಹುದು ಎಂದು ಮೂಲಗಳು ತಿಳಿಸಿವೆ.

ದೇಶದಾದ್ಯಂತ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಗೃಹ ಬಳಕೆಗೆ ಪ್ರಥಮ ಆದ್ಯತೆ ನೀಡಿದೆ. ಉಳಿದಂತೆ ಸಾರಿಗೆ, ರಸಗೊಬ್ಬರ ವಲಯವನ್ನು ಎರಡನೇ ಆದ್ಯತೆಯಾಗಿ ಪರಿಗಣಿಸಿದೆ. ವಿದ್ಯುತ್ ಉತ್ಪಾದನಾ ಕ್ಷೇತ್ರಕ್ಕೆ ಕೊನೆಯ ಆದ್ಯತೆ ನೀಡಿದೆ.

ಮುಖ್ಯಾಂಶಗಳು

- ವಿದ್ಯುತ್ ಉತ್ಪಾದನೆಗೆ ಅನಿಲ ಪೂರೈಸಲು ಕೊನೆಯ ಆದ್ಯತೆ
- 370 ಮೆಗಾವಾಟ್ ವಿದ್ಯುತ್ ಉತ್ಪಾದನೆ ಸ್ಥಗಿತ
- ಬೇಸಿಗೆಯಲ್ಲಿ ವಿದ್ಯುತ್‌ಗೆ ಹೆಚ್ಚಿನ ಬೇಡಿಕೆ

ಅನ್ಯ ಉದ್ದೇಶಕ್ಕೆ ಗೃಹ ಬಳಕೆ ವಿದ್ಯುತ್: ಎಚ್ಚರಿಕೆ

ಗೃಹ ಬಳಕೆಯ ವಿದ್ಯುತ್ ಸಂಪರ್ಕವನ್ನು ವಾಣಿಜ್ಯ ಅಥವಾ ಬೇರೆ ಉದ್ದೇಶಗಳಿಗೆ ಬಳಸಬಾರದು ಎಂದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಗ್ರಾಹಕರಿಗೆ ಎಚ್ಚರಿಕೆ ನೀಡಿದೆ.

ಕೆಲವು ಗ್ರಾಹಕರು ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು, ಅತಿಥಿ ಗೃಹಗಳು, ಮೆಸ್, ಸರ್ವೀಸ್ ಅಪಾರ್ಟ್‌ಮೆಂಟ್, ಪೇಯಿಂಗ್ ಗೆಸ್ಟ್, ಕಚೇರಿ ಮುಂತಾದ ಉದ್ದೇಶಗಳಿಗಾಗಿ ಗೃಹ ಬಳಕೆಯ ಸಂಪರ್ಕವನ್ನು ಅನಧಿಕೃತವಾಗಿ ಬಳಸುತ್ತಿದ್ದು, ಅವುಗಳನ್ನು ತಕ್ಷಣವೇ ಕಡಿತಗೊಳಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ.

ಅನ್ಯ ಉದ್ದೇಶಕ್ಕೆ ಬಳಸುತ್ತಿರುವ ಗ್ರಾಹಕರು ತಕ್ಷಣವೇ ಬೆಸ್ಕಾಂ ಉಪ ವಿಭಾಗ ಕಚೇರಿಯಲ್ಲಿ ಅರ್ಜಿ ಸಲ್ಲಿಸಿ, ಸಂಪರ್ಕದಲ್ಲಿ ನಿಯಮಾನುಸಾರ ಬದಲಾವಣೆ ಮಾಡಿಕೊಳ್ಳಬಹುದು.

ಉತ್ಸವ, ಹಬ್ಬ, ಧಾರ್ಮಿಕ ಆಚರಣೆ ಸಂದರ್ಭದಲ್ಲೂ ಗೃಹ ಬಳಕೆಯ ವಿದ್ಯುತ್ ಸಂಪರ್ಕವನ್ನು ಬಳಸಿಕೊಳ್ಳಬಾರದು. ಅಂತಹ ಅವಶ್ಯ ಇದ್ದರೆ, ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಪಡೆಯಬಹುದು ಎಂದೂ ಬೆಸ್ಕಾಂ ಹೇಳಿದೆ.

ಬಮೂಲ್‌ಗೆ ₹60 ಕೋಟಿ ಲಾಭ; ರೈತರಿಗೆ ಯುಗಾದಿ ಕೊಡುಗೆ

ಹಾಲು: ₹1 ಹೆಚ್ಚುವರಿ ಪ್ರೋತ್ಸಾಹಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಹಬ್ಬದ ಉಡುಗೊರೆಯಾಗಿ, ಬಮೂಲ್ ವ್ಯಾಪ್ತಿ ಯಲ್ಲಿನ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ಹೆಚ್ಚುವರಿಯಾಗಿ ₹1 ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

'ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಲಕ್ಷಾಂತರ ಹಾಲು ಉತ್ಪಾದಕರಿಗೆ ಈ ಲಾಭ ಸಿಗಲಿದೆ. ಮೇವಿನ ಬೆಲೆ ಏರಿಕೆ ಮತ್ತು ಬೇಸಿಗೆಯಲ್ಲಿ ಹೈನುಗಾರಿಕೆಯ ಸವಾಲುಗಳನ್ನು ಎದುರಿಸಲು ರೈತರಿಗೆ ಆರ್ಥಿಕ ನೆರವು ನೀಡುವುದು ಉದ್ದೇಶ' ಎಂದು ಸುದ್ದಿ ಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

'2025ರ ಏಪ್ರಿಲ್ 1ರಿಂದ 2026ರ ಮಾರ್ಚ್‌ವರೆಗೆ ರೈತರಿಂದ 59,39,78,492 ಲೀಟರ್ ಹಾಲು ಖರೀದಿಸಿದ್ದೇವೆ. ಹಾಲು ಉತ್ಪಾದಿಸಿರುವ ರೈತರಿಗೆ ₹59.39 ಕೋಟಿ ಪಾವತಿಸುತ್ತೇವೆ. ಈ ಬಾರಿ ₹500 ಕೋಟಿ ಹೆಚ್ಚುವರಿ ವಹಿವಾಟು ಮಾಡುವ ಗುರಿ ಹೊಂದಲಾಗಿದೆ. ₹60 ಕೋಟಿ ಲಾಭ ಗಳಿಸುವ ಮಟ್ಟಿಗೆ ಬೆಳೆದಿದ್ದೇವೆ' ಎಂದರು.

ಡಿ.ಕೆ.ಸುರೇಶ್

'ಕಾರ್ಮಿಕರಿಗೆ ಸುಮಾರು ₹6 ಕೋಟಿ ದಿನಭತ್ಯೆ ನೀಡಬೇಕು. ಒಕ್ಕೂಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1,800 ಗುತ್ತಿಗೆ ಸಿಬ್ಬಂದಿಗೆ ವಾರ್ಷಿಕವಾಗಿ ತಲಾ ₹5 ಸಾವಿರ ಉಡುಗೊರೆ ನೀಡುವುದಕ್ಕೆ ₹90 ಲಕ್ಷ ಮತ್ತು ಒಕ್ಕೂಟದಲ್ಲಿ 2,294 ಸದಸ್ಯ ಸಂಘಗಳಿದ್ದು, ಪ್ರತಿ ಸಂಘಕ್ಕೆ ತಲಾ ₹15 ಸಾವಿರದಂತೆ ಒಟ್ಟು ₹3.44 ಕೋಟಿ ನೀಡಲಿದ್ದೇವೆ. ಜುಲೈ 24ರಿಂದ ಬಾಕಿಯಿರುವ ಮೂರು ಕಂತುಗಳ ತುಟ್ಟಿಭತ್ಯೆ ಮೂಲ ವೇತನದ ಶೇ 5.75ರಷ್ಟು ಪ್ರಕಾರ ₹4.68 ಕೋಟಿ ಪಾವತಿಸಲಿದ್ದೇವೆ' ಎಂದು ಮಾಹಿತಿ ನೀಡಿದರು.

'2024-25ನೇ ಸಾಲಿನಲ್ಲಿ ಒಕ್ಕೂಟದಲ್ಲಿ ಸುಮಾರು ₹2,906 ಕೋಟಿ ವಹಿವಾಟು ಆಗಿತ್ತು. ಪ್ರಸಕ್ತ 2025-26ನೇ ಸಾಲಿನಲ್ಲಿ ₹3,400 ಕೋಟಿ ವಹಿವಾಟು ಆಗುವ ನಿರೀಕ್ಷೆಯಿದ್ದು, ಈ ಮೂಲಕ ಒಕ್ಕೂಟವು ಸುಮಾರು ₹500 ಕೋಟಿ ಹೆಚ್ಚುವರಿ ವಹಿವಾಟು ನಡೆಸುವ ಗುರಿ ಹೊಂದಿದ್ದೇವೆ' ಎಂದರು.

'ಹೊಸ ಆಡಳಿತ ಮಂಡಳಿ ರಚನೆ ಯಾದ ನಂತರ, ₹14.5 ಕೋಟಿ ನಷ್ಟ ದಲ್ಲಿದ್ದರೂ ಹಾಲು ಉತ್ಪಾದಕರಿಗೆ ಮಳೆಗಾಲದಲ್ಲಿ ₹2 ಕಡಿಮೆ ಮಾಡುವುದು ಮತ್ತು ಬೇಸಿಗೆಯಲ್ಲಿ ಹೆಚ್ಚಿಸುವುದನ್ನು ನಾವು ಮಾಡುತ್ತಿಲ್ಲ' ಎಂದರು.

ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ರಶ್ಮಿಕಾ ಮಂದಣ್ಣ ಆಕ್ರೋಶ

ಆಡಿಯೊ: ಕಾನೂನು ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಆಡಿಯೊ ಬಗ್ಗೆ ನಟಿ ರಶ್ಮಿಕಾ ಮಂದಣ್ಣ ಆಕ್ರೋಶ ಹೊರಹಾಕಿದ್ದು, ಇವುಗಳನ್ನು ಆಯಾ ವ್ಯಕ್ತಿಗಳು, ಮಾಧ್ಯಮ ಸಂಸ್ಥೆಗಳು, ಡಿಜಿಟಲ್ ಮಾಧ್ಯಮಗಳು 24 ಗಂಟೆಯೊಳಗೆ ತೆಗೆಯದೇ ಹೋದಲ್ಲಿ ಕಾನೂನು ಕ್ರಮದ ಎಚ್ಚರಿಕೆಯನ್ನು ಗುರುವಾರ ಸಂಜೆ ನೀಡಿದ್ದಾರೆ.

ರಶ್ಮಿಕಾ

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ರಶ್ಮಿಕಾ ಮಂದಣ್ಣ, 'ಉದ್ದೇಶಪೂರ್ವಕವಾಗಿ ನಮ್ಮ ಖಾಸಗಿ ಜೀವನದ ಬಗ್ಗೆ ಬೈದುಕೊಂಡು ಮಾತನಾಡುವ ಜನ ಒಂದು ಅರ್ಥ ಮಾಡಿಕೊಳ್ಳಬೇಕು. ಅವರೆಲ್ಲ ನನ್ನ ಜೀವನ ಹೇಗಿರಬೇಕು ಎಂದು ನಿರ್ಧಾರ ಮಾಡಲು ಆಗುತ್ತದೆಯೇ? ನಮ್ಮ ಜೀವನ ನಮ್ಮದು ಅಲ್ಲವೇ? ನಮ್ಮ ನಿರ್ಧಾರ ನಾವು ತೆಗೆದುಕೊಳ್ಳಬೇಕು. ತೆಗೆದುಕೊಳ್ಳುತ್ತೇವೆ ಕೂಡಾ' ಎಂದಿದ್ದಾರೆ.

'ಎಂಟು ವರ್ಷಗಳಿಂದ ನಿರಂತರವಾಗಿ ನನ್ನನ್ನೇ ಗುರಿಯಾಗಿಸಿ ಮಾಧ್ಯಮದ ಒಂದು ವರ್ಗದಿಂದ ಹಾಗೂ ಆನ್‌ಲೈನ್‌ನಲ್ಲಿರುವ ಕೆಲವರಿಂದ ಸುಳ್ಳು ಮಾಹಿತಿ ಪಸರಿಸುವ ಕೆಲಸವಾಗುತ್ತಿದೆ. ಇದು ನನಗೆ ನೋವುಂಟು ಮಾಡಿದರೂ ನಾನು ತಾಳ್ಮೆಯಿಂದ ಮೌನವಾಗಿದ್ದೆ. ಕಳೆದ 24 ಗಂಟೆಯಲ್ಲಿ ನಡೆದ ಘಟನೆಗಳು ಎಲ್ಲೆ ಮೀರಿವೆ' ಎಂದು ರಶ್ಮಿಕಾ ಉಲ್ಲೇಖಿಸಿದ್ದಾರೆ.

'ಇದನ್ನಿನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಒಂದು ಖಾಸಗಿ ಸಂಭಾಷಣೆಯನ್ನು ಅವರ ಒಪ್ಪಿಗೆ ಇಲ್ಲದೆಯೇ ರೆಕಾರ್ಡ್ ಮಾಡಿ ಈಗ ಹರಿಬಿಡಲಾಗಿದೆ. ಎಂಟು ವರ್ಷಗಳ ಹಿಂದಿನ ಸಂಭಾಷಣೆ ಇದಾಗಿದೆ. ಈಗ ಸಂಭಾಷಣೆಯ ಒಂದು ಭಾಗವನ್ನು ಬೇಕೆಂದೇ ಬಳಸಿಕೊಂಡು ವಿವಾದ ಹುಟ್ಟುಹಾಕಲಾಗುತ್ತಿದೆ. ನನ್ನ ಮದುವೆಯ ಸಂದರ್ಭದಲ್ಲೇ ಇದನ್ನು ಮಾಡಲಾಗಿದೆ. ನನ್ನ ಕುಟುಂಬವನ್ನೂ, ಸೌಹಾರ್ದಯುತ ಸಂಬಂಧವನ್ನು ಉಳಿಸಿಕೊಂಡಿರುವವರನ್ನೂ ಇದಕ್ಕೆ ಎಳೆದು ತರಲಾಗಿದೆ. ಇದು ನನ್ನ ಖಾಸಗಿತನದ ಮೇಲಿನ ಗಂಭೀರವಾದ ಆಕ್ರಮಣ. ಜೊತೆಗೆ ದಾರಿ ತಪ್ಪಿಸುವ, ಮಾನಹಾನಿಕರ ಮಾಹಿತಿಯ ಪ್ರಸರಣವೂ ಆಗಿದೆ. ಜೀವನದಲ್ಲಿ ನಾವು ಮುಂದುವರಿದರೂ ಕೆಲವರು ದ್ವೇಷ ಮತ್ತು ವಿವಾದ ಹುಟ್ಟುಹಾಕುತ್ತಿರುವುದು ದುರದೃಷ್ಟಕರ. ಹೀಗಾಗಿ ಇನ್ನು ಸುಮ್ಮನಿರಲು ಸಾಧ್ಯವಿಲ್ಲ' ಎಂದು ರಶ್ಮಿಕಾ ಬರೆದುಕೊಂಡಿದ್ದಾರೆ.

ನಗರದಲ್ಲಿ ಇಂದು

2025–26ನೇ ಸಾಲಿನ ವಿದ್ಯಾರ್ಥಿಗಳ ಚಟುವಟಿಕೆಗಳ ಉದ್ಘಾಟನಾ ಸಮಾರಂಭ: ಅತಿಥಿಗಳು: ನವೀನ್ ಜೋಸೆಫ್ ಎ., ಸಂತೋಷ್ ದೇವರಾಜಪ್ಪ, ಎನ್‌.ಸಿ. ಇಂದಿರಾ, ರಾಜೇಶ್ ಇ.ಬಿ., ಆಯೋಜನೆ ಮತ್ತು ಸ್ಥಳ: ಕಾವೇರಿ ಬಿ.ಇಡಿ ಕಾಲೇಜು, ಸಹಕಾರನಗರ, ಬೆಳಿಗ್ಗೆ 10

ಪ್ರಯಾಣ ಮತ್ತು ಪ್ರವಾಸೋದ್ಯಮ ಪ್ರದರ್ಶನ: ಅತಿಥಿಗಳು: ಎಚ್‌.ಕೆ. ಪಾಟೀಲ, ತ್ರಿಲೋಕಚಂದ್ರ ಕೆ.ವಿ., ಅಕ್ರಂ ಪಾಷಾ, ಎಂ. ಶ್ರೀನಿವಾಸ್, ಅನಿಲ್ ಚಿಕ್ಕಮಾದು, ಪ್ರಶಾಂತ್ ಕುಮಾರ್ ಮಿಶ್ರಾ, ಆಯೋಜನೆ: ಪ್ರವಾಸೋದ್ಯಮ ಸಚಿವಾಲಯ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11

ಅಂಗಳದಲ್ಲಿ ತಿಂಗಳ ಪುಸ್ತಕ ಜಿ.ಎಸ್. ಶಿವರುದ್ರಪ್ಪ ಅವರ ಜನ್ಮಶತಮಾನೋತ್ಸವ ಅಂಗವಾಗಿ 'ಕಾವ್ಯಾರ್ಥ ಚಿಂತನ–ಒಂದು ಅವಲೋಕನ': ಉಪನ್ಯಾಸ: ಓ.ಎಲ್. ನಾಗಭೂಷಣಸ್ವಾಮಿ, ಉದ್ಘಾಟನೆ: ಮಾನಸ, ಉಪಸ್ಥಿತಿ: ಸಿ. ನಾಗಭೂಷಣ, ಎಂ. ಸುಮಿತ್ರ, ಬಿ. ಗಂಗಾಧರ, ಡಿ. ಡೊಮಿನಿಕ್, ಮುನಿಯಪ್ಪ, ಚಿತ್ತಯ್ಯ ಪೂಜಾರ್, ವಡ್ಡೆ ಹೇಮಲತಾ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಜಿ.ಎಸ್.ಎಸ್. ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11.30

2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ ಬಿಡುಗಡೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ಜಿ. ಪರಮೇಶ್ವರ, ಎಚ್‌.ಕೆ. ಪಾಟೀಲ, ಕೆ.ವಿ. ಪ್ರಭಾಕರ್, ಪಿ.ಸಿ. ಮೋಹನ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಶಯ ನುಡಿ: ಆಯೇಶಾ ಖಾನುಂ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 5

ಅಗತ್ಯದಷ್ಟು ಎಲ್‌ಪಿಜಿ ಸಿಲಿಂಡರ್ ಲಭ್ಯ: ಆಹಾರ ಇಲಾಖೆ

ಬೆಂಗಳೂರು: 'ರಾಜ್ಯದಲ್ಲಿ ಅಗತ್ಯ ಇರುವಷ್ಟು ಎಲ್‌ಪಿಜಿ ಸಿಲಿಂಡರ್‌ಗಳು ಲಭ್ಯವಿದ್ದು, ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು' ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹೇಳಿದೆ.

ಗುರುವಾರ ಪ್ರಕಟಣೆ ಹೊರಡಿಸಿರುವ ಇಲಾಖೆ, 'ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಬಹುದು ಎಂಬ ಆತಂಕ ಜನರಲ್ಲಿದೆ. ಪ್ರಮುಖ ತೈಲಕಂಪನಿಗಳಾದ ಐಒಸಿಎಲ್, ಎಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದ್ದೇವೆ. ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇಲ್ಲ, ಮುಂಬರುವ ದಿನಗಳಿಗೆ ಬೇಕಾಗುವಷ್ಟು ದಾಸ್ತಾನು ಇದೆ ಎಂದು ಕಂಪನಿಗಳು ದೃಢಪಡಿಸಿವೆ' ಎಂದು ತಿಳಿಸಿದೆ.

'ಗ್ರಾಹಕರು ಅನಗತ್ಯವಾಗಿ ಸಿಲಿಂಡರ್‌ಗಳನ್ನು ಬುಕ್ ಮಾಡಿದರೆ ಸಿಲಿಂಡರ್‌ಗಳ ಕೊರತೆ ಮತ್ತು ಕೃತಕ ಅಭಾವ ಸೃಷ್ಟಿಯಾಗಬಹುದು. ಹೆಚ್ಚಿನ ಸಿಲಿಂಡರ್‌ಗಳನ್ನು ಸಂಗ್ರಹಿಸಿದರೆ, ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಪ್ರಕರಣ ದಾಖಲಿಸಲಾಗುತ್ತದೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ನಿಗಾ ಇಡಬೇಕು' ಎಂದು ಹೇಳಿದೆ.

'ಪಿಎನ್‌ಜಿ ಪೂರೈಕೆ ಅಬಾಧಿತ'

ಬೆಂಗಳೂರು: ಕೊಳವೆ ಮೂಲಕ ಪೂರೈಕೆ ಆಗುವ ನೈಸರ್ಗಿಕ ಅನಿಲದ (ಪಿಎನ್‌ಜಿ) ಕೊರತೆ ಬೆಂಗಳೂರಿನಲ್ಲಿ ಆಗಿಲ್ಲ, ಪಿಎನ್‌ಜಿ ಜಾಲದ ಜೊತೆ ಸಂಪರ್ಕ ಹೊಂದಿರುವ ನಗರದ ಹೋಟೆಲ್ ಮತ್ತು ಕೈಗಾರಿಕೆಗಳು ಅಡಚಣೆ ಇಲ್ಲದೆ ಅನಿಲ ಪಡೆಯಲಿವೆ ಎಂದು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ (ಗೇಲ್) ಹೇಳಿದೆ.

ಗೇಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಸಂಜಯ್ ಕುಮಾರ್ ಸಿಂಗ್ ಅವರು ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ (ಬಿ.ಸಿ.ಐ.ಸಿ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೈಗಾರಿಕೆಗಳ ಪ್ರತಿನಿಧಿಗಳನ್ನುದ್ದೇಶಿಸಿ ಈ ವಿಷಯ ತಿಳಿಸಿದರು.

ಸಚಿವ ಸ್ಥಾನ: ಒತ್ತಡ ಹೇರಲು ನಿರ್ಧಾರ

ಔತಣಕೂಟ ನೆಪದಲ್ಲಿ ಸಭೆ ನಡೆಸಿದ 25ಕ್ಕೂ ಹೆಚ್ಚು ಹಿರಿಯ ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪುಟ ಪುನರ್ ರಚನೆಯ ಸಂದರ್ಭದಲ್ಲಿ ಸಚಿವ ಸ್ಥಾನಕ್ಕಾಗಿ ಒತ್ತಡ ತರುವ ಉದ್ದೇಶದಿಂದ ಕಾಂಗ್ರೆಸ್‌ನ ಹಿರಿಯ ಶಾಸಕರು ಔತಣಕೂಟದ ನೆಪದಲ್ಲಿ ಗುರುವಾರ ರಾತ್ರಿ ಒಂದೆಡೆ ಸಭೆ ಸೇರಿ ಚರ್ಚೆ ನಡೆಸಿದ್ದಾರೆ.

ಬೌರಿಂಗ್ ಕ್ಲಬ್‌ನಲ್ಲಿ ನಡೆದ ಈ ಸಭೆಯಲ್ಲಿ 25ಕ್ಕೂ ಹೆಚ್ಚು ಶಾಸಕರಿದ್ದರು.

ಸಂಪುಟ ಪುನರ್ ರಚನೆಗೆ ಹೈಕಮಾಂಡ್ ಸೂಚನೆ ನೀಡಿದರೆ, ಹಿರಿಯ ಶಾಸಕರಿಗೆ ಅವಕಾಶ ಕೊಡಬೇಕೆಂದು ಹಕ್ಕೊತ್ತಾಯ ಮಂಡಿಸುವ ಬಗ್ಗೆ ಸಭೆಯಲ್ಲಿ ವಿಚಾರ ವಿನಿಮಯ ನಡೆದಿದೆ. ದೆಹಲಿಗೆ ತೆರಳಿ ವರಿಷ್ಠರ ಮುಂದೆ ಬೇಡಿಕೆ ಮಂಡಿಸಬೇಕೆಂಬ ಬಗ್ಗೆಯೂ ಚರ್ಚೆ ನಡೆದಿದೆ.

ಬೌರಿಂಗ್ ಕ್ಲಬ್‌ನಲ್ಲಿ ನಡೆದ ಸಭೆಯಲ್ಲಿ ಭಾಗಿಯಾಗಿದ್ದ ಶಾಸಕರು

ರಾಜ್ಯ ಸರ್ಕಾರ ರಚನೆಯ ವೇಳೆ 3-4 ಬಾರಿ ಸತತವಾಗಿ ಗೆಲುವು ಕಂಡಿರುವ ಹಿರಿಯ ಶಾಸಕರು ಸಚಿವ ಸ್ಥಾನ ಸಿಗದೆ ವಂಚಿತರಾಗಿದ್ದಾರೆ. ಈ ಬಗ್ಗೆ ಹೈಕಮಾಂಡ್ ನಾಯಕರ ಗಮನಕ್ಕೆ ತರಬೇಕು. ಅದಕ್ಕೂ ಮೊದಲು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮನವಿ ಮಾಡಲು ತೀರ್ಮಾನಿಸಲಾಗಿದೆ.

ಸಂಪುಟ ಪುನರ್ ರಚನೆಯ ವೇಳೆ ಮೊದಲ ಬಾರಿಗೆ ಶಾಸಕರಾದವರನ್ನೂ ಸಚಿವ ಸ್ಥಾನಕ್ಕೆ ಪರಿಗಣಿಸಬೇಕೆಂದು ಮೊದಲ ಬಾರಿ ಆಯ್ಕೆಯಾಗಿದ್ದ 31 ಶಾಸಕರು ಪಕ್ಷದ ನಾಯಕರಿಗೆ ಪತ್ರ ಬರೆದು ಮನವಿ ಮಾಡಿದ್ದರು. ಅದರ ಬೆನ್ನಲ್ಲೇ, ಸಚಿವ ಸ್ಥಾನ ನೀಡಬೇಕೆಂದು ವಿಧಾನಪರಿಷತ್‌ನ ಕೆಲವು ಸದಸ್ಯರು ಕೂಡ ಒತ್ತಾಯಿಸಿದ್ದರು. ಇದೀಗ ಹಿರಿಯ ಶಾಸಕರು, ಬಜೆಟ್ ಅಧಿವೇಶನ ಮುಗಿದ ಬಳಿಕ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಲು ನಿರ್ಧರಿಸಿದ್ದಾರೆ.

ಎರಡೂವರೆ ವರ್ಷಗಳ ಬಳಿಕ ಸಂಪುಟ ಪುನರ್ ರಚಿಸಲು ಸರ್ಕಾರ ರಚನೆ ವೇಳೆಯೇ ಹೈಕಮಾಂಡ್ ನಾಯಕರು ತೀರ್ಮಾನಿಸಿದ್ದರು. ಆದರೆ, ಅಧಿಕಾರ ಹಂಚಿಕೆ, ನಾಯಕತ್ವದ ಗೊಂದಲದ ಕಾರಣಕ್ಕೆ ಎರಡೂವರೆ ವರ್ಷ ಕಳೆದರೂ ಸಂಪುಟ ಪುನರ್ ರಚನೆ ಮಾಡದಿರುವುದು ಹಿರಿಯ ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ.

ಎನ್‌.ಎ. ಹ್ಯಾರಿಸ್, ಬೇಳೂರು ಗೋಪಾಲಕೃಷ್ಣ, ಪ್ರಸಾದ್ ಅಬ್ಬಯ್ಯ, ಶಾಂತನಗೌಡ, ಬಸವರಾಜ ನೀಲಪ್ಪ ಶಿವಣ್ಣನವರ, ಗಣೇಶ್ ಹುಕ್ಕೇರಿ, ಎಂ.ವೈ. ಪಾಟೀಲ, ಯು.ಬಿ. ಬಣಕಾರ್, ಪುಟ್ಟರಂಗಶೆಟ್ಟಿ, ಸುಬ್ಬಾರೆಡ್ಡಿ, ಅಶೋಕ್ ಪಟ್ಟಣ, ಟಿ.ಬಿ. ಜಯಚಂದ್ರ, ಲಕ್ಷ್ಮಣ ಸವದಿ, ಯಶವಂತರಾಯಗೌಡ ಪಾಟೀಲ, ಶ್ರೀನಿವಾಸ, ಬಿ. ಶಿವಣ್ಣ, ಜಿ.ಟಿ.ಪಾಟೀಲ, ಜಿ.ಎಸ್. ಪಾಟೀಲ, ಬಾಲಕೃಷ್ಣ, ಷಡಕ್ಷರಿ, ಹಂಪನಗೌಡ ಬಾದರ್ಲಿ, ನಾರಾಯಣ ಸ್ವಾಮಿ, ಬಿ.ಜಿ. ಗೋವಿಂದಪ್ಪ ಮುಂತಾದವರು ಸಭೆಯಲ್ಲಿ ಇದ್ದರು.

ಬೆಂಗಳೂರು ನಗರದ ಸುತ್ತಮುತ್ತ ಬೆಳೆಯುತ್ತಿರುವ ರೈತರು

'ಸೊಪ್ಪು–ತರಕಾರಿಯಲ್ಲಿ ಹೆಚ್ಚುತ್ತಿದೆ ಸೀಸ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಸುತ್ತಮುತ್ತ ಬೆಳೆಯುವ ಸೊಪ್ಪು–ತರಕಾರಿಗಳಲ್ಲಿ ಸೀಸ ಮತ್ತು ಭಾರ ಲೋಹಗಳ ಅಂಶಗಳಿವೆ. ನೆಲ, ಜಲ, ವಾಯುಮಾಲಿನ್ಯ ತಾರಕಕ್ಕೆ ಏರಿದ್ದು, ಜನರ ಆರೋಗ್ಯಕ್ಕೆ ಗಂಡಾಂತರಕಾರಿಯಾಗಿ ಪರಿಣಮಿಸಿದೆ ಎಂದು ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ಆತಂಕ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಈ ಪರಿಸ್ಥಿತಿಯನ್ನು ನಿಭಾಯಿಸಲು ಅಂತರ್ ಇಲಾಖಾ ಅಧಿಕಾರಿಗಳು ಮತ್ತು ಸಚಿವರ ಸಮಿತಿಯೊಂದನ್ನು ರಚಿಸಬೇಕು ಎಂದು ಸಲಹೆ ನೀಡಿದರು. ಈ ವಿಷಯವಾಗಿ ಪಕ್ಷಭೇದ ಮರೆತ ಸದಸ್ಯರು, ಸರ್ಕಾರ ದಿಟ್ಟ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಮುಖ್ಯಾಂಶಗಳು

- ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪ
- ಸಚಿವರು, ಅಧಿಕಾರಿಗಳ ಸಮಿತಿ ರಚಿಸಲು ಸಲಹೆ
- ಸರ್ಕಾರ ದಿಟ್ಟ ಕ್ರಮ ಜರುಗಿಸಲು ಆಗ್ರಹ

ಹಾಲು ಮತ್ತು ಹಾಲಿನ ಉತ್ಪನ್ನಗಳಲ್ಲಿ ಕಲಬೆರಕೆ, ಮೊಟ್ಟೆಗಳಲ್ಲಿ ಹಾನಿಕಾರಕ ಅಂಶಗಳು, ಬೀದಿ ಬದಿ ಫಾಸ್ಟ್‌ಫುಡ್ ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ನಿಷೇಧಿತ ರಾಸಾಯನಿಕ ಬಳಸಲಾಗುತ್ತಿದೆ. ಸೊಪ್ಪು– ತರಕಾರಿಗಳಲ್ಲಿ ಭಾರ ಲೋಹ, ಸೀಸದ ಅಂಶ 20 ಪಟ್ಟು ಹೆಚ್ಚಾಗಿದೆ. ಇದರ ಪರಿಣಾಮ ಪ್ರತಿ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬರು ಫ್ಯಾಟಿ ಲಿವರ್ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಡಿಸಿಎಂ ನೇತೃತ್ವದಲ್ಲಿ ಸಭೆ

'ತರಕಾರಿಯಲ್ಲಿ ವಿಷಕಾರಿ ಅಂಶ ಪತ್ತೆಯಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಬೆಂಗಳೂರು ಶಾಸಕರ ಸಭೆ ಕರೆಯುತ್ತೇವೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ಬೆಂಗಳೂರಿನಲ್ಲಿ ವಾಯು, ಜಲ ಮತ್ತು ನೆಲ ಮಾಲಿನ್ಯ ಜಾಸ್ತಿ ಆಗುತ್ತಿದೆ. ಕೊಳಚೆ ನೀರು ಶುದ್ಧೀಕರಣ ಘಟಕವೂ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. 1800 ಎಂಎಲ್‌ಡಿಯಷ್ಟು ಕೊಳಚೆ ನೀರು ಶುದ್ಧೀಕರಣ ಮಾಡುವ ಘಟಕಗಳು ಬೇಕಾಗಿವೆ. ಎಲ್ಲ ಕೆರೆಗಳೂ ಕೊಳಚೆ ನೀರಿನ ಕೆರೆಗಳಾಗಿ ಪರಿವರ್ತನೆಗೊಂಡಿವೆ ಎಂದು ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಬೆಂಗಳೂರಿನ ಈ ಸಮಸ್ಯೆಯನ್ನು ಪರಿಹರಿಸಲು ಕೃಷಿ, ತೋಟಗಾರಿಕೆ, ಅರಣ್ಯ ಇಲಾಖೆಗಳು ಸೇರಿ ಜಂಟಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ ಎಂದು ಸಲಹೆ ನೀಡಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ಬೆಂಗಳೂರಿನ ಕೊಳಚೆ ನೀರು ಬಳಸಿ ಸೊಪ್ಪು–ತರಕಾರಿ ಬೆಳೆಯುತ್ತಿದ್ದಾರೆ. ಅದೇ ನೀರಿನಲ್ಲಿ ಹುಲ್ಲು ಬೆಳೆದು ಜಾನುವಾರುಗಳಿಗೆ ಹಾಕುತ್ತಿದ್ದಾರೆ. ಇದರಿಂದ ಹಾಲಿನಲ್ಲೂ ಅಪಾಯಕಾರಿ ರಾಸಾಯನಿಕ ಇರುವುದು ಪತ್ತೆಯಾಗಿದೆ ಎಂದು ತಿಳಿಸಿದರು.

ಆದ್ದರಿಂದ, ಈ ವಿಷಯಕ್ಕೆ ಸಂಬಂಧಿಸಿದ ಸಚಿವರನ್ನು ಒಳಗೊಂಡ ಉಸ್ತುವಾರಿ ಸಮಿತಿ ರಚಿಸಿ ಪರಿಹಾರೋಪಾಯವನ್ನು ಕಂಡುಕೊಳ್ಳಬೇಕು ಎಂದು ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಮುಗುಳುನಗೆ... ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿನಿ

ಸೆನ್ಸೆಕ್ಸ್ 76,034 | ನಿಫ್ಟಿ 23,639 | $/₹ 92.25

ವಾಣಿಜ್ಯ ಎಲ್‌ಪಿಜಿ ಪೂರೈಕೆಗೆ ವ್ಯವಸ್ಥೆ

ಲೋಕಸಭೆಯಲ್ಲಿ ಭರವಸೆ ನೀಡಿದ ಪೆಟ್ರೋಲಿಯಂ ಸಚಿವ ಪುರಿ, ಗ್ರಾಮೀಣರಿಗೆ 45 ದಿನಕ್ಕೆ ಒಂದು ಎಲ್‌ಪಿಜಿ ಸಿಲಿಂಡರ್

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ನವದೆಹಲಿ: ಎಲ್‌ಪಿಜಿ ಸಿಲಿಂಡರ್ ಸರಿಯಾಗಿ ಲಭ್ಯವಾಗದೆ ಹೋಟೆಲ್ ಉದ್ಯಮವು ಸಮಸ್ಯೆ ಎದುರಿಸುತ್ತಿರುವ ಸಂದರ್ಭದಲ್ಲಿ, 'ವಾಣಿಜ್ಯ ಬಳಕೆ ಎಲ್‌ಪಿಜಿಯ ತಿಂಗಳ ಸರಾಸರಿ ಅಗತ್ಯದ ಶೇಕಡ 20ರಷ್ಟನ್ನು ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಗುರುವಾರದಿಂದಲೇ ಪೂರೈಕೆ ಮಾಡುತ್ತವೆ' ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಭರವಸೆ ನೀಡಿದರು.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಅಕ್ರಮ ದಾಸ್ತಾನು ಆಗಬಾರದು, ಅವುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಯಾರಿಗೂ ಅವಕಾಶ ಸಿಗಬಾರದು ಎಂಬ ಕಾರಣಕ್ಕೆ ಕಂಪನಿಗಳು ಈ ಕಾರ್ಯವನ್ನು ರಾಜ್ಯ ಸರ್ಕಾರಗಳ ಜೊತೆ ಸಮನ್ವಯದಲ್ಲಿ ಮಾಡಲಿವೆ ಎಂದು ಪುರಿ ಅವರು ಲೋಕಸಭೆಗೆ ತಿಳಿಸಿದರು.

▶10

ಸಚಿವರ ಹೇಳಿಕೆ

- ಗ್ರಾಮೀಣ ಪ್ರದೇಶಗಳು ಹಾಗೂ ದುರ್ಗಮ ಪ್ರದೇಶಗಳ ಗ್ರಾಹಕರಿಗೆ 45 ದಿನಗಳಿಗೆ ಒಂದು ಎಲ್‌ಪಿಜಿ ಸಿಲಿಂಡರ್ ಮಾತ್ರ ವಿತರಣೆ ಮಾಡುವ ನಿಯಮ ಜಾರಿಗೊಳಿಸಲಾಗಿದೆ.
- ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳಿಗೆ ಎಲ್‌ಪಿಜಿ ಪೂರೈಕೆ ಅಬಾಧಿತವಾಗಿದೆ.
- ಜಗತ್ತಿನ ಇತಿಹಾಸದಲ್ಲಿ ಇಂಥ ಸಂದರ್ಭ ಯಾವತ್ತೂ ಎದುರಾಗಿರಲಿಲ್ಲ.

ಸದನವು ಒಂದು ಸಂಗತಿ ಸ್ಪಷ್ಟಪಡಿಸಿಕೊಳ್ಳಬೇಕು. ಕೆಲವೆಡೆ ಬುಕಿಂಗ್ ವಿಚಾರದಲ್ಲಿ ಕಂಡುಬಂದ ಒತ್ತಡವು ಬೇಡಿಕೆಯಲ್ಲಿ ವ್ಯತ್ಯಾಸ ಆಗಿರುವುದನ್ನು ಹೇಳುತ್ತದೆ. ಉತ್ಪಾದನೆ, ಪೂರೈಕೆಯಲ್ಲಿನ ವೈಫಲ್ಯವನ್ನು ಅದು ತೋರಿಸುವುದಿಲ್ಲ

ಹರದೀಪ್ ಸಿಂಗ್ ಪುರಿ, ಕೇಂದ್ರ ಸಚಿವ

'₹134 ಹೆಚ್ಚಳ ಆಗಬೇಕಿತ್ತು'

ಸಬ್ಸಿಡಿ ಇಲ್ಲದ, ಮನೆಬಳಕೆ ಎಲ್‌ಪಿಜಿ ಸಿಲಿಂಡರ್ ದರವು ಈಚೆಗಿನ ₹60 ಹೆಚ್ಚಳದ ನಂತರದಲ್ಲಿ ₹913ಕ್ಕೆ ತಲುಪಿದೆ. ಆದರೆ ವಾಸ್ತವದಲ್ಲಿ ಮಾರುಕಟ್ಟೆಯಲ್ಲಿ ಪ್ರತಿ ಸಿಲಿಂಡರ್ ದರವು ₹987 ಆಗಬೇಕಿತ್ತು ಎಂದು ಸಚಿವ ಪುರಿ ವಿವರಿಸಿದ್ದಾರೆ. ಅಂದರೆ, ಪ್ರತಿ ಸಿಲಿಂಡರ್ ಬೆಲೆಯನ್ನು ₹134ರಷ್ಟು ಹೆಚ್ಚಿಸಬೇಕಿತ್ತು. ಆದರೆ ಸರ್ಕಾರವು ಪ್ರತಿ ಸಿಲಿಂಡರ್ ಮೇಲೆ ₹74ರಷ್ಟು ಮೊತ್ತವನ್ನು ತಾನೇ ಪಾವತಿಸುತ್ತಿದೆ ಎಂದು ಅವರು ಹೇಳಿದ್ದಾರೆ.

'ಸಮಸ್ಯೆಗೆ ವಾರದಲ್ಲೇ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ. ವಾಣಿಜ್ಯ ಬಳಕೆಯ ಸಿಲಿಂಡರ್ ಸರಬರಾಜಿನಲ್ಲಿನ ವ್ಯತ್ಯಯವನ್ನು ವಾರದ ಒಳಗೆ ಬಗೆಹರಿಸಲಾಗುವುದು' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ರಮೇಶ್ ಬಾಬು, ಐವನ್ ಡಿಸೋಜ, ಕೆ.ಶಿವಕುಮಾರ್, ರಾಮೋಜಿಗೌಡ, ಜಗದೇವ್ ಗುತ್ತೇದಾರ್, ರಾಜೇಂದ್ರ ರಾಜಣ್ಣ ಅವರು ಈ ವಿಷಯ ಪ್ರಸ್ತಾಪಿಸಿದರು.

ಸದಸ್ಯರ ಆತಂಕಗಳಿಗೆ ಪ್ರತಿಕ್ರಿಯಿಸಿದ ಮುನಿಯಪ್ಪ, ಹೋಟೆಲ್, ಕಲ್ಯಾಣ ಮಂಟಪಗಳ ಶುಭ ಕಾರ್ಯಗಳನ್ನು ಅಗತ್ಯ ಸೇವೆ ಎಂದು ಪರಿಗಣಿಸಿ ವಾಣಿಜ್ಯ ಸಿಲಿಂಡರ್ ಪೂರೈಕೆ ಮಾಡಲಾಗುವುದು. ತೈಲ ಕಂಪನಿಗಳ ಜತೆ ಶುಕ್ರವಾರ ಸಭೆ ನಡೆಸಿದ ನಂತರ ಹೋಟೆಲ್ ಉದ್ಯಮಿಗಳ ಜತೆ ಸಮಾಲೋಚನೆ ನಡೆಸಲಾಗುವುದು ಎಂದರು.

▶10

ಸಿಬಿಐ ತಪಾಸಣೆ

ಎಲ್‌ಪಿಜಿ ಸಿಲಿಂಡರ್‌ಗಳ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆಯೇ ಎಂಬುದನ್ನು ಪತ್ತೆ ಮಾಡಲು ಸಿಬಿಐ ಬೆಂಗಳೂರು ವಲಯ ಅಧಿಕಾರಿಗಳು ನಗರದ ವಿವಿಧೆಡೆ ಗುರುವಾರ ತಪಾಸಣೆ ನಡೆಸಿದ್ದಾರೆ. ನಗರದ ಪೀಣ್ಯ ಕೈಗಾರಿಕಾ ಪ್ರದೇಶ, ಹೆಬ್ಬಾಳ ಮತ್ತು ಕನಕಪುರ ರಸ್ತೆಯ ಹಲವು ಗೋದಾಮುಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ರಕ್ಷಣೆಯಲ್ಲಿ ಮೊನಾಲಿಸಾ ಮದುವೆ

ವಿವರ ಪುಟ ▶9

ನಿಜವಾದ ಸಾಂಪ್ರದಾಯಿಕ ಸೊಬಗಿನ ನವೀನ ಹೆಗ್ಗುರುತು
ಕೋಲಾರ

ಸ್ಟೋರ್ ಉದ್ಘಾಟನೆ

ದಿನಾಂಕ : 13.03.2026, ಶುಕ್ರವಾರ
ಸಮಯ : ಬೆಳಗ್ಗೆ 10.00 ಗಂಟೆಗೆ

ಸ್ಥಳ : ಸಂ. 21-1-108-54, ಅಮ್ಮಾವರಪೇಟೆ ಮುಖ್ಯರಸ್ತೆ, ಆಂಜನೇಯ ದೇವಸ್ಥಾನದ ಎದುರು, ಕೋಲಾರ - 563 101.

ಶೋರೂಮಿನ ಉದ್ಘಾಟನೆ
ಶ್ರೀಮತಿ ಎಸ್. ಶಕುಂತಲಾ
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು & ಸಿಜೆಎಂ, ಕೋಲಾರ.

ದೀಪ ಬೆಳಗಿಸುವವರು & ಮೊದಲ ಖರೀದಿ
ಕನಿಕಾ ಸಿಕ್ರಿವಾಲ್ (ಐಪಿಎಸ್)
ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಕೋಲಾರ.

RAMRAJ
COTTON
CULTURE OF INDIA

STORE LOCATION

ಸಂ. 21-1-108-54, ಅಮ್ಮಾವರಪೇಟೆ ಮುಖ್ಯರಸ್ತೆ, ಆಂಜನೇಯ ದೇವಸ್ಥಾನದ ಎದುರು, ಕೋಲಾರ - 563 101. Ph : 86105 73147.

ಅಮೆರಿಕ ತೈಲ ಟ್ಯಾಂಕರ್ ಮೇಲೆ ದಾಳಿ: ಒಬ್ಬ ಭಾರತೀಯ ಸಾವು • ಸಂಘರ್ಷ ಶಮನಕ್ಕೆ ಹೆಚ್ಚಿದ ಒತ್ತಡ

ಯುದ್ಧಾಂತ್ಯಕ್ಕೆ ಇರಾನ್ ಮೂರು ಷರತ್ತು

ಟೆಹರಾನ್ /ನ್ಯೂಯಾರ್ಕ್/ ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಸತತ 13ನೇ ದಿನವೂ ಮುಂದುವರಿದಿದ್ದು, ಅಮೆರಿಕದ ತೈಲ ಟ್ಯಾಂಕರ್ ಹಡಗಿನ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ನಾವಿಕರೊಬ್ಬರು ಗುರುವಾರ ಮೃತಪಟ್ಟಿದ್ದಾರೆ. ಸಂಘರ್ಷದಿಂದ ಜಾಗತಿಕ ಇಂಧನ ಕೊರತೆ ಮತ್ತು ವಾಣಿಜ್ಯ ಹಡಗುಗಳ ಸಂಚಾರಕ್ಕೆ ತೀವ್ರ ತೊಂದರೆ ಆಗಿರುವುದರಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಂಘರ್ಷ ಶಮನಕ್ಕೆ ಒತ್ತಡಗಳು ಹೆಚ್ಚಾಗುತ್ತಿವೆ. ಇದರ ಬೆನ್ನಲ್ಲೇ ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಯುದ್ಧವನ್ನು ಕೊನೆಗೊಳಿಸಲು ಇರಾನ್ ಮೂರು ಷರತ್ತುಗಳನ್ನು ವಿಧಿಸಿದೆ.

'ಯುದ್ಧ ಕೊನೆಗೊಳಿಸಲು ತೆಗೆದುಕೊಳ್ಳುವ ಯಾವುದೇ ನಿರ್ಣಯವು ಇರಾನಿನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು, ಭವಿಷ್ಯದಲ್ಲಿ ಇರಾನ್ ಮೇಲೆ ಯಾವುದೇ ದಾಳಿ ನಡೆಸುವುದಿಲ್ಲ ಎಂಬುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಖಾತರಿಪಡಿಸಬೇಕು. ಅಲ್ಲದೆ, ಇರಾನ್‌ಗೆ ಆದ ಹಾನಿಗಳಿಗೆ ಸೂಕ್ತ ಪರಿಹಾರವನ್ನೂ ಕೊಡಬೇಕು' ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

▶11

ಇರಾನ್ ವಿರುದ್ಧ ವಿಶ್ವಸಂಸ್ಥೆಯಲ್ಲಿ ನಿರ್ಣಯ ಅಂಗೀಕಾರ

ವಿಶ್ವಸಂಸ್ಥೆ (ಪಿಟಿಐ): ಕೊಲ್ಲಿ ಸಹಕಾರ ಮಂಡಳಿಯ ರಾಷ್ಟ್ರಗಳು ಮತ್ತು ಜೋರ್ಡನ್ ಮೇಲೆ ಇರಾನ್ ನಡೆಸಿದ ಭೀಕರ ದಾಳಿಗಳನ್ನು ಖಂಡಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಜತೆಗೂಡಿ ಬಹರೇನ್ ನಿರ್ಣಯ ಮಂಡಿಸಿದೆ. ಇರಾನ್ ತಕ್ಷಣವೇ ತನ್ನೆಲ್ಲಾ ದಾಳಿಗಳನ್ನು ನಿಲ್ಲಿಸಬೇಕು ಮತ್ತು ಹೊರ್ಮುಜ್ ಜಲಸಂಧಿಯನ್ನು ಮುಚ್ಚುವುದಾಗಿ ಬೆದರಿಕೆ ಒಡ್ಡುವುದನ್ನು ನಿಲ್ಲಿಸಬೇಕು ಎಂದು ನಿರ್ಣಯದಲ್ಲಿ ಪ್ರಮುಖವಾಗಿ ಒತ್ತಾಯಿಸಲಾಗಿದೆ. ಪ್ರಸ್ತುತ ಅಮೆರಿಕ ಅಧ್ಯಕ್ಷತೆಯಲ್ಲಿರುವ 15 ರಾಷ್ಟ್ರಗಳ ಭದ್ರತಾ ಮಂಡಳಿಯು ಬುಧವಾರ ಈ ನಿರ್ಣಯವನ್ನು ಅಂಗೀಕರಿಸಿತು. ನಿರ್ಣಯದ ಪರವಾಗಿ 13 ಮತಗಳು ಬಂದವು. ವಿರುದ್ಧವಾಗಿ ಯಾರೂ ಮತ ಹಾಕಲಿಲ್ಲ. ಚೀನಾ ಮತ್ತು ರಷ್ಯಾ ದೇಶಗಳು ಮತದಾನದಲ್ಲಿ ಭಾಗವಹಿಸದೆ ತಟಸ್ಥವಾಗಿದ್ದವು.

▶11

ಮೊಟ್ಟೆ ರಫ್ತಿಗೂ ಯುದ್ಧದ ಹೊಡೆತ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ಅರಬ್ ರಾಷ್ಟ್ರಗಳಿಗೆ ಇಲ್ಲಿಂದ ಸಾಗಣೆಯಾಗುತ್ತಿದ್ದ ಕೋಳಿಮೊಟ್ಟೆ ರಫ್ತು ವಹಿವಾಟು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಸ್ಥಗಿತಗೊಂಡಿದೆ. ಇದರಿಂದ ಮೊಟ್ಟೆ ಬೆಲೆಯೂ ಕುಸಿದಿದ್ದು, ಕೋಳಿ ಸಾಕಾಣಿಕೆಗೆ ತೊಂದರೆ ಉಂಟಾಗಿದೆ.

ವಿವರ ಪುಟ ▶10

'ಕೆನೆಪದರ: ಆದಾಯವಷ್ಟೇ ಆಧಾರವಲ್ಲ'

ಒಬಿಸಿ ಮೀಸಲಾತಿ ಕುರಿತು 'ಸುಪ್ರೀಂ' ಮಹತ್ವದ ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ಅಭ್ಯರ್ಥಿಯೊಬ್ಬರು ಕೆನೆಪದರದ ವ್ಯಾಪ್ತಿಯಲ್ಲಿ ಬರುತ್ತಾರೋ ಅಥವಾ ಇಲ್ಲವೋ ಎನ್ನುವುದನ್ನು ಆ ಅಭ್ಯರ್ಥಿಯ ಪೋಷಕರ ಆದಾಯವೊಂದನ್ನೇ ಆಧರಿಸಿ ನಿರ್ಧರಿಸಲು ಸಾಧ್ಯವಿಲ್ಲ. ಪೋಷಕರು ಯಾವ ಹುದ್ದೆಯಲ್ಲಿದ್ದಾರೆ ಎನ್ನುವುದೂ ಮುಖ್ಯವಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಪೋಷಕರು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ನೌಕರಿಯಲ್ಲಿದ್ದಾರೆ, ಬ್ಯಾಂಕುಗಳು ಅಥವಾ ಖಾಸಗಿ ವಲಯದ ಉದ್ಯೋಗದಲ್ಲಿದ್ದಾರೆ ಎನ್ನುವ ಕಾರಣಕ್ಕೆ ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಯುಪಿಎಸ್‌ಸಿ ಆಕಾಂಕ್ಷಿಗಳನ್ನು ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯವು ಕೆನೆಪದರಕ್ಕೆ ಸೇರಿಸಿ ನೇಮಕಾತಿಯಲ್ಲಿ ಮೀಸಲಾತಿ ನಿರಾಕರಿಸಿತ್ತು.

▶5

ಕಾಲರಾ ಶಂಕೆ ಮಹಿಳೆ ಸಾವು

ಕಾರ್ಗಲ್ (ಶಿವಮೊಗ್ಗ): ಸಾಗರ ತಾಲ್ಲೂಕಿನ ಕಾರ್ಗಲ್ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ 200ಕ್ಕೂ ಹೆಚ್ಚು ಜನ ವಾಂತಿ–ಭೇದಿಯಿಂದ ಬಳಲುತ್ತಿದ್ದು, ಮಹಿಳೆಯೊಬ್ಬರು ಗುರುವಾರ ಮೃತಪಟ್ಟಿದ್ದಾರೆ.

ಕಾರ್ಗಲ್ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ. ರಾಜು ಅವರ ತಾಯಿ ಜಯಲಕ್ಷ್ಮಿ (65) ಮೃತ ಮಹಿಳೆ. ಇವರು ಬುಧವಾರ ಜ್ವರ, ವಾಂತಿ, ಭೇದಿಯಿಂದ ಅಸ್ವಸ್ಥಗೊಂಡಿದ್ದರು. ಗುರುವಾರ ಬೆಳಿಗ್ಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಆರೋಗ್ಯ ಇಲಾಖೆ ಅಧಿಕಾರಿಗಳು ಕಾಲರಾ ಶಂಕೆ ವ್ಯಕ್ತಪಡಿಸಿದ್ದಾರೆ. ಕಾರ್ಗಲ್, ಜೋಗ, ಲಿಂಗನಮಕ್ಕಿ, ಅರಳಗೋಡು, ಹೆನ್ನಿ, ಇಡುವಾಣಿ ಗ್ರಾಮಗಳಲ್ಲಿ ನಾಲ್ಕೈದು ದಿನಗಳಿಂದ ನಿವಾಸಿಗಳಲ್ಲಿ ಹೊಟ್ಟೆನೋವು, ವಾಂತಿ, ಭೇದಿ, ತಲೆನೋವು, ಜ್ವರ ಕಾಣಿಸಿಕೊಂಡಿತ್ತು. ಅಸ್ವಸ್ಥಗೊಂಡಿದ್ದ ಕಾರ್ಗಲ್‌ನ ಸರ್ಕಾರಿ ಶಾಲೆಯ 15ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಚಿಕಿತ್ಸೆಗೆ ಬುಧವಾರ ಕೆಪಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. 'ಶರಾವತಿ ಕೊಳ್ಳದ ನಿವಾಸಿಗಳು ನೀರನ್ನು ಕಾಯಿಸಿ ಕುಡಿಯಬೇಕು' ಎಂದು ಕಾರ್ಗಲ್ ಆಸ್ಪತ್ರೆಗೆ ಭೇಟಿ ನೀಡಿದ್ದ ಆರೋಗ್ಯ ಇಲಾಖೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಎಲ್. ನಾಗರಾಜ ನಾಯ್ಕ ಮನವಿ ಮಾಡಿದ್ದಾರೆ.

ಚಿನಕುರುಳಿ — ಪ್ರಕಾಶ್ ಶೆಟ್ಟಿ

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ನಂ.16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080

ದೂರವಾಣಿ ಸಂಖ್ಯೆ: 080-22205189/93 ಇ-ಮೇಲ್ ವಿಳಾಸ: sec.karnataka@ka.gov.in

STATE ELECTION COMMISSION, KARNATAKA
सत्यमेव जयते

ಪ್ರಕಟಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿಯಲ್ಲಿ ರಚನೆಯಾಗಿರುವ 05 ನಗರಪಾಲಿಕೆಗಳಾದ

(1) ಬೆಂಗಳೂರು ಕೇಂದ್ರ (2) ಬೆಂಗಳೂರು ಉತ್ತರ (3) ಬೆಂಗಳೂರು ದಕ್ಷಿಣ (4) ಬೆಂಗಳೂರು ಪೂರ್ವ ಮತ್ತು (5) ಬೆಂಗಳೂರು ಪಶ್ಚಿಮ ನಗರಪಾಲಿಕೆಗಳಲ್ಲಿ ಇರುವ 369 ವಾರ್ಡ್‌ಗಳಿಗೆ ದಿನಾಂಕ: 19.01.2026 ರಂದು ಮತದಾರರ ನೋಂದಣಾಧಿಕಾರಿಗಳು ಸಂಬಂಧಪಟ್ಟ ವಾರ್ಡ್‌ವಾರು ವ್ಯಾಪ್ತಿಯ ಮತಗಟ್ಟೆಗಳಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿರುತ್ತಾರೆ, ತದನಂತರ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಸರಿಪಡಿಸಿ ದಿನಾಂಕ: 09.03.2026 ರಂದು ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮತದಾರರು ತಮ್ಮ ವಾರ್ಡಿನ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳು ಇರುವ ಬಗ್ಗೆ ಪರಿಶೀಲಿಸಿಕೊಂಡು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 10.03.2026 ರಿಂದ 16.03.2026 ರೊಳಗೆ ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಮತದಾನ

ಈ ಕೆಳಕಂಡ ಸಹಾಯವಾಣಿಗೆ ಸಂಪರ್ಕಿಸಬಹುದಾಗಿದೆ

ಕ್ರ. ಸಂ.	ನಗರ ಪಾಲಿಕೆ	ಸಹಾಯವಾಣಿ
1	ಬೆಂಗಳೂರು ಕೇಂದ್ರ ನಗರಪಾಲಿಕೆ	080–22975803
2	ಬೆಂಗಳೂರು ಉತ್ತರ ನಗರಪಾಲಿಕೆ	080–22975936
3	ಬೆಂಗಳೂರು ದಕ್ಷಿಣ ನಗರಪಾಲಿಕೆ	080–26566362/9480685704
4	ಬೆಂಗಳೂರು ಪೂರ್ವ ನಗರಪಾಲಿಕೆ	9480685706
5	ಬೆಂಗಳೂರು ಪಶ್ಚಿಮ ನಗರಪಾಲಿಕೆ	9480685703

ಸಹಿ/– ಆಯುಕ್ತರು
ರಾಜ್ಯ ಚುನಾವಣಾ ಆಯೋಗ, ಬೆಂಗಳೂರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ.

16ಕ್ಕೆ ರಾಜ್ಯಮಟ್ಟದ ವಿಚಾರಸಂಕಿರಣ

ಬೆಂಗಳೂರು: ದಲಿತ ಚಿಂತಕರ ಚಾವಡಿಯಿಂದ ಮಾರ್ಚ್ 16ರಂದು ಬೆಳಿಗ್ಗೆ 11ರಂದು ಅರಮನೆ ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 'ಆಳುವ ವರ್ಗವಾಗಲು ದಲಿತ ಜನಾಂಗಗಳು ಎದುರಿಸುತ್ತಿರುವ ಇಂದಿನ ಸವಾಲುಗಳು–ಪರಿಹಾರದ ಮುಂದಿನ ಮಾರ್ಗ' ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಾವಡಿಯ ಗೌರವ ಅಧ್ಯಕ್ಷ ಎಚ್.ಆರ್. ಸುರೇಂದ್ರ, ಎಂ. ನಾರಾಯಣಸ್ವಾಮಿ, ವೈ. ಮರಿಸ್ವಾಮಿ, ಸತೀಶ್, ನಾಗರತ್ನ, 'ಲೇಖಕಿ ಬಿ.ಟಿ. ಲಲಿತಾ ನಾಯಕ್ ಅವರು ವಿಚಾರಸಂಕಿರಣ ಉದ್ಘಾಟಿಸಲಿದ್ದಾರೆ ಎಂದರು.

₹15 ಕೋಟಿ ಮೌಲ್ಯದ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಯಶವಂತಪುರ ಹೋಬಳಿಯ ಮಲ್ಲತ್ತಹಳ್ಳಿಯಲ್ಲಿ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲಾಯಿತು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ₹15 ಕೋಟಿ ಮೌಲ್ಯದ ಸ್ವತ್ತು ವಶಪಡಿಸಿಕೊಂಡಿದೆ.

ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಲ್ಲತ್ತಹಳ್ಳಿಯಲ್ಲಿ ಸರ್ವೆ ಸಂಖ್ಯೆ 80ರಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡ, ಮನೆ ಹಾಗೂ ನಿರ್ಮಾಣ ಹಂತದ ಕಟ್ಟಡಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು.

ಸುಮಾರು ₹15 ಕೋಟಿ ಮೌಲ್ಯದ 12 ಗುಂಟೆ ಪ್ರದೇಶವನ್ನು ವಶಕ್ಕೆ ಪಡೆದು, ಸುತ್ತಲೂ ಬೇಲಿ ಹಾಕಲಾಗಿದೆ.

ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು. ಈ ವೇಳೆ ವಲಯಾಧಿಕಾರಿಗಳು, ಬಿಡಿಎ ಕಾರ್ಯಪಡೆ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳು, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಭೂಮಾಪಕರು ಹಾಜರಿದ್ದರು.

'ಆಸ್ತಿ ಖರೀದಿಸುವ ಮೊದಲು ಸಂಬಂಧಿತ ದಾಖಲೆಗಳ ಸಮಗ್ರ ಪರಿಶೀಲನೆ ನಡೆಸಬೇಕು. ಅನುಮೋದಿತ ಬಡಾವಣೆಗಳಲ್ಲಿ ಮಾತ್ರ ನಿವೇಶನಗಳನ್ನು ಖರೀದಿಸಬೇಕು' ಎಂದು ಬಿಡಿಎ ತಿಳಿಸಿದೆ.

ವೆಂಕಟಪ್ಪ ಆರ್ಟ್ ಗ್ಯಾಲರಿ: ಕಲಾ ಪ್ರದರ್ಶನ

ಬೆಂಗಳೂರು: ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಂ ವತಿಯಿಂದ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ವಿಶೇಷ ಪ್ರದರ್ಶನ, ಕಲೆಗಳ ಪ್ರದರ್ಶನ, ಏಕವ್ಯಕ್ತಿ ಪ್ರದರ್ಶನ, ವಿಚಾರಸಂಕಿರಣಗಳು ನಡೆಯುತ್ತಿವೆ.

ವೆಂಕಟಪ್ಪ ಆರ್ಟ್ ಗ್ಯಾಲರಿಗೆ 50 ವರ್ಷ ಹಾಗೂ ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಂಗೆ 10 ವರ್ಷ ತುಂಬಿದ ಹಿನ್ನೆಲೆಯಲ್ಲಿ ಈ ವಿಶೇಷ ಪ್ರದರ್ಶನವನ್ನು ಆಯೋಜಿಸಲಾಗಿದ್ದು, ಮಾರ್ಚ್ 15ರವರೆಗೆ ನಡೆಯಲಿದೆ. ವೆಂಕಟಪ್ಪ ಆರ್ಟ್ ಗ್ಯಾಲರಿ ಸ್ಥಾಪನೆ, ನಡೆದು ಬಂದ ದಾರಿಯ ಕುರಿತು ಮಾಹಿತಿಗಳನ್ನು ಪ್ರದರ್ಶನ ಮಾಡಲಾಗಿದೆ. ಏಕವ್ಯಕ್ತಿ ಪ್ರದರ್ಶನ ಸೇರಿದಂತೆ ವಿವಿಧ ರೀತಿಯ ಕಾರ್ಯಕ್ರಮಗಳು ನಡೆಯುತ್ತಿವೆ. ಈ ಪ್ರದರ್ಶನಕ್ಕೆ ಉಚಿತ ಪ್ರವೇಶವಿದ್ದು, ಕಲಾಸಕ್ತರು ಭಾಗವಹಿಸಬಹುದು.

ಈ ಪ್ರದರ್ಶನದಲ್ಲಿ ಕಲಾತ್ಮಕ ಪ್ರಾತ್ಯಕ್ಷಿಕೆಗಳು, ಅಭಿನಯಾತ್ಮಕ ಕಲಾ ಪ್ರದರ್ಶನ, ಕಲಾ ಕಮ್ಮಟ, ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

1ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ.ಎಸ್. ಮರಿಸ್ವಾಮಿ
B.A., B.L., DIP-IN-IND
(ನಿವೃತ್ತ ಉಪಕಾನೂನು ಅಧಿಕಾರಿ, ಕೆ.ಎಸ್.ಆರ್.ಟಿ.ಸಿ.)
(10–06–1935 – 13–03–2025)
ನಿಮ್ಮ ನೆನಪು ಸದಾ ಜೀವಂತ
ಶ್ರೀಮತಿ ಗೌರಮ್ಮ ಮತ್ತು ಕುಟುಂಬವರ್ಗದವರು

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com
ಸಂಖ್ಯೆ: ಮಾ.ನ.ಕಾ/ತಾ.ಶಾ/57/2025–26 ದಿನಾಂಕ: 12–03–2026
ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)
ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ, ವಿದ್ಯುತ್ ಪರಿವೀಕ್ಷಣಾಲಯದಲ್ಲಿ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಗೂ ಅರ್ಹ ಏಜೆನ್ಸಿದಾರರಿಂದ ಕಾಮಗಾರಿ ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆ.ಪಿ.ಪಿ) ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಇಂಡೆಂಟ್ ಸಂಖ್ಯೆಗಳು: DMA/2025-26/WS/WORK_INDENT56327, DMA/2025-26/WS/WORK_INDENT56326, DMA/2025-26/WORK_INDENT56324, DMA/2025-26/SE7468 ಮತ್ತು DMA/2025-26/SE7467.
1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 26.03.2026 ಸಂಜೆ 5.00 ಗಂಟೆಯ ವರೆಗೆ. 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 30.03.2026 ಸಂಜೆ 5.00 ವರೆಗೆ. 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 01.04.2026 ಬೆಳಗ್ಗೆ 10.30 ಗಂಟೆಗೆ. 4) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ
DIPR/CP/SMCL/6210/2025-26

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: SG-SWR-PROJUBL-KAVACH-BLD ದಿನಾಂಕ: 09.03.2026
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಪ್ರಸ್ತಾವಿತ ಒಂದು ಯೋಜನಾ ಸ್ಟೋರ್ ಶೆಡ್‌ನ ನಿರ್ಮಾಣ ಮತ್ತು ಇತರ ಸ್ಟೋರ್‌ಗಳ ಅಭಿವೃದ್ಧಿ ಕಾರ್ಯಗಳ ಮೇಲಿನ ಬಲವರ್ಧನೆ.	ರೂ. 3,37,80,472.45

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.04.2026, 11:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ ಮತ್ತು ದೂರಸಂಪರ್ಕ ಇಂಜಿನಿಯರ್/ಯೋಜನೆಗಳು/ಹುಬ್ಬಳ್ಳಿ
PUB/990/AAMO/PRB/SWR/2025-26
RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.
South Western Railway - SWR | SWRRLY | SWRAILWAYHQ | sw_railways

CONNECT ಕ್ಲಾಸಿಫೈಡ್ಸ್

INDIA'S BIGGEST TRAVEL SHOW NETWORK
India's Biggest Travel Show Network
TTF TRAVEL & TOURISM FAIR
OPENS TODAY
13 14 15 March 2026
Tripura Vasini, Palace Grounds (Gate 2 & 3), Bengaluru
Reserved for Travel Trade: 13 March: 11:00 am - 6:00 pm; 14 March: 11:00 am - 2:00 pm
Open to all: 14 March: 2:00 pm - 6:00 pm; 15 March: 11:00 am - 6:00 pm
Meet hundreds of travel brands and destinations from across India. Discover exciting travel deals and holiday packages for your next getaway!
Host State: Karnataka One state. Many worlds. www.karnatakatourism.org | Partner State: Goa | Feature States: Telangana, Gujarat, Meghalaya | Incredible India
Supported by | Official Publication | Organised by FAIRFEST MEDIA LIMITED
Free entry for all visitors* • 022 4555 8555 • www.ttfotm.com
*TTF is a trade show, visitors below 15 years are not allowed.
Right of Entry Reserved. Terms and Conditions Apply. ttfotm.com/entry-tnc

SRI CHAMUNDI SILKS
By Namita Kathare
MYSORE SILK EXHIBITION SALE
AT Sri Gajalakshmi Kalyana Mantapa
First Floor, 8th Cross, Malleswaram, (Near Asha Sweets), Bengaluru-560003
5th March to 15th March (Thursday-Sunday)
UGADI SALE 50%
Timing : 10AM- 8PM
Instagram : @mysoresilksareesss
Ph : + 91 9663398130 +91 9663963344

Experience the timeless elegance of Mysore Silk sarees
Our Branches :
Sri Chamundi Silks - Whitefield
Sri Chamundi Silks - Rajajinagar

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

General

WANTED PROFESSIONAL Experienced GYM TRAINER, good salary, incentives gym at Vishweshwaraiah Layout 8th block. 9964567849

Teachers/ Professors

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool.mlayout@gmail.com

REAL ESTATE SELLING

Industrial & Factory

Tumkur Road

SALE, 10 Acres Industrial Land Dabaspet. Also 30 Acres suitable for Warehouse, Industry, Residencial. 9141326819

BHAGAVAD GITA
Chapter 5
The Yoga of Renunciation of Action

Discourse in English by Sunandaji
14 - 17 March 2026
6:45 pm - 8.00 pm
R V Teachers' College
Jayanagar 2nd Block
Near Lalbagh Metro Station
Bengaluru
All are Welcome
96321 93390

ಭಾರತದ ಪ್ರಸಿದ್ಧ ಕೇರಳ ಜ್ಯೋತಿಷ್ಯ ಪಂಡಿತರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 40 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಾಸ್ತ್ರದ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಬರ್‌ವಾಲ್ ಪ್ಯಾಲೇಸ್‌ರಾಯ್, ರೂ. ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು–4.
ಮನೆ: ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಪಕ್ಕ, ಬೆಂಗಳೂರು–84.
Ph: 9844165272 / 9036552207
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

Sites

Yelahanka

RESIDENTIAL SITE FOR SALE in YELAHANKA-JUDICIAL LAYOUT, 30x40.5, on 40 Feet Road, South Facing, Expected Rs.20,000/Sft. Call Owner: 9945304836/ 9980800306

PERSONAL

Change of Name

I, MS. Clarissa .S, D/o Minchan Sajesh, aged 24 years, No. 12042, Municipal No. 1/402, situated in Level-4, Block-12-Omaru, in Prestige Wellington Park, Municipal No.1, IAF Main Road, Jalahalli, Bangalore, have changed my name from Clarissa .S and Clarissa Solomon to Clarissa Sajesh vide Affidavit dated 11-03-2026 sworn before Notary Mr. Manohar Jeerige, Bangalore.

CHANGE OF NAME
We, Rajaram H & Manjula G, residing at No.15, 2nd Main, 3rd Cross, 7th Ballari Road, Ambedkar Slum, Ganganagar, Bengaluru - 560094, have changed my minor daughter's name from NIHARIKA R to NILA. R vide affidavit dt: 11.03.2026 before notary M.S. Satish, Bengaluru. Henceforth, she shall be called as NILA. R only.

I, KISHORE KRISHNA MURTHY B.S. R/a #.23 1st Main Road, Venudevi Residency Shakti nagar, Bangalore- 560016, have changed my name from KISHORE KRISHNA MURTHY B.S to KISHORE KRISHNAN Vide affidavit dated 12/03/2026 before notary Mohammad Hussain .K. Bangalore.

CHANGE OF NAME
I, INDRANI UMAPATHY age 42 years W/o Ravi Paul R, R/at No. 385, 1st Main, 2nd Cross, R.K. Hegde Nagar, Bengaluru-560077. have changed my name to INDRANI RAVI PAUL vide affidavit dated: 11.03.2026 sworn before Notary S. Samuel Solomon, Bangalore.

CHANGE OF NAME
I, JAYANTHI KENNEDY Residing at No. 306, 3rd floor, Harshitha Arcade, 12th Cross, Somasundara Palya, HRS Layout Sector-II, Bangalore 560102 have changed my name to JAYANTHI JOHN vide affidavit dated 12.3.2026 before Notary A. Idinabba, Bangalore.

I, NANDINI M.V. R/a #.23 1st Main Road, Venudevi Residency Shakti Nagar, Bangalore- 560016, have changed my name from NANDINI M.V. to NANDINI KRISHNAN Vide affidavit dated 12/03/2026 before notary Mohammad Hussain .K. Bangalore.

CHANGE OF NAME
I, RAZIA, residing at No.104, 4th Floor, 5th Main, 2nd Cross, Vasanthappa Block, Ganganagar, R.T. Nagar Post, Bangalore-560032, have changed my name to RAZIA A vide affidavit dated 12-03-2026 before notary L Gopalakrishna, Bengaluru. Henceforth I shall be called RAZIA A only

Nuts in a jar
WHOLESALE PRICES
HOME DELIVERED

Everyday Classics (250g)
Californian Almonds: ₹225
Whole White Cashews: ₹285
Cashews (2 Piece): ₹260
Cashews (4 Piece): ₹225
Iranian Mamra Almonds: ₹675
Afghan Figs (Anjeer): ₹350
Afghan Apricots: ₹220
Indian Pearl Raisins: ₹140
Afghan Pearl Raisins: ₹290
Walnuts (4 Piece - 200g): ₹315

Berries (250g)
Black Currant: ₹230
Blueberry: ₹425
Cherry: ₹220
Cranberry: ₹235
Strawberry: ₹290

Dates (250g)
Ajwa Dates: ₹280
Mabroon Dates: ₹270
Medjoul Dates: ₹425
Safavi Dates: ₹190
Black Dry Dates: ₹120

Seeds (250g)
Pumpkin Seeds: ₹160
Sunflower Seeds: ₹150
Chia Seeds: ₹135
Flax Seeds: ₹80
Watermelon Seeds: ₹210
MuskMelon Seeds: ₹230
Quinoa: ₹95
Makhana Phool (100g): ₹175

Maharaja Collection (250g)
Macadamia Nuts: ₹845
Brazil Nuts: ₹925
Pecan Nuts: ₹615
Pine Nuts: ₹1,850

Coated Chocolates (100g)
Chocolate Almonds: ₹175
Chocolate Cashews: ₹225
Chocolate Coffee Beans: ₹139
Chocolate Blueberry: ₹225

Freeze Dried Coffee (50g)
All Flavors (Vanilla, Caramel, Irish Cream, etc.): ₹250

Vedic shuddhi COLD PRESSED OIL
1 Litre Bottle
Groundnut: ₹340
Coconut: ₹650
Mustard: ₹290
Seseme: ₹525
Virgin Olive: ₹690

ORDER FOR ₹4000 AND GET FREE INDUCTION COOKTOP

Use Code: ugadi4000
SCAN TO ORDER
www.nutsinajar.in
Order on Call
7338021446 | 8686337373

I, SMT. Ambika, W/o Sri Basawaraj, aged 40 years, Flat No.104, 1st Floor, Sahasra Grandeur, 2nd Cross, Amruthnagar, Bangalore-560092, have changed my name from Ambika Basavaraja Joldapagi and Ambika Gardshetty and Ambika Baswanthrao Gardshetty to Ambika B Patil vide Affidavit dated 10-03-2026 sworn before Notary Mr. Lakshminarayana, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ವಿಜಯನಗರ ಕ್ಲಬ್
ವಿಜಯನಗರ, ಬೆಂಗಳೂರು–560104. ದೂ: 080–2330 0675, 9606038126
ವಿ.ಕ್ಲಬ್/ಆಡಳಿತ/2025–26 ದಿನಾಂಕ: 12.03.2026
ಟೆಂಡರ್ ಅಧಿಸೂಚನೆ
ವಿಜಯನಗರ ಕ್ಲಬ್ ಬೆಂಗಳೂರು, ಇಲ್ಲಿ ಸದಸ್ಯರು/ಅತಿಥಿಗಳಿಗೆ ಆಹಾರ ಪದಾರ್ಥಗಳನ್ನು ಸಿದ್ಧಪಡಿಸಿ ಪೂರೈಸುವ ನೋಂದಾಯಿತ/ಅನುಭವಿ/ಹೆಸರಾಂತ (ಇ.ಎಸ್.ಐ/ಭವಿಷ್ಯನಿಡಿ/ಎಫ್.ಎಸ್.ಎಸ್.ಎ.ಐ/ನೋಂದಾಯಿತ) ಪ್ರಮಾಣೀಕೃತ ಕೇಟರಿಂಗ್ ಸಂಸ್ಥೆಗಳಿಂದ, ಸ್ಪರ್ಧಾತ್ಮಕ ದರಗಳನ್ನು ನಮೂದಿಸಿರುವ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದು ಇಚ್ಛೆಯುಳ್ಳ ಸಂಸ್ಥೆಗಳು ಟೆಂಡರ್‌ಗಳನ್ನು ದಿನಾಂಕ. 25.03.2026 ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೊ.ಸಂ. 9606098126ನ್ನು ಸಂಪರ್ಕಿಸಿ
ಸಹಿ/– ಕಾರ್ಯದರ್ಶಿ, ವಿಜಯನಗರ ಕ್ಲಬ್

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 02 ಮಾರ್ಚ್, 2026
ಶಾ. ಆ. 1118 (E) 1989ರ ರೈಲ್ವೆ ಕಾಯ್ದೆಯ (1989ರ ಕಾಯ್ದೆ ಸಂಖ್ಯೆ 24) ಸೆಕ್ಷನ್ 2ರ ಷರತ್ತು 37(ಎ) ರಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ, ಸಾರ್ವಜನಿಕ ಉದ್ದೇಶಕ್ಕಾಗಿ ರಾಷ್ಟ್ರೀಯ ಮೂಲಸೌಕರ್ಯವನ್ನು ಒದಗಿಸಲು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ "ವಿಶೇಷ ರೈಲ್ವೆ ಯೋಜನೆ" ಎಂದು ಈ ಮೂಲಕ ಅಧಿಸೂಚನೆ ಹೊರಡಿಸಿದೆ.

ಕ್ರ ಸಂ.	ಯೋಜನೆಯ ಹೆಸರು
1	ವೈಟ್‌ಫೀಲ್ಡ್ – ಬಂಗಾರಪೇಟೆ ನಿಲ್ದಾಣದ ನಡುವಿನ ಹಳಿಯ ಚತುಷ್ಪಥ ನಿರ್ಮಾಣ (47 ಕಿ.ಮೀ.)

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಸ್‌ಆರ್‌ಪಿ/1727
ಹೆಚ್ಚಿನ ವಿವರಗಳಿಗೆ https://egazette.gov.in ಗೆ ಲಾಗ್‌ಆನ್ ಮಾಡಿ.
ಪ್ರದೀಪ್ ಪುರಿ, ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್
ಪಿಯುಬಿ/971/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ.3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.
South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/175/2026
ದಿನಾಂಕ : 06–03–2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕಿಮೀ: 121/600–700 ನಲ್ಲಿ ಎಲ್‌ಸಿ ಸಂ.97 ಬದಲಿಗೆ 1x36 ಮೀ ಕಾಂಪೊಸಿಟ್ ಗರ್ಡರ್ (ರೈಲ್ವೆ ಭಾಗ) + 3x18.71ಮೀ ಪಿಎಸ್‌ಸಿ ಗರ್ಡರ್ (ಕಿರಂಗೂರು ಎಂಡ್) + 6x18.71ಮೀ ಪಿಎಸ್‌ಸಿ ಗರ್ಡರ್ (ರಾಮಪುರ ಎಂಡ್) + 3x28ಮೀ ಪಿಎಸ್‌ಸಿ ಗರ್ಡರ್ (ರಾಮಪುರ ಎಂಡ್) + ಆರ್‌ಸಿಸಿ ರೀಟೇನಿಂಗ್ ಗೋಡೆ (ಅಪ್ರೋಚ್ ಭಾಗ) ಆಗಿ ರಸ್ತೆ ಮೇಲ್ಸೇತುವೆಯ ನಿರ್ಮಾಣ ಮತ್ತು ಪಾಂಡವಪುರ (PANP) ಮತ್ತು ಶ್ರೀರಂಗಪಟ್ಟಣ (S) ನಿಲ್ದಾಣಗಳ ನಡುವೆ ಕಿಮೀ.121/540 ನಲ್ಲಿ 1x5x2.5ಮೀ ಆರ್‌ಸಿಸಿ ಬಾಕ್ಸ್ ಆಗಿ ಉದ್ದೇಶಿತ ಸೀಮಿತ ಎತ್ತರದ ಸಬ್‌ವೇ (ಸಂಯೋಜಿತ ಕಾಮಗಾರಿ). (ಟೆಂಡರ್ ಉಲ್ಲೇಖ ಸಂ. ಆರ್‌ಓಬಿ–ಎಲ್‌ಸಿ–97–ಪಿಎಎನ್‌ಪಿ–ಎಸ್)	ರೂ. 37,59,30,128/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31–03–2026 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು
ಪಿಯುಬಿ/983/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯುಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ.3ವರೆಗೆ ರಿಯಾತಿಯನ್ನು ಪಡೆದು ಆನಂದಿಸಿ.
South Western Railway-SWR | SWRRLY | @SWRAILWAYHQ | @sw_railways

ಸಾರ್ವಜನಿಕ ಪ್ರಕಟಣೆ
ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕೆಳಗಿನ ಷೆಡ್ಯೂಲ್‌ಗಳಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿತ ಹಕ್ಕು, ಅಧಿಕಾರ ಮತ್ತು ಮಾಲೀಕತ್ವ ಕುರಿತಂತೆ ನಾವು ಪರಿಶೋಧನೆ ಮಾಡುತ್ತಿದ್ದೇವೆ. ಕೆಳಕಂಡ ಷೆಡ್ಯೂಲ್‌ನಲ್ಲಿ ನಿರ್ದಿಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ ಜಮೀನುಗಳ ಡೆವಲಪರ್ ಜೊತೆಗೆ ನಮ್ಮ ಕಕ್ಷಿದಾರರು ವ್ಯವಹರಿಸಲು ಉದ್ದೇಶಿಸಿರುತ್ತಾರೆ. ಯಾವುದೇ ಲೇವಾದೇವಿಗಾರರು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ಸೇರಿದಂತೆ, ಯಾವುದೇ ವ್ಯಕ್ತಿಗಾಗಲಿ ಅಥವಾ ವ್ಯಕ್ತಿಗಳಿಗಾಗಲಿ ಅಥವಾ ಸಂಸ್ಥೆಗಳಿಗಾಗಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ರೀತಿಯ ಆನುವಂಶಿಕ, ಅಡಮಾನ, ಮಾರಾಟ, ಮಾರಾಟ ಒಪ್ಪಂದ, [illegible]
ಷೆಡ್ಯೂಲ್ ಪ್ರಾಪರ್ಟಿ
[illegible]
ದಿನಾಂಕ: 13/03/2026
ಸ್ಥಳ: ಬೆಂಗಳೂರು
ಕಾರ್ತಿಕ್ ಶಿವ ಕುಮಾರ್, ವಕೀಲರು
ಖೇತಾನ್ & ಕೋ.
ಎಂಬೆಸ್ಸಿ ಕ್ವೆಸ್ಟ್ 3ನೇ ಮಹಡಿ, ನಂ. 45/1, ಮ್ಯಾಗ್ರಾಥ್ ರಸ್ತೆ, ಬೆಂಗಳೂರು – 560 025

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಪ್ರಸ್ತುತ ಶ್ರೀ. ಕಿರಣ್ ವರ್ಗೀಸ್ ಎಂಬುವರ ಮಾಲೀಕತ್ವದಲ್ಲಿರುವ ಮತ್ತು ರಾಮಗೊಂಡನಹಳ್ಳಿ ಗ್ರಾಮ, ವರ್ತೂರ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಸರ್ವೆ ನಂ.106 ರಲ್ಲಿನ 3 ಎಕರೆ 14½ ಗುಂಟಾ ವಿಸ್ತೀರ್ಣವುಳ್ಳ ಜಮೀನಿನಲ್ಲಿ ರೂಪಿಸಲಾಗಿರುವ, ಖಾತಾ ನಂ. 377/351/332/106/2 ವಸತಿಯೋಗ್ಯ ಸೈಟ್ ನಂ. 267 ಹೊಂದಿರುವ, ಸುಮಾರು 8800 ಚದರ ಅಡಿ ವಿಸ್ತೀರ್ಣವುಳ್ಳ ಸ್ಥಿರಾಸ್ತಿಗೆ ಸಂಬಂಧಿತ ಹಕ್ಕು ಅಧಿಕಾರಗಳನ್ನು ನಾವು ಪರಿಶೋಧಿಸುತ್ತಲಿದ್ದೇವೆ. ನಾವು ಪರಿಶೋಧಿಸುತ್ತಿರುವ ಸದರಿ ಭೂಭಾಗದ ಹಕ್ಕು [illegible]
ದಕ್ಷಿಣಕ್ಕೆ : ಖಾಸಗಿ ಸ್ವತ್ತು.
ದಿನಾಂಕ : 13/03/2026
ಸ್ಥಳ : ಬೆಂಗಳೂರು
ಜೆರಾಲ್ಡ್ ಮನೋಹರನ್, ಪಾಲುದಾರರು
ಜೆಎಸ್‌ಎ, ವಕೀಲರು
18ನೇ ಮಹಡಿ, ಎಸ್‌ಕೆಎವಿ 909, ನಂ. 9/1
ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ವೃತ್ತ
ಬೆಂಗಳೂರು – 560 001.
ಫೋನ್: 080–4350 3600 / 080–4350 3610
ಇ–ಮೇಲ್: gerald@jsalaw.com

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 02 ಮಾರ್ಚ್, 2026
ಶಾ. ಆ. 1117 (ಇ) 1989ರ ರೈಲ್ವೆ ಕಾಯ್ದೆಯ (1989ರ ಕಾಯ್ದೆ ಸಂಖ್ಯೆ 24) ಸೆಕ್ಷನ್ 2ರ ಷರತ್ತು 37(ಎ) ರಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ, ಸಾರ್ವಜನಿಕ ಉದ್ದೇಶಕ್ಕಾಗಿ ರಾಷ್ಟ್ರೀಯ ಮೂಲಸೌಕರ್ಯವನ್ನು ಒದಗಿಸಲು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ "ವಿಶೇಷ ರೈಲ್ವೆ ಯೋಜನೆ" ಎಂದು ಈ ಮೂಲಕ ಅಧಿಸೂಚನೆ ಹೊರಡಿಸಿದೆ.

ಕ್ರ. ಸಂ.	ಯೋಜನೆಯ ಹೆಸರು	ಗ್ರಾಮ	ತಾಲ್ಲೂಕು	ಜಿಲ್ಲೆ
1	ಬೆಂಗಳೂರು ನಗರ – ಮೈಸೂರು ವಿಭಾಗ: ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ ಕಿ.ಮೀ: 10/900 – 11/000 ನಲ್ಲಿ ಎಲ್‌ಸಿ ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳ ಸೇತುವೆ ನಿರ್ಮಾಣ.	ವಲಗೇರಹಳ್ಳಿ	ಬೆಂಗಳೂರು ದಕ್ಷಿಣ	ಬೆಂಗಳೂರು

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಸ್‌ಆರ್‌ಪಿ/1727
ಹೆಚ್ಚಿನ ವಿವರಗಳಿಗೆ https://egazette.gov.in ಗೆ ಲಾಗ್‌ಆನ್ ಮಾಡಿ.
ಪ್ರದೀಪ್ ಪುರಿ, ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್
ಪಿಯುಬಿ/972/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ.3ವರೆಗೆ ರಿಯಾತಿಯನ್ನು ಪಡೆದು ಆನಂದಿಸಿ.
South Western Railway-SWR | SWRRLY | @SWRAILWAYHQ | @sw_railways

ಟಿಡಿಆರ್ ವಂಚನೆ: ಇ.ಡಿ ದೂರು

ವಾಲ್‌ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಕಂಪನಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡ ಸ್ವತ್ತುಗಳಿಗೆ ಪ್ರತಿಯಾಗಿ ನೀಡಲಾಗಿದ್ದ ಅಭಿವೃದ್ಧಿ ಹಕ್ಕು ವರ್ಗಾವಣೆ ಪ್ರಮಾಣ ಪತ್ರ (ಟಿಡಿಆರ್ ಪ್ರಮಾಣ ಪತ್ರ) ವಂಚನೆ ಪ್ರಕರಣದಲ್ಲಿ ವಾಲ್‌ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಕಂಪನಿ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದಲ್ಲಿ ಗುರುವಾರ ದೂರು ದಾಖಲಿಸಲಾಗಿದೆ.

‘2009-2015ರ ಅವಧಿಯಲ್ಲಿ ಹೊರಮಾವು ಮತ್ತು ಟಿ.ಸಿ.ಪಾಳ್ಯ ರಸ್ತೆ ವಿಸ್ತರಣೆಗಾಗಿ ಬಿಬಿಎಂಪಿಯು ಜಮೀನು ಮತ್ತು ವಸತಿ ಕಟ್ಟಡಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿತ್ತು. ಆದರೆ 1989ರಲ್ಲೇ ಈ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಲಾಗಿತ್ತು. ಈ ಸಂಗತಿಯನ್ನು ಮರೆಮಾಚಿ, ವಾಲ್‌ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಮತ್ತು ಕೆಲ ಮಧ್ಯವರ್ತಿಗಳು ಜಮೀನಿನ ಮೂಲ ಮಾಲೀಕರಿಂದ ಟಿಡಿಆರ್ ಕೋರಿ ಬಿಬಿಎಂಪಿಗೆ ಅರ್ಜಿ ಹಾಕಿಸಿದ್ದರು. ಬಿಬಿಎಂಪಿ ಅಧಿಕಾರಿಗಳು, ₹27.68 ಕೋಟಿ ಮೊತ್ತದ ಟಿಡಿಆರ್ ನೀಡಿದ್ದರು’ ಎಂದು ಇ.ಡಿ ವಿವರಿಸಿದೆ.

‘ಕಂಪನಿಯ ಪ್ರವರ್ತಕರು, ಮಧ್ಯವರ್ತಿಗಳಾದ ಕೆ.ಸುರೇಶ್, ಕೆ.ಗೌತಮ್ ಮತ್ತು ಬಿ.ಎಸ್. ಸುರೇಂದ್ರನಾಥ್ ಅವರು ಸಂಚು ನಡೆಸಿ, ವಂಚನೆ ಎಸಗಿದ್ದಾರೆ. ಬಿಬಿಎಂಪಿಯ ಅಧಿಕಾರಿಗಳೂ ಇದರಲ್ಲಿ ಭಾಗಿಯಾಗಿದ್ದಾರೆ. ಇತರ ಟಿಡಿಆರ್ ಪ್ರಕರಣಗಳನ್ನೂ ತನಿಖೆಗೆ ಒಳಪಡಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದೆ.

ವಂಚನೆ ಹೇಗೆ: ‘ಒಂದು ಅಂತಸ್ತು ಇದ್ದ ಕಟ್ಟಡವನ್ನು ಮೂರು-ನಾಲ್ಕು ಅಂತಸ್ತು ಎಂದು ಬಿಬಿಎಂಪಿ ಅಧಿಕಾರಿಗಳು ಸುಳ್ಳು ವರದಿ ನೀಡಿದ್ದಾರೆ. ಖಾಲಿ ನಿವೇಶನಗಳಲ್ಲೂ ವಾಣಿಜ್ಯ ಕಟ್ಟಡಗಳು ಇದ್ದವು ಎಂದು ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ. ಜತೆಗೆ ಟಿಡಿಆರ್ ಮೊತ್ತವನ್ನೂ ವಾಸ್ತವಕ್ಕಿಂತ ಹೆಚ್ಚು ತೋರಿಸಿದ್ದಾರೆ’ ಎಂದು ಇ.ಡಿ ತಿಳಿಸಿದೆ.

‘ಅಲೆಮಾರಿಗಳಿಗೆ ಶೇ 1ರಷ್ಟು ಒಳ ಮೀಸಲಾತಿ ನೀಡಿ’

ಬೆಂಗಳೂರು: ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ1ರಷ್ಟು ಒಳ ಮೀಸಲಾತಿ ನೀಡಬೇಕು ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಶೇಷಪ್ಪ ಅಂದೋಳು, ಮಂಜುನಾಥ್ ದಾಯತ್ಕರ್, ಬಸವರಾಜ ನಾರಾಯಣ್ಕರ್, ಡಿ.ಆರ್. ಚಿನ್ನ, ‘ನಾಗಮೋಹನದಾಸ್ ಆಯೋಗದ ಶಿಫಾರಸಿನಂತೆ 49 ಅಲೆಮಾರಿ ಸಮುದಾಯಗಳನ್ನು ಪ್ರವರ್ಗ ‘ಎ’ನಲ್ಲಿ ಇರಿಸಿ ಶೇಕಡ 1ರಷ್ಟು ಒಳ ಮೀಸಲಾತಿ ಜಾರಿಗೊಳಿಸಬೇಕು. ಈ ಸಮುದಾಯದ ಸಬಲೀಕರಣಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಿ, ₹500 ಕೋಟಿ ಅನುದಾನ ನೀಡಬೇಕು’ ಎಂದು ಒತ್ತಾಯಿಸಿದರು. ‘ಪ್ರತಿ ಜಿಲ್ಲೆಗೆ 500 ಮನೆಗಳಂತೆ 31 ಜಿಲ್ಲೆಗಳಲ್ಲಿ 15,500 ಮನೆಗಳನ್ನು ನಿರ್ಮಿಸಿ, ಅಲೆಮಾರಿ ಸಮುದಾಯದವರಿಗೆ ವಿತರಿಸಬೇಕು. ಭೂ ಒಡೆತನ ಯೋಜನೆ ಅಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ 100 ಎಕರೆ ಕೃಷಿ ಜಮೀನನ್ನು ಸಮುದಾಯಗಳಿಗೆ ಮೀಸಲಿಡಬೇಕು’ ಎಂದರು.

10 ದಿನ ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಸ್ತೂರಿನಗರ ಹೊರವರ್ತುಲ ರಸ್ತೆಯ ರ್‍ಯಾಂಪ್‌ನ ಕೆಂಪೇಗೌಡ ಕೆಳಸೇತುವೆ ಬಳಿ, ರೈಲ್ವೆ ಇಲಾಖೆಯಿಂದ ಕಬ್ಬಿಣದ ಪ್ಲೇಟ್‌ಗಳ ಮೇಲೆ ಕಾಂಕ್ರೀಟ್ ಹಾಕುವ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಈ ಭಾಗದಲ್ಲಿ 10 ದಿನ ವಾಹನ ಸಂಚಾರ ಮಾರ್ಪಾಡು ಮಾಡಲಾಗಿದೆ.

ವಾಹನ ಸಂಚಾರ ನಿರ್ಬಂಧ: ಕಸ್ತೂರಿನಗರ ಹೊರವರ್ತುಲ ಸರ್ವಿಸ್ ರಸ್ತೆಯ (ಕೆಂಪೇಗೌಡ ಕೆಳಸೇತುವೆ) ರಾಮಮೂರ್ತಿನಗರ ಕಡೆಯಿಂದ ಹಾಗೂ ಸದಾನಂದನಗರ ಕಡೆಯಿಂದ ವಿಜಿನಾಪುರ ಎಫ್‌ಸಿಐ ಗೋದಾಮು ಕಡೆಗೆ ಹೋಗುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ರಾಮಮೂರ್ತಿನಗರ ಜಂಕ್ಷನ್ ಮೂಲಕ ವಿಜಿನಾಪುರ ಕಡೆಗೆ ಸಂಚರಿಸುವವರು ರಾಮಮೂರ್ತಿನಗರ ಮುಖ್ಯರಸ್ತೆಯಲ್ಲಿ ನೇರವಾಗಿ ಚಲಿಸಿ, ಎಫ್‌ಸಿಐ ರಸ್ತೆಯ ಕಡೆಗೆ ಬಲಕ್ಕೆ ತಿರುವು ಪಡೆದು ವಿಜಿನಾಪುರ ಕಡೆಗೆ ಸಂಚರಿಸಬಹುದು.

ಸದಾನಂದನಗರ ಕಡೆಯಿಂದ ವಿಜಿನಾಪುರ ಕಡೆಗೆ ಹೋಗುವ ವಾಹನ ಸವಾರರು ಕಸ್ತೂರಿ ನಗರದ ಎರಡನೇ ಕ್ರಾಸ್ ಮೂಲಕ ರಾಮಮೂರ್ತಿನಗರ ಜಂಕ್ಷನ್ ತಲುಪಿ ವಿಜಿನಾಪುರ ಕಡೆಗೆ ಸಂಚರಿಸಬಹುದು.

ವಿಜಿನಾಪುರ ಕಡೆಯಿಂದ ಕೆಂಪೇಗೌಡ ಕೆಳಸೇತುವೆ ಮೂಲಕ ಕಸ್ತೂರಿ ನಗರದ ಕಡೆಗೆ ಸಂಚರಿಸುವವರು ವಿಜಿನಾಪುರ ರಸ್ತೆಯ ಮೂರನೇ ‘ಎ’ ಕ್ರಾಸ್ ರಸ್ತೆಯ ಮೂಲಕ ಕಸ್ತೂರಿ ನಗರದ ಕಡೆಗೆ ಸಂಚರಿಸಬಹುದು.

ವಾಹನ ನಿಲುಗಡೆ ನಿರ್ಬಂಧಿಸಿರುವ ರಸ್ತೆ: ಕಸ್ತೂರಿನಗರ ಹೊರವರ್ತುಲ ರಸ್ತೆ (ರಾಮಮೂರ್ತಿನಗರ ಸರ್ವಿಸ್ ರಸ್ತೆಯಿಂದ ಕಸ್ತೂರಿನಗರ ಸರ್ವಿಸ್ ರಸ್ತೆವರೆಗೆ).

‘ಡಿಜಿಟಲ್ ವಹಿವಾಟು: ಎಚ್ಚರಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಜಿಟಲ್ ವಹಿವಾಟು ನಡೆಸುವಾಗ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು’ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಹೇಳಿದರು.

ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಚ್ 15ರವರೆಗೆ ಡಿಜಿಟಲ್ ಪಾವತಿ ಜಾಗೃತಿ ಸಪ್ತಾಹವನ್ನು ಆಯೋಜಿಸಿದೆ. ಈ ಅಭಿಯಾನದ ಭಾಗವಾಗಿ ಬ್ಯಾಂಕ್ ಹಮ್ಮಿಕೊಂಡಿರುವ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಸಿನ್ಹಾ ಅವರು ಮಾತನಾಡಿದರು.

ಸುರಕ್ಷಿತವಾದ ಡಿಜಿಟಲ್ ಬ್ಯಾಂಕಿಂಗ್ ವಿಧಾನಗಳ ಬಗ್ಗೆ ಗ್ರಾಹಕರಿಗೆ ಶಿಕ್ಷಣ ನೀಡುವ ಅಗತ್ಯವಿದೆ. ಒಟಿಪಿಯನ್ನು ಹಂಚಿಕೊಳ್ಳಬಾರದು. ಅಪರಿಚಿತ ಲಿಂಕ್‌ಗಳನ್ನು ಒತ್ತಬಾರದು. ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವ ಮೂಲಕ ಸೈಬರ್ ವಂಚನೆಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು ಎಂದು ಹೇಳಿದರು.

ಡಿಜಿಟಲ್ ವಂಚನೆ ತಡೆಗಟ್ಟುವಿಕೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಜಾಗೃತಿ ವಾಹನಕ್ಕೆ ಸಿನ್ಹಾ ಅವರು ಇದೇ ವೇಳೆ ಚಾಲನೆ ನೀಡಿದರು. ಈ ವಾಹನವು ಬೆಂಗಳೂರಿನಾದ್ಯಂತ ಸಂಚರಿಸಲಿದೆ.

ಎಸ್‌ಬಿಐ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಅವರು ಜಾಗೃತಿ ವಾಹನಕ್ಕೆ ಚಾಲನೆ ನೀಡಿದರು. ಈ ವೇಳೆ ಬ್ಯಾಂಕ್‌ನ ಅಧಿಕಾರಿಗಳು ಉಪಸ್ಥಿತರಿದ್ದರು

‘ಒತ್ತಡಕ್ಕೆ ಮಣಿದರೆ ಪ್ರತಿರೋಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ101 ಜಾತಿಗಳ ಪೈಕಿ, ಒಂದು ಜಾತಿಯ ಒತ್ತಡಕ್ಕೆ ಮಣಿದು ಶೇ 15 ಮೀಸಲಾತಿಯಲ್ಲಿಯೇ ಒಳಮೀಸಲಾತಿ ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾದರೆ ತೀವ್ರ ಪ್ರತಿರೋಧ ಎದುರಿಸಬೇಕಾದೀತು’ ಎಂದು ದಲಿತ ಬಲಗೈ ಜಾತಿಗಳ ಒಕ್ಕೂಟ ಎಚ್ಚರಿಕೆ ನೀಡಿದೆ.

ಒಕ್ಕೂಟದ ರಾಜ್ಯ ಸಮಿತಿಯ ಸಭೆಯು ಕರ್ನಾಟಕ ರಾಜ್ಯ ಛಲವಾದಿ ಮಹಾ ಸಭಾ ಕಚೇರಿಯಲ್ಲಿ ಗುರುವಾರ ನಡೆಯಿತು.

‘ಶೇ 56 ಮೀಸಲಾತಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡುವವರೆಗೆ ಒಳಮೀಸಲಾತಿರಹಿತ ಶೇಕಡ 15ರಷ್ಟು ಮೀಸಲಾತಿ ಜಾರಿಗೊಳಿಸಬೇಕು’ ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

Set the tone for a prosperous year with a Kia that embodies thoughtful design and ease of ownership, and that's built to enhance every mile of your journey. With unique ownership advantages and a hassle-free exchange, taking that first step feels just as rewarding as the road ahead.

Model	Sonet	Syros	Carens	Carens Clavis	Carens Clavis EV
Range starts at	₹ 7 30 138	₹ 8 67 053	₹ 10 47 454	₹ 11 17 835	₹ 17 99 000
Total benefits	₹ 1 06 000	₹ 2 08 000	₹ 1 08 000	₹ 2 21 000	₹ 2 44 000

*Benefits available on other Kia cars as per applicability.

For more information, visit our dealership or contact:
1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Ex-showroom price mentioned is for the base variant (Pan India). Benefits shown are the combination of exchange, loyalty, corporate, scrappage and special benefits, which are applicable on limited stock of 2025, may vary from model to model and region to region. The product shown is for representation purposes only. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/ scheme/ service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details.

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9513918131; Hosur Road, Tel: 9986644472; Sarjapur, Tel: 8095553636; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224

ನಿಮ್ಮ ನಗರ, ನಿಮ್ಮ ನಿಲುವು !
ಟ್ಯಾಗ್‌ಲೈನ್ ಜೊತೆಗೆ ಹೊಸ ಬಿಡಿಎ ಲೋಗೋ (ಲಾಂಛನ) ಸೃಷ್ಟಿಸಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) 1976ರಿಂದ ಬಡಾವಣೆಗಳು, ವಸತಿ, ಮೂಲಸೌಲಭ್ಯ, ಉದ್ಯಾನಗಳು ಮತ್ತು ಸಾರ್ವಜನಿಕ ಪ್ರದೇಶಗಳನ್ನು ಒಳಗೊಂಡಂತೆ ಬೆಂಗಳೂರಿನ ಯೋಜಿತ ಪ್ರಗತಿಗೆ ಒಂದು ನಿರ್ದಿಷ್ಟ ರೂಪ ಕೊಡುವಲ್ಲಿ ನೆರವಾಗಿದೆ. ಬಿಡಿಎ ಸುಸ್ಥಿರ, ನಾಗರಿಕ ಕೇಂದ್ರಿತ ಅಭಿವೃದ್ಧಿಗೆ ಸದಾ ಗಮನ ನೀಡುವುದು. ಬೆಂಗಳೂರು ನಗರೀಕರಣ ವಿಕಾಸದ ನೂತನ ಪರ್ವಕ್ಕೆ ಅಡಿಯಿಟ್ಟಿರುವುದರಿಂದ ಈ ಮುನ್ನಡೆಯ ದೃಷ್ಟಿಯನ್ನು ಪ್ರತಿಬಿಂಬಿಸುವ **ನೂತನ ಲೋಗೋ (ಲಾಂಛನ) ಜೊತೆಗೆ ಟ್ಯಾಗ್‌ಲೈನ್** ಸೃಷ್ಟಿಸಿಕೊಡಲು ಬಿಡಿಎ ನಾಗರಿಕರನ್ನು (ವಿನ್ಯಾಸಕಾರರು, ವಿದ್ಯಾರ್ಥಿಗಳು ಮತ್ತು ಸೃಜನಶೀಲ ಉತ್ಸಾಹಕರುಗಳು) ಆಹ್ವಾನಿಸಿದೆ.

ಭಾಗವಹಿಸುವಿಕೆ ವಿವರಗಳು:
- ಪ್ರವೇಶಗಳನ್ನು ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಸಲ್ಲಿಸಬಹುದು.
- ಒಬ್ಬರು ಒಂದು ಪ್ರವೇಶ ಮಾತ್ರ ಕಳುಹಿಸುವುದು.
- ಸಲ್ಲಿಸಿದ ಎಲ್ಲಾ ವಿನ್ಯಾಸಗಳು ಬಿಡಿಎ ಸ್ವತ್ತಾಗುವವು.
- ಸಲ್ಲಿಸುವ ಕಡೆಯ ದಿನಾಂಕ: 24.03.2026

ಬಹುಮಾನ
ರೂ. 1,00,000/-
ಆಯ್ಕೆಯಾದ ಲೋಗೋ ಮತ್ತು ಟ್ಯಾಗ್‌ಲೈನ್‌ಗೆ

ನಗರಕ್ಕಾಗಿ... ನಾಗರಿಕರಿಂದ

ಶ್ರೀ ಎನ್.ಎ. ಹ್ಯಾರಿಸ್
ಮಾನ್ಯ ಶಾಸಕರು,
ಶಾಂತಿನಗರ ವಿಧಾನಸಭಾ ಕ್ಷೇತ್ರ ಮತ್ತು ಅಧ್ಯಕ್ಷರು, ಬಿಡಿಎ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ,ಬೆಂಗಳೂರು - 560 020
BDAcontest@bdahousing.in
ಸಹಾಯವಾಣಿ / ವಾಟ್ಸ್‌ಆ್ಯಪ್ : 948 316 6622 (24x7)
@BDAOfficialGok
ಅರ್ಜಿ ನಮೂನೆಗಾಗಿ QR ಕೋಡ್ ಸ್ಕ್ಯಾನ್ ಮಾಡಿ
ನಿಯಮಗಳು ಮತ್ತು ಷರತ್ತುಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

‘ಕೆಪಿಎಸ್‌ಸಿ: ಕನಸುಗಳನ್ನು ಕೊಲ್ಲುವ ಕೇಂದ್ರ’

ಕಂಟ್ರೋಲರ್ ಬದಲಾವಣೆ ಮಾಡಿಲ್ಲ ಏಕೆ?: ವಿಧಾನಸಭೆಯಲ್ಲಿ ಸುನಿಲ್ ಕುಮಾರ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಲಕ್ಷಾಂತರ ಬಡ ಮತ್ತು ಗ್ರಾಮಾಂತರ ಪ್ರದೇಶದ ಸರ್ಕಾರಿ ನೌಕರಿ ಆಕಾಂಕ್ಷಿಗಳ ಕನಸುಗಳನ್ನು ಕೊಲ್ಲುವ ಕೇಂದ್ರವಾಗಿದೆ’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಕಿಡಿಕಾರಿದರು.

ಕೆಪಿಎಸ್‌ಸಿ ನೇಮಕಾತಿಯ ಬಗ್ಗೆ ಕೇಳಿ ಬಂದಿರುವ ಆರೋಪಗಳ ಕುರಿತು ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದ ಅವರು, ‘ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ, ಅಂಕಗಳ ಕ್ರೋಡೀಕರಣ ಮತ್ತು ಅರ್ಹತಾ ಪಟ್ಟಿಯ ಬಗ್ಗೆ ಹಲವು ಅನುಮಾನಗಳು ಎದ್ದಿವೆ. ದೊಡ್ಡ ಮಟ್ಟದಲ್ಲಿ ಅಕ್ರಮ ನಡೆದಿದೆ ಮತ್ತು ಕೋಟ್ಯಂತರ ರೂಪಾಯಿ ಕೈಬದಲಾಗಿದೆ ಎಂದು ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳು ಆರೋಪ ಮಾಡಿದ್ದಾರೆ. ಇದರ ವಾಸ್ತವಾಂಶ ನಾಡಿನ ಜನರಿಗೆ ಗೊತ್ತಾಗಬೇಕು’ ಎಂದು ಹೇಳಿದರು.

‘ಒಂದೇ ಕೊಠಡಿಯಲ್ಲಿ 24 ಜನ ಪರೀಕ್ಷೆ ಬರೆದಿದ್ದು ಒಂದೇ ಸೀರಿಯಲ್ ಸಂಖ್ಯೆಯಲ್ಲಿದ್ದ 11 ಜನ ಉತ್ತೀರ್ಣರಾಗಿ, ವ್ಯಕ್ತಿತ್ವ ಪರೀಕ್ಷೆಯ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಒಂದೇ ಕುಟುಂಬಕ್ಕೆ ಸೇರಿದ ನಾಲ್ಕು ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಅಧಿಕಾರಿಗಳು, ರಾಜಕಾರಣಿಗಳ ಕುಟುಂಬಕ್ಕೆ ಸೇರಿದವರೂ ಇದ್ದಾರೆ. ಪರೀಕ್ಷಾ ಕೊಠಡಿಯನ್ನೇ ಮ್ಯಾನೇಜ್ ಮಾಡಿದ್ದಾರೆ ಎಂಬ ಆರೋಪ ಇದೆ’ ಎಂದರು.

‘ನಾಲ್ಕು ವರ್ಷದ ಅವಧಿಯಲ್ಲಿ 5ರಿಂದ 6 ಕಾರ್ಯದರ್ಶಿಗಳು ಬದಲಾಗಿದ್ದಾರೆ. ಆದರೆ, ನಿಯಂತ್ರಕ ಮಾತ್ರ ಬದಲಾಗುತ್ತಿಲ್ಲ. ಈ ವ್ಯಕ್ತಿಯ ಬಗ್ಗೆ ಸಾಕಷ್ಟು ಅನುಮಾನ ವ್ಯಕ್ತವಾಗುತ್ತಿದೆ. ಇವರು ಅಧ್ಯಕ್ಷ, ಕಾರ್ಯದರ್ಶಿಗಿಂತಲೂ ಮೇಲಾ?’ ಎಂದು ಅವರು ಪ್ರಶ್ನಿಸಿದರು.

‘ಸರ್ಕಾರಿ ನೌಕರಿ ಎಂದರೆ ಕೇವಲ ಪ್ರಭಾವಿಗಳು, ಉಳ್ಳವರಿಗೆ ಮಾತ್ರವೇ? ಹಳ್ಳಿಯವರಿಗೆ, ಬಡವರಿಗೆ ಸಿಗಬಾರದು ಎಂಬ ಹುನ್ನಾರ ಇದೆಯೇ? ಕೆಪಿಎಸ್‌ಸಿ ನಿಗೂಢವಾದ ಸಂಸ್ಥೆ, ಅಲ್ಲಿನ ಪರೀಕ್ಷೆಗಳು ರಹಸ್ಯಮಯ, ಫಲಿತಾಂಶ ಶಂಕಿತರೂಪದಲ್ಲಿದೆ. ಕೆಪಿಎಸ್‌ಸಿಯಿಂದ ಕೆಲಸ ಗಿಟ್ಟಿಸಿದವರನ್ನು ಸಂಶಯದಿಂದ ನೋಡುವ ಪರಿಸ್ಥಿತಿಯಿದೆ’ ಎಂದು ಸುನಿಲ್ ಕುಮಾರ್ ಹೇಳಿದರು.

‘ಕೆಪಿಎಸ್‌ಸಿಯನ್ನೇ ರದ್ದು ಮಾಡಬೇಕು’

‘ಕೆಪಿಎಸ್‌ಸಿಗೆ ಕಾನೂನಿನ ಭಯವಿಲ್ಲ. ಯಾವುದೇ ಹೊಣೆಗಾರಿಕೆಯೂ ಇಲ್ಲ. ಆ ಸಂಸ್ಥೆಯನ್ನೇ ರದ್ದು ಮಾಡಬೇಕು’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ‘ಕೆಪಿಎಸ್‌ಸಿಗೆ ಸಂಬಂಧಿಸಿದಂತೆ ಹಿಂದೆ ನಾನು ಖಾಸಗಿ ಮಸೂದೆ ಮಂಡಿಸಿದ್ದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದು ಕಾಯ್ದೆ ಆಯ್ತು. ಅದರ ಪ್ರಕಾರ, ಅವ್ಯವಹಾರ ಎಸಗಿದವರಿಗೆ ₹10 ಕೋಟಿವರೆಗೆ ದಂಡ ಹಾಕಬಹುದು, ಆಸ್ತಿ ಮುಟ್ಟುಗೋಲು ಹಾಕಬಹುದು. ಇಂತಹ ಕಠಿಣ ಕಾಯ್ದೆ ಇದ್ದರೂ ಅವರಿಗೆ ಭಯ ಇಲ್ಲ’ ಎಂದರು.

‘ಕೋಚಿಂಗ್‌ನಲ್ಲಿ ತಾರತಮ್ಯ ಬೇಡ’

ಕಲಬುರಗಿಯಲ್ಲಿ ಐಎಎಸ್–ಕೆಎಎಸ್ ಪರೀಕ್ಷೆಗೆ ತರಬೇತಿ ನೀಡುವ ಕೇಂದ್ರದಲ್ಲಿ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ. ಎಸ್‌ಸಿ–ಎಸ್‌ಟಿ ಸಮುದಾಯದವರಿಗೆ ಶಿಷ್ಯ ವೇತನ ನೀಡುತ್ತಿಲ್ಲ. ಆದರೆ, ಅಲ್ಪಸಂಖ್ಯಾತರಿಗೆ ವಸತಿ ಸಹಿತ ಶಿಷ್ಯ ವೇತನ ನೀಡಲಾಗುತ್ತಿದೆ. ಈ ತಾರತಮ್ಯ ನಿಲ್ಲಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

ಈ ಗೊಂದಲ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಲಬುರಗಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

‘ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?’

‘ಕಠಿಣ ಕಾಯ್ದೆ ಇದ್ದರೂ ಕೆಪಿಎಸ್‌ಸಿ ಎಂಬ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬ ಪ್ರಶ್ನೆ ಉದ್ಭವವಾಗಿದೆ’ ಎಂದು ಬಿಜೆಪಿಯ ಎಸ್.ಸುರೇಶ್‌ಕುಮಾರ್ ಪ್ರಶ್ನಿಸಿದರು.

ಕೆಪಿಎಸ್‌ಸಿಯಲ್ಲಿರುವ ಅಧ್ಯಕ್ಷ, ಸದಸ್ಯರಿಗೆ ಪರೀಕ್ಷೆ ಬರೆಯುವ ಸಾಮಾನ್ಯ ಅಭ್ಯರ್ಥಿಗಳಿಗಿಂತ ತಮ್ಮ ಮಕ್ಕಳು, ಮೊಮ್ಮಕ್ಕಳು, ಸಂಬಂಧಿಕರ ಬಗ್ಗೆಯೇ ಚಿಂತೆ. ಹಿಂದೆ ತಾಳಿ ಭಾಗ್ಯ ಇತ್ತು. ಈಗ ಅಕ್ರಮದ ಸ್ವರೂಪ ಬದಲಾಗಿದೆ. ಉತ್ತಮವಾಗಿ ಕೆಲಸ ಮಾಡುವ ಕಾರ್ಯದರ್ಶಿಗಳನ್ನು ಅಲ್ಲಿ ಇರಲು ಬಿಡುವುದಿಲ್ಲ’ ಎಂದು ಹೇಳಿದರು.

ಸರ್ಕಾರವು ಶಾಶ್ವತ ಪರೀಕ್ಷಾ ಮೌಲ್ಯ ಮಾಪಕರ ಮಂಡಳಿ ರಚಿಸಿ, ಅದರ ಮೂಲಕ ಮೌಲ್ಯ ಮಾಪಕರನ್ನು ಬಳಸಿಕೊಳ್ಳಬೇಕು ಎಂದು ಹೇಳಿದ ಅವರು, ಕೆಪಿಎಸ್‌ಸಿಯ ಶುದ್ಧೀಕರಣ ಆಗಬೇಕು. ಇದಕ್ಕಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದರು.

ಸುದ್ದಿ 2 ನಿಮಿಷ

ಬಿಪಿಎಲ್: ಆದಾಯ ಮಿತಿ ಪರಿಷ್ಕರಿಸಲು ಒಕ್ಕೊರಲ ಆಗ್ರಹ

ಬೆಂಗಳೂರು: ‘ಆದ್ಯತಾ ಪಡಿತರ ಚೀಟಿದಾರರನ್ನು (ಬಿಪಿಎಲ್) ಗುರುತಿಸಲು ವಾರ್ಷಿಕ ₹1.20 ಲಕ್ಷ ಆದಾಯವನ್ನು ಮಾನದಂಡವಾಗಿ ಈಗಲೂ ಅನುಸರಿಸುತ್ತಿರುವುದು ಸರಿಯಲ್ಲ. ಇದನ್ನು ₹3 ಲಕ್ಷಕ್ಕೆ ಹೆಚ್ಚಿಸುವಂತೆ ಆಡಳಿತ ಸುಧಾರಣಾ ಆಯೋಗ ಹೇಳಿದೆ. ಈ ಬಗ್ಗೆ ಆಹಾರ ಇಲಾಖೆ ಪರಿಶೀಲಿಸಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬಿಜೆಪಿಯ ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಪರವಾಗಿ ಉತ್ತರಿಸಿದ ದಿನೇಶ್ ಗುಂಡೂರಾವ್, ‘2017ರ ಮಾನದಂಡಗಳನ್ನು ಪರಿಷ್ಕರಿಸಬೇಕಾದ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

ಅನರ್ಹ ಆದ್ಯತಾ ಪಡಿತರ ಚೀಟಿದಾರರನ್ನು (ಬಿಪಿಎಲ್, ಅಂತ್ಯೋದಯ) ಗುರುತಿಸುವ ನೆಪದಲ್ಲಿ ಅರ್ಹ ಕುಟುಂಬಗಳ ಬಿಪಿಎಲ್ ಕಾರ್ಡುಗಳನ್ನೂ ಎಪಿಎಲ್‌ಗೆ ಪರಿವರ್ತಿಸಿದ ಕಾರಣ ಲಕ್ಷಾಂತರ ಕುಟುಂಬಗಳು ಬೀದಿ ಪಾಲಾಗಿವೆ ಎಂದು ಸದಸ್ಯರು ಪಕ್ಷಭೇದ ಮರೆತು ಅಸಮಾಧಾನ, ಆಕ್ರೋಶ ವ್ಯಕ್ತಪಡಿಸಿದರು.

‘ಆದ್ಯತಾ ಪಡಿತರ ಚೀಟಿಗಳನ್ನು ಪಡೆಯಲು ಇರುವ 2017ರ ಮಾನದಂಡಗಳನ್ನು ಎಂಟು ವರ್ಷ ಕಳೆದರೂ ಸರ್ಕಾರ ಪರಿಷ್ಕರಿಸಿಲ್ಲ. ತಿಂಗಳಿಗೆ ₹10 ಸಾವಿರ ಸಂಬಳ ತೆಗೆದುಕೊಳ್ಳುವವನ ಆದಾಯವೂ ವರ್ಷಕ್ಕೆ ₹1.20 ಲಕ್ಷ ಆಗುತ್ತದೆ. ಆದರೆ, ಈ ಮಾನದಂಡ ಇಟ್ಟುಕೊಂಡು ಲಕ್ಷಾಂತರ ಕುಟುಂಬಗಳು, ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದಿದ್ದರೂ ಐಟಿ ರಿಟರ್ನ್ ಪಡೆದಿರುವ ಕುಟುಂಬಗಳ ಬಿಪಿಎಲ್ ಕಾರ್ಡ್ ಅನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ’ ಎಂದು ಅಶ್ವತ್ಥನಾರಾಯಣ ಆರೋಪಿಸಿದರು.

‘ಭದ್ರತಾ ಸಿಬ್ಬಂದಿ, ಬಾಡಿಗೆ ವಾಹನಗಳ ಚಾಲಕರು ಕಡುಬಡವರ ಬಿಪಿಎಲ್ ಕಾರ್ಡುಗಳನ್ನೂ ಎಪಿಎಲ್ ಆಗಿ ಪರಿವರ್ತಿಸಲಾಗಿದೆ. ಅರ್ಹತೆ ಇದ್ದರೂ ಬಿಪಿಎಲ್ ಪಡಿತರ ಚೀಟಿ ಕಳೆದುಕೊಂಡು ಲಕ್ಷಾಂತರ ಕುಟುಂಬಗಳು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ’ ಎಂದು ಬಿಜೆಪಿಯ ಕೆ. ಗೋಪಾಲಯ್ಯ, ಜೆಡಿಎಸ್‌ನ ಸುರೇಶ್ ಬಾಬು, ಕಾಂಗ್ರೆಸ್‌ನ ನಯನಾ ಮೋಟಮ್ಮ ಮತ್ತಿತರರು ಕಿಡಿಕಾರಿದರು.

ಲಿಂಗತ್ವ ಅಲ್ಪಸಂಖ್ಯಾತರ ಮಂಡಳಿ: ಭರವಸೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ ಹಾಗೂ ನಿರ್ದೇಶನಾಲಯ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಗಮನ ಸೆಳೆಯುವ ಸೂಚನೆಗೆ ಪ್ರತಿಕ್ರಿಯಿಸಿದ ಅವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಡೆಸಿದ ಸಮೀಕ್ಷೆ ವರದಿ ಪ್ರಕಾರ ಕರ್ನಾಟಕದಲ್ಲಿ 10,365 ಲಿಂಗತ್ವ ಅಲ್ಪ ಸಂಖ್ಯಾತರು ಇದ್ದಾರೆ. ಕೇಂದ್ರ ಸರ್ಕಾರ ನೀಡಿದ ಮಾದರಿ ಪ್ರಕಾರ ಸಮೀಕ್ಷೆ ಕಾರ್ಯ ಮುಗಿದಿದೆ. ಅವರ ಸಮಸ್ಯೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವುದು. ವಸತಿ, ಶಿಕ್ಷಣ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಮನ್ವಯ ಸಭೆ ಕರೆದು ಚರ್ಚಿಸಿ, ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಲಿಂಗತ್ವ ಅಲ್ಪಸಂಖ್ಯಾತರ ಸಂರಕ್ಷಣಾ ಪಡೆಯ ಎಲ್ಲ ಘಟಕಾಧಿಕಾರಿಗಳ ಜತೆಗೆ ಸಮಾಲೋಚನೆ ಮಾಡಿ ಸಮುದಾಯದವರ ವಿರುದ್ಧ ದಾಖಲಾಗುವ ಅಪರಾಧ ಪ್ರಕರಣಗಳ ಕುರಿತು ಪರಾಮರ್ಶೆ ಮಾಡಬೇಕು. ದೋಷಾರೋಪ ಪಟ್ಟಿಯನ್ನು ತ್ವರಿತವಾಗಿ ಸಲ್ಲಿಸಿ, ಪ್ರಕರಣಗಳನ್ನು ಇತ್ಯರ್ಥ ಪಡಿಸಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.

ಅಕ್ರಮ ಮದ್ಯ ಗಡಿ ಜಿಲ್ಲೆಗಳಲ್ಲೇ ಹೆಚ್ಚು



934 ಬಂಧಿತ ಆರೋಪಿಗಳು

777 ವಶಕ್ಕೆ ಪಡೆಯಲಾದ ವಾಹನಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷಗಳ ಅವಧಿಯಲ್ಲಿ ಗೋವಾ, ತೆಲಂಗಾಣ ಮತ್ತು ಆಂಧ್ರ ಪ್ರದೇಶಗಳಿಂದ ರಾಜ್ಯಕ್ಕೆ ಮದ್ಯ ಅಕ್ರಮ ಸಾಗಾಟದ 1,489 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ವಿಧಾನ ಪರಿಷತ್ತಿನ ಸಭಾನಾಯಕ ಎನ್.ಎಸ್.ಬೋಸರಾಜು ತಿಳಿಸಿದರು. ಗುರುವಾರದ ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಎಂ.ನಾಗರಾಜ್ ಅವರು ಕೇಳಿದ್ದ ಪ್ರಶ್ನೆಗೆ ಅವರು ಉತ್ತರಿಸಿದರು.

1,498 ಕೆ.ಜಿ
ಕಳ್ಳಭಟ್ಟಿ ತಯಾರಿಕೆಗೆಂದು ಕಳ್ಳಸಾಗಣೆ ಮಾಡಲಾಗಿದ್ದ ಕ್ಲೋರಲ್ ಹೈಡ್ರೇಟ್‌ನ (ಸಿಎಚ್ ಪೌಡರ್) ತೂಕ

42,927 ಲೀಟರ್
ಆಂಧ್ರ ಪ್ರದೇಶ ಮತ್ತು ತೆಲಂಗಾಣಕ್ಕೆ ಹೊಂದಿಕೊಂಡಿರುವ ರಾಜ್ಯದ ಗಡಿ ಜಿಲ್ಲೆಗಳಲ್ಲಿ ವಶಕ್ಕೆ ಪಡೆಯಲಾದ ಸೇಂದಿ

1.05 ಲಕ್ಷ ಲೀಟರ್
ಗೋವಾದಿಂದ ಬೆಳಗಾವಿ ಮತ್ತು ಉತ್ತರ ಕನ್ನಡಕ್ಕೆ ಅಕ್ರಮ ಸಾಗಾಟ ಮಾಡುವಾಗ ವಶಕ್ಕೆ ಪಡೆದ ಮದ್ಯ

ಕೇಂದ್ರ ಸರ್ಕಾರದಿಂದ ಅನ್ಯಾಯ ಎನ್ನುವುದು ಅರ್ಧ ಸತ್ಯ: ಬಿವೈವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡಿ ಕೈ ತೊಳೆದುಕೊಳ್ಳುವ ಕುತಂತ್ರಕ್ಕೆ 2026-27ನೇ ಸಾಲಿನ ರಾಜ್ಯ ಬಜೆಟ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೀಮಿತಗೊಳಿಸಿದ್ದಾರೆ’ ಎಂದು ಬಿಜೆಪಿಯ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ವಿಧಾನಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ‘ಆದಾಯ ಸಂಗ್ರಹಿಸಲು ರಾಜ್ಯ ಸರ್ಕಾರ ವಿಫಲವಾಗಿದೆ. ಅತಿ ಹೆಚ್ಚು ಸಾಲ ಮಾಡುವ ಮೂಲಕ ನಾಡಿನ ಜನರನ್ನು ಸಾಲದ ಸುಳಿಗೆ ಸಿಲುಕಿಸಿರುವುದು ಸುಳ್ಳಲ್ಲ’ ಎಂದರು.

‘ರಾಜ್ಯಕ್ಕೆ ಸಾಲದ ಭಾರ ಒಂದು ಕಡೆಯಾದರೆ, ಅಸಲು, ಬಡ್ಡಿ ಕಟ್ಟುವುದೇ ದೊಡ್ಡ ಹೊರೆ ಆಗಿದೆ. ವಿತ್ತೀಯ ಕೊರತೆ ಹೆಚ್ಚಾಗಿ ಜನರ ಮೇಲೆ ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ಸರ್ಕಾರ ಪ್ರಯೋಗ ಮಾಡುತ್ತಿರುವುದು ದುರಂತ’ ಎಂದು ಟೀಕಿಸಿದರು.

‘ಒಕ್ಕೂಟ ವ್ಯವಸ್ಥೆಯನ್ನು ಮರು ಹಂಚಿಕೆಯ ತತ್ವದ ಅಡಿಯಲ್ಲಿ ವಿನ್ಯಾಸಗೊಳಿಸಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಅತಿ ಹೆಚ್ಚು ಆದಾಯ ನೀಡುವ ರಾಜ್ಯಗಳಾಗಿದ್ದರೂ, ಇಲ್ಲಿಂದ ಬರುವ ಆದಾಯವನ್ನು ಅತಿ ಹೆಚ್ಚು ಹಿಂದುಳಿದ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ’ ಎಂದರು.

‘ಕೇಂದ್ರದಿಂದ ರಾಜ್ಯಗಳಿಗೆ ಹಂಚಿಕೆಯಾಗಿರುವ ತೆರಿಗೆ ಪಾಲಿನ ಬಗ್ಗೆ ಅಂಕಿಅಂಶಗಳ ಸಹಿತ ವಿವರಿಸಿದ ವಿಜಯೇಂದ್ರ, ‘ತೆರಿಗೆ ಹಂಚಿಕೆಗೂ ಅದರದ್ದೇ ಆದ ಮಾನದಂಡಗಳಿವೆ. ಆ ಮಾನದಂಡಗಳ ಆಧಾರದಲ್ಲಿ ತೀರ್ಮಾನ ಆಗುತ್ತಿದೆ. ಪದೇ ಪದೇ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ಕೆಲವರು ಬೊಬ್ಬೆ ಹೊಡೆಯುತ್ತಿದ್ದು, ಇದು ಅರ್ಧ ಸತ್ಯ’ ಎಂದರು.

ವಿಧಾನಸಭೆಯಲ್ಲಿ ಬಿ.ವೈ. ವಿಜಯೇಂದ್ರ ಮಾತನಾಡಿದರು. ಬಿಜೆಪಿಯ ಹರೀಶ್ ಪೂಂಜಾ ಉಪಸ್ಥಿತರಿದ್ದರು

> **ಜನರ ಮೇಲೆ ತೆರಿಗೆಯ ಭಾರ ಹೊರಿಸದೆ, ಜನಪರ, ಅಭಿವೃದ್ಧಿಪರ ಬಜೆಟ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ್ದಾರೆ**
> **ಎನ್. ಎಚ್. ಕೋನರಡ್ಡಿ,** ಕಾಂಗ್ರೆಸ್

> **ಬಜೆಟ್‌ನಲ್ಲಿರುವ ಅಂಕಿಅಂಶಗಳನ್ನು ನೋಡಿದರೆ ಸಿದ್ದರಾಮಯ್ಯ ಅವರ ಲೆಕ್ಕಾಚಾರವು ತಲೆಗೆ ಎಳೆದರೆ ಕಾಲಿಗಿಲ್ಲ, ಕಾಲಿಗೆ ಎಳೆದರೆ ತಲೆಗಿಲ್ಲ ಎಂಬಂತಿದೆ**
> **ಆರಗ ಜ್ಞಾನೇಂದ್ರ,** ಬಿಜೆಪಿ

ಮಾತು–ಗಮ್ಮತ್ತು

‘ಬೋಸರಾಜು ಡಿಸಿಎಂ ಆಗಲಿ’

ವಿಧಾನಪರಿಷತ್ತಿನಲ್ಲಿ ಗುರುವಾರ ಪ್ರಶ್ನೋತ್ತರದ ವೇಳೆ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಯ ಸರದಿ ಬಂತು. ಭಾರತಿ ಅವರು ಚುಕ್ಕೆ ಗುರುತಿನ ಪ್ರಶ್ನೆಯನ್ನು ಮುಖ್ಯಮಂತ್ರಿ ಅವರಿಗೆ ಕೇಳಿದ್ದರು. ಸಿದ್ದರಾಮಯ್ಯ ಸದನದಲ್ಲಿ ಇರಲಿಲ್ಲ. ಆಗ, ‘ನಾನೇ ಉತ್ತರಿಸುವೆ’ ಎಂದು ಸಭಾನಾಯಕ ಎನ್.ಎಸ್. ಬೋಸರಾಜು ಹೇಳಿದರು.

ಇದರಿಂದ ತೃಪ್ತರಾಗದ ಭಾರತಿ ಶೆಟ್ಟಿ, ‘ಮುಖ್ಯಮಂತ್ರಿ ಅಲ್ಲದಿದ್ದರೆ, ಉಪಮುಖ್ಯಮಂತ್ರಿ ಅವರನ್ನಾದರೂ ಪ್ರಶ್ನಿಸಬಹುದಿತ್ತು’ ಎಂದು ಪದೇ–ಪದೇ ಹೇಳಿದರು. ಆಗ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಧ್ಯಪ್ರವೇಶಿಸಿ, ‘ಡಿಸಿಎಂ ಉತ್ತರವನ್ನೂ ಅವರೇ (ಸಭಾ ನಾಯಕ) ನೀಡುತ್ತಾರಂತೆ. ಸಭಾನಾಯಕರು ಮುಂದೆ ಉಪ ಮುಖ್ಯಮಂತ್ರಿ ಆಗಲಿ’ ಎಂದರು.

ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ‘ಎಲ್ಲ ಪ್ರಶ್ನೆಗಳಿಗೂ ಸಭಾನಾಯಕರೇ ಉತ್ತರಿಸಲು ಅನುಕೂಲವಾಗುವಂತೆ ‘ಪ್ರಮುಖ ಖಾತೆಗಳ ನಾಯಕ’ ಎಂಬ ಹೊಸ ಹುದ್ದೆಯನ್ನೇ ಸೃಷ್ಟಿಸಲಿ ಎಂದು ಕಿಚಾಯಿಸಿದರು. ಅಷ್ಟರಲ್ಲಿ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರು ಸದನಕ್ಕೆ ಬಂದರು.

ವಿಧಾನಪರಿಷತ್ತು — ಪ್ರಶ್ನೋತ್ತರ

ಸೈಬರ್ ವಂಚನೆ: 42,000 ಖಾತೆ ಸ್ಥಗಿತ

ಸೈಬರ್ ವಂಚನೆ ಮೂಲಕ 2021ರಲ್ಲಿ ₹446 ಕೋಟಿ, 2024ರಲ್ಲಿ ₹2,397 ಕೋಟಿ, 2025ರಲ್ಲಿ ₹2,200 ಕೋಟಿ ಲಪಟಾಯಿಸಲಾಗಿದೆ. ಇದರಲ್ಲಿ ಕ್ರಮವಾಗಿ ₹97ಕೋಟಿ, ₹397 ಕೋಟಿ ಮತ್ತು ₹231 ಕೋಟಿಯಷ್ಟೇ ವಸೂಲಾಗಿದೆ. 2025ರಲ್ಲಿ 25 ಡಿಜಿಟಲ್ ಅರೆಸ್ಟ್ ಪ್ರಕರಣಗಳಲ್ಲಿ ₹215 ಕೋಟಿ ವಂಚಿಸಲಾಗಿದೆ. ಸೈಬರ್ ವಂಚನೆಗೆ ಬಳಕೆಯಾಗುತ್ತಿದ್ದ 42,000 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ್ದೇವೆ.

ಜಿ.ಪರಮೇಶ್ವರ, ಗೃಹ ಸಚಿವ
ಪ್ರಶ್ನೆ: ಗೋವಿಂದರಾಜು, ಬಿಜೆಪಿ

‘ಕೃಷ್ಣಾ ಮೇಲ್ದಂಡೆ: 93 ದರ್ಗಾ, ಮಸೀದಿ ಸ್ವಾಧೀನ’

ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾದ ಪ್ರದೇಶದಲ್ಲಿ ಮುಸ್ಲಿಂ ಸಮುದಾಯದ ದರ್ಗಾ, ಮದರಸಾ ಮತ್ತು ಮಸೀದಿಯಂತಹ 93 ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆಯಲಾಗಿದೆ. ಅಲ್ಲದೆ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮುಸ್ಲಿಂ ಸಮುದಾಯದವರಿಗೆ 42 ನಿವೇಶಗಳನ್ನು ಹಂಚಿಕೆ ಮಾಡಲಾಗಿದೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ
ಪ್ರಶ್ನೆ: ಪಿ.ಎಚ್.ಪೂಜಾರ್, ಬಿಜೆಪಿ

‘ಡಿವೈಎಸ್‌ಪಿ: ಪದೋನ್ನತಿ ಪಟ್ಟಿ ಶೀಘ್ರ’

ಡಿವೈಎಸ್‌ಪಿ ಹುದ್ದೆಗಳಿಗೆ ಪದೋನ್ನತಿ ಮೂಲಕ ನಿಯೋಜನೆಗೆ ಜ್ಯೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ಬಿ.ಕೆ. ಚಿನ್ನಮಾರಯ್ಯ ಅವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ. ದಾಖಲೆಗಳ ಸಂಗ್ರಹ ಮತ್ತು ಪರಿಶೀಲನೆ ನಡೆದಿದೆ. ಜತೆಗೆ ಕೆಎಟಿಯ ಆದೇಶದಂತೆ ಜೇಷ್ಠತಾ ಪಟ್ಟಿ ಪರಿಷ್ಕರಣೆ ನಡೆಯುತ್ತಿದೆ. ಶೀಘ್ರವೇ ಪಟ್ಟಿ ಪ್ರಕಟವಾಗಲಿದೆ.

ಜಿ.ಪರಮೇಶ್ವರ, ಗೃಹ ಸಚಿವ
ಪ್ರಶ್ನೆ: ಪುಟ್ಟಣ್ಣ, ಕಾಂಗ್ರೆಸ್

ನಂದಿನಿ ಹಾಲು: ಶೇ0.2ರಷ್ಟು ಕಲಬೆರಕೆ

ಕೆಎಂಎಫ್‌ನ 19 ಡೈರಿಗಳಲ್ಲಿ ಹಾಲಿನ ಒಟ್ಟು 15.1 ಲಕ್ಷ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಅವುಗಳಲ್ಲಿ 3,049 ಮಾದರಿಗಳಲ್ಲಿ ಮಾತ್ರ ಕಲಬೆರಕೆ ದೃಢಪಟ್ಟಿದೆ. ಇದು ಒಟ್ಟು ಉತ್ಪನ್ನದ ಶೇ 0.2ರಷ್ಟು ಮಾತ್ರ ಕಲಬೆರಕೆ ಪತ್ತೆಯಾಗಿದೆ.

ಎನ್.ಎಸ್.ಬೋಸರಾಜು, ಸಭಾನಾಯಕ
ಪ್ರಶ್ನೆ: ಮಧು ಜಿ.ಮಾದೇಗೌಡ, ಕಾಂಗ್ರೆಸ್

ಸ್ಥಳ ಗುರುತಿಸಲು ಸೂಚನೆ

ಬೆಳಗಾವಿಯಲ್ಲಿ ಸ್ಥಾಪಿಸಲಾಗುವ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕಂಪನಿಗಳ ಅನುಕೂಲಕ್ಕಾಗಿ ‘ಪ್ಲಗ್ ಆ್ಯಂಡ್ ಪ್ಲೇ’ ಕೇಂದ್ರವನ್ನು ಸ್ಥಾಪಿಸಲು ಸ್ಥಳವನ್ನು ಗುರುತಿಸಿ ಎಂದು ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ. ನವೋದ್ಯಮ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಮರಾಠ ಮಂಡಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ತಂತ್ರಜ್ಞಾನ ಆಧಾರಿತ ಉದ್ಯಮಗಳ ಇನ್‌ಕ್ಯುಬೇಟರ್‌ಗಳನ್ನು ಸ್ಥಾಪಿಸಲಾಗಿದೆ.

ಪ್ರಿಯಾಂಕ್ ಖರ್ಗೆ, ಮಾಹಿತಿ ತಂತ್ರಜ್ಞಾನ ಸಚಿವ.
ಕಾಂಗ್ರೆಸ್‌ನ ಎಂ.ನಾಗರಾಜ ಅವರು ಗಮನಸೆಳೆದ ಸೂಚನೆಗೆ ಉತ್ತರ

ಮರ್ಯಾದೆಗೇಡು ಹತ್ಯೆ ತಡೆಗೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಮೀರಿ ಪ್ರೀತಿಸುವ, ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶದ ‘ಇವ ನಮ್ಮವ, ಇವ ನಮ್ಮವ’ ಮಸೂದೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ‘ಮರ್ಯಾದೆಗೇಡು ಹತ್ಯೆ’ ಹೆಸರಿನಲ್ಲಿ ನಡೆದ ಕೊಲೆ, ದೌರ್ಜನ್ಯಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಇಂತಹ ಕೃತ್ಯಗಳ ತಡೆಗೆ ಕಠಿಣ ಕಾನೂನು ತರಬೇಕೆಂದು ನಾಗರಿಕರು, ವಿವಿಧ ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ಹೇರಿದ್ದವು. ಕಾಯ್ದೆ ರೂಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು.

ಸಂಪುಟ ಸಭೆ ಅನುಮೋದನೆ ನೀಡಿದ ಮಸೂದೆಯನ್ನು ಇದೇ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ

ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕಿನಲ್ಲಿರುವ ಸೂರ್ಯನಗರ ಬಡಾವಣೆಯಲ್ಲಿ ₹800 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಕ್ರೀಡಾಂಗಣವು ಆಧುನಿಕ ಸೌಲಭ್ಯಗಳನ್ನು ಹೊಂದಿರಲಿದೆ. ಇದು 80 ಸಾವಿರ ಆಸನಗಳ ಸಾಮರ್ಥ್ಯವನ್ನು ಹೊಂದಿರಲಿದೆ ಎಂದು ಮೂಲಗಳು ತಿಳಿಸಿವೆ.

ಇತರ ಪ್ರಮುಖ ತೀರ್ಮಾನಗಳು

- 76 ಮೌಲಾನಾ ಆಜಾದ್ ಆಂಗ್ಲ ಮಾದರಿ ಶಾಲೆಗಳು ಮತ್ತು 41 ಉರ್ದು ಮಾಧ್ಯಮ ಶಾಲೆಗಳನ್ನು ₹683.33 ಕೋಟಿ ವೆಚ್ಚದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಣ
- ಮಾಧ್ಯಮಕ್ಕೆ ಸಂಬಂಧಿಸಿದ ನೂತನ ಜಾಹೀರಾತು ನೀತಿಗೆ ಅನುಮೋದನೆ
- 15 ನೇ ಹಣಕಾಸು ಆಯೋಗದ ಅನುದಾನದಡಿ 27 ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು ₹17.55 ಕೋಟಿ ವೆಚ್ಚದಲ್ಲಿ ನಿರ್ಮಾಣ
- ಖೇಲೋ ಇಂಡಿಯಾ ಯೋಜನೆಯಡಿ ಮಂಡ್ಯ ಜಿಲ್ಲೆಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ₹14 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಷೇರು ಬಂಡವಾಳವನ್ನು ₹95 ಕೋಟಿಯಿಂದ ₹125 ಕೋಟಿಗೆ ಹೆಚ್ಚಿಸಲು ಅನುಮೋದನೆ
- ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5000 ಟನ್ ಕಬ್ಬು ನುರಿಸಲು ಹೊಸ ಯಂತ್ರೋಪಕರಣ ಅಳವಡಿಕೆಗೆ ₹60 ಕೋಟಿ
- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ₹10.83 ಕೋಟಿ
- ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾವೇರಿ ಶಾಖಾ ನಾಲೆ, ಕೆರಗೋಡು ಶಾಖಾ ನಾಲೆ, ಶಿಂಷಾ ನಾಲೆ ಮತ್ತು ಹೊಸ ಮದ್ದೂರು ಶಾಖಾ ನಾಲೆಗಳಡಿ ವಿತರಣಾ ನಾಲೆ ಮತ್ತು ಪಿಕಪ್ ನಾಲೆಗಳ ಆಧುನೀಕರಣಕ್ಕೆ ₹100 ಕೋಟಿ

‘ನೌಕರರ ಬದಲು ಎ.ಐ ಸಾಧ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಆಡಳಿತ ವ್ಯವಸ್ಥೆಯಲ್ಲಿ ನೌಕರರ ಬದಲಿಗೆ ಕೃತಕ ಬುದ್ಧಿಮತ್ತೆಯ (ಎಐ) ಅಳವಡಿಕೆ ಈಗಲೇ ಸಾಧ್ಯವಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಪರಿಷತ್ತಿನ ಕಲಾಪದ ಶೂನ್ಯವೇಳೆಯಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ‘ಮನುಷ್ಯನ ವಿವೇಚನಾ ಮತ್ತು ನಿರ್ಧಾರಕ ಶಕ್ತಿಯನ್ನು ಮೀರಿಸುವ ಮಟ್ಟಕ್ಕೆ ಎಐ ಇನ್ನೂ ಬೆಳೆದಿಲ್ಲ’ ಎಂದರು.

‘ಸಣ್ಣ–ಪುಟ್ಟ ಕೆಲಸಗಳಿಗೆ ಎಐ ಬಳಸಿಕೊಳ್ಳಬಹುದು. ಆದರೆ, ಅದು ಸರಿಯಾದ ಮಾಹಿತಿ ಎಂದು ದೃಢೀಕರಿಸುವವರು ಯಾರು? ಎಐನಲ್ಲಿ ಇರುವ ಅತ್ಯಂತ ದೊಡ್ಡ ಸಮಸ್ಯೆ ಇದು’ ಎಂದರು.

ಅಸ್ಸಾಂ ಗೆಲುವು ಹೇಗೆ: ಎಐ ಕೇಳಿದ ಡಿಕೆಶಿ

‘ಅಸ್ಸಾಂ ಚುನಾವಣೆ ಹೇಗೆ ಗೆಲ್ಲುವುದು ಎಂದು ಕೇಳಿದರೆ, ಎಐ ಒಂದು ಸಲಹೆ ನೀಡಿತು. ಅದನ್ನು ಅನುಸರಿಸಿ, ಚುನಾವಣೆ ಗೆಲ್ಲುವುದು ಸಾಧ್ಯವೇ’ ಎಂದು ಶಿವಕುಮಾರ್ ಹೇಳಿದರು.

ಆಗ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ‘ಎಐ ಏನೆಂದು ಉತ್ತರ ನೀಡಿತು’ ಎಂದು ಪ್ರಶ್ನಿಸಿದರು. ಶಿವಕುಮಾರ್ ಅವರು, ‘ಸದನದೊಳಗೆ ಮೊಬೈಲ್ ಬಳಸುವಂತಿಲ್ಲ. ಹೊರಗೆ ಬನ್ನಿ’ ಎಂದರು.

‘ಇಲ್ಲಿ ಹೇಳದೇ ಇರುವಂಥದ್ದು ಏನಿದೆ’ ಎಂದು ರವಿಕುಮಾರ್ ಕಾಲೆಳೆದರು. ಆಗ ಶಿವಕುಮಾರ್, ‘ಕರ್ನಾಟಕ ಮಾದರಿ ಅನುಸರಿಸಿ, ಅಸ್ಸಾಂ ಗೆಲ್ಲುತ್ತೀರಿ ಎಂದು ಎಐ ಹೇಳುತ್ತಿದೆ’ ಎಂದು ತಿರುಗೇಟು ನೀಡಿದರು.

ಖಾಲಿ ಕುರ್ಚಿಗಳ ಮಧ್ಯೆ ಕಲಾಪ

ಪ್ರಜಾವಾಣಿ ಚಿತ್ರ

ವಿಧಾನ ಪರಿಷತ್ತಿನ ಗುರುವಾರದ ಕಲಾಪದ ವೇಳೆ, ಸದಸ್ಯರ ಬಹುತೇಕ ಕುರ್ಚಿಗಳು ಖಾಲಿ ಇದ್ದವು. ಕಡ್ಡಾಯವಾಗಿ ಇರಬೇಕಾದ ಸಚಿವರೂ ಇಲ್ಲದೇ ಇದ್ದುದ್ದಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕಲಾಪವನ್ನು ಕೆಲಕಾಲ ಮುಂದೂಡಬೇಕಾಗುತ್ತದೆ ಎಂದು ಅವರು ಹೇಳಿದ ನಂತರವಷ್ಟೇ ಕೆಲ ಸಚಿವರನ್ನು ಸದನಕ್ಕೆ ಕರೆಯಿಸಲಾಯಿತು

ಪುನರ್ವಸತಿ ಬದಲಿಗೆ ಹೆಚ್ಚುವರಿ ಹಣ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ನೆಲೆ ಕಳೆದುಕೊಳ್ಳುವವರಿಗೆ ಪುನರ್ವಸತಿ ಬದಲಿಗೆ, ಹೆಚ್ಚುವರಿ ಹಣ ನೀಡುವ ಬಗ್ಗೆ ಚಿಂತನೆ ನಡೆಯುತ್ತಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಪರಿಷತ್ತಿನಲ್ಲಿ ಬಿಜೆಪಿಯ ಹಣಮಂತ ನಿರಾಣಿ ಮತ್ತು ಪಿ.ಎಚ್. ಪೂಜಾರ್ ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನಿರಾಶ್ರಿತರಾದವರ ವಿಚಾರ ಪ್ರಸ್ತಾಪಿಸಿದರು.

ಅದಕ್ಕೆ ಉತ್ತರಿಸಿದ ಶಿವಕುಮಾರ್, ‘ಮೊದಲ ಮತ್ತು ಎರಡನೇ ಹಂತದಲ್ಲಿ 176 ಗ್ರಾಮಗಳು ಮುಳುಗಡೆಯಾಗಿದ್ದು, ಅಲ್ಲಿನ 70,176 ಕುಟುಂಬಗಳಿಗೆ 136 ಪುನರ್ವಸತಿ ಕೇಂದ್ರಗಳಲ್ಲಿ ಆಶ್ರಯ ನೀಡಲಾಗಿದೆ. ಅಲ್ಲಿ ಮೂಲಸೌಕರ್ಯಗಳ ಕೊರತೆ ಇದ್ದರೆ, ಅದನ್ನು ಪರಿಹರಿಸಲಾಗುವುದು’ ಎಂದರು.

‘ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತಕ್ಕೆ ಭೂಸ್ವಾಧೀನ ಪಡಿಸಿಕೊಳ್ಳಲು ಅವಕಾಶ ನೀಡಬೇಡಿ ಎಂದು ಆಂಧ್ರ ಪ್ರದೇಶ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಈ ಸಂಬಂಧ ನಮ್ಮಿಂದ ವಿವರಣೆ ಕೇಳಲಾಗಿದೆ. ಮುಖ್ಯಮಂತ್ರಿ, ಕಾನೂನು ಸಚಿವರು ಮತ್ತು ನಾನು ಈ ಬಗ್ಗೆ ಚರ್ಚಿಸಲು ಮುಂದಿನ ಮಂಗಳವಾರ ದೆಹಲಿಗೆ ತೆರಳಲಿದ್ದೇವೆ’ ಎಂದರು.

ನಿರಾಣಿ ಮತ್ತು ಪೂಜಾರ್ ಅವರು, ‘ಕೇಂದ್ರದಿಂದ ನಿಮಗೆ ಬಂದಿರುವ ಪತ್ರವನ್ನು ನಾವು ನೋಡಿಯೇ ಇಲ್ಲ. ಅದನ್ನು ನಮಗೂ ತೋರಿಸಿ, ಉತ್ತರ ಸಿದ್ಧಪಡಿಸುವಲ್ಲಿ ಸಲಹೆ ನೀಡುತ್ತೇವೆ’ ಎಂದು ಕಾಲೆಳೆದರು.

ಆಗ ಶಿವಕುಮಾರ್, ‘ಆ ಪತ್ರದ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತೇನೆ. ನಮ್ಮ ನೀರಾವರಿ ಯೋಜನೆಗಳಿಗೆ ಅಗತ್ಯ ಅನುಮತಿಗಳನ್ನು ನೀಡಿ ಎಂದು ಕೇಂದ್ರವನ್ನು ಒತ್ತಾಯಿಸಬೇಕಿದೆ. ನಿಮ್ಮ ಸಂಸದರು ನಮ್ಮೊಂದಿಗೆ ಬರುತ್ತಿಲ್ಲ. ಅವರು ನಮ್ಮೊಂದಿಗೆ ಬರುವಂತೆ ಮಾಡಿ’ ಎಂದು ತಿರುಗೇಟು ನೀಡಿದರು.

‘ತುಂಗಭದ್ರಾ: ಮೇ ಅಂತ್ಯಕ್ಕೆ ಎಲ್ಲ ಗೇಟ್ ಬದಲು’

‘ತುಂಗಭದ್ರಾ ಜಲಾಶಯದ ಎಲ್ಲ ಕ್ರೆಸ್ಟ್‌ಗೇಟ್‌ಗಳನ್ನು ಬದಲಿಸುವ ಕಾಮಗಾರಿ ನಡೆಯುತ್ತಿದೆ. ಮೇ ಅಂತ್ಯದ ವೇಳೆಗೆ ಎಲ್ಲ ಗೇಟ್‌ಗಳ ಅಳವಡಿಕೆ ಪೂರ್ಣಗೊಳ್ಳಲಿದೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಕ್ರೆಸ್ಟ್‌ಗೇಟ್‌ಗಳ ಬದಲಾವಣೆ ಕಾಮಗಾರಿಗೆ ಸರ್ಕಾರವು ಆಸಕ್ತಿ ವಹಿಸುತ್ತಿಲ್ಲ ಎಂದು ಜೆಡಿಎಸ್‌ನ ಟಿ.ಎ.ಶರವಣ ಅವರು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದರು.

ಅದಕ್ಕೆ ಉತ್ತರಿಸಿದ ಶಿವಕುಮಾರ್ ಅವರು, ‘25 ಗೇಟ್‌ಗಳ ನಿರ್ಮಾಣ ಪೂರ್ಣಗೊಂಡಿದ್ದು, ಅಳವಡಿಕೆಯಷ್ಟೇ ಬಾಕಿ ಇದೆ. 18 ಮತ್ತು 19ನೇ ಗೇಟ್‌ಗಳನ್ನು ಅಳವಡಿಸಿದ್ದು, ಪರೀಕ್ಷಾರ್ಥ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇನ್ನೂ ಎರಡು ಗೇಟ್‌ಗಳ ನಿರ್ಮಾಣ ನಡೆಯುತ್ತಿದೆ’ ಎಂದರು.

‘50 ವರ್ಷಕ್ಕಿಂತ ಹಳೆಯದಾದ ಜಲಾಶಯಗಳ ಎಲ್ಲ ಗೇಟ್‌ಗಳನ್ನು ಬದಲಿಸುತ್ತೇವೆ’ ಎಂದು ಹೇಳಿದರು.

ವಿಧಾನಪರಿಷತ್‌ನಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು

ಅಪಘಾತ: ಎಂಬಿಬಿಎಸ್ ವಿದ್ಯಾರ್ಥಿನಿ ಸಾವು

ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಬಳಿ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಲಾರಿ ಡಿಕ್ಕಿ

ಪ್ರಜಾವಾಣಿ ವಾರ್ತೆ

ಕೃತಿಕಾ

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಎದುರು ದ್ವಿಚಕ್ರ ವಾಹನ ಹಾಗೂ ಟಿಪ್ಪರ್ ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಎಂಬಿಬಿಎಸ್ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಆರ್.ಆರ್.ನಗರ ನಿವಾಸಿ ಕೃತಿಕಾ (21) ಮೃತ ವಿದ್ಯಾರ್ಥಿನಿ. ಕೃತಿಕಾ ಸ್ನೇಹಿತೆ ಹಂಸ (22) ಅವರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬುಧವಾರ ಸಂಜೆ 4.30ರ ಸುಮಾರಿಗೆ ಅಪಘಾತ ಸಂಭವಿಸಿದೆ.

ಆರ್.ಆರ್.ನಗರದ ಬಿಇಎಂಎಲ್ ಲೇಔಟ್ ನಿವಾಸಿ ಕೃತಿಕಾ ಅವರು ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನಲ್ಲಿ 2ನೇ ವರ್ಷದ ಎಂಬಿಬಿಎಸ್ ಓದುತ್ತಿದ್ದರು. ಸ್ನೇಹಿತೆ ಹಂಸ ಅವರ ಜತೆಗೆ ದ್ವಿಚಕ್ರ ವಾಹನದಲ್ಲಿ ಕಾಲೇಜಿನಿಂದ ಹೊರಗಡೆ ಬರುತ್ತಿದ್ದರು. ಅದೇ ವೇಳೆ ನಗರದ ಕಡೆಯಿಂದ ಮೈಸೂರು ಕಡೆಗೆ ಅತೀ ವೇಗವಾಗಿ ಹೋಗುತ್ತಿದ್ದ ಟಿಪ್ಪರ್ ಲಾರಿ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಹಿಂಬದಿ ಕುಳಿತಿದ್ದ ಕೃತಿಕಾ ಕೆಳಗೆ ಬಿದ್ದಿದ್ದರು. ಅವರ ಮೇಲೆಯೇ ಟಿಪ್ಪರ್ ಲಾರಿಯ ಚಕ್ರಗಳು ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ. ಟಿಪ್ಪರ್ ಚಾಲಕ ಸಂಜೀವ್ ಚೌಧರಿ ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಕೆಂಗೇರಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಮಾಲೀಕರ ಮನೆಯಲ್ಲಿ ಕಳ್ಳತನ ಮನೆ ಕೆಲಸದಾಕೆಯ ಬಂಧನ

ಧನಲಕ್ಷ್ಮಿ

ಕೆಲಸ ಮಾಡುತ್ತಿದ್ದ ಫ್ಲ್ಯಾಟ್‌ನಲ್ಲಿ ಚಿನ್ನದ ಆಭರಣ ಹಾಗೂ ನಗದು ಕಳ್ಳತನ ಮಾಡಿದ್ದ ಕೆಲಸದಾಕೆಯನ್ನು ಪುಲಕೇಶಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪುಲಕೇಶಿನಗರದ ಕಾಕ್ಸ್‌ಟೌನ್‌ನ ನಿವಾಸಿ ಧನಲಕ್ಷ್ಮಿ, ಬಂಧಿತೆ. ಆರೋಪಿಯಿಂದ 54 ಗ್ರಾಂ ಚಿನ್ನದ ಆಭರಣ ಹಾಗೂ ₹8 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

ಸ್ಟೀಫನ್ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವೃದ್ಧ ದಂಪತಿ ನೆಲಸಿದ್ದರು. ಅವರ ಫ್ಲ್ಯಾಟ್‌ನಲ್ಲಿ ಧನಲಕ್ಷ್ಮಿ, 25 ವರ್ಷದಿಂದ ಕೆಲಸ ಮಾಡುತ್ತಿದ್ದರು. ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಳ್ಳಲು ಧನಲಕ್ಷ್ಮಿ ಅವರನ್ನು ದಂಪತಿ ಕರೆದೊಯ್ಯುತ್ತಿದ್ದರು. ಬ್ಯಾಂಕ್‌ನಿಂದ ತಂದ ಹಣ ಇಡುತ್ತಿದ್ದ ಸ್ಥಳವನ್ನು ಕೆಲಸದಾಕೆ ನೋಡಿಕೊಂಡಿದ್ದರು. ದಂಪತಿಯ ಗಮನಕ್ಕೆ ಬಾರದಂತೆ ಒಂದು ವರ್ಷದಿಂದ ₹14 ಲಕ್ಷ ನಗದು, 54 ಗ್ರಾಂ ಚಿನ್ನದ ಆಭರಣ ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಅಕ್ರಮವಾಗಿ ನೆಲಸಿದ್ದ ಬಾಂಗ್ಲಾದೇಶದ ಇಬ್ಬರ ವಶ

ನಗರದಲ್ಲಿ ಅಕ್ರಮವಾಗಿ ನೆಲಸಿರುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು, ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಬಾಂಗ್ಲಾ ದೇಶದ ಇಬ್ಬರು ಪ್ರಜೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಜುಯಿಮೋನೆ (17) ಹಾಗೂ ಮೊಹಮ್ಮದ್ ಉಮರ್ (23) ಎಂಬುವರನ್ನು ವಶಕ್ಕೆ ಪಡೆಯಲಾಗಿದೆ. ಬಳಿಕ ವಿದೇಶಿ ಪ್ರಾದೇಶಿಕ ನೋಂದಣಿ ಕಚೇರಿಗೆ ಹಾಜರು ಪಡಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಎರಡೂವರೆ ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಮಧ್ಯವರ್ತಿಯ ಸಹಾಯ ಪಡೆದು, ಬೆಂಗಳೂರಿಗೆ ಬಂದಿದ್ದ ಇಬ್ಬರು ಈ ಹಿಂದೆ ಬನ್ನೇರುಘಟ್ಟ, ಹೆಬ್ಬಗೋಡಿ ಭಾಗದಲ್ಲಿ ವಾಸವಾಗಿದ್ದರು. ಆ ಸ್ಥಳಗಳಲ್ಲಿ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದರಿಂದ ಇಬ್ಬರು ಕೊತ್ತನೂರು ಠಾಣೆ ವ್ಯಾಪ್ತಿಯ ಕೆ.ನಾರಾಯಣಪುರಕ್ಕೆ ಬಂದು ನೆಲಸಿದ್ದರು. ಜುಯಿಮೋನೆ ಅವರು 'ವಿಂಡ್ಸಮ್ ಟ್ರೀ ಕಮ್ಯುನಿಟಿ' ಎಂಬ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಮೊಹಮ್ಮದ್ ಉಮರ್ ಚಿಂದಿ ಆಯುವ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಒಳ ಉಡುಪಿನಲ್ಲಿ ಜೈಲಿನೊಳಗೆ ಡ್ರಗ್ಸ್ ಕೊಂಡೊಯ್ಯಲು ಯತ್ನ

ಪ್ರಕಾಶ್ ಗಾವಡೆ

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ಮಾದಕ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದ ಆರೋಪದಡಿ ಜೈಲಿನ ವೀಕ್ಷಕ (ವಾರ್ಡರ್) ಪ್ರಕಾಶ್ ಗಾವಡೆ ಅವರನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪ್ರಕಾಶ್ ಗಾವಡೆ ಅವರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ.

ಮಾರ್ಚ್ 9ರಂದು ರಾತ್ರಿ 8.15ರ ಸುಮಾರಿಗೆ ಪ್ರಕಾಶ್ ಗಾವಡೆ ಅವರು ಕರ್ತವ್ಯಕ್ಕೆ ಹಾಜರಾಗಿದ್ದರು. ಕಾರಾಗೃಹ ಪ್ರವೇಶಿಸುವಾಗ ಕರ್ತವ್ಯದಲ್ಲಿದ್ದ ಸಿಬ್ಬಂದಿ ಅವರನ್ನು ಪರಿಶೀಲನೆಗೆ ಒಳಪಡಿಸಿದ್ದರು. ಪ್ರಕಾಶ್ ಅವರ ಒಳ ಉಡುಪಿನಲ್ಲಿ ಹಣ ಮತ್ತು ಕಪ್ಪು ಟೇಪ್‌ನಿಂದ ಸುತ್ತಲ್ಪಟ್ಟಿದ್ದ ಒಂದು ಪೊಟ್ಟಣ ಪತ್ತೆ ಯಾಗಿತ್ತು. ಅನುಮಾನಗೊಂಡಿದ್ದ ಸಿಬ್ಬಂದಿ ಪರಿಶೀಲಿಸಿದಾಗ ಅದರೊಳಗೆ ಎಂಡಿಎಂಎ ಮಾತ್ರೆಗಳು ಇರುವುದು ಕಂಡು ಬಂದಿತ್ತು ಎಂದು ಮೂಲಗಳು ಹೇಳಿವೆ.

ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ (ಕೆಎಸ್‌ಐಎಸ್‌ಎಫ್) ಸಿಬ್ಬಂದಿ ಕಣ್ತಪ್ಪಿಸಿ ಮಾದಕ ಪದಾರ್ಥಗಳನ್ನು ಜೈಲಿನೊಳಗೆ ಸಾಗಿಸಲು ಪ್ರಕಾಶ್ ಗಾವಡೆ ಅವರು ಯತ್ನಿಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಕೊಲೆ ಪ್ರಕರಣದ ಆರೋಪಿಯೊಬ್ಬ ಮಾದಕ ಪದಾರ್ಥಗಳನ್ನು ತಲುಪಿಸಿದರೆ ₹10 ಸಾವಿರ ಕೊಡುವುದಾಗಿ ಆಮಿಷವೊಡ್ಡಿದ್ದ. ಮುಂಗಡವಾಗಿ ಸ್ವಲ್ಪ ಹಣವನ್ನೂ ನೀಡಿದ್ದ ಎಂಬುದಾಗಿ ವಿಚಾರಣೆಯ ವೇಳೆ ಪ್ರಕಾಶ್ ಗಾವಡೆ ತಪ್ಪೊಪ್ಪಿಕೊಂಡಿದ್ದಾರೆ.

ಜೈಲು ಸಿಬ್ಬಂದಿ ದೂರಿನ ಅನ್ವಯ ಎನ್‌ಡಿಪಿಎಸ್ ಕಾಯ್ದೆಯಡಿ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಡಿಸಿಪಿ ಎಂ.ನಾರಾಯಣ ತಿಳಿಸಿದರು.

ಕಾರಾಗೃಹದ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ಸಿಗರೇಟ್ ಹಾಗೂ ಡ್ರಗ್ಸ್ ಪೂರೈಸುತ್ತಿದ್ದ ಪ್ರಕರಣದಲ್ಲಿ ಜೈಲಿನ ವೀಕ್ಷಕ ರಾಹುಲ್ ಪಾಟೀಲ ಅವರನ್ನು ಕಳೆದ ಡಿಸೆಂಬರ್‌ನಲ್ಲಿ ಬಂಧಿಸಲಾಗಿತ್ತು. ಇದು ಎರಡನೇ ಪ್ರಕರಣವಾಗಿದೆ ಎಂದು ಮೂಲಗಳು ಹೇಳಿವೆ.

ನಗರದ ಕೆ.ಜಿ.ರಸ್ತೆಯಲ್ಲಿ ನಿರ್ಮಾಣವಾಗಿರುವ ನೂತನ 'ಉದಯಂ' ಮಳಿಗೆಯನ್ನು ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ ಅವರು ಗುರುವಾರ ಉದ್ಘಾಟನೆ ಮಾಡಿದರು. ಉದಯಂ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್.ಅರುಣ್ ಈಶ್ವರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಧೂಮಪಾನ ರಹಿತ ದಿನ 658 ಪ್ರಕರಣ ದಾಖಲು

ಬೆಂಗಳೂರು: ಧೂಮಪಾನರಹಿತ ದಿನದ ಅಂಗವಾಗಿ ಪೂರ್ವವಿಭಾಗದ ಪೊಲೀಸರು, ತಮ್ಮ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಕೋಟ್ಪಾ ಕಾಯ್ದೆ ಉಲ್ಲಂಘಿಸಿದವರ ವಿರುದ್ಧ ಒಟ್ಟು 658 ಪ್ರಕರಣ ದಾಖಲಿಸಿದ್ದಾರೆ.

ಪೂರ್ವ ವಿಭಾಗದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗೆ ಒಟ್ಟು 68 ತಂಡಗಳನ್ನು ರಚಿಸಲಾಗಿತ್ತು. ಶಾಲಾ–ಕಾಲೇಜುಗಳ ಸುತ್ತಮುತ್ತಲ ಪೆಟ್ಟಿಗೆ ಅಂಗಡಿಗಳು, ಬೇಕರಿ, ಕಾಂಡಿಮೆಂಟ್ಸ್, ಹೋಟೆಲ್ ಸೇರಿದಂತೆ 801 ಸ್ಥಳಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಯಿತು. ಈ ವೇಳೆ 'ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆ' (ಕೋಟ್ಪಾ) ಉಲ್ಲಂಘನೆಗೆ ಸಂಬಂಧಿಸಿದಂತೆ 324 ಪ್ರಕರಣ ದಾಖಲು ಮಾಡಲಾಗಿದೆ. ಅಲ್ಲದೇ, 334 ಲಘು ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಕಾರ್ಯಾಚರಣೆ ವೇಳೆ ಜನರಿಗೆ ಧೂಮಪಾನ, ತಂಬಾಕು ಉತ್ಪನ್ನಗಳ ಬಳಕೆಯಿಂದ ಉಂಟಾಗುವ ಹಾನಿ, ಸಂಬಂಧಿತ ಕಾನೂನುಗಳ ಕುರಿತು ಜಾಗೃತಿ ಮೂಡಿಸಲಾಯಿತು. ಸಾರ್ವಜನಿಕರು ಕಾನೂನು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಮನವಿ ಮಾಡಲಾಗಿದೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಕಾರ್ಯಾಚರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ನಟ ದರ್ಶನ್ ಪತ್ನಿಗೆ ನಿಂದನೆ • ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ

ನಿಂದನೆ ಉದ್ದೇಶಕ್ಕೆ ನಕಲಿ ಖಾತೆ ತೆರೆದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ನಿಂದನೆ ಹಾಗೂ ಅಶ್ಲೀಲವಾಗಿ ಸಂದೇಶ ಕಳುಹಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, 45ನೇ ಎಸಿಎಂಎಂ ನ್ಯಾಯಾಲಯಕ್ಕೆ ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

'ವಿಜಯಲಕ್ಷ್ಮಿ ಅವರು ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದರು. ಆ ದೂರು ಆಧರಿಸಿ, ತನಿಖೆ ನಡೆಸಲಾಗಿತ್ತು. ಪ್ರಕರಣ ಸಂಬಂಧ ಆರು ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ಆರು ಆರೋಪಿಗಳ ವಿರುದ್ಧ 473 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಬಂಧಿತ ಆರೋಪಿಗಳ ಪೈಕಿ ಕೆಲವರು ಸ್ಯಾಂಡಲ್‌ವುಡ್‌ನ ನಟರೊಬ್ಬರ ಅಭಿಮಾನಿಗಳು ಎಂದು ಹೇಳಿಕೊಂಡು ನಕಲಿ ಖಾತೆ ತೆರೆದಿದ್ದರು. ನಕಲಿ ಖಾತೆಗಳ ಮೂಲಕವೇ ವಿಜಯಲಕ್ಷ್ಮಿ ಅವರಿಗೆ ನಿಂದಿಸಿದ್ದರು. ಅಶ್ಲೀಲವಾಗಿ ಸಂದೇಶ ಕಳುಹಿಸಿದ್ದರು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಪೋಸ್ಟ್ ಮಾಡುತ್ತಿರುವುದು ಅಶ್ಲೀಲ ಎಂಬುದು ಗೊತ್ತಿದ್ದೇ ಕಾಮೆಂಟ್ ಮಾಡಿರುವುದಾಗಿ ಆರೋಪಿಗಳು ವಿಚಾರಣೆಯ ವೇಳೆ ತಪ್ಪೊಪ್ಪಿಕೊಂಡಿದ್ದಾರೆ. ಆರೋಪಿಗಳ ಮೊಬೈಲ್ ವಶಪಡಿಸಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ದತ್ತಾಂಶ ಮರು ಸಂಗ್ರಹದ ವರದಿಯ ನಿರೀಕ್ಷೆಯಲ್ಲಿದ್ದೇವೆ. ಇನ್ನೂ 12 ಐ.ಡಿಗಳ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಸಂಬಂಧಿಸಿದ ಕಂಪನಿಗೆ ಪತ್ರ ಬರೆಯಲಾಗಿದೆ. ಎರಡೂ ವರದಿಗಳು ಬಂದ ಮೇಲೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ವಿಜಯಲಕ್ಷ್ಮಿ ದೂರಿನಲ್ಲಿ ಏನಿತ್ತು?

ವಿಜಯಲಕ್ಷ್ಮಿ

'ದಾವಣಗೆರೆಯಲ್ಲಿ ಆಯೋಜಿಸಿದ್ದ 'ಡೆವಿಲ್' ಸಿನಿಮಾದ ಪ್ರಚಾರದಲ್ಲಿ ಯಾರು ಏನೇ ಹೇಳಿದರೂ ತಲೆಕೆಡಿಸಿ ಕೊಳ್ಳಬೇಡಿ ಎಂದು ಅಭಿಮಾನಿಗಳಿಗೆ ಕರೆ ನೀಡಿದ್ದೆ. ಈ ಬಗ್ಗೆ ಹಲವರು ಸಾಮಾಜಿಕ ಜಾಲತಾಣದ ಮೂಲಕ ನನ್ನ ಹಾಗೂ ನಮ್ಮ ಕುಟುಂಬದ ಕುರಿತು ಅಶ್ಲೀಲ ಸಂದೇಶಗಳನ್ನು ಹಾಕಿದ್ದರು. ಅದರಿಂದ ನಮ್ಮ ಗೌರವಕ್ಕೆ ಧಕ್ಕೆಯಾಗುತ್ತಿದ್ದು, ಮನಸ್ಸಿಗೆ ತೀವ್ರ ನೋವುಂಟು ಮಾಡಿದೆ' ಎಂದು ವಿಜಯಲಕ್ಷ್ಮಿ ಅವರು ಡಿಸೆಂಬರ್ 23ರಂದು ದೂರು ನೀಡಿದ್ದರು.

ದೂರು ನೀಡಿ ಒಂದು ವಾರ ಕಳೆದರೂ ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ. ಆಗ ವಿಜಯಲಕ್ಷ್ಮಿ ಅವರು ಪೊಲೀಸರ ವಿರುದ್ಧ ಅಸಮಾಧಾನ ಹೊರಹಾಕಿ, ಡಿಸೆಂಬರ್ 31ರಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಅದಾದ ಮೇಲೆ ಚಿಕ್ಕಬಾಣಾವರದ ನಿವಾಸಿ, ಆಟೊ ಚಾಲಕ ಬಿ.ಚಂದ್ರಶೇಖರ್ (45) ಹಾಗೂ ದಾವಣಗೆರೆಯ ನಿವಾಸಿ, ಸಾಫ್ಟ್‌ವೇರ್ ಎಂಜಿನಿಯರ್ ನಿತಿನ್ ಸೇರಿದಂತೆ ಹಲವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ದರೋಡೆ: ಅಪರಾಧಿಗೆ 7 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಳಾಸ ಕೇಳುವ ನೆಪದಲ್ಲಿ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ ಅಪರಾಧಿಗೆ ಏಳು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ದೇವನಹಳ್ಳಿಯ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಸೈಯದ್ ವಸೀಂ ಶಿಕ್ಷೆಗೆ ಒಳಗಾದ ಅಪರಾಧಿ.

ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2019ರ ಮಾರ್ಚ್ 14ರಂದು ಬೆಳಿಗ್ಗೆ ಲಕ್ಷ್ಮಿ ಅವರು ವಾಯುವಿಹಾರಕ್ಕೆ ತೆರಳುತ್ತಿದ್ದರು. ವಿಳಾಸ ಕೇಳುವ ನೆಪದಲ್ಲಿ ದ್ವಿಚಕ್ರ ವಾಹನವನ್ನು ನಿಲ್ಲಿಸಿದ್ದ ಅಪರಾಧಿ, ಮಾಂಗಲ್ಯದ ಸರವನ್ನು ಕಸಿದುಕೊಳ್ಳಲು ಯತ್ನಿಸಿದ್ದ. ಲಕ್ಷ್ಮಿ ಪ್ರತಿರೋಧ ವ್ಯಕ್ತಪಡಿಸಿದ್ದರು. ಆಗ, ಲಕ್ಷ್ಮಿ ಅವರಿಗೆ ಚಾಕುವಿನಿಂದ ಚುಚ್ಚಿ ಹಲ್ಲೆ ನಡೆಸಿ 40 ಗ್ರಾಂ ಚಿನ್ನದ ಸರವನ್ನು ಕಸಿದುಕೊಂಡು ಪರಾರಿಯಾಗಿದ್ದ. ಈ ಸಂಬಂಧ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಕೃತ್ಯ ನಡೆದ ಆಧಾರ ಮೇಲೆ ಬಾಗಲೂರು ಠಾಣೆಗೆ ಪ್ರಕರಣವನ್ನು ವರ್ಗಾವಣೆ ಮಾಡಲಾಗಿತ್ತು. ಅಂದಿನ ಇನ್‌ಸ್ಪೆಕ್ಟರ್ ನಂದಕುಮಾರ್ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಾದ– ಪ್ರತಿವಾದ ಆಲಿಸಿದ ನ್ಯಾಯಾಧೀಶ ಲಕ್ಷ್ಮಣ ರಾಮ್ ಕುರುಣೆ ಅವರು ಅಪರಾಧಿಗೆ ಏಳು ವರ್ಷ ಜೈಲು ಶಿಕ್ಷೆ ಹಾಗೂ ₹10 ಸಾವಿರ ದಂಡ ವಿಧಿಸಿದ್ದಾರೆ. ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಆರ್.ಟಿ.ಆಶಾ ಹಾಗೂ ರಾಜು ಅವರು ವಾದ ಮಂಡಿಸಿದ್ದರು.

ಶ್ರೀ ರಾಯರಾಯ ಕಲ್ಯಾಣ ಮಂಟಪ ಮತ್ತು ಸಮೂಹ ದೇವಾಲಯಗಳು

ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಪಮಹಾಕವಿ ರಸ್ತೆ, ಬೆಂಗಳೂರು–560004

ದೂರವಾಣಿ ಸಂಖ್ಯೆ: 080–26506666 ಇ–ಮೇಲ್:–corrchoultrygrouptemples@gmail.com

ಸಂಖ್ಯೆ: ರಾರಾಛ/ಸಿಆರ್/ಕರಗ/2026 ದಿನಾಂಕ:12.03.2026

ಟೆಂಡರ್ ಪ್ರಕಟಣೆ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ವ್ಯಾಪ್ತಿಗೆ ಒಳಪಡುವ ಬೆಂಗಳೂರು ನಗರ ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯದ 2026 ನೇ ಸಾಲಿನ ಕರಗ ಮಹೋತ್ಸವಕ್ಕೆ ಅಗತ್ಯವಿರುವ ಹೂವುಗಳನ್ನು ಸರಬರಾಜು ಮಾಡಲು ಮತ್ತು ದೇವಾಲಯ, ದೇವಾಲಯ ಹೊರ ಆವರಣ, ಹಸೀ ಕರಗ ಮಂಟಪಗಳಲ್ಲಿ ವಿಶೇಷ ಅಲಂಕಾರ ಮಾಡುವ ಸಂಬಂಧ ಅರ್ಹ ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡನ್ನು ಆಹ್ವಾನಿಸಲಾಗಿದೆ. ಆಸಕ್ತಿವುಳ್ಳವರು ಇ–ಪೋರ್ಟಲ್ https://kppp.karnataka.gov.in ನ ವೆಬ್‌ಸೈಟ್ ಮೂಲಕ ಷರತ್ತು ಮತ್ತು ನಿಬಂಧನೆಗಳನ್ವಯ ಕನಿಷ್ಠ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ.

ಕ್ರ.ಸಂ	ಹೆಸರು	ಇಎಂಡಿ ಮೊತ್ತ
01	ಕರಗ ಮಹೋತ್ಸವಕ್ಕೆ ಅಗತ್ಯವಿರುವ ಹೂವುಗಳನ್ನು ಸರಬರಾಜು ಮಾಡಲು ಮತ್ತು ದೇವಾಲಯ, ದೇವಾಲಯ ಹೊರ ಆವರಣ, ಹಸೀ ಕರಗ ಮಂಟಪಗಳಲ್ಲಿ ವಿಶೇಷ ಅಲಂಕಾರ ಮಾಡುವುದು	50,000/–
	(ಇಂಡೆಂಟ್ ಸಂಖ್ಯೆ: HRICE/2025–26/IND0988) 1.ಟೆಂಡರ್ ದಾಖಲಾತಿಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ. 2. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 19–03–2026 ವೇಳೆ 4.00 ಗಂಟೆ 3. ಟೆಂಡರ್ ತೆರೆಯುವ ದಿನಾಂಕ: 20–03-2026 ವೇಳೆ 4.05 ಗಂಟೆ	

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ರಾಯರಾಯ ಛತ್ರ ಮತ್ತು ಸಮೂಹ ದೇವಾಲಯಗಳು,
ಬೆಂಗಳೂರು ನಗರ

ವಾಸಾಸಂಇ/ವಾಪ್ರ/ಶಿರಡಿ ಸಾಯಿ/1346/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಕಾನಿಇಂ(ವಿ)/ಯೋವಿದ/ಸಕಾನಿಇಂ–1/2025–26/4563 ದಿನಾಂಕ: 11.03.2026

ಸಾರ್ವಜನಿಕರ ಎಚ್ಚರಿಕೆಗಾಗಿ

ಸಾರ್ವಜನಿಕರ ಎಚ್ಚರಿಕೆಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕವಿಪ್ರನಿನಿಯು 2 x 150 ಎಂ.ವಿ.ಎ ಮತ್ತು 2 x 31.5 ಎಂ.ವಿ.ಎ 220/66/11ಕೆವಿ ಜಿ.ಐ.ಎಸ್ ವಿದ್ಯುತ್ ಉಪ–ಕೇಂದ್ರ, ಹಗದೂರು ವಿದ್ಯುತ್ ಉಪ–ಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡ ವಿದ್ಯುತ್ ಉಪ–ಕೇಂದ್ರದಿಂದ ಭೂಗತ ಕೇಬಲನ್ನು ಎಳೆಯಬೇಕಿರುತ್ತದೆ.

66/11ಕೆವಿ ಕಾಡುಗೋಡಿ ವಿದ್ಯುತ್ ಉಪಕೇಂದ್ರದಿಂದ 220/66/11ಕೆವಿ ಹಗದೂರು ಜಿ.ಐ.ಎಸ್ ವಿದ್ಯುತ್ ಉಪಕೇಂದ್ರದವರೆಗೆ 66ಕೆವಿ 1000 ಚ.ಮಿ.ಮೀ ವ್ಯಾಸದ ಸುಮಾರು 4.730 ಕಿ.ಮೀ ಉದ್ದದ ಭೂಗತ ಕೇಬಲನ್ನು ಅಳವಡಿಸಲಾಗಿದೆ.

ಸದರಿ ಭೂಗತ ಕೇಬಲನಲ್ಲಿ **ದಿನಾಂಕ: 11.03.2026** ನಂತರದ ದಿನಗಳಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಲಾಗುವುದು.

ಸದರಿ ಭೂಗತ ಕೇಬಲ್ ವಿದ್ಯುತ್ ಮಾರ್ಗವು 66/11ಕೆವಿ ಕಾಡುಗೋಡಿ ವಿದ್ಯುತ್ ಉಪಕೇಂದ್ರದಿಂದ, ಕಾಡುಗೋಡಿ ಟ್ರೀ ಪಾರ್ಕ್, ಐ.ಟಿ.ಪಿಎಲ್.ಮುಖ್ಯ ರಸ್ತೆ, ಕಾಡುಗೋಡಿ ಇಂಡಸ್ಟ್ರಿಯಲ್ ಮುಖ್ಯ ರಸ್ತೆ, ಹೋಪ್ ಫಾರ್ಮ್ ಸರ್ಕಲ್, ವಿಜಯನಗರ ಮುಖ್ಯ ರಸ್ತೆ, ಇಮ್ಮಡಿಹಳ್ಳಿ ಮುಖ್ಯ ರಸ್ತೆ ಮೂಲಕ 220/66/11ಕೆವಿ ಜಿ.ಐ.ಎಸ್ ಹಗದೂರು ವಿದ್ಯುತ್ ಉಪ–ಕೇಂದ್ರಕ್ಕೆ ಹಾದು ಹೋಗುತ್ತದೆ.

ಆದುದರಿಂದ ಈ ಮೇಲ್ಕಂಡ 66ಕೆವಿ ಭೂಗತ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಯಾವುದೇ ಸಾರ್ವಜನಿಕರು/ಗ್ರೇಟರ್ ಬೆಂಗಳೂರು ಪ್ರಾಧಿಕಾರ/ಸರ್ಕಾರಿ ಸಂಸ್ಥೆಗಳು/ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿ/GAIL/ಖಾಸಗಿ ಸಂಸ್ಥೆ/ರೈತರುಗಳು ರಸ್ತೆಯನ್ನು ಅಗೆಯಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆ ವಿಭಾಗ ದಕ್ಷಿಣ,
ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು–09

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ. ನಿವೇಶನ ಖಾತೆ ನಂ.31–511–371, ವಾರ್ಡ್ ನಂ.20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/156/2025–26/3439 ದಿನಾಂಕ: 12.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ದೇವರಾಜು ಎಂ. ಬಿನ್ ಲೇ॥ ಮುನಿವೆಂಕಟಪ್ಪ	ಯಲಹಂಕ	ಜಾಲ	ಮಾರಸಂದ್ರ	3/3	0–18	ವ್ಯವಸಾಯ	ವಸತಿ
2.					3/4	0–20		
3.	ಶ್ರೀಮತಿ ಮಂಜುಳ ಕೋಂ ಎಂ. ದೇವರಾಜು				3/5	0–19		
4.					3/6	0–20		

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೂ ಪ್ರಶ್ನಿತ ಜಮೀನಿನ ಪರಿಸರದಲ್ಲಿ ಈಗಾಗಲೇ ವಸತಿ ಉದ್ದೇಶದ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದು. ಸದರಿ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಯೋಜನಾಬದ್ಧವಾಗಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾಪ್ರ/ಜಿಎ/6215/2025–26

‘ಕೆಲಸದ ಮೇಲೆ ನಂಬಿಕೆ ಇರಬೇಕು’

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ ‘ಲವ್ ಮಾಕ್ಟೇಲ್–3’ ಚಿತ್ರ ಮಾ.19ರಂದು ತೆರೆ ಕಾಣುತ್ತಿದೆ. ‘ಲವ್ ಮಾಕ್ಟೇಲ್’ ಸರಣಿ ಮೂಲಕ ವ್ಯಾಪಕ ಯಶಸ್ಸು ಗಳಿಸಿದ ಅವರು, ಈ ಚಿತ್ರದ ಬಳಿಕ ತಮ್ಮ ವೃತ್ತಿ ಜೀವನ ಬದಲಾದ ಬಗೆಯನ್ನು ವಿವರಿಸಿದ್ದಾರೆ.

ಡಾರ್ಲಿಂಗ್ ಕೃಷ್ಣ

• ವಿನಾಯಕ ಕೆ.ಎಸ್.

• ಈ ಚಿತ್ರ ‘ಲವ್ ಮಾಕ್ಟೇಲ್’ ಸರಣಿ ಕಥೆಯ ಮುಂದುವರಿದ ಭಾಗವೇ?

ಹೌದು. ‘ಲವ್ ಮಾಕ್ಟೇಲ್’ ಚಿತ್ರದ ಪಾತ್ರಗಳೇ ಮುಂದುವರಿಯುತ್ತವೆ. ‘ಲವ್ ಮಾಕ್ಟೇಲ್–2’ ಚಿತ್ರದಲ್ಲಿ ಮಗುವನ್ನು ದತ್ತು ತೆಗೆದುಕೊಂಡಿರುತ್ತೇನೆ. ಅಲ್ಲಿಂದ ಈ ಸಿನಿಮಾ ಪ್ರಾರಂಭವಾಗುತ್ತದೆ. ಮುಂದೆ ನಾಯಕನ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದು ಈ ಚಿತ್ರದಲ್ಲಿದೆ.

• ನೀವು ಮತ್ತು ಮಿಲನಾ ‘ಲವ್ ಮಾಕ್ಟೇಲ್’ ಸರಣಿಗೆ ಸೀಮಿತವಾಗುತ್ತಿರುವಿರಾ?

ಹಾಗೇನಿಲ್ಲ, ಬೇರೆ ಸಿನಿಮಾಗಳನ್ನು ಮಾಡುತ್ತಿದ್ದೇವೆ. ಈ ಚಿತ್ರದೊಂದಿಗೆ ‘ಲವ್ ಮಾಕ್ಟೇಲ್’ ಸರಣಿ ಮುಗಿಯುತ್ತದೆ. ಇದು ಸರಣಿಯ ಅಂತಿಮ ಕಥೆ ಎಂದಿಕೊಂಡಿರುವೆ. ಇದರಲ್ಲಿ ಕಥೆಗೊಂದು ಸೂಕ್ತ ಅಂತ್ಯ ಸಿಕ್ಕಿದೆ. ಸಿನಿಮಾ ಚೆನ್ನಾಗಿ ಮೂಡಿಬಂದಿದೆ. ಜನ ಇದನ್ನು ಇಷ್ಟಪಡುತ್ತಾರೆಂಬ ನಂಬಿಕೆಯೂ ಇದೆ. ಈ ಸಿನಿಮಾ ಯಶಸ್ವಿಯಾಯಿತೆಂದು ಕಥೆಯನ್ನು ಮತ್ತೆ ಎಳೆಯುವುದಿಲ್ಲ. ಇಲ್ಲಿಗೆ ಮುಗಿಸಬಹುದು ಅನ್ನಿಸಿದೆ. ನಾವು ‘ಲವ್ ಮಾಕ್ಟೇಲ್’ಗೆ ಮಾತ್ರ ಅಂಟಿಕೊಂಡಿಲ್ಲ. ಬೇರೆ ನಿರ್ದೇಶಕರ ಜತೆಯೂ ಸಿನಿಮಾಗಳನ್ನು ಮಾಡುತ್ತಿದ್ದೇವೆ. ಹಾಗೆ ನೋಡಿದರೆ ‘ಲವ್ ಮಾಕ್ಟೇಲ್’ ಪ್ರತಿ ಭಾಗದ ನಡುವೆ 2–3 ವರ್ಷಗಳ ಅಂತರವಿದೆ.

• ಮೊದಲ ಭಾಗದಂತೆ ಪ್ರೀತಿಗೆ ಸೀಮಿತವಾದ ಚಿತ್ರವೇ?

ಕೌಟುಂಬಿಕ ಮನರಂಜನೆ ಚಿತ್ರ. ಪ್ರೀತಿಯೂ ಇರುತ್ತದೆ. ಆದರೆ ಬೇರೆ ರೀತಿಯಲ್ಲಿ ಇರುತ್ತದೆ. ಜೀವನದಲ್ಲಿ ಪ್ರೀತಿ ಇಲ್ಲದೇ ಏನೂ ಇಲ್ಲ.

• ಈತನಕದ ನಿಮ್ಮ ಸಿನಿಪಯಣ ಹೇಗಿತ್ತು?

ಮೊದಲಿಗಿಂತ ಈಗ ಸಿನಿಪಯಣ ತುಂಬ ಚೆನ್ನಾಗಿದೆ. ಮೊದಲು ತುಂಬ ಅಭದ್ರತೆ, ಪರದಾಟ ಇತ್ತು. ಯಶಸ್ಸಿಗಾಗಿ ಸಾಕಷ್ಟು ವರ್ಷಗಳ ಕಾಲ ಕಷ್ಟಪಟ್ಟು, ಶ್ರದ್ಧೆಯಿಂದ ಕೆಲಸ ಮಾಡಿದ್ದೆವು. ಕಷ್ಟಪಟ್ಟವರಿಗೆ ಸುಖ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆಯಿಟ್ಟುಕೊಂಡಿದ್ದೆವು. ಅದು ಈಗ ಸಿಕ್ಕಿದೆ. ಇವತ್ತು ತಿರುಗಿ ನೋಡಿದರೆ ಖುಷಿಯಿದೆ. ನಿರ್ಮಾಪಕರು ಚೆನ್ನಾಗಿಲ್ಲದ ಕಥೆಯೊಂದಿಗೆ ಬಂದರೆ, ಬೇರೆ ಕಥೆ ಮಾಡೋಣ ಎಂದು ಅವರ ಕಥೆ ತಿರಸ್ಕರಿಸುವ ಮಟ್ಟಕ್ಕೆ ಬಂದಿದ್ದೇನೆ. ಅಲ್ಲೊಂದು ಖುಷಿ, ಸಂತೋಷವಿದೆ. ಹೀಗಾಗಿ ಒಳ್ಳೊಳ್ಳೆ ಕಥೆಗಳನ್ನು ಮಾಡಲು ಸಾಧ್ಯವಾಗುತ್ತಿದೆ. ಇಲ್ಲವಾದಲ್ಲಿ ಸಿಕ್ಕಿದ ಕಥೆಯನ್ನೇ ಮಾಡಿಕೊಂಡು ಹೋಗಬೇಕಾದ ಸ್ಥಿತಿ ಇರುತ್ತಿತ್ತು.

• ಯಶಸ್ಸಿಗಾಗಿ ಬಹಳ ಶ್ರಮಪಟ್ಟಿರುವಿರಿ. ಯಾವಾಗಲಾದರೂ ಚಿತ್ರೋದ್ಯಮ ಬಿಟ್ಟುಹೋಗಬೇಕು ಎನ್ನಿಸಿತ್ತಾ?

ಎಷ್ಟೇ ಕಷ್ಟ ಬಂದರೂ ಇಲ್ಲಿಂದ ದೂರ ಸರಿಯುವ ನಿರ್ಧಾರ ಮಾಡಿಲ್ಲ. ನಾನು ಎಂಬಿಎ ಮಾಡಿದ್ದೇನೆ. ಆದರೆ ಘಟಿಕೋತ್ಸವದಲ್ಲಿ ಪದವಿ ಪ್ರಮಾಣಪತ್ರವನ್ನೇ ಪಡೆದಿಲ್ಲ. ಶಿಕ್ಷಣ ಮುಗಿಯುತ್ತಿದ್ದಂತೆ ನಾನು ನಟನಾಗಬೇಕು ಎಂದು ನಿರ್ಧರಿಸಿದೆ. ಹೀಗಾಗಿ ಆ ಪದವಿ ಪ್ರಮಾಣಪತ್ರ ನನಗೆ ಬೇಡ ಎಂದು ಅವತ್ತೇ ನಿರ್ಧರಿಸಿದೆ. ಇವತ್ತಿನವರೆಗೂ ಆ ನಿರ್ಧಾರಕ್ಕೆ ಬದ್ಧನಾಗಿರುವೆ. ಅದೇ ನಂಬಿಕೆ ಮೇಲೆ ಕೆಲಸ ಮಾಡಿಕೊಂಡು ಹೋಗಿರುವೆ. ಇಲ್ಲಿಂದ ಕಾಲು ತೆಗೆದರೆ ನಾನೇ ಇಲ್ಲಿ ಸೋಲು ಒಪ್ಪಿಕೊಂಡಂತೆ. ಬೇರೆ ಯಾರು ದಾರಿ ತೋರಿಸುತ್ತಾರೆ ಹೇಳಿ? ಹೀಗಾಗಿ ನಮಗೆ ನಮ್ಮ ಕೆಲಸದ ಮೇಲೆ ಮೊದಲು ನಂಬಿಕೆ ಇರಬೇಕು. ನಂತರ ದಾರಿ ತೋರಿಸುವವರು ಸಿಗುತ್ತಾರೆ.

• ನಟನಾಗಲೇಬೇಕು ಎಂಬ ನಿಮ್ಮ ಹಟಕ್ಕೆ ಕಾರಣ ಏನು? ರಂಗಭೂಮಿ ಹಿನ್ನೆಲೆ ಇತ್ತಾ?

ಯಾವ ಹಿನ್ನೆಲೆಯೂ ಇರಲಿಲ್ಲ. ಜಿಮ್‌ನಲ್ಲಿ ವರ್ಕೌಟ್ ಮಾಡುವಾಗ ನಟ ದರ್ಶನ್ ಪರಿಚಯವಾಯ್ತು. ಒಂದು ಸಲ ಅವರು ನಮ್ಮ ಮನೆ ಎದುರು ಪೆಟ್ರೋಲ್ ಬಂಕ್‌ನಲ್ಲಿ ಸಿಕ್ಕರು. ಇಬ್ಬರೂ ಮಾತನಾಡುತ್ತ ನಿಂತಿದ್ದಾಗ ಅವರ ಜತೆ ಫೋಟೊ ತೆಗಿಸಿಕೊಳ್ಳಲು ಜನ ಮುಗಿಬಿದ್ದರು. ಆಗ ನಾನು ಆ ಗುಂಪಿನಿಂದ ಆಚೆ ಬಂದೆ. ಆಚೆ ನಿಂತು ಎಷ್ಟು ಚೆನ್ನಾಗಿದೆ ಅವರ ಬದುಕು, ನಾನು ಇದೇ ರೀತಿ ಏನಾದರೂ ಮಾಡಬೇಕಲ್ಲ ಎನ್ನಿಸಿತು. ನಾನು ನಾಯಕನಾಗಬೇಕು ಎಂದುಕೊಂಡೆ ಚಿತ್ರರಂಗಕ್ಕೆ ಬಂದೆ. ಆಮೇಲೆ ನೋಡಿದರೆ ಪಯಣ ಎಲ್ಲೆಲ್ಲಿಗೋ ಸಾಗಿತು.

• ನಟನಿಂದ ನಿರ್ದೇಶಕನಾಗಿದ್ದು ಹೇಗೆ?

ನಾನು ನಟನಾಗಿ ನಿಲ್ಲಬೇಕು ಅಂದುಕೊಂಡಾಗ, ಮಾಡಿದ ಸಿನಿಮಾಗಳು ಕೈ ಹಿಡಿಯುತ್ತಿಲ್ಲ ಎಂದಾದಾಗ ನನಗೆ ನಾನೇ ಏನಾದರೂ ಮಾಡಿಕೊಳ್ಳಬೇಕೆಂದು ಹೊರಟೆ. ಆಗ ನಿರ್ದೇಶನಕ್ಕಿಳಿದೆ. ಎಲ್ಲ ಮುಳುಗುವ ಸಮಯದಲ್ಲಿ, ಇನ್ನು ಏನೂ ಇಲ್ಲ ಅಂದಾಗ ರಕ್ಷಣೆಗೊಂದು ಹುಲ್ಲುಕಡ್ಡಿ ಸಿಕ್ಕಂತೆ ‘ಲವ್ ಮಾಕ್ಟೇಲ್’ ಕಥೆ ಹುಟ್ಟಿದ್ದು, ಅದನ್ನು ನಿರ್ದೇಶಿಸಿದ್ದು.

• ‘ಲವ್ ಮಾಕ್ಟೇಲ್’ ಚಿತ್ರದ ಬಳಿಕ ನಿಮ್ಮ ಬದುಕು ಎಷ್ಟು ಬದಲಾಯಿತು?

ಊಹಿಸಿಕೊಳ್ಳಲು ಆಗದಷ್ಟು ಬದಲಾಯಿತು. ಈ ಪಯಣದ ತುಂಬ ತೃಪ್ತಿಯ ಕ್ಷಣವೆಂದರೆ ಮಿಲನಾ ಅವರನ್ನು ಭೇಟಿ ಮಾಡಿದ್ದು. ಅದು ನನ್ನ ಬದುಕನ್ನು ಸಂಪೂರ್ಣವಾಗಿ ಬದಲಿಸಿತು. ನಾನು ಸೋತಾಗ ಧೈರ್ಯ ತುಂಬಿದ್ದು ಅವರೇ. ನಕಾರಾತ್ಮಕ ಆಲೋಚನೆಗಳಿಗೆ ಅವಕಾಶವನ್ನೇ ನೀಡಲಿಲ್ಲ. ನನ್ನ ಬದುಕಿಗೆ ಖುಷಿಕೊಟ್ಟ ಅವರಿಗೆ ಉಡುಗೊರೆ ಎಂಬಂತೆ ‘ಲವ್ ಮಾಕ್ಟೇಲ್’ ಚಿತ್ರ ಮಾಡಿದೆ. ಅದು ಇಬ್ಬರ ಬದುಕನ್ನೇ ಬದಲಿಸಿತು.

• ಬೇರೆ ಭಾಷೆಯ ಸಿನಿಮಾಗಳಲ್ಲಿ ನಟಿಸುವ ಯೋಚನೆ ಇದೆಯಾ?

ಬೇರೆ ಭಾಷೆಗಳಲ್ಲಿ ನಟಿಸುವ ಯೋಚನೆ ಏನೂ ಇಲ್ಲ. ಈ ಸಿನಿಮಾವನ್ನು ಡಬ್ ಮಾಡಿ ಒಟಿಟಿಯಲ್ಲಿ ಬಿಡುಗಡೆ ಮಾಡುತ್ತೇವೆ. ‘ಫಾದರ್’ ಸಿನಿಮಾ ಪೂರ್ಣಗೊಂಡಿದೆ. ಜೂನ್ ಹೊತ್ತಿಗೆ ಸಿನಿಮಾ ತೆರೆಗೆ ಬರಬಹುದು. ಅದರ ಹೊರತಾಗಿ ಬೇರೆ ಯಾವ ಸಿನಿಮಾವನ್ನೂ ಒಪ್ಪಿಕೊಂಡಿಲ್ಲ. ಕಥೆ ಆಯ್ಕೆಯಲ್ಲಿ ಬಹಳ ಯೋಚನೆ ಮಾಡುತ್ತಿದ್ದೇನೆ.

• ನಟನೆ ಮತ್ತು ನಿರ್ದೇಶನ ಎರಡನ್ನೂ ಮುಂದುವರಿಸುವಿರಾ?

ನಿರ್ದೇಶಕನಾಗಿ ಇನ್ನಷ್ಟು ಸಿನಿಮಾಗಳನ್ನು ಮಾಡುವ ಯೋಚನೆಯಿದೆ. ಒಳ್ಳೆಯ ಕಥೆಗಳು ಹೊಳೆದಾಗ ಮಾತ್ರ ನಿರ್ದೇಶನ ಮಾಡಬಹುದು. ಇವತ್ತು ಸಾಧಾರಣ, ಉತ್ತಮ ಸಿನಿಮಾಗಳು ಸಾಕಾಗುವುದಿಲ್ಲ. ಅತ್ಯುತ್ತಮ ಸಿನಿಮಾಗಳನ್ನೇ ಮಾಡಬೇಕು. ಅದನ್ನು ಹೇಗೆ ಮಾಡಬೇಕೆಂಬುದನ್ನು ನಾವು ಕಲಿತುಕೊಳ್ಳಬೇಕಿದೆ. ಬಹಳ ಜಾಗೃತೆಯಿಂದ ಸಿನಿಮಾ ಮಾಡಬೇಕು. ಹೀಗಾಗಿ ನಿರ್ದೇಶನಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತೇನೆ. ಒಳ್ಳೆಯ ಕಥೆಗಳೊಂದಿಗೆ ನಟನೆಯಂತೂ ಇದ್ದೇ ಇರುತ್ತದೆ.

ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ

4ನೇ ಆವೃತ್ತಿ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’-ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಮೇಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

‘ಬಾಸ್’ ಅವರದ್ದಲ್ಲ, ಇವರದ್ದು!

ತನುಷ್ ಶಿವಣ್ಣ

ನಾಯಕನೊಬ್ಬ ಕೊಲೆ ಪ್ರಕರಣದಲ್ಲಿ ಸಿಕ್ಕಿಬೀಳುವ ಕಾಲ್ಪನಿಕ ಕಥೆ ಹೊಂದಿರುವ ‘ಬಾಸ್’ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿ.ಲವ ನಿರ್ದೇಶನದ ಚಿತ್ರ ಮುಂದಿನ ತಿಂಗಳು ತೆರೆಗೆ ಬರಲಿದೆ. ಚಿತ್ರಕ್ಕೆ ‘ಸತ್ಯಮೇವ ಜಯತೇ’ ಎಂಬ ಅಡಿಬರಹವಿದೆ.

ಟೀಸರ್‌ನಲ್ಲಿ ಮೇಲ್ನೋಟಕ್ಕೆ ಇದು ರೇಣುಕಾಸ್ವಾಮಿ ಕೊಲೆ ಪ್ರಕರಣದ ಕಥೆಯಂತೆ ಭಾಸವಾಗುತ್ತಿದೆ. ‘ಇದು ಶಿವಸ್ವಾಮಿ ಕೊಲೆ ಪ್ರಕರಣ. ‘ಬಾಸ್’ ಎಂಬ ಶೀರ್ಷಿಕೆಗೂ ಚಿತ್ರರಂಗದ ನಟರೊಬ್ಬರಿಗೂ ಸಂಬಂಧವಿಲ್ಲ. ಚಿತ್ರದ ನಿಜವಾದ ಕಥೆ ಏನು ಎಂಬುದು ಟ್ರೇಲರ್ ಬಿಡುಗಡೆಯಾದ ಬಳಿಕ ಗೊತ್ತಾಗಲಿದೆ. ಕ್ರೈಮ್, ಥ್ರಿಲ್ಲರ್ ಕಥಾಹಂದರದ ಚಿತ್ರ. ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದೆ. ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ’ ಎಂದರು ನಿರ್ದೇಶಕ.

ತನುಷ್ ಶಿವಣ್ಣ ಚಿತ್ರದ ನಾಯಕ. ಸಿರಿ ಪ್ರೊಡಕ್ಷನ್ಸ್ ನಿರ್ಮಾಣವಿದೆ. ಮೋನಿಕಾ ಗೌಡ ಹಾಗೂ ಪಾಯಲ್ ಚಂಗಪ್ಪ ನಾಯಕಿಯರಾಗಿ ಅಭಿನಯಿಸಿದ್ದಾರೆ. ಡೆವಿ ಸುರೇಶ್ ಸಂಗೀತ ನಿರ್ದೇಶನ, ಶರತ್ ಎನ್. ಆರ್. ಪುರ ಛಾಯಾಚಿತ್ರಗ್ರಹಣ ಹಾಗೂ ಮಹೇಶ್ ರೆಡ್ಡಿ ಅವರ ಸಂಕಲನ ಈ ಚಿತ್ರಕ್ಕಿದೆ.

ಒಂದೇ ಸಿನಿಮಾ ತೆರೆಗೆ

ಪುನೀತ್ ರಾಜ್‌ಕುಮಾರ್

ಮುಂದಿನ ವಾರ ದೊಡ್ಡ ಸಿನಿಮಾಗಳ ಅಬ್ಬರವಿರುವುದರಿಂದ ಈ ವಾರ ಕೇವಲ ಒಂದು ಸಿನಿಮಾ ಮಾತ್ರ ತೆರೆಯಲ್ಲಿದೆ. ಈ ಹಿಂದೆ ‘ಟಾಕ್ಸಿಕ್’ ಚಿತ್ರ ಮಾ.19ಕ್ಕೆ ತೆರೆಗೆ ಬರುವುದಾಗಿ ಘೋಷಣೆಯಾಗಿತ್ತು. ಹೀಗಾಗಿ ಎಲ್ಲ ಸಿನಿಮಾಗಳು ಬಿಡುಗಡೆ ಮುಂದಕ್ಕೆ ಹಾಕಿಕೊಂಡಿದ್ದವು. ಆದರೆ ಇತ್ತೀಚೆಗಷ್ಟೇ ‘ಟಾಕ್ಸಿಕ್’ ಬಿಡುಗಡೆ ದಿನಾಂಕ ಬದಲಾಯಿಸಿತ್ತು. ಕೊನೆ ಕ್ಷಣದಲ್ಲಿ ದಿನಾಂಕ ಬದಲಾದ ಪರಿಣಾಮವಾಗಿ ಈ ವಾರ ‘ದರ್ಜಿ’ ಎಂಬ ಸಿನಿಮಾ ಮಾತ್ರ ಬಿಡುಗಡೆಗೊಳ್ಳುತ್ತಿದೆ.

ಶ್ರೀನಗರ ಚಂದ್ರು ಬರೆದು, ನಿರ್ದೇಶಿಸಿರುವ ‘ದರ್ಜಿ’ ಬಟ್ಟೆ ಹೊಲಿಯುವ ಅಪ್ಪ ಮತ್ತು ಮಗನ ಕಥೆಯನ್ನು ಹೊಂದಿದೆ. ಇದೊಂದು ಕಲಾತ್ಮಕ ಚಿತ್ರವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಟಿ.ಆನಂದ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರಮೇಶ್ ಕೃಷ್ಣನ್ ಸಂಗೀತ, ಚಂದ್ರು ಬೆಳವಂಗಲ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

‘ಆಕಾಶ್’ ಮರುಬಿಡುಗಡೆ

2005ರಲ್ಲಿ ತೆರೆಕಂಡ ಪುನೀತ್ ರಾಜ್‌ಕುಮಾರ್–ರಮ್ಯಾ ನಟನೆಯ ‘ಆಕಾಶ್’ ಚಿತ್ರ ಈ ವಾರ ಮರುಬಿಡುಗಡೆಗೊಳ್ಳುತ್ತಿದೆ. ಪುನೀತ್ ಜನ್ಮದಿನದ (ಮಾ.17) ಅಂಗವಾಗಿ ಮಹೇಶ್ ಬಾಬು ನಿರ್ದೇಶನದ ಈ ಚಿತ್ರವನ್ನು ಪಿಆರ್‌ಕೆ ಸಂಸ್ಥೆ ಮರುಬಿಡುಗಡೆ ಮಾಡುತ್ತಿದೆ. ಪುನೀತ್ ಮರಣಾನಂತರ ಸಂಸ್ಥೆಯು ಪ್ರತಿವರ್ಷ ಒಂದು ಹಳೆಯ ಸಿನಿಮಾವನ್ನು ಮರುಬಿಡುಗಡೆ ಮಾಡುತ್ತಿದೆ. ಕಳೆದ ವರ್ಷ ‘ಜಾಕಿ’ ಸಿನಿಮಾವನ್ನು ಮರುಬಿಡುಗಡೆ ಮಾಡಿತ್ತು.

ರೈತನ ಕಥೆಯ ಮಹಾ ಕಾಳಿಪುತ್ರ

ರೈತನ ಕುರಿತಾದ ಕಥೆ ಹೊಂದಿರುವ ‘ಮಹಾ ಕಾಳಿಪುತ್ರ’ ಚಿತ್ರದ ಶೀರ್ಷಿಕೆ ಬಿಡುಗಡೆ ಸಮಾರಂಭ ಇತ್ತೀಚೆಗಷ್ಟೇ ನಡೆಯಿತು. ಗಿರೀಶ್ ಎಸ್.ಎಂ ಚಿತ್ರ ನಿರ್ದೇಶನದ ಜತೆಗೆ ನಾಯಕನಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

‘ಮೂಲತಃ ನಾನೊಬ್ಬ ರೈತ. ಹೀಗಾಗಿ ರೈತನ ಬಗ್ಗೆ ಸಿನಿಮಾ ಮಾಡಲು ಬಂದಿದ್ದೇನೆ. ಇದು ನನ್ನ ಮೊದಲ ಚಿತ್ರ. ಮಹಾಕಾಳಿ ಪುತ್ರ ಎಂದರೆ ಕಾಳಿಯ ಆರಾಧಕ. ರೈತರು ಪ್ರತಿದಿನ ದೇವಿಯ ಪೂಜೆ ಮಾಡಿಕೊಂಡೇ ತಮ್ಮ ಕಾಯಕಕ್ಕೆ ಹೊರಡುತ್ತಾರೆ. ಅಂಥ ರೈತನನ್ನು ದೇವಿ ಪುತ್ರ ಎಂದು ಚಿತ್ರದಲ್ಲಿ ತೋರಿಸುತ್ತಿದ್ದೇವೆ. ಮಣ್ಣನ್ನು ನಂಬಿ ದುಡಿಯುವ ರೈತನಿಂದ ಹಿಡಿದು ದೇಶ ಕಾಯುವ ಸೈನಿಕನವರೆಗೆ ಕಥೆ ಸಾಗುತ್ತದೆ. ಈ ತಿಂಗಳ 15ರಿಂದ ಆರಂಭಿಸಿ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸುತ್ತಿದ್ದೇವೆ’ ಎಂದರು ನಿರ್ದೇಶಕ.

ತಿರುಪತಿ ತಿರುಮಲ ಪ್ರೊಡಕ್ಷನ್ಸ್ ಅಡಿಯಲ್ಲಿ ನಿರ್ದೇಶಕರೇ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರಾಹುಲ್ ವಸ್ತರಾ ಸಂಗೀತ, ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮಾ.27ಕ್ಕೆ ‘ಟೆರರ್’ ತೆರೆಗೆ

ಆದಿತ್ಯ

ಆದಿತ್ಯ ನಾಯಕನಾಗಿ ನಟಿಸಿರುವ ಮಾಸ್, ಆ್ಯಕ್ಷನ್ ಕಥೆಯ ‘ಟೆರರ್’ ಚಿತ್ರ ಮಾ.27ರಂದು ತೆರೆಗೆ ಬರಲಿದೆ. ರಂಜನ್ ಶಿವರಾಮ್ ಗೌಡ ನಿರ್ದೇಶನದ ಚಿತ್ರಕ್ಕೆ ಉಪ್ಪಿ ಎಂಟರ್‌ಟೈನರ್ಸ್ ಬ್ಯಾನರ್ ಅಡಿಯಲ್ಲಿ ಸಿಲ್ಕ್ ಮಂಜು ಬಂಡವಾಳ ಹೂಡಿದ್ದಾರೆ. ಈ ಚಿತ್ರ 2023ರಲ್ಲಿಯೇ ಸೆಟ್ಟೇರಿತ್ತು.

‘ದೇವರ ಸುತ್ತ ಒಂದಷ್ಟು ಮಾಫಿಯಾಗಳಿವೆ. ನಮ್ಮಲ್ಲಿ ಬಹುತೇಕರು ದೇವರನ್ನು ನಂಬುತ್ತಾರೆ. ಈ ನಂಬಿಕೆಯನ್ನೇ ಬಂಡವಾಳವಾಗಿಸಿಕೊಂಡು ಕೆಲ ದುಷ್ಟಶಕ್ತಿಗಳು ಹೇಗೆ ಕೆಲಸ ಮಾಡುತ್ತವೆ ಎಂಬುದೇ ಚಿತ್ರಕಥೆ. ಬೆಂಗಳೂರು, ಮೇಲುಕೋಟೆ, ಮಾಗಡಿ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಕಳೆದ ವರ್ಷವೇ ಚಿತ್ರ ತೆರೆಗೆ ಬರಬೇಕಿತ್ತು. ಕಾರಣಾಂತರಗಳಿಂದ ತಡವಾಗಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಕೈಲಾಶ್ ಖೇರ್ ಒಂದು ಹಾಡು ಹಾಡಿದ್ದಾರೆ’ ಎಂದರು ನಿರ್ದೇಶಕ.

ಶ್ರೀನಗರ ಕಿಟ್ಟಿ

ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್ ಮುಂತಾದವರು ಚಿತ್ರದಲ್ಲಿದ್ದಾರೆ. ಹರ್ಷವರ್ಧನ್ ಸಂಗೀತ, ನವೀನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

‘ಸಂಗೀತ ಬಾರ್ ಆ್ಯಂಡ್ ರೆಸ್ಟೋರೆಂಟ್’ ಚಿತ್ರೀಕರಣ ಪೂರ್ಣ

ಅನುಷಾ

ಕೋಮಲ್, ಮೇಘನಾ ರಾಜ್, ಅನುಷಾ ರೈ ಮುಖ್ಯಭೂಮಿಕೆಯಲ್ಲಿರುವ ‘ಸಂಗೀತ ಬಾರ್ ಆ್ಯಂಡ್ ರೆಸ್ಟೋರೆಂಟ್’ ಚಿತ್ರದ ಚಿತ್ರೀಕರಣ ಇತ್ತೀಚೆಗೆ ಪೂರ್ಣಗೊಂಡಿದೆ. ಸಂದೇಶ್ ಶೆಟ್ಟಿ ಆಜ್ರಿ ಆ್ಯಕ್ಷನ್-ಕಟ್ ಹೇಳುತ್ತಿರುವ ಚಿತ್ರಕ್ಕೆ ವಿಕಾಸ್ ಶೆಟ್ಟಿ ಬಂಡವಾಳ ಹೂಡಿ ನಿರ್ಮಾಣ ಮಾಡುತ್ತಿದ್ದಾರೆ.

‘ಎರಡು ಹಂತಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಕುಂದಾಪುರ, ಶಿವಮೊಗ್ಗ, ತೀರ್ಥಹಳ್ಳಿ ಸೇರಿದಂತೆ ಕರಾವಳಿ, ಮಲೆನಾಡು ಭಾಗದಲ್ಲಿ ಚಿತ್ರೀಕರಣಗೊಂಡಿದೆ. ಈ ಸಿನಿಮಾದಲ್ಲಿ ಎರಡು ಶೀರ್ಷಿಕೆಗಳಿವೆ. ಅದಕ್ಕೆ ಕಾರಣ ಈ ಚಿತ್ರದ ಕಥಾಹಂದರ. ಚಿತ್ರದ ಮೊದಲಾರ್ಧ ಬಾರ್‌ನಲ್ಲಿ ಶುರುವಾಗಿ, ಬಾರ್ ಸುತ್ತ ಸಾಗಿದರೆ, ದ್ವಿತೀಯಾರ್ಧ ದೇವರ ತಾಣದಲ್ಲಿ ಶುರುವಾಗಿ ಅಲ್ಲೇ ಮುಗಿಯುತ್ತದೆ. ಹಾಗಾಗಿ ಚಿತ್ರದ ಮೊದಲಾರ್ಧ ‘ಸಂಗೀತ ಬಾರ್ ಆ್ಯಂಡ್ ರೆಸ್ಟೋರೆಂಟ್’ ಆಗಿದ್ದರೆ, ದ್ವಿತೀಯಾರ್ಧ ‘ದೇವರ ತಾಣ’ ಅಂತಿದೆ. ಆದರೆ ಸೆನ್ಸಾರ್ ನಿಯಮದಂತೆ, ಸಿನಿಮಾಕ್ಕೆ ಒಂದೇ ಹೆಸರು ಇಟ್ಟಿದ್ದೇವೆ’ ಎನ್ನುತ್ತಾರೆ ನಿರ್ದೇಶಕ.

ನಾಯಕ ನಟ ಕೋಮಲ್ ಒಂದು ಕಥೆಯಲ್ಲಿ ಆಸ್ಥಾನವೊಂದರ ವರ್ಣಚಿತ್ರ ಕಲಾವಿದನಾಗಿ ಕಾಣಿಸಿಕೊಂಡರೆ, ಮತ್ತೊಂದರಲ್ಲಿ ಸಿನಿಮಾ ನಿರ್ದೇಶಕನ ಪಾತ್ರದಲ್ಲಿ ನಟಿಸಿದ್ದಾರೆ. ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮಿನಾಡು, ವಜ್ರಧೀರ್ ಜೈನ್, ಉತ್ಸವ್, ಕಾರ್ತಿಕ್ ರಾವ್, ರಾಘು ರಾಮನಕೊಪ್ಪ ಮುಂತಾದವರು ಚಿತ್ರದಲ್ಲಿದ್ದಾರೆ.

ಚಿತ್ರಕ್ಕೆ ಪ್ರಾಂಶು ಜಾ ಸಂಗೀತ, ಸಜೀಶ್ ರಾಜ್ ಛಾಯಾಚಿತ್ರಗ್ರಹಣ, ಶಿವರಾಜ್ ಮೇಹು ಸಂಕಲನವಿದೆ.

ನಟ ಕೋಮಲ್, ಮೇಘನಾ ರಾಜ್ ಅವರೊಂದಿಗೆ ಚಿತ್ರತಂಡ

ಧನುಷ್‌ಗೆ ರುಕ್ಮಿಣಿ ವಸಂತ್ ಜೋಡಿ?

ರುಕ್ಮಿಣಿ ವಸಂತ್

ತಮಿಳು ನಟ ಧನುಷ್ ಒಂದರ ಹಿಂದೊಂದು ಸಿನಿಮಾಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಧನುಷ್ ಅವರು ನಿರ್ದೇಶಕ ತಮಿಳರಸನ್ ಪಚಮುತ್ತು ಜತೆ ಮುಂದಿನ ಚಿತ್ರಕ್ಕೆ ಕೈಜೋಡಿಸಲಿದ್ದಾರೆ ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ.

‘ಲಬ್ಬರ್ ಪಾಂಡು’ ಎಂಬ ಸೂಪರ್ ಹಿಟ್ ಚಿತ್ರ ನೀಡಿದ್ದ ಪಚಮುತ್ತು, ಧನುಷ್ ಅವರ 56ನೇ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನಲಾಗಿದೆ. ಅಂದಹಾಗೆ ಈ ಚಿತ್ರದಲ್ಲಿ ನಾಯಕಿಯಾಗಿ ಕನ್ನಡದ ನಟಿ ರುಕ್ಮಿಣಿ ವಸಂತ್ ಧನುಷ್‌ಗೆ ಜೋಡಿಯಾಗಲಿದ್ದಾರೆ ಎಂಬ ವದಂತಿ ದಟ್ಟವಾಗಿದೆ.

‘ಕಾಂತಾರ–1’ ಯಶಸ್ಸಿನ ಬಳಿಕ ರುಕ್ಮಿಣಿ ಅವರ ಬಳಿ ಹಲವು ಸಿನಿಮಾಗಳಿವೆ. ಕನ್ನಡದ ಜತೆ ಬೇರೆ ಭಾಷೆಗಳಿಂದಲೂ ಹೆಚ್ಚು ಅವಕಾಶಗಳು ಬರುತ್ತಿವೆ. ಯಶ್ ನಟನೆಯ ‘ಟಾಕ್ಸಿಕ್’ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ‘ಡ್ರ್ಯಾಗನ್’ನಲ್ಲಿ ಚಿತ್ರದಲ್ಲಿ ಜೂನಿಯರ್ ಎನ್‌ಟಿಆರ್‌ಗೆ ನಾಯಕಿಯಾಗಿದ್ದಾರೆ. ಹೇಮಂತ್ ರಾವ್ ನಿರ್ಮಾಣದ ಕನ್ನಡ ಸಿನಿಮಾವೊಂದರಲ್ಲಿಯೂ ಇವರು ನಾಯಕಿಯಾಗಿದ್ದಾರೆ ಎಂಬ ಸುದ್ದಿಯಿದೆ.

ಧನುಷ್

ಈ ಹಿಂದೆ ‘ಕರ್ಣನ್’ ಸಿನಿಮಾ ನಿರ್ದೇಶಿಸಿದ್ದ ನಿರ್ದೇಶಕ ಮರಿ ಸೆಲ್ವರಾಜ್ ಅವರ ಜತೆಗೆ ಧನುಷ್ 56ನೇ ಸಿನಿಮಾ ಮಾಡುತ್ತಾರೆಂಬ ಸುದ್ದಿಯಿತ್ತು. ಆದರೆ ಈ ಸಿನಿಮಾ ಪಚಮುತ್ತು ಜತೆ ಖಚಿತವಾಗಿರುವುದರಿಂದ 57ನೇ ಸಿನಿಮಾ ಮರಿ ಸೆಲ್ವರಾಜ್ ಅವರದ್ದಾಗಿರುವ ಸಾಧ್ಯತೆ ಹೆಚ್ಚಿದೆ.

ಕಾವೇರಿ ನೀರು: ತಮಿಳುನಾಡು ಮತ್ತೆ ತಗಾದೆ

ಅನಧಿಕೃತ ಏತ ನೀರಾವರಿ ಯೋಜನೆಗಳ ಮೂಲಕ 9.65 ಟಿಎಂಸಿ ಬಳಕೆ: ಆರೋಪ

• ಮಂಜುನಾಥ ಹೆಬ್ಬಾರ್

ಅಂಕಿ ಅಂಶಗಳು

166.84 ಟಿಎಂಸಿ — ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಕರ್ನಾಟಕವು ತಮಿಳುನಾಡಿಗೆ ಹರಿಸಬೇಕಾದ ನೀರು (ಜನವರಿ ವರೆಗೆ)

317 ಟಿಎಂಸಿ — ಕರ್ನಾಟಕವು ತಮಿಳುನಾಡಿಗೆ ಈ ವರ್ಷ ಬಿಟ್ಟ ನೀರು

ನವದೆಹಲಿ: '2025-26ನೇ ನೀರಾವರಿ ವರ್ಷದಲ್ಲಿ ಕರ್ನಾಟಕವು ಅನಧಿಕೃತ ಏತ ನೀರಾವರಿ ಯೋಜನೆಗಳ ಮೂಲಕ 9.65 ಟಿಎಂಸಿ ಅಡಿ ನೀರನ್ನು ಅಕ್ರಮವಾಗಿ ಬಳಸಿದೆ. ಈ ಮೂಲಕ ಕಾವೇರಿ ನ್ಯಾಯಮಂಡಳಿಯ ತೀರ್ಪು ಉಲ್ಲಂಘಿಸಿದೆ' ಎಂದು ತಮಿಳುನಾಡು ಸರ್ಕಾರ ತಗಾದೆ ಎತ್ತಿದೆ.

ನವದೆಹಲಿಯಲ್ಲಿ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ 47ನೇ ಸಭೆಯಲ್ಲಿ ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಜೆ.ಜಯಕಾಂತನ್ ಅವರು ಕರ್ನಾಟಕದ ವಿರುದ್ಧ ಆರೋಪ ಸುರಿಮಳೆ ಮಾಡಿದರು.

ನೆರೆ ರಾಜ್ಯವು ಅಕ್ರಮವಾಗಿ ನೀರು ಬಳಸಿ 1.34 ಲಕ್ಷ ಎಕರೆಯಲ್ಲಿ ಬೆಳೆ ಬೆಳೆದಿದೆ. ನೀರಾವರಿ ಯೋಜನೆಯ ವಿವರ, ಪ್ರದೇಶದಲ್ಲಿ ಬೆಳೆದಿರುವ ಬೆಳೆ, ಬೆಳೆಯ ಅವಧಿಯ ವಿವರವನ್ನು ಕರ್ನಾಟಕದಿಂದ ಪ್ರಾಧಿಕಾರಕ್ಕೆ ಒದಗಿಸಿಲ್ಲ. ಕದ್ದು ಮುಚ್ಚಿ ಕಾವೇರಿ ನೀರು ಬಳಸುತ್ತಿರುವ ಕರ್ನಾಟಕದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ನಾಲ್ಕು ಪ್ರಮುಖ ಜಲಾಶಯಗಳಿಂದ ನವೆಂಬರ್ ಹಾಗೂ ಜನವರಿ ಅವಧಿಯಲ್ಲಿ 36 ಟಿಎಂಸಿ ಅಡಿ ನೀರನ್ನು ಕರ್ನಾಟಕ ಬಳಸಿಕೊಂಡಿದೆ. ಆದರೆ, 3.27 ಲಕ್ಷ ಎಕರೆಯಲ್ಲಿರುವ ರಬಿ ಅರೆ ಒಣ ಬೆಳೆಗಳಿಗೆ 32 ಟಿಎಂಸಿ ಅಡಿ ನೀರು ಸಾಕಾಗುತ್ತದೆ. ಆದರೆ, ಅಗತ್ಯಕ್ಕಿಂತ ಹೆಚ್ಚು ನೀರನ್ನು ಕರ್ನಾಟಕ ಬಳಸಿಕೊಂಡಿದೆ. ಅದರ ಅರ್ಥ ಅರೆ ಒಣ ಬೆಳೆಯ ಪ್ರದೇಶವನ್ನು ವ್ಯಾಪಕ ಪ್ರಮಾಣದಲ್ಲಿ ಹಿಗ್ಗಿಸಿಕೊಂಡಿದೆ. ಜಲಾಶಯದಲ್ಲಿ ಸಂಗ್ರಹಣೆ ಮಾಡಬೇಕಾದ ನೀರನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಅವರು ದೂಷಿಸಿದರು.

'ನಾಲ್ಕು ಜಲಾಶಯಗಳ ಕಾಲುವೆಗಳ ಮೂಲಕ ನವೆಂಬರ್ 15ರಿಂದ ಡಿಸೆಂಬರ್ 20ರ ಅವಧಿಯಲ್ಲಿ ನೆರೆ ರಾಜ್ಯವು 9.7 ಟಿಎಂಸಿ ಅಡಿ ನೀರನ್ನು ಬಳಸಿಕೊಂಡಿದೆ. ನ್ಯಾಯಮಂಡಳಿಯ ತೀರ್ಪಿನ ಪ್ರಕಾರ, ಈ ನೀರನ್ನು ಖಾರಿಫ್ ಭತ್ತ ಬೆಳೆಯುವ 1.96 ಲಕ್ಷ ಎಕರೆಗಳಿಗೆ ಬಳಸಿಕೊಳ್ಳಬೇಕು. ವಾಡಿಕೆ ಪ್ರಕಾರ, ಈ ಬೆಳೆಯ ಕೊಯ್ಲು ನವೆಂಬರ್ 15ರೊಳಗೆ ಮುಗಿಯಬೇಕು. ಆದರೆ, ಆ ಬಳಿಕವೂ 1.94 ಲಕ್ಷ ಎಕರೆಗೆ ನೀರು ಉಣಿಸಲು ಕಾವೇರಿ ನೀರನ್ನು ನಿರಂತರವಾಗಿ ಹರಿಸಲಾಗಿದೆ' ಎಂದು ಆರೋಪಿಸಿದರು.

'ಕಾವೇರಿ ನದಿಯ ನೀರನ್ನು ಬಳಸುವ ಮಹದೇಶ್ವರ ನೀರು ಸರಬರಾಜು ಯೋಜನೆಯ ವಿವರಗಳನ್ನು ಕರ್ನಾಟಕ ಸರ್ಕಾರ ಒದಗಿಸಿಲ್ಲ. ಜತೆಗೆ, ಕಾಲುವೆಗಳಿಂದ ನೀರಾವರಿ ನೀರು ಬಳಕೆ ಮಾಡುವ ಏತ ನೀರಾವರಿ ಯೋಜನೆಗಳು ಹಾಗೂ ಸಣ್ಣ ನೀರಾವರಿ ಕೆರೆಗಳ ಮಾಹಿತಿಯನ್ನೂ ನೀಡಿಲ್ಲ' ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು. ವಾಡಿಕೆಯಷ್ಟು ಮಳೆ ಸುರಿಯದ ವರ್ಷಗಳಲ್ಲಿ ಕರ್ನಾಟಕವು ತಮಿಳುನಾಡಿಗೆ ನಿಗದಿತ ಪ್ರಮಾಣದ ನೀರು ಹರಿಸುತ್ತಿಲ್ಲ. ಈ ಬಗ್ಗೆ ಹಿಂದಿನ ಸಭೆಗಳಲ್ಲೂ ಗಮನ ಸೆಳೆಯಲಾಗಿತ್ತು. ಸಂಕಷ್ಟ ಸೂತ್ರ ರೂಪಿಸುವಂತೆ ಹತ್ತು ಹಲವು ಸಲ ಮನವಿ ಅರ್ಪಿಸಲಾಗಿತ್ತು. ಆದರೂ, ಪ್ರಾಧಿಕಾರವು ಈ ಬಗ್ಗೆ ಕ್ರಮ ಕೈಗೊಂಡಿಲ್ಲ. ಸಂಕಷ್ಟ ಸೂತ್ರ ರೂಪಿಸಲು ಶೀಘ್ರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಅವರು ಹಕ್ಕೊತ್ತಾಯ ಮಂಡಿಸಿದರು.

ತಮಿಳುನಾಡಿನಿಂದಲೂ ಉಲ್ಲಂಘನೆ: ರಾಜ್ಯ ಆರೋಪ

ಕಾವೇರಿ ನ್ಯಾಯಮಂಡಳಿ ತೀರ್ಪು ಉಲ್ಲಂಘಿಸಿ ತಮಿಳುನಾಡು ಸರ್ಕಾರವು ಮೆಟ್ಟೂರು ಜಲಾಶಯದಿಂದ ಕೃಷಿಗೆ ಅಧಿಕ ಪ್ರಮಾಣದಲ್ಲಿ ನೀರು ಹರಿಸುತ್ತಿದೆ ಎಂದು ಕರ್ನಾಟಕ ಆರೋಪಿಸಿದೆ.

'ನ್ಯಾಯಮಂಡಳಿ ತೀರ್ಪಿನ ಪ್ರಕಾರ, 1.85 ಲಕ್ಷ ಎಕರೆಯಲ್ಲಿ ಥಳಾಡಿ ಬೆಳೆ ಬೆಳೆಯಲಾಗುತ್ತಿದೆ. ಈ ವರ್ಷ ಡಿಸೆಂಬರ್‌ನಿಂದ ಇಲ್ಲಿಯವರೆಗೆ ಮೆಟ್ಟೂರು ಜಲಾಶಯದಿಂದ ಪ್ರತಿದಿನ 2,500 ಕ್ಯೂಸೆಕ್‌ನಿಂದ 14,000 ಕ್ಯೂಸೆಕ್ ವರೆಗೆ ನೀರು ಹರಿಸಲಾಗುತ್ತಿದೆ. ಕಳೆದ ವರ್ಷ ಈ ಅವಧಿಯಲ್ಲಿ 500 ಕ್ಯೂಸೆಕ್‌ನಿಂದ 1,000 ಕ್ಯೂಸೆಕ್ ನೀರು ಹರಿಸಲಾಗಿತ್ತು. ಇದರಿಂದಾಗಿ, ಜಲಾಶಯದಲ್ಲಿ ನೀರಿನ ಸಂಗ್ರಹ ಗಣನೀಯವಾಗಿ ಕಡಿಮೆಯಾಗಿದೆ. ಮುಂದಿನ ಜಲ ವರ್ಷಕ್ಕೆ ನೀರು ಉಳಿಯುವುದಿಲ್ಲ. ಇದು ನ್ಯಾಯಮಂಡಳಿಯ ತೀರ್ಪಿನ ಉಲ್ಲಂಘನೆ' ಎಂದು ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ದೂರಿದರು.

ಚರ್ಚೆಗೆ ಬಾರದ ಮೇಕೆದಾಟು

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣದ ವಿಷಯವು ಸಭೆಯಲ್ಲಿ ಚರ್ಚೆಗೆ ಬರಲಿಲ್ಲ.

ಈ ಯೋಜನೆಯ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯಬೇಕಿದೆ.

ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣ

ಭೈರತಿ ಬಸವರಾಜಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಭೈರತಿ ಬಸವರಾಜ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ನಿಯಮಿತ (ರೆಗ್ಯುಲರ್) ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಭೈರತಿ ಬಸವರಾಜ ಅವರು ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಗುರುವಾರ ಪುರಸ್ಕರಿಸಿ ಆದೇಶಿಸಿದರು.

ಷರತ್ತುಗಳು: 'ಅರ್ಜಿದಾರರು ₹2 ಲಕ್ಷ ಮೊತ್ತದ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು. ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ಅವರ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಕೂಡದು. ಪ್ರಕರಣದ ತನಿಖಾಧಿಕಾರಿ ಕರೆದಾಗಲೆಲ್ಲಾ ಹೋಗಬೇಕು ಮತ್ತು ತನಿಖೆಗೆ ಸಹಕರಿಸಬೇಕು. ಅನಗತ್ಯ ಮುದ್ದತುಗಳನ್ನು ಬೇಡದೆ ವಿಚಾರಣಾ ಕೋರ್ಟ್‌ಗೆ ನಿಯಮಿತವಾಗಿ ಹಾಜರಾಗಬೇಕು. ಯಾವುದೇ ಎರಡನೇ ಭಾನುವಾರದಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆ ಒಳಗೆ ತನಿಖಾಧಿಕಾರಿ ಮುಂದೆ ಮೂರು ತಿಂಗಳು ಹಾಜರಾಗಬೇಕು. ನ್ಯಾಯಾಲಯದಿಂದ ಅಗತ್ಯ ಅನುಮತಿ ಪಡೆಯದೆ ವಿದೇಶಕ್ಕೆ ತೆರಳುವಂತಿಲ್ಲ ಎಂಬ ಪ್ರಮಾಣಪತ್ರವನ್ನು ಕಾಯಂ ವಿಳಾಸ, ಮೊಬೈಲ್ ನಂಬರ್, ಇ-ಮೇಲ್ ವಿಳಾಸ, ಪಾಸ್‌ಪೋರ್ಟ್ ನಂಬರ್ ಇರುವ ಮುಚ್ಚಳಿಕೆ ರೂಪದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ನ್ಯಾಯಾಲಯ ಷರತ್ತು ವಿಧಿಸಿದೆ.

ಪ್ರಕರಣವೇನು?: ಮಿನಿ ಅವೆನ್ಯು ರಸ್ತೆಯಲ್ಲಿರುವ ಸೆಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು ರಾತ್ರಿ 8ರಿಂದ 9 ಗಂಟೆ ನಡುವೆ ದುಷ್ಕರ್ಮಿಗಳು ಕೊಚ್ಚಿ ಕೊಲೆ ಮಾಡಿತ್ತು. ಈ ಸಂಬಂಧ ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣದಲ್ಲಿ ಭೈರತಿ ಬಸವರಾಜ ಐದನೇ ಆರೋಪಿಯಾಗಿದ್ದಾರೆ. ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ-2023ರ ಕಲಂ 103 ಮತ್ತು 190ರ ಅಡಿಯಲ್ಲಿ ದೂರು ದಾಖಲು ಮಾಡಿಕೊಳ್ಳಲಾಗಿದೆ. ಪ್ರಕರಣವನ್ನು ಸಿಐಡಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅತ್ಯಾಚಾರ: ಮಲತಂದೆ ಜಾಮೀನು ತಿರಸ್ಕೃತ

ಬೆಂಗಳೂರು: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಆಕೆಯ ಗರ್ಭಧರಿಸಲು ಕಾರಣವಾದ ಮಲತಂದೆಗೆ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ 38 ವರ್ಷದ ಪುರುಷ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ಪ್ರಕರಣ ವಿವೇಕಯುತ ಸಮಾಜದ ನೈತಿಕತೆಗೆ ವಿರುದ್ಧವಾಗಿದೆ' ಎಂದು ಆತಂಕ ವ್ಯಕ್ತಪಡಿಸಿದೆ.

'ಇಂಥ ಪ್ರಕರಣಗಳು ಸಮಾಜಕ್ಕೆ ಹಾನಿಕಾರಕ. ಸಮಾಜವನ್ನು ರಕ್ಷಿಸುವುದು, ಹಿಂದೂ ಸಂಪ್ರದಾಯದ ಅಡಿಯಲ್ಲಿನ ಉತ್ತಮ ಪದ್ಧತಿ ಉಳಿಸಿಕೊಳ್ಳುವ ಹಿನ್ನೆಲೆಯಲ್ಲಿ ಅರ್ಜಿ ವಜಾಗೊಳಿಸುವುದು ಸೂಕ್ತ' ಎಂದು ನ್ಯಾಯಪೀಠ ಹೇಳಿದೆ.

'ಕೆನೆಪದರ: ಆದಾಯವಷ್ಟೇ ಆಧಾರವಲ್ಲ'

ಒಂದನೇ ಪುಟದಿಂದ...

ಇದನ್ನು ಪ್ರಶ್ನಿಸಿ ಆಕಾಂಕ್ಷಿಗಳು ದೆಹಲಿ, ಮದ್ರಾಸ್ ಮತ್ತು ಕೇರಳ ಹೈಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಸಿದ್ದರು. ಈ ನ್ಯಾಯಾಲಯಗಳಲ್ಲಿ ಆಕಾಂಕ್ಷಿಗಳ ಪರವಾಗಿ ತೀರ್ಪು ಬಂದಿತ್ತು. ಈ ತೀರ್ಪುಗಳನ್ನು ಪ್ರಶ್ನಿಸಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಆರ್. ಮಹಾದೇವನ್ ಅವರ ಪೀಠವು ಈ ಅರ್ಜಿಗಳ ವಿಚಾರಣೆ ನಡೆಸಿ, ಕೇಂದ್ರದ ಮೇಲ್ಮನವಿಯನ್ನು ವಜಾ ಮಾಡಿ ಮಾರ್ಚ್ 11ರಂದು ತೀರ್ಪು ನೀಡಿದೆ.

'1993ರ ಸೆಪ್ಟೆಂಬರ್ ಮತ್ತು ತರುವಾತ ಸಚಿವಾಲಯದ ಟಿಪ್ಪಣಿಯನ್ನು (ಒಬಿಸಿಗಳಿಗೆ ಮೀಸಲಾತಿ ನೀಡುವ ಬಗ್ಗೆ ಇದ್ದ ಟಿಪ್ಪಣಿ) ಓದಿದರೂ 2004ರ ಅಕ್ಟೋಬರ್ 14ರಂದು ಇದೇ ಸಚಿವಾಲಯ ನೀಡಿದ ಸ್ಪಷ್ಟೀಕರಣ ಪತ್ರವನ್ನು ಓದಿದರೂ ಸಂಬಳದಿಂದ ಬರುವ ಆದಾಯವನ್ನು ಮಾತ್ರವೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಯೊಬ್ಬರನ್ನು ಕೆನೆಪದರದಲ್ಲಿ ಇರಿಸುವುದು ಅಥವಾ ಹೊರಗಿಡುವುದನ್ನು ನಿರ್ಧರಿಸಲು ಸಾಧ್ಯವಿಲ್ಲ' ಎಂದು ಪೀಠ ಸ್ಪಷ್ಟ ಮಾತುಗಳಲ್ಲಿ ಹೇಳಿತು.

'ಅಭ್ಯರ್ಥಿಯ ಪೋಷಕರ ಸ್ಥಾನಮಾನಗಳು ಮತ್ತು ಅವರು ಯಾವ ಹುದ್ದೆಯಲ್ಲಿದ್ದಾರೆ ಎನ್ನುವುದೂ ಮುಖ್ಯವಾಗುತ್ತವೆ. ಕೆನೆಪದರವನ್ನು ಆದಾಯದ ಆಧಾರದಲ್ಲಿ ಅಲ್ಲ, ಸ್ಥಾನಮಾನದ ಆಧಾರದಲ್ಲಿ ನಿರ್ಧರಿಸಬೇಕಾಗುತ್ತದೆ ಎಂಬುದಾಗಿ ಸಚಿವಾಲಯದ ಟಿಪ್ಪಣಿಯ ಒಂದನೇ ಮತ್ತು ಮೂರನೇ ವಿಭಾಗದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಪೀಠ ಹೇಳಿದ್ದು...

- ಸರ್ಕಾರಿ ಉದ್ಯೋಗದಲ್ಲಿ ಸಿಗುವ ಬಡ್ತಿ ಅದರಿಂದ ಏರಿಕೆಯಾಗುವ ಸಂಬಳವು ಜೀವನಮಟ್ಟವನ್ನು ಸುಧಾರಿಸುತ್ತದೆಯಷ್ಟೆ. ಮಂಡಲ್ ಆಯೋಗದ ವರದಿಗೆ ಸಂಬಂಧಿಸಿದ ಇಂದ್ರಾ ಸಾಹ್ನಿ ಪ್ರಕರಣದ ತೀರ್ಪಿನ ಸಾಂವಿಧಾನಿಕವಾದ ಉದ್ದೇಶವನ್ನೇ ಬುಡಮೇಲು ಮಾಡುವಂತೆ ಸಂಬಳದಿಂದ ಬರುವ ಆದಾಯವೊಂದನ್ನೇ ಕೆನೆಪದರಕ್ಕೆ ಆಧಾರವಾಗಿ ಇಟ್ಟುಕೊಳ್ಳಬಾರದು
- ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿ ಇರುವವರನ್ನು ಮತ್ತು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಉದ್ಯೋಗದಲ್ಲಿ ಇರುವವರನ್ನು ಸರ್ಕಾರಿ ನೌಕರರಿಗೆ ಹೋಲಿಸಿ ನೋಡುವುದು ತಾರತಮ್ಯವಾಗುತ್ತದೆ. ಈ ಮೂಲಕ ಅವರ ಮಕ್ಕಳಿಗೆ ಮೀಸಲಾತಿ ನೀಡಬೇಕೆ ಬೇಡವೇ ಎನ್ನುವುದನ್ನು ನಿರ್ಧರಿಸುವುದು ನ್ಯಾಯಯುತವಲ್ಲ
- ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿ ಸೌಲಭ್ಯವನ್ನು ಇದೇ ಸಮುದಾಯದ ಸಾಮಾಜಿಕವಾಗಿ ಮೇಲ್ಸ್ತರದಲ್ಲಿದ್ದವರು ಬಳಸಿಕೊಳ್ಳಬಾರದು ಎನ್ನುವ ಉದ್ದೇಶದಿಂದ ಕೆನೆಪದರವನ್ನು ಸೃಷ್ಟಿಸಲಾಗಿದೆ. ಒಂದೇ ಸಮುದಾಯದ ಸಮಾನ ಸ್ಥಾನಮಾನಗಳನ್ನು ಹೊಂದಿದ ಜನರ ಮಧ್ಯೆ ಕೃತಕವಾದ ತಾರತಮ್ಯವನ್ನು ಸೃಷ್ಟಿಸಲು ಕೆನೆಪದರವನ್ನು ಸೃಷ್ಟಿಸಲಾಗಿಲ್ಲ

ಜಾತಿಯು, ಸಮುದಾಯಗಳು ಎದುರಿಸಿದ ಐತಿಹಾಸಿಕ ಅಸಮಾನತೆಗಳ ಸೂಚಕವಾಗಿರಬಹುದು. ಆದರೆ, ಸಮುದಾಯಗಳ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಏಕಮಾತ್ರ ಅಂಶವಲ್ಲ. ಹಿಂದುಳಿದ ವರ್ಗವೆಂದರೆ ಕೆನೆಪದರದಿಂದ ಹೊರಗಿಡುವುದು ಎನ್ನುವುದು ಕೇವಲ ನೀತಿಯ ವಿಚಾರವಲ್ಲ. ನಿಜ ಅರ್ಥದಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯಗಳು ತಲುಪಲು ಬೇಕಾದ ಸಾಂವಿಧಾನಿಕ ಅಗತ್ಯ

ಸುಪ್ರೀಂ ಕೋರ್ಟ್ ಪೀಠ

ಸುಲಿಗೆ ಪ್ರಕರಣ: ಶ್ರೀನಾಥ್ ಜೋಶಿಗೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ ದಂಧೆಯಲ್ಲಿ ಭಾಗಿಯಾದ ಪ್ರಕರಣದಲ್ಲಿ ಆರೋಪಿಯಾಗಿರುವ ಐಪಿಎಸ್ ಅಧಿಕಾರಿ ಶ್ರೀನಾಥ್ ಎಂ.ಜೋಶಿ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ನೋಟಿಸ್ ನೀಡಿದೆ.

ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಶ್ರೀನಾಥ್ ಎಂ.ಜೋಶಿ ಅವರ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕರ್ನಾಟಕ ಲೋಕಾಯುಕ್ತ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಕೆ.ವಿನೋದ್ ಚಂದ್ರನ್ ಪೀಠವು, ಮೇ 4ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಪ್ರತಿವಾದಿಗೆ ನಿರ್ದೇಶಿಸಿದೆ.

ಲೋಕಾಯುಕ್ತ ಪರ ವಕೀಲರು, 'ಈ ಪ್ರಕರಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಯಿಂದ ವಜಾಗೊಂಡಿರುವ ಮೊದಲ ಆರೋಪಿ ನಿಂಗಪ್ಪ ಸಾವಂತ್ ಜೊತೆ ಶ್ರೀನಾಥ್ ಜೋಶಿ ನಿರಂತರ ಸಂಪರ್ಕದಲ್ಲಿದ್ದುದು ಪತ್ತೆಯಾಗಿದೆ. ಇದಕ್ಕೆ ಪೂರಕವಾಗಿ ಸಾಕ್ಷ್ಯಗಳು ಲಭ್ಯವಾಗಿವೆ. ಇಬ್ಬರೂ ಆರೋಪಿಗಳ ವಿರುದ್ಧದ ಆಪಾದನೆಗಳು ತುಂಬಾ ಗಂಭೀರವಾಗಿವೆ. ಅವರನ್ನು ಹೆಚ್ಚಿನ ವಿಚಾರಣೆ ನಡೆಸಬೇಕಿದೆ' ಎಂದರು.

ಶಾಸಕ ಚಂದ್ರು ಲಮಾಣಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರನಿಂದ ₹5 ಲಕ್ಷ ಲಂಚ ಪಡೆಯುವಾಗ ಸಿಕ್ಕಿಬಿದ್ದು ನ್ಯಾಯಾಂಗ ಬಂಧನದಲ್ಲಿದ್ದ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಚಂದ್ರು ಲಮಾಣಿ ಸೇರಿದಂತೆ ಮೂವರು ಆರೋಪಿಗಳಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಚಂದ್ರು ಲಮಾಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ.

'ಅರ್ಜಿದಾರರು ₹2 ಲಕ್ಷ ಮೊತ್ತದ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು. ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ಅವರ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಕೂಡದು' ಎಂಬುದೂ ಸೇರಿದಂತೆ ಸಾಂಪ್ರದಾಯಿಕ ಷರತ್ತುಗಳನ್ನು ವಿಧಿಸಲಾಗಿದೆ.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,
ಲೋ.ಇ, ಉಡುಪಿ ವಿಭಾಗ – ಉಡುಪಿ – 576101.
ದೂರವಾಣಿ & ಫ್ಯಾಕ್ಸ್: (0820) 2531802

ನಂ :ಪಿಡಬ್ಲ್ಯೂಡಿ:ಯುಡಿಎನ್: ಎನ್‌ಐಟಿ: 52:2025–26: ಎಇ–2 ದಿ: 12.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ರೂ. 25.16 ಲಕ್ಷದಿಂದ 238.07 ಲಕ್ಷದ ವರೆಗಿನ ಮೊತ್ತದ CMIDP & SDMF ಯೋಜನೆಯಡಿಯ ಒಟ್ಟು 13 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್' "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.03.2026 ರ ಸಂಜೆ 5.30 ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ವಾಸಾಇ/ಸನಿಉ/ಕೆಎಸ್‌ಎಂಸಿಎ/778/ 25–26 ದಿ: 12.03.2026
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ

ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
E-mail ID: dsdkannada@gmail.com

ಸಂಖ್ಯೆ: ವೆನ್‌ಲಾಕ್/ಜಿಎನ್‌ಎಲ್/ವೇಸ್ಟ್‌ಮ್ಯಾನೇಜ್‌ಮೆಂಟ್/1/25–26 ದಿನಾಂಕ: 10.03.2026

ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ಬಯೋಮೆಡಿಕಲ್ ವೇಸ್ಟ್‌ನ್ನು ವಿಲೇವಾರಿ ಮಾಡುವ ಬಗ್ಗೆ ಕೆ.ಟಿ.ಪಿ.ಪಿ 1999–2000 ನಿಯಮದಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 26.03.2026 (ಅಪರಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್: www.kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು ಮತು ಅಧೀಕ್ಷಕರು, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು.
DIPR/DK/KSMCA/1739/25-26 dt. 12.03.2026

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.49/ಪಂ.ರಾ.ಇಂ/ವಿ.ಹಾ/ಪಿ.ಬಿ–1/ಟೆಂಡರ/ 2025–26/7408 ದಿನಾಂಕ : 11–03–2026

ಇ–ಟೆಂಡರ್ ಪ್ರಕಟಣೆ

ದಿನಾಂಕ : 11–03–2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 23556/Call-3, 21571/Call-2, ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **20–03–2026** (ಎರಡನೇ & ಮೂರನೇ ಕರೆ) (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnatak.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/803/2025–26

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
ಇ–ಮೇಲ್: mdktbs.tender@gmail.com
ವೆಬೆಸೈಟ್: https://textbooks.karnataka.gov.in

ಸಂಖ್ಯೆ: A7/98529/KTBS/ADM/TBTR/9/2025-26/ಭಾಗ–1/KTBS/25-26/ IND0018 ದಿನಾಂಕ: 12.03.2026

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2026–27ನೇ ಸಾಲಿಗೆ ಪಠ್ಯಪುಸ್ತಕಗಳು, ಶಾಲಾ ದಿನಚರಿ, ನೀತಿ ಶಿಕ್ಷಣ ಹಾಗೂ ಅಭ್ಯಾಸ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಮರು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 07 ದಿನಗಳ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಪ್ಯಾಕೇಜುವಾರು ಪಾವತಿ ಮಾಡಬೇಕಾಗಿರುವ ಇ.ಎಂ.ಡಿ. ಮೊತ್ತವನ್ನು ಟೆಂಡರ್ ದಸ್ತಾವೇಜಿನ Section-10 ರಂತೆ ಪಾವತಿ ಮಾಡುವುದು ಹಾಗೂ ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಮರು ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 23.03.2026 ರಂದು ಸಂಜೆ 5:30** ರವರೆಗೂ ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ : https://www.kppp.karnataka.gov.in
ಸಹಾಯವಾಣಿ : +91–9240214000 / +91–9240214001
ಇಲಾಖೆಯ ವೆಬೆಸೈಟ್ : https://textbooks.karnataka.gov.in

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇ–ಪ್ರೋ/ 2025–26/5576 ದಿನಾಂಕ:09.03.2026

ಕೆ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ 1) ಸನ್ 2025–26 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿನ 12 ಕಾಮಗಾರಿಗಳು, 2) Census ಅನುದಾನದಲ್ಲಿನ 01 ಕಾಮಗಾರಿ ಹಾಗೂ 3) ಅಮೃತ 2.0 ಅನುದಾನದಲ್ಲಿನ 01 ಕಾಮಗಾರಿ ಟೆಂಡರ್ ಕೆ.ಪಿ.ಡಬ್ಲೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ಮಾತ್ರ ನಮೂದಿಸಲಾಗುವುದು. 2) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **18.03.2026**

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/791/ಕೆಎಸ್‌ಎಂಸಿಎ/2025–26

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ಎಂಪಿ&ಸಿಎಸ್) ರವರ ಕಛೇರಿ,
ಹಳೆ ಮದ್ರಾಸ್ ರಸ್ತೆ, ಕೆ.ಆರ್.ಪುರಂ, ಬೆಂಗಳೂರು–560036.

ಸಂ: ಬೆಂಪೂನಪಾ/ಪಿಆರ್/ಕಾಅ(ಎಂಪಿ&ಸಿಎಸ್)/12/2025–26 ದಿನಾಂಕ: 12.03.2026

ಅಲ್ಪಾವಧಿಯ ಟೆಂಡರ್‌ಗೆ ಆಹ್ವಾನ
(ಜಿಒಕೆ ಕೆಪಿಪಿಪಿ ಮೂಲಕ)

ಕಾರ್ಯಪಾಲಕ ಅಭಿಯಂತರರು, (ಎಂ.ಪಿ & ಸಿ.ಎಸ್), ಬಿಇಸಿಸಿ, ಬೆಂಗಳೂರು–36 ಇವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಥವಾ ಜಿ ಬಿ ಎ ಅಥವಾ ಬಿ ಇ ಸಿ ಸಿ, ಕೆಪಿಡಬ್ಲೂಡಿ / ಸಿಪಿಡಬ್ಲೂಡಿ/ ಬಿ ಡಬ್ಲ್ಯೂ ಎಸ್ ಎಸ್ ಬಿ /ರೈಲ್ವೇಸ್/ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಸೇವೆಗಳಿಗೆ ಟೆಂಡರ್ ಆಹ್ವಾನಿಸಿದೆ. ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್ ಸೂಚನೆಗಳಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್‌ದಾರರಿಗೆ ಸೂಚಿಸಲಾಗುತ್ತದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್) ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಬಹುದು. ಇತರೆ ವಿವರಗಳನ್ನು ಆರ್ ಎಫ್ ಪಿ ಡಾಕ್ಯುಮೆಂಟ್‌ನಲ್ಲಿ ವೀಕ್ಷಿಸಬಹುದು. 2. ಟೆಂಡರ್‌ಗಳನ್ನು 25.03.2026 ರಂದು 4:00 ಗಂಟೆಯೊಳಗೆ ಕೆಪಿಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಟೆಂಡರ್‌ಗಳನ್ನು ತೆರೆಯುವುದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳ ಪ್ರಕಾರ ಇರುತ್ತದೆ. 3. ಇತರೆ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)/ಇಎಂಡಿ (ರೂ. ಗಳಲ್ಲಿ)
1	ಬೆಂಗಳೂರು ಪೂರ್ವ ನಗರ ಪಾಲಿಕೆಗೆ ಕಂದಾಯ ಕೆಲಸಕ್ಕಾಗಿ ಕಂಪ್ಯೂಟರ್ ಆಪರೇಟರುಗಳು ಕಂ ಫೀಲ್ಡ್ ಆಪರೇಟರುಗಳು. (2ನೆ ಕರೆ). ಟೆಂಡರ್‌ಗಿಟ್ಟ ಮೊತ್ತ : ರೂ. 39.00 ಲಕ್ಷಗಳು, ಇಎಂಡಿ ಮೊತ್ತ ರೂ. 78,000/–, ಪೂರ್ಣಗೊಳ್ಳುವ ಅವಧಿ (ಮಳೆಗಾಲ ಸೇರಿದಂತೆ): 03 ತಿಂಗಳುಗಳು.
2	ಬೆಂಗಳೂರು ಪೂರ್ವ ನಗರ ಪಾಲಿಕೆ ಕಚೇರಿಗೆ ಭದ್ರತಾ ಸಿಬ್ಬಂದಿ ಮತ್ತು ಚಾಲಕರನ್ನು ಒದಗಿಸುವುದು. ಟೆಂಡರ್‌ಗಿಟ್ಟ ಮೊತ್ತ : ರೂ. 94.00 ಲಕ್ಷಗಳು, ಇಎಂಡಿ ಮೊತ್ತ ರೂ. 1,88,000/–, ಪೂರ್ಣಗೊಳ್ಳುವ ಅವಧಿ (ಮಳೆಗಾಲ ಸೇರಿದಂತೆ): 12 ತಿಂಗಳುಗಳು.

ಕಾರ್ಯಕ್ರಮಗಳ ವೇಳಾಪಟ್ಟಿ :
1. ಪ್ರೀ ಬಿಡ್ ಮೀಟಿಂಗ್‌ನ ದಿನಾಂಕ ಮತ್ತು ಸಮಯ : 18.03.2026 ಮಧ್ಯಾಹ್ನ 3.00 ಗಂಟೆಗೆ. ಸ್ಥಳ : ಕಾರ್ಯನಿರ್ವಾಹಕ ಎಂಜಿನಿಯರ್ (ಎಂಪಿ & ಸಿಎಸ್) ಕಚೇರಿ, ಕೆ.ಆರ್.ಪುರಂ, ಬೆಂಗಳೂರು–560036.
2. ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ದಿನಾಂಕ : 16.03.2026 ರಿಂದ
3. ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ. 25.03.2026 ಸಂಜೆ 4.00 ಗಂಟೆಗೆ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 26.03.2026 ಸಂಜೆ 04.30 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು, (ಎಂ.ಪಿ & ಸಿ.ಎಸ್)

ಫಾರಂ–ಎ
ಸಾರ್ವಜನಿಕ ಪ್ರಕಟಣೆ
[ಭಾರತೀಯ ಪಾಪರುಗಿರಿ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

ವಾಯ್ ಜೀನ್ಸ್ ರಿಟೇಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಎಲ್ಲ ಕ್ರೆಡಿಟಾರುಗಳ (ಸಾಲನೀಡಿದವರ) ಗಮನಕ್ಕೆ

ಸಂಬಂಧಪಟ್ಟ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	ವಾಯ್ ಜೀನ್ಸ್ ರಿಟೇಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
2.	ಸಾಲಗಾರ ಸಂಸ್ಥೆಯು ರಚನೆಯಾದ ದಿನಾಂಕ	22ನೇ ಜುಲೈ 2011
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯು ರಚನೆಯಾಗಿದೆ/ನೋಂದಾವಣಿಯಾಗಿದೆ	ROC- ಕರ್ನಾಟಕ–ಕಂಪನಿ ಖಾಯ್ದೆ 1956ರ ಅಡಿಯಲ್ಲಿ ಸಂಯೋಜಿಸಲಾಗಿದೆ
4.	ಕಾರ್ಪೊರೇಟ್ ಗುರುತಿನ ಸಂಖ್ಯೆ	U52321KA2011PTC059681
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ	ನೋಂದಾಯಿತ ವಿಳಾಸ: ಸಂಖ್ಯೆ 5ಎಸಿ 722 ಮತ್ತು 724, 3ನೇ ಮಹಡಿ HRBR ಲೇಔಟ್, 1ನೇ ಬ್ಲಾಕ್, ಬೆಂಗಳೂರು–560043
6.	ಸಾಲಗಾರ ಸಂಸ್ಥೆಯ ದಿವಾಳಿತನ ನಿರ್ಣಯ ಪ್ರಕ್ರಿಯೆ ಆರಂಭವಾದ ದಿನಾಂಕ	09ನೇ ಮಾರ್ಚ್ 2026 (ಆದೇಶ ಪ್ರತಿಯನ್ನು ಮಾರ್ಚ್ 11, 2026 ರಂದು ಸ್ವೀಕರಿಸಲಾಗಿದೆ)
7.	ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	5ನೇ ಸೆಪ್ಟೆಂಬರ್ 2026
8.	ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ (IRP)	ರಂಜನಾ ಸಿಂಗ್ IBBI/IPA-002/IP-N01181/2021-2022/13968
9.	ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್	ರಂಜನಾ ಸಿಂಗ್ ಎರಡನೇ ಮಹಡಿ, ಮನೆ ಸಂಖ್ಯೆ 53/7, ಆಂಜನೇಯ ಟೆಂಪಲ್ ಸ್ಟ್ರೀಟ್ ಹತ್ತಿರ, ಯಡಿಯೂರು, 6ನೇ ಬ್ಲಾಕ್, ಜಯನಗರ, ಬೆಂಗಳೂರು–560070 ಇಮೇಲ್: ranjana@beleyur.com
10.	ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್	ರಂಜನಾ ಸಿಂಗ್ ನಂ. 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560011. ದೂರವಾಣಿ: +91 80 26540193 ಇಮೇಲ್: CIRP-voijeans@beleyur.in
11.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	27ನೇ ಮಾರ್ಚ್ 2026
12.	ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು	ಅನ್ವಯವಾಗುವುದಿಲ್ಲ
13.	ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು	ಅನ್ವಯವಾಗುವುದಿಲ್ಲ
14.	(ಎ) ಸಂಬಂಧಪಟ್ಟ ಫಾರಂಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ:	(ಎ) Web linkhttps://www.ibbi.gov.in/home/downloads (ಬಿ) ಅನ್ವಯವಾಗುವುದಿಲ್ಲ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ (NCLT) ಬೆಂಗಳೂರು 9ನೇ ಮಾರ್ಚ್ 2026 ದಿನಾಂಕದ ತನ್ನ ಆದೇಶದ ಮೂಲಕ ವಾಯ್ ಜೀನ್ಸ್ ರಿಟೇಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವಿರುದ್ಧ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಈ ಕೆಳಗೆ ಸಹಿ ಮಾಡಿರುವವರನ್ನು ಮಧ್ಯಂತರ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. (ಆದೇಶ ಸ್ವೀಕರಿಸಿದ ದಿನಾಂಕ 11ನೇ ಮಾರ್ಚ್ 2026).

ವಾಯ್ ಜೀನ್ಸ್ ರಿಟೇಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಸಾಲನೀಡಿದವರು 27ನೇ ಮಾರ್ಚ್ 2026ರಂದು ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/–
ರಂಜನಾ ಸಿಂಗ್
ಮಧ್ಯಂತರ ಪರಿಹಾರ ವೃತ್ತಿಪರರು
(Interim Resolution Professional)
ಸಿಐಆರ್‌ಪಿ ಅಡಿಯಲ್ಲಿ
ವಾಯ್ ಜೀನ್ಸ್ ರಿಟೇಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್

ದಿನಾಂಕ: 12ನೇ ಮಾರ್ಚ್2026
ಸ್ಥಳ: ಬೆಂಗಳೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ,
ಕೆ.ಆರ್.ವೃತ್ತ, ಬೆಂಗಳೂರು

ಸಂ:ಕಾ.ಇಂ(ವಿ)/ಲೋ.ಇ/ವಿದ್ಯುತ್/2025–26/2924 ದಿನಾಂಕ: 12.03.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-2 & KW-3 STD ಷರತ್ತುಗೊಳಪಟ್ಟಂತೆ ಟೆಂಡರ್‌ನ ಮೊದಲನೇ ಕರೆಯನ್ನು ಇ–ಪ್ರೊಕ್ಯೂರ್‌ಮೆಂಟ್ KPPP ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ:

ಕ್ರ. ಸಂ.	ಕಾಮಗಾರಿಯ ಇಂಡೆಂಟ್‌ಗಳು	ಕಾಮಗಾರಿಯ ಮೊತ್ತ (ರೂ. ಲಕ್ಷಗಳಲ್ಲಿ)
1	PWD/2025-26/EL/WORK_INDENT22633	26.49
2	PWD/2025-26/EL/WORK_INDENT22634	81.36
3	PWD/2025-26/EL/WORK_INDENT22635	77.97

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ https://kppp.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 10.03.2026 ರಿಂದ 24.03.2026, 16.00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 24.03.2026 ರಂದೆ 16.00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **KPPP** ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿ)
ವಾಸಾಸಂಇ/ಉನಿ-ಸಿ.ಪಿ/6200/ಕೆಎಸ್‌ಎಂಸಿಎ/2025-26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027.
ದೂರವಾಣಿ : 080 – 22221321. ಇ–ಮೇಲ್ : trafficcom@ksrtc.org

ಸಂ: KSRTC/2025-26/SE2513 ದಿನಾಂಕ: 12.03.2026

ಟೆಂಡರ್ ಆಹ್ವಾನದ ಸೂಚನೆ

ರಾಜ್ಯದ ನಾಲ್ಕು ಸಾರಿಗೆ ನಿಗಮ / ಸಂಸ್ಥೆಗಳಲ್ಲಿ, ಸ್ಮಾರ್ಟ್ ಟಿಕೆಟಿಂಗ್ ವ್ಯವಸ್ಥೆಯ ಅನುಷ್ಠಾನಕ್ಕಾಗಿ ವಹಿವಾಟು ಸಲಹೆಗಾರರ ಆಯ್ಕೆಗಾಗಿ ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1. ನಿಗದಿತ ದಿನಾಂಕ ಮತ್ತು ಸಮಯ : ಎ) ಪ್ರೀ–ಬಿಡ್ ಅಹವಾಲುಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17–03–2026 17:00 ಗಂಟೆಗೆ, ಬಿ) ಪ್ರೀ–ಬಿಡ್ ಸಭೆ : 18–03–2026 11:00 ಗಂಟೆಗೆ, ಸಿ) ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 30–03–2026 17:00 ಗಂಟೆಗೆ. ಡಿ) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 02–04–2026 11:00 ಗಂಟೆಗೆ, ಇ) ಆರ್ಥಿಕ ಬಿಡ್ ತೆರೆಯುವ ದಿನಾಂಕ (ತಾತ್ಕಾಲಿಕ) : 09–04–2026 11:00 ಗಂಟೆಗೆ.
2. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಬಿಡ್‌ದಾರರ ಹಣಕಾಸು ಬಿಡ್‌ಗಳನ್ನು ಮಾತ್ರ ತೆರೆಯಲಾಗುತ್ತದೆ.
3. ಟೆಂಡರ್‌ನ ಆರ್.ಎಫ್.ಪಿ ದಾಖಲೆಗಳು, ಷರತ್ತು ಮತ್ತು ನಿಬಂಧನೆಗಳು, ಅರ್ಹತಾ ಮಾನದಂಡಗಳು ಮತ್ತು ಇತರ ತಾಂತ್ರಿಕ ವಿವರಗಳನ್ನು ಇ–ಪೋರ್ಟಲ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು : https://kppp.karnataka.gov.in
4. ನಿಗದಿತ ಇ.ಎಂ.ಡಿ ಮೊತ್ತ (ಇಎಂಡಿ) : ಬಿಡ್‌ದಾರರು ರೂ.25,00,000/– (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಇ–ಪೋರ್ಟಲ್‌ನಲ್ಲಿ ಇ–ಪಾವತಿ ಮೂಲಕ ಪಾವತಿಸಬೇಕು.
5. ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕ.ರಾ.ರ.ಸಾ ನಿಗಮವು ಕಾಯ್ದಿರಿಸಿದೆ.

ಸಹಿ/–
ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು
DIPR/CP/6208/Zen/2025-26

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com
ದಿನಾಂಕ: 12.03.2026

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2025-26/IND1124	ಆಸಿಡ್‌ಸ್ಲರಿ–ಶೇಕಡ 96 (Acid Slurry-96 Percent) ಖರೀದಿ	30 ಮೆಟ	11-03-2026	18-03-2026
2	KSDL/2025-26/IND1089	2026–27ನೇ ಸಾಲಿಗೆ ಸಮವಸ್ತ್ರದ ಸೂಟಿಂಗ್ ಮತ್ತು ಶರ್ಟಿಂಗ್‌ಗಳ ಖರೀದಿ	ಸರಕು	11-03-2026	23-03-2026

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಗ್ರಂಥ ವೈವಿಧ್ಯ ಮನುಷ್ಯನ ಅನುಭವಗಳ ಅಳತೆಗೋಲು.

-ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಅಬಕಾರಿ ವಲಯದ ಸುಧಾರಣೆ ಒಳ್ಳೆಯ ಉದ್ದೇಶದ ಸತ್ವ ಪರೀಕ್ಷೆ

ರಾಜ್ಯದಲ್ಲಿ ಹೊಸ ಅಬಕಾರಿ ನೀತಿ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಒಂದು ಸ್ವಾಗತಾರ್ಹ ಹೆಜ್ಜೆ. 'ಕರ್ನಾಟಕ ಅಬಕಾರಿ ಕಾಯ್ದೆ'ಯು 60 ವರ್ಷಗಳಷ್ಟು ಹಿಂದೆಯೇ ಜಾರಿಗೆ ಬಂದಿದ್ದು, ಈ ಕಾಯ್ದೆಯ ಹಲವು ನಿಬಂಧನೆಗಳು ಪ್ರಸಕ್ತ ಕಾಲಮಾನಕ್ಕೆ ಹೊಂದಿಕೆ ಆಗುವುದಿಲ್ಲ. ಹೀಗಾಗಿ ಮದ್ಯದ ಉದ್ಯಮದಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳಿಗೆ ಮತ್ತು ಮದ್ಯದ ಬಳಕೆಯ ಹೊಸ ಪ್ರವೃತ್ತಿಗಳಿಗೆ ತಕ್ಕಂತೆ ಕ್ರಮ ವಹಿಸಲು ಬೇಕಾದ ಕಾರ್ಯಕ್ಷಮತೆಯನ್ನು ಸದ್ಯದ ವ್ಯವಸ್ಥೆ ಹೊಂದಿಲ್ಲ. ಅಲ್ಲದೆ, ಅಬಕಾರಿ ಇಲಾಖೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ತುರ್ತು ಕೂಡ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ. ಪ್ರಸ್ತಾವಿತ ನೀತಿಯ ಅತ್ಯಂತ ಮಹತ್ವದ ಅಂಶವೆಂದರೆ, ಪ್ರತೀ ಲೀಟರ್ ಪಾನೀಯದಲ್ಲಿರುವ ಮದ್ಯದ ಪ್ರಮಾಣಕ್ಕೆ (ಎಬಿವಿ) ಅನುಗುಣವಾಗಿ ತೆರಿಗೆ ವಿಧಿಸುವ ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿ ಹೇಳಿರುವುದು. ಪಾನೀಯದಲ್ಲಿರುವ ಮದ್ಯದ ಅಂಶವನ್ನು ಆಧರಿಸಿದ ತೆರಿಗೆ ಪದ್ಧತಿಯು ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಮಾದರಿ ಎಂದೇ ಹೆಸರಾಗಿದೆ. ಮದ್ಯಪಾನದ ದುಷ್ಪರಿಣಾಮಗಳಿಂದ ಸಮಾಜಕ್ಕೆ ಆಗುವ ಹಾನಿಯನ್ನು ಗಮನದಲ್ಲಿ ಇರಿಸಿಕೊಂಡು ಅಬಕಾರಿ ಸುಂಕ ಸಂಗ್ರಹಿಸಲು ಅನುವು ಮಾಡಿಕೊಡುವ ಮಾದರಿ ಇದಾಗಿದೆ. ಈ ತೆರಿಗೆ ವ್ಯವಸ್ಥೆ ಜಾರಿಗೆ ಬಂದಿದ್ದೇ ಆದಲ್ಲಿ ಮುಂದಿನ ಕೆಲವು ವರ್ಷಗಳಲ್ಲಿ ಗ್ರಾಹಕರು ಬಳಸುವ ಮದ್ಯದ ಪ್ರಮಾಣ ಕಡಿಮೆಯಾಗುತ್ತಾ ಹೋಗಲಿದೆ ಎಂದು ಆಶಿಸಲಾಗಿದೆ. ದರ ನಿಗದಿ ಸ್ಲ್ಯಾಬ್‌ಗಳ ಸಂಖ್ಯೆಯನ್ನು 16ರಿಂದ ಎಂಟಕ್ಕೆ ಇಳಿಸುವ ಪ್ರಸ್ತಾವವನ್ನೂ ನೀತಿ ಹೊಂದಿರಲಿದೆ. ಇದು ಕೂಡ ಕಾಲದ ಅಗತ್ಯಗಳಿಗೆ ಸ್ಪಂದಿಸುವಂತಹ ಒಂದು ಯೋಚನೆ. ಹೊಸ ನೀತಿಯನ್ನು ಸರ್ಕಾರ ಅಳವಡಿಸಿಕೊಂಡಿದ್ದೇ ಆದಲ್ಲಿ, ಮದ್ಯದ ಬೆಲೆ ನಿರ್ಧಾರದಲ್ಲಿ ಸರ್ಕಾರದ ಪಾತ್ರ ಇರುವುದಿಲ್ಲ. ಬದಲಾಗಿ ಮಾರುಕಟ್ಟೆ ಪರಿಗಣನೆಯ ಆಧಾರದ ಮೇಲೆ ಮದ್ಯದ ಉತ್ಪನ್ನಗಳನ್ನು ಆಯಾ ಸ್ಲ್ಯಾಬ್‌ಗಳಲ್ಲಿ ಇರಿಸುವ ಅಧಿಕಾರವು ಉತ್ಪಾದಕರಿಗೇ ಲಭ್ಯವಾಗಲಿದೆ. ಸನ್ನದು ನೀಡುವ ಮತ್ತು ನವೀಕರಿಸುವ ಪ್ರಕ್ರಿಯೆಯಲ್ಲಿ ಇನ್ನಷ್ಟು ಸುಧಾರಣೆ ತರುವ ಪ್ರಸ್ತಾವವೂ ನೀತಿಯಲ್ಲಿ ಇರಲಿದೆ ಎಂದು ಘೋಷಿಸಲಾಗಿದೆ. ತುಂಬಾ ಚರ್ಚೆಗೊಳಗಾದ ಅಬಕಾರಿ ಇಲಾಖೆಯ ಸಿಬ್ಬಂದಿ ವರ್ಗಾವಣೆ ಪ್ರಕ್ರಿಯೆಯಲ್ಲಿ ಡಿಜಿಟಲ್ ಕೌನ್ಸೆಲಿಂಗ್ ವ್ಯವಸ್ಥೆ ಜಾರಿಗೆ ತಂದು ಪಾರದರ್ಶಕತೆ ಹೆಚ್ಚಿಸುವ ಇಂಗಿತವನ್ನೂ ವ್ಯಕ್ತಪಡಿಸಲಾಗಿದೆ. ಮದ್ಯ ತಯಾರಿಕಾ ವಲಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕಾಗಿ ಡಿಸ್ಟಿಲರಿಗಳು ಮತ್ತು ಬ್ರೂವರಿಗಳು ಪ್ರವಾಸಿಗರಿಗೆ ಮದ್ಯ ಸವಿಯಲು ಮತ್ತು ತಮ್ಮ ಆವರಣದಲ್ಲಿ ತಯಾರಿಸಿದ ಉತ್ಪನ್ನಗಳನ್ನು ಪ್ರವಾಸಿಗರಿಗೆ ಮಾರಾಟ ಮಾಡಲು ಅವಕಾಶ ನೀಡುವ ಪ್ರಸ್ತಾವವನ್ನೂ ಮಾಡಲಾಗಿದೆ.

ಪ್ರಸ್ತಾವಿತ ಅಬಕಾರಿ ನೀತಿಯಲ್ಲಿ ಉತ್ತಮ ಅಂಶಗಳು ಅಡಕವಾಗಿದ್ದರೂ, ಮದ್ಯ ತಯಾರಿಕಾ ವಲಯವನ್ನು ಪುನರ್ ರೂಪಿಸುವಾಗ ಜನರ ಆರೋಗ್ಯ ಕಾಳಜಿಯನ್ನು ನಿರ್ಲಕ್ಷಿಸಬಾರದು.

ವಾಣಿಜ್ಯ ತೆರಿಗೆಯನ್ನು ಹೊರತುಪಡಿಸಿದರೆ ರಾಜ್ಯದ ಬೊಕ್ಕಸಕ್ಕೆ ಸಿಂಹಪಾಲು (ಶೇ 20ರಷ್ಟು) ಬರುತ್ತಿರುವುದು ಅಬಕಾರಿ ಸುಂಕದಿಂದ. 2025–26ನೇ ಆರ್ಥಿಕ ವರ್ಷದಲ್ಲಿ ಫೆಬ್ರುವರಿ ಅಂತ್ಯದವರೆಗೆ ಈ ಬಾಬತ್ತಿನಿಂದ ₹36,492 ಕೋಟಿ ತೆರಿಗೆ ಸಂಗ್ರಹವಾಗಿದೆ. ಆದರೆ, ಮುಂದಿನ ಆರ್ಥಿಕ ವರ್ಷದಲ್ಲಿ ಸರ್ಕಾರ ಹಾಕಿಕೊಂಡ ಒಟ್ಟು ಸಂಗ್ರಹದ ಗುರಿ ₹45 ಸಾವಿರ ಕೋಟಿಯಾಗಿದೆ. ಅಬಕಾರಿ ಸುಂಕ ಸಂಗ್ರಹದಲ್ಲಿ ಹೆಚ್ಚಿನ ಗುರಿ ಹಾಕಿಕೊಳ್ಳುವಾಗ ಅದರಿಂದ ಮಾನವ ಸಂಪನ್ಮೂಲಕ್ಕೆ ಆಗುವ ನಷ್ಟವನ್ನು ಮರೆಯುವಂತಿಲ್ಲ. ಸರ್ಕಾರ ಹಾಕಿಕೊಂಡ ತೆರಿಗೆ ಸಂಗ್ರಹದ ಗುರಿ ತಲಪಲು ಅಧಿಕಾರಿಗಳ ಮೇಲೆ ಅಧಿಕ ಒತ್ತಡವನ್ನು ಹಾಕುತ್ತದೆ. ಮದ್ಯದ ಹೆಚ್ಚಿನ ಮಾರಾಟಕ್ಕೆ ಇದರಿಂದ ಪರೋಕ್ಷವಾಗಿ ಉತ್ತೇಜನವನ್ನೂ ನೀಡಿದಂತಾಗುತ್ತದೆ. ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳನ್ನು ಕಡಿಮೆ ಮಾಡುವ ಹೊಣೆಯನ್ನು ಆರೋಗ್ಯ ಇಲಾಖೆಯು ಹೊರಲಿದ್ದು, ಮದ್ಯ ವ್ಯಸನಮುಕ್ತಿ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಆ ಇಲಾಖೆಯೇ ನಿಭಾಯಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಇಂತಹ ಹೇಳಿಕೆಗಳು ಕಾಗದದಲ್ಲೇ ಉಳಿಯುವುದು ಹೆಚ್ಚು. ಹೊಸ ತೆರಿಗೆ ಪದ್ಧತಿಯು ಗ್ರಾಹಕರ ಮೇಲೆ ನಕಾರಾತ್ಮಕ ಪರಿಣಾಮವನ್ನು ಉಂಟು ಮಾಡುವ ಸಾಧ್ಯತೆಯೂ ಇಲ್ಲದಿಲ್ಲ. ಪ್ರಸ್ತಾವಿತ ಅಬಕಾರಿ ನೀತಿಯಲ್ಲಿ ಹಲವು ಉತ್ತಮ ಅಂಶಗಳು ಇರುವುದು ನಿಜವಾದರೂ ಅನುಷ್ಠಾನಕ್ಕೆ ತರುವಾಗ ಎಚ್ಚರಿಕೆಯಿಂದ ಮುಂದಡಿ ಇಡಬೇಕು. ಹತ್ತಾರು ಸಾವಿರ ಕೋಟಿ ರೂಪಾಯಿ ವರಮಾನ ತರುವ ವಲಯವನ್ನು ಪುನರ್ ರೂಪಿಸುವಾಗ, ತರುವ ಸುಧಾರಣೆಯು ಹಣಕಾಸಿನ ಗುರಿಗಳು, ಉದ್ಯಮದ ಬೆಳವಣಿಗೆ ಮತ್ತು ಸಾರ್ವಜನಿಕ ಆರೋಗ್ಯವನ್ನು ಸಮಾನ ಕಾಳಜಿಯೊಂದಿಗೆ ನೋಡುವಂತೆ ಇರಬೇಕು.

ಜಾಲತಾಣ

ಯುದ್ಧದಿಂದ ನೆಮ್ಮದಿ ಇಲ್ಲ

ಜಗತ್ತು ಸೃಷ್ಟಿಸಿಕೊಂಡಿರುವ ಈ ಸಂಕೀರ್ಣ ವ್ಯವಸ್ಥೆಯಲ್ಲಿ ಯಾವ ಮೂಲೆಯಲ್ಲೂ ಯುದ್ಧದ ಪರಿಣಾಮಗಳಿಂದ ತಪ್ಪಿಸಿಕೊಂಡು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಯುದ್ಧದಿಂದ ಪರಿಸರದ ಮೇಲೆ, ಸಕಲ ಜೀವರಾಶಿಗಳ ಮೇಲೆ ಆಗುತ್ತಿರುವ ಪರಿಣಾಮಗಳಂತೂ ಊಹಿಸಲಾಗದು.

ಗುರುಮೂರ್ತಿ ಜೋಗಿಬೈಲು, ಪರಿಸರವಾದಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ನರೇಂದ್ರ ಮೋದಿ ಸರ್ಕಾರದ ಅವಧಿಯಲ್ಲಿ ಅಡುಗೆ ಅನಿಲದ ಕೊರತೆಯಿಂದಾಗಿ ಇಡೀ ದೇಶವೇ ಕಂಗೆಟ್ಟಿದೆ. ಪ್ರಧಾನಿಯವರು ಡೊನಾಲ್ಡ್ ಟ್ರಂಪ್ ಎದುರು ಶರಣಾಗಿ ದೇಶವನ್ನು ಸಂಕಷ್ಟಕ್ಕೆ ತಳ್ಳಿದ್ದಾರೆ.

ಪ್ರಭಾ ಮಲ್ಲಿಕಾರ್ಜುನ್, ದಾವಣಗೆರೆ ಲೋಕಸಭಾ ಕ್ಷೇತ್ರದ ಸಂಸದೆ

25 ವರ್ಷಗಳ ಹಿಂದೆ

ಮಂಗಳವಾರ, 13-3-2001

• **ವಂದನಾ ನಿರ್ಣಯಕ್ಕೆ ರಾಜ್ಯಸಭೆಯಲ್ಲಿ ಸೋಲು**

ನವದೆಹಲಿ, ಮಾರ್ಚ್ 12 (ಪಿಟಿಐ, ಯುಎನ್‌ಐ)– ಬಾಲ್ಕೊ ಷೇರು ವಿಕ್ರಯ ಕುರಿತಂತೆ ರಾಷ್ಟ್ರಪತಿ ಭಾಷಣಕ್ಕೆ ತಿದ್ದುಪಡಿ ಮಾಡುವಂತೆ ವಿರೋಧ ಪಕ್ಷಗಳು ಮಂಡಿಸಿದ ನಿರ್ಣಯ 103 ಮತ್ತು 64 ಮತಗಳಿಂದ ರಾಜ್ಯಸಭೆಯಲ್ಲಿ ಇಂದು ಅಂಗೀಕಾರವಾದ್ದರಿಂದ ಕೇಂದ್ರ ಸರ್ಕಾರ ಮುಜುಗರ ಎದುರಿಸಬೇಕಾಯಿತು.

ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆ ಅರ್ಪಿಸುವ ನಿರ್ಣಯ ಕುರಿತಂತೆ ನಡೆದ ಚರ್ಚೆಗೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಉತ್ತರ ನೀಡಿದರು. ತಕ್ಷಣವೆ ಕಾಂಗ್ರೆಸ್ ಮುಖಂಡ ಪ್ರಣವ್ ಮುಖರ್ಜಿ ಅವರು ಬಾಲ್ಕೊ ಷೇರು ವಿಕ್ರಯ ಕುರಿತಂತೆ ರಾಷ್ಟ್ರಪತಿ ಅವರ ಭಾಷಣಕ್ಕೆ ತಿದ್ದುಪಡಿ ಮಂಡಿಸಿದರು.

• **ಸ್ಥಳೀಯ ಸಂಸ್ಥೆಗಳ ಚುನಾವಣೆ: ಕಾಲಾವಕಾಶ ಕೋರಿ ಹೈಕೋರ್ಟ್‌ಗೆ ಸರ್ಕಾರದ ಅರ್ಜಿ**

ಬೆಂಗಳೂರು, ಮಾರ್ಚ್ 12– ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಇನ್ನಷ್ಟು ಕಾಲಾವಕಾಶ ಕೇಳಿ ಕರ್ನಾಟಕ ಸರ್ಕಾರ ಸೋಮವಾರ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತು.

ಹೈಕೋರ್ಟ್ ಈಗಾಗಲೇ ಆದೇಶಿಸಿರುವಂತೆ ಏಪ್ರಿಲ್‌ನಲ್ಲಿಯೇ ಚುನಾವಣೆ ನಡೆಸಬೇಕೆಂದರೆ ಅದೇ ಅವಧಿಯಲ್ಲಿ ವಿವಿಧ ಪರೀಕ್ಷೆಗಳೂ ನಡೆಯುತ್ತಿರುವುದರಿಂದ ಶಾಲಾ ಕೊಠಡಿಗಳ ಮತ್ತು ಶಿಕ್ಷಕರ (ಚುನಾವಣೆ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸಲು) ಕೊರತೆ ಉದ್ಭವಿಸುತ್ತದೆ ಎಂದು ರಾಜ್ಯ ಸರ್ಕಾರ ತನ್ನ ಅರ್ಜಿಯಲ್ಲಿ ವಾದಿಸಿದೆ.

75 ವರ್ಷಗಳ ಹಿಂದೆ

ಮಂಗಳವಾರ, 13-3-1951

• **ಭಾರತದ ಆಮದು ನೀತಿ ಸಡಿಲಿಕೆ**

ನವದೆಹಲಿ, ಮಾರ್ಚ್ 12– ಭಾರತಕ್ಕೆ ಅಗತ್ಯ ವಸ್ತುಗಳನ್ನು ತರಿಸಲು ಸಾಧ್ಯವಾದಷ್ಟು ಗರಿಷ್ಠ ಪ್ರಮಾಣದಲ್ಲಿ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಭಾರತ ಸರ್ಕಾರದವರು 1951ನೇ ಸಾಲಿಗೆ ತಮ್ಮ ಆಮದು ನೀತಿಯನ್ನು ಸಡಿಲಿಸಿ ಈ ರಾತ್ರಿ ಪ್ರಕಟಣೆ ಹೊರಡಿಸಿದ್ದಾರೆ.

ಅಗತ್ಯವಾದ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯಲು ಕಷ್ಟವಾಗುತ್ತ ಬಂದದ್ದರಿಂದ ಈ ಸಡಿಲಿಸುವ ಕ್ರಮ ಕೈಗೊಳ್ಳಲಾಗಿದೆ.

ಯುದ್ಧ: ಅಡುಗೆಮನೆಗೂ ಲಗ್ಗೆ!



ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ಅಮೆರಿಕದ ದಾಳಿಕೋರತನವು ಸಂಪತ್ತು–ಸಂಪನ್ಮೂಲಗಳನ್ನು ದೋಚುವ ಪ್ರಯತ್ನ ಆಗಿರುವಂತೆಯೇ, ವಸಾಹತುಶಾಹಿ ವಿರೋಧಿಗಳನ್ನು ಯುದ್ಧದ ಮೂಲಕ ಹತ್ತಿಕ್ಕುವ ಪ್ರಯತ್ನವೂ ಆಗಿದೆ. ತೈಲ, ಅಡುಗೆ ಅನಿಲದ ಬಿಕ್ಕಟ್ಟನ್ನಷ್ಟೇ ಈಗಿನ ಯುದ್ಧ ಉಂಟು ಮಾಡುತ್ತಿಲ್ಲ, ಅದು ಆಹಾರ ಸುರಕ್ಷತೆಯ ಮೇಲೂ ಪರಿಣಾಮ ಬೀರುತ್ತಿದೆ.

"ಮಹಾನ್ ಪಾಶ್ಚಾತ್ಯ ಸಾಮ್ರಾಜ್ಯಗಳು ಅವನತಿ ಹೊಂದುತ್ತಿವೆ, ನಿರೀಶ್ವರವಾದಿ ಕಮ್ಯುನಿಸ್ಟ್ ಕ್ರಾಂತಿಗಳು ಮತ್ತು ವಸಾಹತುಶಾಹಿ ವಿರೋಧಿ ದಂಗೆಗಳು ಜಗತ್ತನ್ನು ಬದಲಿಸಿವೆ. 'ಕ್ರೈಸ್ತ ಪಾಶ್ಚಾತ್ಯ ಜಗತ್ತು' ಅಂತ್ಯಗೊಂಡಿದೆ. ಇಂತಹ ಹತಾಶೆಯ ದೃಷ್ಟಿಕೋನವನ್ನು ನಾವು ತಿರಸ್ಕರಿಸಬೇಕು. ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಅಮೆರಿಕವನ್ನು ಮತ್ತೆ ಮಹಾನ್ ದೇಶ'ವನ್ನಾಗಿ ಮಾಡಹೊರಟಿರುವುದರ ಹಿಂದಿನ ಉದ್ದೇಶವೇ 'ಪಾಶ್ಚಾತ್ಯ ಜಗತ್ತನ್ನು ಮತ್ತೆ ಮಹಾನ್ ಆಗಿಸುವುದು''. ಇವು ಇತ್ತೀಚಿನ ಮ್ಯೂನಿಚ್ ಭದ್ರತಾ ಸಮ್ಮೇಳನದಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಆಡಿರುವ ಮಾತುಗಳು.

ರೂಬಿಯೊ ಅವರ 'ಮ್ಯೂನಿಚ್ ಪ್ರಣಾಳಿಕೆ'ಯು 'ಕ್ರೈಸ್ತ ಪಾಶ್ಚಾತ್ಯ' ದೇಶಗಳ ನಾಗರಿಕತೆಯ ಏಕತೆಯ ಘೋಷಣೆಯೂ ಹೌದು. 'ನಿರೀಶ್ವರವಾದಿ ಕಮ್ಯುನಿಸ್ಟರು' ಹಾಗೂ 'ಜಾಗತಿಕ ದಕ್ಷಿಣದ' ವಸಾಹತುಶಾಹಿ ವಿರೋಧಿಗಳ ವಿರುದ್ಧದ ಸಮರ ಘೋಷಣೆಯೂ ಹೌದು. ಇಂದು ಅಮೆರಿಕ ಎರಡನೆಯ ಮಹಾಯುದ್ಧದ ನಂತರ ಗಳಿಸಿದ ಆಧಿಪತ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಕ್ಯೂಬಾ, ವೆನೆಜುವೆಲಾ, ಇರಾನ್ ಮೇಲಿನ ದಾಳಿಗಳನ್ನು ಇಂತಹ ಪ್ರಯತ್ನಗಳಾಗಿ ನೋಡಬಹುದು. ತನ್ನ ಸಾಮ್ರಾಜ್ಯಶಾಹಿ ಆಡಳಿತಕ್ಕೆ ಪೂರಕವಲ್ಲದ ಆಡಳಿತವನ್ನು ಬದಲಿಸುವ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡಿದೆ. ಅಂತರರಾಷ್ಟ್ರೀಯ ಕಾನೂನಿನ ನಿಯಮಗಳನ್ನೆಲ್ಲ ಉಲ್ಲಂಘಿಸಿ, ನೇರ ಮಿಲಿಟರಿ ಹಸ್ತಕ್ಷೇಪ ನಡೆಸುತ್ತಿದೆ. ದಶಕಗಳ ಕಾಲ ವಸಾಹತುಶಾಹಿ ವಿರೋಧಿ ಚಳವಳಿಗಳಿಂದ ಸಂಪಾದಿಸಿದ್ದ ಸ್ವಾತಂತ್ರ್ಯವನ್ನು ತೃತೀಯ ಜಗತ್ತಿನ ರಾಷ್ಟ್ರಗಳಿಂದ ಕಸಿದುಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ರಷ್ಯಾದಿಂದ ಪೆಟ್ರೋಲ್ ಕೊಳ್ಳಲು ಅಮೆರಿಕದ ಅನುಮತಿ ಪಡೆದುಕೊಳ್ಳಬೇಕಾದ ಸ್ಥಿತಿ ಭಾರತದಂಥ ದೇಶಗಳಿಗೆ ನಿರ್ಮಾಣವಾಗಿದೆ.

ಹಿಂದೆ ಬ್ರಿಟನ್‌ಗೆ ಪಾವತಿ ಕೊರತೆ ಎದುರಾಗಿದ್ದಾಗ, ವಸಾಹತುಗಳಿಂದ ಲೂಟಿ ಮಾಡಿ ಕೊರತೆಯನ್ನು ನೀಗಿಸಿಕೊಂಡಿತ್ತು. ಈಗ ಅಮೆರಿಕದ ಆರ್ಥಿಕತೆ ತೀವ್ರ ಬಿಕ್ಕಟ್ಟಿನಲ್ಲಿದೆ. ಅದು ವಿಶ್ವದ ಅತಿ ದೊಡ್ಡ ಸಾಲಗಾರ ದೇಶವಾಗಿದೆ. ಈವರೆಗೆ ಡಾಲರನ್ನು ಮುದ್ರಿಸಿ ಬಿಕ್ಕಟ್ಟನ್ನು ನಿರ್ವಹಿಸಿಕೊಳ್ಳುತ್ತಿದ್ದ ಅಮೆರಿಕ ಬೇರೆ ದಾರಿ ಕಂಡುಕೊಳ್ಳಬೇಕಾಗಿದೆ. ವಸಾಹತುಗಳಿಲ್ಲದೆ ಸಾಮ್ರಾಜ್ಯಶಾಹಿಗೆ ಅಸ್ತಿತ್ವವಿಲ್ಲ. ಜಗತ್ತಿನ ಎಲ್ಲಾ ಕಡೆ ತನ್ನ ಮಾತು ಕೇಳುವ, ತನ್ನ ಆರ್ಥಿಕ, ರಾಜಕೀಯ ಹಾಗೂ ಮಿಲಿಟರಿ ಹಿತಾಸಕ್ತಿಗೆ ಹೊಂದಿಕೊಳ್ಳುವ ಸರ್ಕಾರಗಳನ್ನು ನೇಮಿಸಬೇಕಾಗಿದೆ. ನಿರಂತರ ಮಾರುಕಟ್ಟೆಗೆ, ಕಚ್ಚಾ ಪದಾರ್ಥಗಳಿಗೆ ವಸಾಹತುಗಳು ಬೇಕು. ವೆನೆಜುವೆಲಾ, ಇರಾನಿನಂತಹ ತೈಲಸಂಪದ್ಭರಿತ ದೇಶಗಳ ಮೇಲಿನ ದಾಳಿಯ ಹಿಂದಿನ ಉದ್ದೇಶವೂ ಇದೇ. 'ವೆನೆಜುವೆಲಾದಲ್ಲಿ ನಾನು ಆಡಳಿತ ನಡೆಸುತ್ತೇನೆ. ಅಲ್ಲಿಯ ತೈಲವನ್ನು ವಶಕ್ಕೆ ತೆಗೆದುಕೊಳ್ಳುತ್ತೇನೆ' ಎಂದು ಟ್ರಂಪ್ ನೇರವಾಗಿ, ಹೇಳಿದ್ದಾರೆ. ಇನ್ನು ಮುಂದೆ ಅವುಗಳ ಒಡೆತನ ಅಮೆರಿಕದ ಕಂಪನಿಗಳದ್ದು.

ಭಾರತದಂತಹ ದೇಶಗಳನ್ನು ಅಸಮಾನ ಒಪ್ಪಂದಗಳಿಗೆ ಒಪ್ಪಿಸಿ, ತನ್ನ ಸರಕು ಸೇವೆಗಳಿಗೆ ಬೇಕಾದ ಮಾರುಕಟ್ಟೆಯನ್ನು ಟ್ರಂಪ್ ಸೃಷ್ಟಿಸಿಕೊಳ್ಳುತ್ತಿದ್ದಾರೆ. 'ಯಾವುದೇ ಕಾರಣಕ್ಕೂ ಚೀನಾದ ವಿಷಯದಲ್ಲಿ ಮಾಡಿದ ತಪ್ಪನ್ನು ಭಾರತದ ವಿಷಯದಲ್ಲಿ ಮಾಡುವುದಿಲ್ಲ, ಅದು ಬೆಳೆದು ನಮ್ಮೊಂದಿಗೆ ಸ್ಪರ್ಧಿಸುವುದಕ್ಕೆ ಬಿಡುವುದಿಲ್ಲ' ಎಂದೂ ಟ್ರಂಪ್ ಹೇಳಿದ್ದಾರೆ. ಹಾಗಿದ್ದಾಗ್ಯೂ 'ಭಾರತೀಯರು ಒಳ್ಳೆಯವರು. ನಮ್ಮ ಮಾತನ್ನು ಕೇಳುತ್ತಾರೆ' ಅನ್ನುವ ಅವರ ಮೆಚ್ಚುಗೆ ಮಾತಿಗೆ ತಲೆಯಾಡಿಸುತ್ತಾ, ವಿದೇಶಿ ನೀತಿಯನ್ನು ಗಾಳಿಗೆ ತೂರಿ, ನಿರಂತರ ಅವಮಾನಕ್ಕೆ ಗುರಿಯಾಗುತ್ತಿದ್ದೇವೆ.

ಟ್ರಂಪ್, ನೇತನ್ಯಾಹು, ಇವರೆಲ್ಲಾ ಹಲವು ಒತ್ತಡಗಳಲ್ಲಿ ಸಿಲುಕಿದ್ದಾರೆ. ಅವರಿಗೆ ದೇಶದೊಳಗೆ ಬೆಂಬಲ ಕಮ್ಮಿಯಾಗುತ್ತಿದೆ. ದೇಶದೊಳಗಿನ ಬಿಕ್ಕಟ್ಟನ್ನು ನಿಭಾಯಿಸಲು ವಿಫಲರಾಗಿದ್ದಾರೆ. ಅದನ್ನು ಮುಚ್ಚಿಕೊಳ್ಳಲು ಯುದ್ಧ ಅವರಿಗೆ ಹೊದಿಕೆಯಾಗುತ್ತಿದೆ. ಯುದ್ಧಗಳಿಂದ ಜನಸಾಮಾನ್ಯರ ಬದುಕು ಹೈರಾಣಾಗುತ್ತದೆ. ಆದರೆ, ಇಂತಹ ನಾಯಕರುಗಳಿಗೆ ಜನಸಾಮಾನ್ಯರ ಬಗ್ಗೆ ಚಿಂತೆ ಇರುವುದಿಲ್ಲ. ಹೊರ್ಮುಜ್ ಜಲಸಂಧಿ ಈಗ ಸ್ಥಗಿತಗೊಂಡಿದೆ. ವಿಶ್ವದ ತೈಲ ಪೂರೈಕೆಯ ಐದನೇ ಒಂದು ಭಾಗ, ರಸಗೊಬ್ಬರದ ಮೂರನೇ ಒಂದು ಭಾಗ ಹೊರ್ಮುಜ್ ಜಲಸಂಧಿಯ ಮೂಲಕವೇ ಸರಬರಾಜಾಗುತ್ತದೆ. ಜಾಗತಿಕ ಯೂರಿಯಾ ರಫ್ತಿನ ಶೇ 35 ಮತ್ತು ಸಲ್ಫರ್ ರಫ್ತಿನ ಶೇ 45ರಷ್ಟು ಅದನ್ನು ಹಾದುಕೊಂಡೇ ಬರಬೇಕು. ತೈಲ, ಎಲ್‌ಪಿಜಿ ಕೊರತೆಯನ್ನು ಎಲ್ಲರೂ ಅನುಭವಿಸುತ್ತಿದ್ದಾರೆ. ಬೆಲೆಗಳು ಗಗನಕ್ಕೇರುತ್ತಿವೆ. ರಸ್ತೆಬದಿಯಲ್ಲಿ ಬೋಂಡಾ ಮಾರುವ ಅಂಗಡಿಗಳಿಂದ ಹಿಡಿದು ದೊಡ್ಡ ಹೋಟೆಲ್‌ಗಳವರೆಗೆ ಎಲ್ಲವನ್ನೂ ಮುಚ್ಚಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಆಹಾರದ ಮೇಲೆ ಇನ್ನೊಂದು ರೀತಿಯಲ್ಲೂ ಹೊಡೆತ ಬೀಳುತ್ತಿದೆ. ಭಾರತಕ್ಕೆ ಪ್ರತಿ ತಿಂಗಳು ಸುಮಾರು 20 ಲಕ್ಷ ಟನ್ ವಿವಿಧ ರಸಗೊಬ್ಬರದ ಅವಶ್ಯಕತೆಯಿದೆ. ಭಾರತ ಬಹುತೇಕ ರಾಸಾಯನಿಕಗಳನ್ನು ಆಮದು ಮಾಡಿಕೊಳ್ಳುತ್ತದೆ. ಯೂರಿಯಾ, ಗಂಧಕ ಮತ್ತು ಅಮೋನಿಯಾ, ಇವೆಲ್ಲಾ ಬಹುತೇಕ ತಯಾರಾಗುವುದು ಸೌದಿ ಅರೇಬಿಯಾ, ಕತಾರ್, ಒಮನ್ ಮತ್ತು ಯುಎಇ ರಾಷ್ಟ್ರಗಳಲ್ಲಿ. ಅಮೋನಿಯಾ ಉತ್ಪಾದನೆಯಲ್ಲಿ ಇರಾನ್ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ. ಯುದ್ಧ ಮುಂದುವರಿದರೆ ರಸಗೊಬ್ಬರದ ಪೂರೈಕೆ ಅಸ್ತವ್ಯಸ್ತಗೊಳ್ಳುತ್ತದೆ. ರಷ್ಯಾ ಈ ಕೊರತೆಯನ್ನು ತುಂಬಬಹುದಿತ್ತು. ಆದರೆ, ಉತ್ಪಾದನಾ ಮಿತಿ ಮತ್ತು ರಫ್ತು ನಿರ್ಬಂಧಗಳಿಂದಾಗಿ ಅದು ಸಾಧ್ಯವಾಗುತ್ತಿಲ್ಲ. ಅಮೋನಿಯಾ ಕೊರತೆಯಾದರೆ ದೇಶೀಯ ಯೂರಿಯಾ ಉತ್ಪಾದನೆಗೂ ಹೊಡೆತ ಬೀಳುತ್ತದೆ. ಬಿತ್ತನೆಯ ಸಮಯದಲ್ಲಿ ರಸಗೊಬ್ಬರ ಸಿಗದಿದ್ದರೆ, ಅದರ ಪರಿಣಾಮ ಕೃಷಿ ಇಳುವರಿಯ ಮೇಲೆ ಆಗುತ್ತದೆ. ಬೆಲೆ ಏರಿದರೆ ರೈತರು ಬಳಸುವ ಪ್ರಮಾಣವೂ ಕಡಿಮೆಯಾಗುತ್ತದೆ. ಅಂತಿಮವಾಗಿ ಇಳುವರಿ ಕಮ್ಮಿಯಾಗುತ್ತದೆ. ಪರಿಣಾಮವಾಗಿ ಬ್ರೆಡ್, ಮೊಟ್ಟೆ, ಮಾಂಸ ಮತ್ತು ಇತರ ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರುತ್ತದೆ. ಈ ಬಿಕ್ಕಟ್ಟು 2022ರ ರಷ್ಯಾ–ಉಕ್ರೇನ್ ಯುದ್ಧದಿಂದ ಉಂಟಾದ ಆಹಾರದ ಬಿಕ್ಕಟ್ಟಿಗಿಂತಲೂ ತೀವ್ರವಾಗಿರಬಹುದು ಎನ್ನುವ ಆತಂಕವಿದೆ. ಅಂತಿಮವಾಗಿ ಇದರ ಪರಿಣಾಮ ನಮ್ಮ ಅಡುಗೆಮನೆಯ ಮೇಲೂ ಆಗುತ್ತದೆ. ಇದು ನಮ್ಮ ಆಹಾರದ ಸುರಕ್ಷತೆಗೆ ದೊಡ್ಡ ಪೆಟ್ಟಾಗುತ್ತದೆ.

ರಸಗೊಬ್ಬರದ ಬೆಲೆ ಏರಿಕೆ ನಮ್ಮ ಆರ್ಥಿಕತೆಯನ್ನು ಇನ್ನೂ ಹಲವು ರೀತಿಯಲ್ಲಿ ಕಾಡುತ್ತದೆ. ಉದಾಹರಣೆಗೆ, ಭಾರತದಲ್ಲಿ ರಸಗೊಬ್ಬರಕ್ಕೆ ಸಬ್ಸಿಡಿ ನೀಡಲಾಗುತ್ತಿದೆ. ಬೆಲೆ ಏರಿದರೆ ಸಬ್ಸಿಡಿಯ ಪ್ರಮಾಣವೂ ಹೆಚ್ಚುತ್ತದೆ. 2024–25ರಲ್ಲಿ ಸರ್ಕಾರವು ಸುಮಾರು ₹1.9 ಲಕ್ಷ ಕೋಟಿಯನ್ನು ಸಬ್ಸಿಡಿಗಾಗಿ ವ್ಯಯಿಸಿದೆ. ಈಗ ಯೂರಿಯಾ ದರ ಶೇ 30ರಿಂದ 40ರಷ್ಟು ಏರಿಕೆಯಾಗುವ ಸಾಧ್ಯತೆಯಿದ್ದು, ದೇಶದ ಬೊಕ್ಕಸಕ್ಕೆ ದೊಡ್ಡ ಹೊರೆಯಾಗಲಿದೆ. ಬಹುಶಃ ಈ ಯುದ್ಧದಿಂದ ಗಾಸಿಗೊಳಗಾಗದ ಯಾವುದೇ ಕ್ಷೇತ್ರವೂ ಇಲ್ಲ.

ಭಾರತ ತನ್ನ ಸ್ವಾಯತ್ತತೆಯನ್ನು, ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳಬೇಕು. ಚೀನಾ ಅತಿಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುತ್ತಿರುವ ದೇಶ. ಅದು ಅಮೆರಿಕದ ಯಾವುದೇ ಆಕ್ಷೇಪಗಳಿಗೆ ಸೊಪ್ಪು ಹಾಕದೆ, ತನಗೆ ಅನುಕೂಲವಾದ ಕಡೆಯಿಂದ ತೈಲವನ್ನು ಖರೀದಿಸುತ್ತಿದೆ. ಆದರೆ, ರಷ್ಯಾದಿಂದ ಖರೀದಿಸಿದ್ದಕ್ಕೆ ಭಾರತದ ಮೇಲೆ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸಲಾಗಿತ್ತು. ವಾಸ್ತವ ಏನೆಂದರೆ, ಹಿಂದೆ ಬೈಡೆನ್ ಕಾಲದಲ್ಲಿ ರಷ್ಯಾದಿಂದ ತೈಲ ಖರೀದಿಸುವುದಕ್ಕೆ ಸಮ್ಮತಿಸಲಾಗಿತ್ತು. ಆಗ ರಷ್ಯಾ-ಉಕ್ರೇನ್ ಯುದ್ಧದ ಸಮಯದಲ್ಲಿ ತೈಲದ ಬೆಲೆಯಲ್ಲಿ ಸ್ಥಿರತೆ ಕಾಪಾಡಿಕೊಳ್ಳಬೇಕಿತ್ತು. ರಷ್ಯಾದಿಂದ ಭಾರತ ತೈಲ ಖರೀದಿಸುವುದರಿಂದ ತೈಲ ಮಾರುಕಟ್ಟೆಯ ಮೇಲೆ ಒತ್ತಡ ಕಡಿಮೆಯಾಗಿ ಬೆಲೆಗಳು ಸ್ಥಿರವಾಗಿರುತ್ತವೆ ಅನ್ನುವುದು ಆಗಿನ ಲೆಕ್ಕಾಚಾರವಾಗಿತ್ತು. ಈಗಲೂ ಅದೇ ಕಾರಣಕ್ಕೆ ರಷ್ಯಾದಿಂದ ಕೊಳ್ಳಲು ಅನುಮತಿಸಲಾಗಿದೆ. ತೈಲದ ಬೆಲೆ ನಿಯಂತ್ರಣದಲ್ಲಿ ಭಾರತದ ಪಾತ್ರ ಮಹತ್ವದ್ದು ಎಂಬುದು ಅಮೆರಿಕಕ್ಕೆ ತಿಳಿದಿದೆ.

ಇರಾನ್ ಮೇಲೆ ಬಾಂಬ್ ಹಾಕಿ ಯುದ್ಧವನ್ನು ಪ್ರಾರಂಭಿಸಿದಾಗ ಆ ಸಂಘರ್ಷ ಸಾಗಬಹುದಾದ ದಾರಿಯ ಬಗ್ಗೆ ಟ್ರಂಪ್‌ಗೆ ಸ್ಪಷ್ಟ ಕಲ್ಪನೆ ಇದ್ದಿರಲಿಕ್ಕಿಲ್ಲ. ಟ್ರಂಪ್ ಅಂತಹವರು ಒಂದೆರಡು ದಿನಗಳಲ್ಲಿ ಯುದ್ಧ ಮುಗಿಸಿಬಿಡುತ್ತೇನೆಂದು ಯೋಚಿಸುವುದಕ್ಕೆ ಸಾಧ್ಯ. ಆದರೆ, ವಾಸ್ತವ ಬೇರೆ ಅನ್ನುವುದನ್ನು ವಿಯೆಟ್ನಾಂ ಯುದ್ಧದಂತಹ ಘಟನೆಗಳು ತಿಳಿಸಿವೆ. ಯಾವಾಗ ಯುದ್ಧ ಮುಗಿಯುತ್ತದೆ ಅನ್ನುವುದು ಖಾತರಿಯಿಲ್ಲ. ಯಾರ ಬಳಿ ಡ್ರೋನ್, ಮಿಸೈಲ್ ಇವೆಲ್ಲಾ ಖಾಲಿಯಾಗುತ್ತವೆ ಅನ್ನುವುದನ್ನು ತಿಳಿಯುವ ಸಾಧ್ಯತೆಯೂ ಇಲ್ಲ. ಆದರೆ, ಯುದ್ಧ ಮುಂದುವರಿದಷ್ಟೂ ಆಗುವ ವಿಪತ್ತು ಅಪಾರ. ಯುದ್ಧಕ್ಕೆ ಬಳಸುವ ಶಸ್ತ್ರಾಸ್ತ್ರಗಳಿಗೆ ದಿನಕ್ಕೆ 500 ದಶಲಕ್ಷ ಡಾಲರ್ ಖರ್ಚಾಗುತ್ತಿದೆಯಂತೆ. ಅದರಿಂದಾಗುವ ಆಸ್ತಿ, ಪ್ರಾಣ ಹಾನಿ ಹಲವು ಸಾವಿರ ಪಟ್ಟು ಹೆಚ್ಚು.

ಭಾರತ ಅಮೆರಿಕದೊಂದಿಗೆ ವ್ಯಾಪಾರವನ್ನು ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಯೋಚಿಸುತ್ತಿರಬಹುದು. ವ್ಯಾಪಾರ ಎಲ್ಲರಿಗೂ ಒಳ್ಳೆಯದು. ಆದರೆ, ಅಮೆರಿಕ ಎಲ್ಲವನ್ನೂ ಲಪಟಾಯಿಸಲು ಯೋಚಿಸಿದರೆ ಯಾರಿಗೂ ಲಾಭವಿರುವುದಿಲ್ಲ. ತಮ್ಮ ಸರಕುಗಳಿಗೆ ಪರ್ಯಾಯ ಮಾರುಕಟ್ಟೆಯನ್ನು ಕಂಡುಕೊಳ್ಳುವುದಕ್ಕೆ ಭಾರತದಂತಹ ರಾಷ್ಟ್ರಗಳಿಗೆ ಸಾಧ್ಯವಿದೆ. ಅಮೆರಿಕಕ್ಕೆ ತನಗೆ ಬೇಕಾದ ವಸ್ತುಗಳನ್ನೆಲ್ಲಾ ತನ್ನಲ್ಲೇ ತಯಾರಿಸಿಕೊಳ್ಳುವುದು ಕಷ್ಟ.

ಹಿರಿಯರು ಸ್ಥಾಪಿಸಿದ ಸರ್ಕಾರಿ ಉದ್ದಿಮೆಗಳನ್ನು ಬಂಡವಾಳದ ಕ್ರೋಡೀಕರಣಕ್ಕಾಗಿ ನಾವು ಮಾರಿಕೊಳ್ಳುತ್ತಿದ್ದೇವೆ. ಹಿರಿಯರು ಗಳಿಸಿಕೊಟ್ಟಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳೋಣ. ನೂರಾರು ಮಕ್ಕಳನ್ನು ಬಲಿ ಪಡೆದ ಯುದ್ಧ ಯಾವುದೇ ಸಮಸ್ಯೆಗೂ ಪರಿಹಾರವಲ್ಲ.

ವಾಚಕರ ವಾಣಿ

ಮುಳ್ಳಯ್ಯನಗಿರಿ: ರೋಪ್ ವೇ ಅರ್ಥಹೀನ

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಗೆ ರೋಪ್ ವೇ ನಿರ್ಮಾಣ ಕುರಿತಂತೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಸೀತಾಳಯ್ಯನಗಿರಿ ಮೂಲಕ ಮುಳ್ಳಯ್ಯನಗಿರಿಗೆ ಸುಮಾರು 24 ಕಿ.ಮೀ. ದೂರದಷ್ಟು ರೋಪ್ ವೇ ನಿರ್ಮಿಸುವುದು ಸರ್ಕಾರದ ಉದ್ದೇಶ. ಇದು ಚಂದ್ರದ್ರೋಣ ಪರ್ವತದ ಮೂಲ ಸ್ವರೂಪಕ್ಕೆ ಧಕ್ಕೆ ತರುವ ಯೋಜನೆ. ರೋಪ್ ವೇಗಾಗಿ ನೂರಾರು ಅಡಿಯಷ್ಟು ಎತ್ತರದವರೆಗೆ ಕಬ್ಬಿಣದ ಟವರ್‌ಗಳನ್ನು ಜೋಡಿಸಬೇಕಾಗುತ್ತದೆ. ಇದಕ್ಕಾಗಿ ಸಾವಿರಾರು ಮರಗಳ ಹನನವಾಗಲಿದೆ. ಇಲ್ಲಿನ ಅಪರೂಪದ ಔಷಧೀಯ ಸಸ್ಯಗಳು, ಕುರಿಂಜಿ ಹೂಗಿಡಗಳು, ಯಗಚಿ, ವೇದಾವತಿಯಂತಹ ನದಿಯ ಮೂಲಗಳಿಗೆ ಧಕ್ಕೆಯಾಗಲಿದೆ. ಪ್ರವಾಸೋದ್ಯಮದ ಹೆಸರಿನಲ್ಲಿ ಪರಿಸರ ನಾಶಪಡಿಸುವುದು ಅರ್ಥಹೀನ.

ಡಿ.ವಿ. ಸಂಜಯ್, ಚಿಕ್ಕಮಗಳೂರು

ಕೆಪಿಎಸ್: ಪೋಷಕರ ವಿವೇಚನೆಗೆ ಬಿಡಿ

ಆಯಸ್ಕಾಂತೀಯ ಶಾಲೆಗಳು ತಮ್ಮ ಕಾಂತೀಯ ಶಕ್ತಿಯಿಂದ ಮಕ್ಕಳನ್ನು ಸೆಳೆದುಕೊಳ್ಳಬೇಕು. ಇದು ದಿನದೊಳಗೆ, ತಿಂಗಳೊಳಗೆ, ಸುತ್ತೋಲೆ ಮೂಲಕ ಸೆಳೆಯುವ ಪ್ರಕ್ರಿಯೆಯಲ್ಲ. ಶಾಲೆಯೊಂದು ಸಾಕಷ್ಟು ಮಕ್ಕಳನ್ನು ಆಕರ್ಷಿಸಿದೆ ಎಂದರೆ ಐದಾರು ದಶಕಗಳ ಇತಿಹಾಸ ಅದರ ಬೆನ್ನಿಗಿರುತ್ತದೆ. ಶಾಲೆಯೊಂದಕ್ಕೆ ಮಕ್ಕಳನ್ನು ಸೇರಿಸಬೇಕೆಂಬ ನಿರ್ಧಾರ ದಿಢೀರ್ ಆಗಿ ಬಂದದ್ದಲ್ಲ. ಅದು ಪಾಲಕರ ಬಹುದಿನದ ಕನಸು. ಶಾಲೆ ನಡೆದು ಬಂದ ಹಾದಿ ಗ್ರಾಮದ ಚರಿತ್ರೆಯನ್ನು ಅವಲಂಬಿಸಿರುತ್ತದೆ. ಶಾಲೆ ಗ್ರಾಮದ ಸಾಂಸ್ಕೃತಿಕ ಅಸ್ಮಿತೆ ಹಾಗೂ ಅಭಿವ್ಯಕ್ತಿಯ ದ್ಯೋತಕ. ಹಾಗಾಗಿ, ಕೆಪಿಎಸ್ ಮ್ಯಾಗ್ನೆಟಿಕ್ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಸ್ವಾತಂತ್ರ್ಯವನ್ನು ಪಾಲಕರ ವಿವೇಚನೆಗೆ ಬಿಡುವುದು ಸೂಕ್ತ.

ಟಿ. ನಾರಾಯಣ ಗೌಡ, ಬೆಂಗಳೂರು

ವಂಚನೆ: ಪಾಠ ಕಲಿಯುವುದೆಂದು?

'ಗಿಳಿಶಾಸ್ತ್ರ: ಐ.ಟಿ. ಅಧಿಕಾರಿಗೆ ವಂಚನೆ' ಸುದ್ದಿ (ಪ್ರ.ವಾ., ಮಾ. 11) ಓದಿ ಅಳಬೇಕೋ ನಗಬೇಕೊ ಎಂದು ತಿಳಿಯಲಿಲ್ಲ. ವಿಶೇಷವೆಂದರೆ ಮೋಸ ಹೋಗಿದ್ದು ಸರ್ಕಾರಿ ಅಧಿಕಾರಿ. ವೃತ್ತಿಯಲ್ಲಿ ಬಡ್ತಿ ಪಡೆಯಲು ಅನುಭವ, ಜ್ಯೇಷ್ಠತೆ, ಪರಿಣತಿ, ಪರಿಶ್ರಮ ಕಾರಣವಾಗುತ್ತವೆ ಹೊರತು ಇನ್ಯಾವುದೂ ಅಲ್ಲ. ಮೊದಲಿಗೆ ಐವತ್ತು ಸಾವಿರ ರೂಪಾಯಿ ಕೊಟ್ಟು ಪೂಜೆ ಮಾಡಿಸಿದ್ದೇ ಆಶ್ಚರ್ಯವಾದರೆ, ನಂತರ ಲಕ್ಷಾಂತರ ಬೆಲೆಬಾಳುವ ಆಭರಣಗಳನ್ನು ಅಪರಿಚಿತನ ಕೈಗೆ ಕೊಟ್ಟಿದ್ದು ಮಹದಾಶ್ಚರ್ಯ. ಬೀಚಿ ಅವರು ಹೇಳಿದಂತೆ, 'ಟೋಪಿ ಹಾಕಿಸಿ ಕೊಳ್ಳುವವರು ಇರುವ ತನಕ ಟೋಪಿ ಹಾಕುವವರು ಇದ್ದೇ ಇರುತ್ತಾರೆ' ಎಂಬ ಮಾತು ನೆನಪಾಯಿತು. ಅಧಿಕಾರಿಗಳು ಎಂದರೆ ವಿವೇಚನೆ ಉಳ್ಳವರು ಎಂಬ ಮಾತು ಸುಳ್ಳಾಯಿತೆ?

ಹೇಮಂತ್ ಸಂಪಗಾಂವಕರ, ಬೆಂಗಳೂರು

ಭಾಷಾ ಕಲಿಕೆ: ವಿದ್ಯಾರ್ಥಿಗಳಿಗೆ ಅಡ್ಡಿ ಏಕೆ?

ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿಂದಿ ವಿಷಯದಲ್ಲಿ 1.42 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವುದು ಚರ್ಚೆಗೆ ಗ್ರಾಸವಾಗಿದೆ. ಇದರ ಹಿಂದಿರುವ ಕಾರಣ ತಿಳಿಸುವುದು ಸರ್ಕಾರದ ಹೊಣೆಯಲ್ಲವೇ? ಹೆಚ್ಚಿನ ಶಾಲೆಗಳಲ್ಲಿ ಹಿಂದಿ ಶಿಕ್ಷಕರೇ ಇಲ್ಲ. ಅರ್ಹತೆ ಇಲ್ಲದವರು ಹಿಂದಿ ಕಲಿಸುವಂತಾಗಿದೆ. ಇದರಿಂದ ಒಳ್ಳೆಯ ಫಲಿತಾಂಶ ನಿರೀಕ್ಷಿಸಲು ಸಾಧ್ಯವೇ? ವಿದ್ಯಾರ್ಥಿಗಳ ಅನುತ್ತೀರ್ಣತೆ ತಡೆಗೆ ಹಿಂದಿ ಕೃಪಾಂಕ ನೀಡಬೇಕೆಂಬ ಬಗ್ಗೆಯೂ ಚರ್ಚಿತವಾಗುತ್ತಿದೆ. ತ್ರಿಭಾಷಾ ಸೂತ್ರದ ಪ್ರಾರಂಭದಲ್ಲಿ ದಕ್ಷಿಣ ಕರ್ನಾಟಕದ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಲಾಗುತ್ತಿತ್ತು. ಬಳಿಕ ಉತ್ತೀರ್ಣಕ್ಕೆ ನಿರ್ದಿಷ್ಟ ಅಂಕಗಳನ್ನು ಕಡ್ಡಾಯಗೊಳಿಸಲಾಯಿತು. ಹಿಂದಿ ಕೈಬಿಟ್ಟು ದ್ವಿಭಾಷಾ ಸೂತ್ರ ಜಾರಿಗೊಳಿಸಬೇಕೆಂಬ ಕೂಗು ಹಿಂದಿನಿಂದಲೂ ಇದೆ. ಆದರೆ, ಮಕ್ಕಳ ಶೈಕ್ಷಣಿಕ ಬೆಳವಣಿಗೆಯ ದೃಷ್ಟಿಯಿಂದ ತ್ರಿಭಾಷಾ ಕಲಿಕೆಗೆ ಅವಕಾಶ ಇರಬೇಕಿದೆ.

ಕೆ.ಬಿ. ಬ್ಯಾಳಿ, ಕುಕನೂರ

ಕುಂಬಾರಿಕೆ: ಬೇಕಿದೆ ಸರ್ಕಾರದ ನೆರವು

ರಾಜ್ಯದಲ್ಲಿ ಕುಂಬಾರ ಸಮಾಜಕ್ಕೆ ರಾಜಕೀಯವಾಗಿ ಸೂಕ್ತ ಪ್ರಾತಿನಿಧ್ಯ ಸಿಗುತ್ತಿಲ್ಲ. ಅಧಿಕಾರಕ್ಕೆ ಬರುವ ಸರ್ಕಾರಗಳು ಓಟ್‌ಬ್ಯಾಂಕ್ ರಾಜಕಾರಣದ ಹಿಂದೆ ಬಿದ್ದಿವೆ. ಹಾಗಾಗಿ, ಮುಂದುವರಿದ ಸಮುದಾಯಗಳಿಗೆ ಹೆಚ್ಚು ಸೌಲಭ್ಯಗಳು ದಕ್ಕುತ್ತಿವೆ. ಅವಿಭಕ್ತ ಕುಟುಂಬಗಳಿದ್ದಾಗ ಕುಂಬಾರಿಕೆ ವೃತ್ತಿ ನಡೆಸುವುದು ಸುಲಭವಾಗಿತ್ತು. ಆಧುನಿಕತೆಯಿಂದಾಗಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಿದೆ. ಇದರಿಂದ ಮೂಲ ವೃತ್ತಿಯಿಂದ ಸಾವಿರಾರು ಕುಟುಂಬಗಳು ಹಿಂದೆ ಸರಿದಿವೆ. ಇಂದಿಗೂ ಹಲವು ಜನರು ಕುಲಕಸುಬು ನಂಬಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಅವರಿಗೆ ಸಹಾಯಧನ ನೀಡಬೇಕಿದೆ. ಅವರು ತಯಾರಿಸಿದ ವಸ್ತುಗಳ ಮಾರಾಟಕ್ಕೆ ಜಿಲ್ಲಾ ಕೇಂದ್ರಗಳಲ್ಲಿ ಸರ್ಕಾರದಿಂದಲೇ ಪ್ರತ್ಯೇಕ ಮಳಿಗೆ ತೆರೆಯಬೇಕಿದೆ.

ಸುರೇಶ್ ವಿ. ಕುಂಬಾರ್, ಗದಗ

ಎಸ್‌ಎಸ್‌ಪಿ ಅರ್ಜಿ: ನಿಯಮ ಸಡಿಲಿಸಿ

ವಿ.ವಿಗಳಲ್ಲಿ ಆಂತರಿಕ ಅಭ್ಯರ್ಥಿಯಾಗಿರುವ ಪಿಎಚ್.ಡಿ ಸಂಶೋಧನಾರ್ಥಿಗಳಿಗೆ ಶಿಷ್ಯವೇತನ ನೀಡಲು ಸಮಾಜ ಕಲ್ಯಾಣ ಇಲಾಖೆ ಮುಂದಾಗಿದೆ. ಸಂಶೋಧನಾರ್ಥಿಗಳ ಮಾರ್ಗದರ್ಶಕರು ಖುದ್ದಾಗಿ ಇಲಾಖೆಗೆ ಹೋಗಿ ಸ್ವವಿವರ ನೀಡಬೇಕೆಂಬ ನಿಯಮವಿದೆ. ಕೆಲವು ಮಾರ್ಗದರ್ಶಕರು ಇಲಾಖೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ದೂರದ ಜಿಲ್ಲೆಯಲ್ಲಿರುವ ವಿದ್ಯಾರ್ಥಿಗಳ ಬಾಹ್ಯ ಮಾರ್ಗದರ್ಶಕರು ಆಯಾ ವಿ.ವಿ ಸಮೀಪದ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಗೆ ತೆರಳಿ ಸ್ವವಿವರ ನೀಡುವುದು ಕಷ್ಟವಾಗುತ್ತಿದೆ. ಮಾರ್ಗದರ್ಶಕರು ವಿವರ ನೀಡದಿದ್ದರೆ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್‌ನಲ್ಲಿ (ಎಸ್‌ಎಸ್‌ಪಿ) ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಆಗುವುದಿಲ್ಲ. ಅರ್ಜಿ ಸಲ್ಲಿಸುವಂತಹ ನಿಯಮವನ್ನು ಸಡಿಲಗೊಳಿಸಿದರೆ ಸಂಶೋಧನಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ಚುರುಮುರಿ

ವರ್ಷ ಆರು, ದೇವರು ನೂರಾರು!

• ಬಿ.ಎನ್. ಮಲ್ಲೇಶ್

'ಥೋತ್ತೇರಿಕೆ...' ಎಂದ ಗುಡ್ಡೆ.

'ಯಾಕೋ, ಏನಾತು?' ದುಬ್ಬೀರ ಕೇಳಿದ.

'ಅಮೆರಿಕದೋರು ಭಾರತದೋರನ್ನ 'ಡ್ರಾಮಾ ಮಾಸ್ಟರ್ಸ್' ಅಂತ ಕರೆದ್ರಂತಪ...'

'ನೋ... ನಾವು ಮಾಸ್ಟರಲ್ಲ, ಆ್ಯಕ್ಟರು. ಅವರು ಹೇಳಿದಂಗೆ ಕುಣೀತಿಲ್ವಾ?'

'ನಾವೇನ್ ಕುಣೀತಿಲ್ಲ, ನಾವು ವಿಶ್ವಕ್ಕೇ ಗುರು, ನಮ್ಮದು ಆತ್ಮನಿರ್ಭರ್ ದೇಶ...' ಮಂಜಮ್ಮ ವಾದಿಸಿದಳು.

'ನಿರ್ಭರೋ ಬರ್ಬರೋ... ಹೋಗ್ಲಿ ಎಲ್ರಿಗೂ ಚಾ ಹಾಕು...'

'ಗ್ಯಾಸ್ ಖಾಲಿ, ಕಟ್ಟಿಗೆ ತರ್ಬೇಕು...'

'ಅದೆಲ್ಲ ಗೊತ್ತಿಲ್ಲ, ಚಾ ಬೇಕು ಅಷ್ಟೇ...' ಗುಡ್ಡೆ ರಾಂಗಾದ.

'ಈ ಗಾಂಚಾಲಿ ಎಲ್ಲ ನನ್ನತ್ರ ನಡೆಯಲ್ಲ...' ಮಂಜಮ್ಮಗೂ ಸಿಟ್ಟು ಬಂತು.

'ಬಿಡು ಮಂಜಮ್ಮ, ಲೇ ತೆಪರ, ಮೊನ್ನೆ ಡಿಕೆಶಿ ಸಾಹೇಬ್ರ ಪಾರ್ಟಿ ಹೆಂಗಾತೋ?' ದುಬ್ಬೀರ ಮಾತು ಬದಲಿಸಿದ.

'ಸಿಎಂ ಸಾಹೇಬ್ರು ಡಿಕೆಶಿ ಅವರನ್ನ ಯದ್ವಾ ತದ್ವಾ ಹೊಗಳಿಬಿಟ್ರಪ... ಮುಂದೆ ಡಿಕೆಶಿಗೆ ಒಳ್ಳೆ ರಾಜಕೀಯ ಭವಿಷ್ಯ ಐತೆ ಅಂದ್ರು...'

'ಅಂದ್ರೆ ಈಗಿಲ್ವಂತಾ? ಹೋಗ್ಲಿ ಡಿಕೆಶಿ ಆರು ವರ್ಷದ ಸಾಧನೇನ ಏನಂತ ಕರೀಬೋದು?'

'ವರ್ಷ ಆರು, ದೇವರು ನೂರಾರು..!'

'ನೂರಾರಲ್ಲ, ಸಾವಿರಾರು... ಅದಿರ್ಲಿ, ಮಂಜಮ್ಮಂಗೆ ಗ್ಯಾಸ್ ಯಾವಾಗ ಸಿಗುತ್ತೆ ನಮ್ ನಮೋ ಸಾಹೇಬ್ರಿಗೆ ಒಂದು ಫೋನ್ ಹಚ್ಚು...'

'ಆಗ್ಲೆ ಹಚ್ಚಿದ್ದೆ ಕಣಲೆ, ಟ್ರಂಪ್ ಕೇಳಿ ಹೇಳ್ತಾರಂತೆ...'

'ಥೋತ್ತೇರಿ... ಒಂದು ಚಾ ಕುಡಿಯಾಕೂ ಟ್ರಂಪ್ ಕೇಳಂಗಾತಲ್ಲಪಾ...' ಗುಡ್ಡೆ ನಕ್ಕ.

'ಇದೆಲ್ಲ ನಾಟಕ ಸಾಕು, ಎದ್ದು ನಡೀರಿ ಅತ್ಲಾಗೆ...' ಮಂಜಮ್ಮ ಮಸಿ ಬಟ್ಟೆ ಕೊಡವಿದಳು.

'ಯಾಕೋ ಚಾ ಇಲ್ಲದೆ ಖಾಲಿ ಚಾ ಕಪ್ಪಲ್ಲಿ ಬಿರುಗಾಳಿ ಏಳಂಗೆ ಕಾಣುತ್ತೆ... ಲೇ ತೆಪರ, ಬೇರೆ ಏನೋ ಸಮಾಚಾರ?' ಎಂದ ಗುಡ್ಡೆ.

'ಗ್ಯಾಸ್ ಜತಿಗೆ ಇನ್ಮುಂದೆ ಇಂಟರ್‌ನೆಟ್ಟೂ ಬಂದ್ ಆಗುತ್ತಂತೆ... ಡೇಟಾ ಸಿಗಲ್ಲಂತೆ...'

'ಹೌದಾ? ನಮ್ಗೆ ಊಟ ಇಲ್ಲದಿದ್ರೂ ಚಿಂತಿಲ್ಲ, ಡೇಟಾ ಬೇಕೇ ಬೇಕು' ಎಂದ ಗುಡ್ಡೆ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಬೆಂಗಳೂರು: ಸಂಚಾರ ವ್ಯವಸ್ಥೆ ಚಕ್ರವ್ಯೂಹ

ಬೆಂಗಳೂರಿನ ಸಂಚಾರ ದಟ್ಟಣೆಯ ಬಗ್ಗೆ ತೆಲಂಗಾಣ ಮುಖ್ಯಮಂತ್ರಿಯ ಮಾತನ್ನು ರಾಜಕೀಯವಾಗಿ ನೋಡುವ ಬದಲು, ವಸ್ತುನಿಷ್ಠವಾಗಿ ಗಮನಿಸುವ ಅಗತ್ಯವಿದೆ.

• ವಿಶಾಖ ಎನ್.

ಬೆಂಗಳೂರು ಮಹಾನಗರದ ವಾಹನ ಸಂಚಾರ ದಟ್ಟಣೆಯ ಕುರಿತು ಇತ್ತೀಚೆಗೆ ಸಮಾರಂಭವೊಂದರಲ್ಲಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ವ್ಯಂಗ್ಯವಾಡಿದರು. ತಮ್ಮದೇ ಪಕ್ಷದ ಸರ್ಕಾರ ಕರ್ನಾಟಕದಲ್ಲಿ ಇದ್ದರೂ ವಾಸ್ತವವನ್ನು ಹೇಳಲು ಅವರು ಹಿಂದೇಟು ಹಾಕಲಿಲ್ಲ. ರಾಜಕೀಯವನ್ನು ಬದಿಗಿಟ್ಟು ನೋಡಿದರೆ, ಅವರ ಮಾತಿನಲ್ಲಿ ತಥ್ಯ ಇರುವುದು ಸ್ಪಷ್ಟ.

ಬೆಂಗಳೂರಿನಲ್ಲಿ ಕೆಲವೇ ವರ್ಷಗಳ ಹಿಂದೆ ನಿರ್ದಿಷ್ಟವಾಗಿ 'ಪೀಕ್ ಅವರ್' ಎಂಬುದು ಇತ್ತು. ಬೆಳಗ್ಗೆ ಶಾಲೆ–ಕಾಲೇಜು, ಕಚೇರಿಗಳು ಪ್ರಾರಂಭವಾಗುವ ಎರಡು ಮೂರು ತಾಸಿನ ಅವಧಿಯನ್ನು 'ಪೀಕ್ ಅವರ್' ಎಂದು ಕರೆಯಲಾಗುತ್ತಿತ್ತು. ಈಗ ಆ ಅವಧಿ ಮುಗಿದರೂ ಸಂಚಾರ ದಟ್ಟಣೆಯ ವಿಷಯದಲ್ಲಿ 'ಪೀಕ್ ಅವರ್' ಮುಗಿಯುವುದೇ ಇಲ್ಲ. ಉದಾಹರಣೆಗೆ, ಬೆಳಗ್ಗೆ 10.30ರ ನಂತರ ಬೆಂಗಳೂರು–ತುಮಕೂರು ರಸ್ತೆಯಲ್ಲಿ ಲಾರಿಗಳು ಫ್ಲೈಓವರ್ ಮೇಲೆ ಸಂಚಾರ ಪ್ರಾರಂಭಿಸುತ್ತವೆ. ಮಧ್ಯಾಹ್ನ 12 ಗಂಟೆ ಆದರೂ ಗೊರಗುಂಟೆಪಾಳ್ಯದಲ್ಲಿ ವಾಹನ ದಟ್ಟಣೆ ಕಡಿಮೆಯಾಗುವುದೇ ಇಲ್ಲ. ದೊಡ್ಡ ದೊಡ್ಡ ಮೂರ್ನಾಲ್ಕು ಟ್ರಕ್‌ಗಳು ನಿಂತರಂತೂ ಅವುಗಳ ಹಿಂದೆ ಎಲ್ಲ ವಾಹನಗಳೂ ತೆವಳಲೇಬೇಕು. ಶನಿವಾರ ಮಧ್ಯಾಹ್ನ ಕೂಡ ಇದೇ ಸ್ಥಿತಿ ಇರುತ್ತದೆ. ನೆಲಮಂಗಲದಿಂದ ಯಲಹಂಕಕ್ಕೆ ಈ ಫ್ಲೈಓವರ್ ಮೂಲಕ ನಡುಮಧ್ಯಾಹ್ನ ಸಾಗಲೂ ಕನಿಷ್ಠ ಎರಡೂವರೆ ತಾಸು ಬೇಕು. ಬೇಸಿಗೆ ಧಗೆಯಲ್ಲಿ ತೆವಳುತ್ತಾ ಸಾಗುವ ವಾಹನಗಳ ಚಾಲಕರ ಸ್ಥಿತಿ ಹೇಳುವಂತಿಲ್ಲ.



ಭಾನುವಾರ ಸಂಜೆಯದ್ದು ಬೇರೊಂದು ವ್ಯಥೆ. ಇದೇ ತುಮಕೂರು ರಸ್ತೆಗೆ ಮಂಗಳೂರು, ಶಿವಮೊಗ್ಗ ಅಲ್ಲದೆ ಉತ್ತರ ಕರ್ನಾಟಕದ ಬಹುತೇಕ ಭಾಗಗಳಿಂದ ವಾಹನಗಳು ಬಂದು ಸೇರುತ್ತವೆ. ನಗರದಿಂದ ವಾರಾಂತ್ಯ ತೆರಳಿದ್ದವರ ವಾಹನಗಳು ಭಾನುವಾರ ಸಂಜೆಯ ನಂತರ ವಾಪಸಾಗುವುದು ಸಹಜ. ಚಿತ್ರದುರ್ಗದಿಂದ ತುಮಕೂರಿಗೆ ಒಂದೂಮುಕ್ಕಾಲು ತಾಸಿಗೆ ತಲಪುವ ಕಾರುಗಳು, ಅಲ್ಲಿಂದ ಬೆಂಗಳೂರಿನ ಮನೆಗೆ ಸೇರಿಕೊಳ್ಳಲು ಎರಡು ಮೂರು ಗಂಟೆ ತೆಗೆದುಕೊಳ್ಳುವ ಪ್ರಸಂಗಗಳೂ ಇವೆ.

ಇದಲ್ಲದೆ, ನೆಲಮಂಗಲದಿಂದ ತುಮಕೂರು ಮಾರ್ಗದಲ್ಲಿ ಬೇಗೂರು ಬಳಿಯಲ್ಲಿ ಇನ್ನೂ ರಸ್ತೆ ಕಾಮಗಾರಿ ನಡೆದಿದೆ. ತುಮಕೂರಿನಿಂದ ಶಿರಾ ಮಾರ್ಗದಲ್ಲೂ ರಸ್ತೆ ಕಾಮಗಾರಿ ಅಲ್ಲಲ್ಲಿ ನಡೆದಿದೆ. ಹೀಗಾಗಿ, ಅಲ್ಲೆಲ್ಲ ತೆವಳುತ್ತಾ ಸಾಗುವುದು ಅನಿವಾರ್ಯ.

ಪ್ರತಿವರ್ಷವೂ ರಸ್ತೆಗೆ ಇಳಿಯುವ ವಾಹನಗಳ ಸಂಖ್ಯೆ ಗಮನಾರ್ಹವಾಗಿ ಏರಿಕೆಯಾಗುತ್ತಿದೆ. 2021ರ ಮಾರ್ಚ್‌ನಿಂದ 2025ರ ಅವಧಿಯಲ್ಲಿ ಬೆಂಗಳೂರು ನಗರವೊಂದರಲ್ಲೇ ದ್ವಿಚಕ್ರವಾಹನಗಳ ನೋಂದಣಿಯಲ್ಲಿ ಶೇ 23.5ರಷ್ಟು ಏರಿಕೆಯಾಗಿದೆ. ಈ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿನ ಒಟ್ಟು ವಾಹನಗಳ ಸಂಖ್ಯೆಯು 2.7 ಕೋಟಿಯಿಂದ 3.3 ಕೋಟಿಗೆ ಹೆಚ್ಚಳವಾಗಿದೆ. ಬೆಂಗಳೂರು ನಗರದಲ್ಲಿ ಇದೇ ಅವಧಿಯಲ್ಲಿ ಸುಮಾರು 20 ಲಕ್ಷ ವಾಹನಗಳು ರಸ್ತೆಗೆ ಸೇರ್ಪಡೆಯಾಗಿವೆ. ನಗರದ ರಸ್ತೆಗೆ ಈ ಅವಧಿಯಲ್ಲಿ ಸೇರಿಕೊಂಡ ಕಾರುಗಳ ಸಂಖ್ಯೆ ಕೂಡ ಶೇ 21ರಷ್ಟು ಏರಿದೆ. 2025ರ ಮಾರ್ಚ್ ಹೊತ್ತಿಗೆ ಬೆಂಗಳೂರಿನ ರಸ್ತೆಗಳ ಮೇಲೆ 25.2 ಲಕ್ಷ ನೋಂದಾಯಿತ ಕಾರುಗಳು ಸಂಚರಿಸುತ್ತಿದ್ದವು. ಅಷ್ಟೇ ಅಲ್ಲ, ರಾಜ್ಯದಲ್ಲಿ ಕಟ್ಟಡ ನಿರ್ಮಾಣ ಸೇರಿದಂತೆ ಕಾಮಗಾರಿಗಳಿಗಾಗಿ ಬಳಸುವ ಬೃಹತ್ ವಾಹನಗಳ ಸಂಖ್ಯೆ 2020ರ ಮಾರ್ಚ್‌ನಲ್ಲಿ ಬರೀ 4,816 ಇತ್ತು. ಐದು ವರ್ಷಗಳಲ್ಲಿ ಈ ಸಂಖ್ಯೆಯು 21,495ಕ್ಕೆ ಏರಿಕೆಯಾಗಿದೆ. ಇದರಲ್ಲಿ ಬೆಂಗಳೂರಿಗೆ ಸೇರ್ಪಡೆಯಾಗಿರುವ ವಾಹನಗಳೇ ಅಧಿಕ. ಇದು ಕರ್ನಾಟಕ ಸಾರಿಗೆ ಇಲಾಖೆಯು ಅಧಿಕೃತವಾಗಿ ನೀಡಿರುವ ದತ್ತಾಂಶ.

ಬೆಂಗಳೂರನ್ನು ಈಗ ಐದು ನಗರ ಪಾಲಿಕೆಗಳಾಗಿ ವಿಂಗಡಿಸಲಾಗಿದೆ. ಅಲ್ಲಿ ಮುಂದಿನ ಕೆಲವು ವರ್ಷ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ₹57,000 ಕೋಟಿ ಕೊರತೆ ಉಂಟಾಗಲಿದೆ ಎಂಬ ಸುದ್ದಿ ಅದಾಗಲೇ ಹೊರಬಿದ್ದಿದೆ. ಮೊದಲೇ ತೆವಳುತ್ತಿರುವ ಮೇಲ್ಸೇತುವೆ, ನಮ್ಮ ಮೆಟ್ರೊ ಕಾಮಗಾರಿಗಳು ನಗರದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ದಿನದಿಂದ ದಿನಕ್ಕೆ ಉಲ್ಬಣಗೊಳ್ಳಲು ಕಾರಣವಾಗಿವೆ. ಈಗ ಭವಿಷ್ಯದ ದಿನಗಳು ಕೂಡ ಅಷ್ಟೇನೂ ಸುಖಕರ ಆಗಿರುವುದಿಲ್ಲ ಎಂಬುದರ ಸೂಚನೆಯಂತೆ ಈ ಸುದ್ದಿ ಕಾಣುತ್ತಿದೆ.

ಸಣ್ಣಪುಟ್ಟ ಪಟ್ಟಣಗಳು, ನಗರಗಳನ್ನು ರಾಜಧಾನಿಗೆ ಪರ್ಯಾಯವಾಗಿ ಬೆಳೆಸಬೇಕಾದುದು ಅವಶ್ಯ ಎಂದೇ ನಗರ ಯೋಜನೆ ಕುರಿತು ಮಾತನಾಡುವ ಪರಿಣತರು ಸಲಹೆ ನೀಡುತ್ತಾ ಬಂದಿದ್ದಾರೆ. ಆದರೆ, ಆ ಮಾತಿಗೆ ಯೋಜನೆಗಳ ನೀಲನಕಾಶೆ ರೂಪಿಸುವವರು ಕಿವಿಗೊಡುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.

ಬೆಂಗಳೂರಿನಲ್ಲಿ ವಿಮಾನ ನಿಲ್ದಾಣವನ್ನು ತಲಪಲು ಎಷ್ಟು ಸಮಯ ಬೇಕು ಎನ್ನುವುದನ್ನೇ ಹೇಳಲಾಗದು ಎಂದು ರೇವಂತ್ ರೆಡ್ಡಿ ವ್ಯಂಗ್ಯದ ಧಾಟಿಯಲ್ಲಿ ಹೇಳಿದ್ದರೂ, ಅದನ್ನು ಅಲ್ಲಗಳೆಯುವ ಸ್ಥಿತಿಯಲ್ಲಿ ನಾವಿಲ್ಲ. ರಸ್ತೆಯಲ್ಲಿನ ವಾಹನ ದಟ್ಟಣೆಯ ಕಾರಣದಿಂದಾಗಿಯೇ ವಿಮಾನ ತಪ್ಪಿಸಿಕೊಂಡು ಮನೆಗೆ ಮರಳುವವರೂ ಮಹಾನಗರದಲ್ಲಿ ಇದ್ದಾರೆ.

ತೆಲಂಗಾಣ ಮುಖ್ಯಮಂತ್ರಿಯ ಲೇವಡಿಯನ್ನು ಸಲಹೆಯಾಗಿಯೋ, ಸವಾಲಾಗಿಯೋ ಸ್ವೀಕರಿಸಿ ರಸ್ತೆ ಸಂಚಾರ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸುವ ಜರೂರಂತೂ ಸರ್ಕಾರಕ್ಕೆ ಇದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಯಾಮರಣಕ್ಕೆ ಕಾನೂನು ಬಲ

ಹರೀಶ್ ರಾಣಾ ಎನ್ನುವ 31 ವರ್ಷದ ಯುವಕನಿಗೆ ಸುಪ್ರೀಂ ಕೋರ್ಟ್ ದಯಾಮರಣಕ್ಕೆ ಅನುಮತಿ ನೀಡಿದೆ. ಪರೋಕ್ಷ ದಯಾಮರಣವನ್ನು ಕಾನೂನುಬದ್ಧಗೊಳಿಸಿದ ನಂತರ ನ್ಯಾಯಾಲಯವು ಅನುಮತಿ ನೀಡಿದ ಮೊದಲ ಪ್ರಕರಣ ಇದಾಗಿದೆ. ವೈದ್ಯಕೀಯ ಚಿಕಿತ್ಸೆ ದುಬಾರಿಯಾಗಿರುವ, ಬಡವರ ಸಂಖ್ಯೆ ಹೆಚ್ಚಿರುವ ಭಾರತದಲ್ಲಿ ದಯಾಮರಣಕ್ಕೆ ಅವಕಾಶ ನೀಡುವುದು ಯಾವ ರೀತಿಯ ಪರಿಣಾಮಗಳಿಗೆ ಎಡೆಮಾಡಿಕೊಡಬಹುದು ಎನ್ನುವ ಬಗ್ಗೆ ಭಿನ್ನ ಅಭಿಪ್ರಾಯಗಳಿವೆ

ಪ್ರಜಾವಾಣಿ ವಾರ್ತೆ

ಹರೀಶ್ ರಾಣಾ, ತುಂಬು ಜೀವಂತಿಕೆಯ, ಸ್ಫುರದ್ರೂಪಿ ತರುಣ. ಆಟೋಟಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುತ್ತಿದ್ದ ಅವರು, ಉತ್ತಮ ಫುಟ್‌ಬಾಲ್ ಆಟಗಾರನಾಗಿದ್ದರು. ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಸಿವಿಲ್ ಎಂಜಿನಿಯರಿಂಗ್ ಅಧ್ಯಯನ ಮಾಡುತ್ತಿದ್ದ ರಾಣಾ, 2013ರ ಒಂದು ದಿನ ಮೊಹಾಲಿಯಲ್ಲಿನ ಪಿ.ಜಿ.ಯ ನಾಲ್ಕನೇ ಮಹಡಿಯಿಂದ ಆಕಸ್ಮಿಕವಾಗಿ ಜಾರಿ ಬಿದ್ದರು. ಪರಿಣಾಮವಾಗಿ, ತಲೆಗೆ ತೀವ್ರ ಪೆಟ್ಟು ಬಿದ್ದು, ಕೋಮಾಕ್ಕೆ ಜಾರಿದರು. ನೆನಪು, ಪ್ರಜ್ಞೆ ಯಾವುದೂ ಇಲ್ಲದೆ, ನಿಶ್ಚೇಷ್ಟಿತರಾಗಿ ದಶಕಕ್ಕೂ ಹೆಚ್ಚು ಕಾಲ ಹಾಸಿಗೆಯಲ್ಲಿಯೇ ಜೀವಚ್ಛವದಂತೆ ಇರುವ ಅವರ ದಯಾಮರಣಕ್ಕೆ ಸುಪ್ರೀಂ ಕೋರ್ಟ್ ಈಗ ಅನುಮತಿ ನೀಡಿದೆ. ಇದು ಭಾರತದ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಒಂದು ಮೈಲಿಗಲ್ಲಾಗಿದೆ.

ಘನತೆಯಿಂದ ಸಾಯುವುದು ಕೂಡ ಸಂವಿಧಾನದ ಮೂಲಭೂತ ಹಕ್ಕು ಎಂದು 2018ರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಪರೋಕ್ಷ ದಯಾಮರಣಕ್ಕೆ ಮಾರ್ಗಸೂಚಿಗಳನ್ನೂ ರೂಪಿಸಿತ್ತು. ಅವುಗಳನ್ನು 2023ರಲ್ಲಿ ಮಾರ್ಪಡಿಸಲಾಗಿತ್ತು. ಈ ಮಾರ್ಗಸೂಚಿ ರೂಪಿಸಿದ ನಂತರ ಅದರ ಅನ್ವಯ ದೇಶದಲ್ಲಿ ದಯಾಮರಣಕ್ಕೆ ಅವಕಾಶ ನೀಡಿದ ಮೊದಲ ಪ್ರಕರಣ ಹರೀಶ್ ರಾಣಾ ಅವರದ್ದಾಗಿದೆ.

ದಯಾಮರಣಕ್ಕೆ ನ್ಯಾಯಾಲಯದ ಅನುಮತಿ ಪಡೆಯಲು ರಾಣಾ ಪೋಷಕರು ಹಲವು ವರ್ಷ ಹೋರಾಡಿದರು. ಗಾಜಿಯಾಬಾದ್‌ನ ಮನೆಯಲ್ಲಿ ಪೋಷಕಾಂಶಯುಕ್ತ ಆಹಾರವನ್ನು ಕೊಳವೆಯ ಮೂಲಕ ನೀಡುತ್ತಾ ಮಗನ ಜೀವ ಕಾಪಾಡುತ್ತಲೇ ಬಂದವರು ಅವರು. ಆದರೆ, ರಸ್ತೆ ಬದಿ ಸ್ಯಾಂಡ್‌ವಿಚ್ ಮಾರಿ ಜೀವನ ನಡೆಸುವ ರಾಣಾ ತಂದೆಗೆ ಮಗನ ಆರೈಕೆಯೇ ಒಂದು ಸವಾಲಾಗಿತ್ತು. ಜತೆಗೆ ದಂಪತಿಗೆ ವಯಸ್ಸಾಗಿದ್ದರಿಂದ ತಮ್ಮ ನಂತರ ಮಗನನ್ನು ನೋಡಿಕೊಳ್ಳುವವರು ಯಾರು ಎನ್ನುವ ಚಿಂತೆಯೂ ಕಾಡತೊಡಗಿತು. ಈ ದಿಸೆಯಲ್ಲಿ, ತಮ್ಮ ಮಗನಿಗೆ ಘನತೆಯಿಂದ ಸಾಯುವ ಹಕ್ಕನ್ನು ಖಾತ್ರಿಪಡಿಸಿ, ದಯಾಮರಣ ಕಲ್ಪಿಸಬೇಕು ಎಂದು ರಾಣಾ ಪೋಷಕರು 2024ರ ಜುಲೈನಲ್ಲಿ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದರು. ಆದರೆ, ಆಗ ರಾಣಾಗೆ ವೆಂಟಿಲೇಟರ್ ಅಳವಡಿಸಿರಲಿಲ್ಲ. ಕೃತಕ ಸಾಧನಗಳ ಬೆಂಬಲ ಇಲ್ಲದೇ ಸಹಜವಾಗಿಯೇ ಬದುಕುಳಿದಿರುವ ರಾಣಾ ಪ್ರಕರಣವು ದಯಾಮರಣದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಅರ್ಜಿ ವಜಾ ಮಾಡಿತ್ತು. ಹೈಕೋರ್ಟ್ ಆದೇಶವನ್ನೇ ಎತ್ತಿಹಿಡಿದ ಸುಪ್ರೀಂ ಕೋರ್ಟ್, ದಂಪತಿಗೆ ಅಗತ್ಯ ಆರ್ಥಿಕ ಮತ್ತು ವೈದ್ಯಕೀಯ ನೆರವು ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶ ನೀಡಿತು.

ಆದರೆ, ರಾಣಾ ಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದರಿಂದ ಪೋಷಕರು 2025ರ ನವೆಂಬರ್‌ನಲ್ಲಿ ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು. ರಾಣಾ ಆರೋಗ್ಯದ ಬಗ್ಗೆ ವರದಿ ನೀಡಲು ನ್ಯಾಯಾಲಯವು ಪ್ರಾಥಮಿಕ ವೈದ್ಯಕೀಯ ಮಂಡಳಿ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿಗಳನ್ನು ರಚಿಸಿತ್ತು. ಅವು ನೀಡಿದ ವರದಿಗಳನ್ನು ನ್ಯಾಯಾಲಯವು ಕೂಲಂಕಷವಾಗಿ ಪರಿಶೀಲಿಸಿತು. ರಾಣಾ ಆರೋಗ್ಯ ಸುಧಾರಿಸುವ ಯಾವ ಸಾಧ್ಯತೆಯೂ ಇಲ್ಲ ಎನ್ನುವುದನ್ನು ಅರಿತ ನ್ಯಾಯಾಲಯವು, ಅವರು ಪರೋಕ್ಷ ದಯಾಮರಣಕ್ಕೆ ಅರ್ಹ ಎಂದು ತೀರ್ಪು ನೀಡಿತು. ದಯಾಮರಣದ ಬಗ್ಗೆ ಪ್ರತ್ಯೇಕವಾದ ಸಮಗ್ರ ಕಾಯ್ದೆಯೊಂದನ್ನು ರೂಪಿಸುವಂತೆಯೂ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಹರೀಶ್ ರಾಣಾ ಪ್ರಕರಣವು ದಯಾಮರಣದ ವಿಚಾರದಲ್ಲಿ ಒಂದು ಪ್ರಮುಖ ತಿರುವಾಗಲಿದೆ ಎನ್ನುವ ವಿಶ್ಲೇಷಣೆ ಇದೆ. ಪ್ರಕರಣಗಳಿಗೆ ಅಗತ್ಯವಾದ ವೈದ್ಯಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆಯೂ ಪ್ರಕರಣದ ವಿಚಾರಣೆಯ ವೇಳೆ ಚರ್ಚೆಯಾಗಿದೆ. ಈ ದಿಸೆಯಲ್ಲಿ ದೇಶದ ಕೆಲವು ರಾಜ್ಯಗಳಲ್ಲಿ ಮಾತ್ರ ಅಲ್ಪಸ್ವಲ್ಪ ಕೆಲಸ ಆಗಿದ್ದು, ಉಳಿದ ರಾಜ್ಯಗಳಲ್ಲಿ ಸೂಕ್ತ ವ್ಯವಸ್ಥೆ ರೂಪಿಸಿಲ್ಲ.

ವಾಸಿಯಾಗದ ಕಾಯಿಲೆಯಿಂದ ನರಳುತ್ತಿರುವವರಿಗೆ ಮತ್ತು ಅವರ ಕುಟುಂಬದವರಿಗೆ ದಯಾಮರಣ ಬಿಡುಗಡೆ ನೀಡುತ್ತದೆ ಎನ್ನುವುದು ಕೆಲವರ ವಾದ. ಹೃದಯ ಬಡಿತ ಇದ್ದ ಮಾತ್ರಕ್ಕೆ ವ್ಯಕ್ತಿ ಜೀವಂತ ಇದ್ದ ಹಾಗೆ ಅಲ್ಲ. ಭಾರತದಲ್ಲಿ ವೈದ್ಯಕೀಯ ಚಿಕಿತ್ಸೆ ಅತ್ಯಂತ ದುಬಾರಿಯಾಗಿದ್ದು, ಅನೇಕರ ಜೀವ–ಜೀವನ ಅದರಿಂದ ದುರ್ಭರವಾಗುತ್ತಿದೆ. ದಯಾಮರಣಕ್ಕೆ ಅವಕಾಶ ಇರಬಾರದು ಎಂದರೆ, ಗಂಭೀರ ಕಾಯಿಲೆಗಳಿಂದ ಬದುಕುವ ಸಾಧ್ಯತೆ ಇಲ್ಲದವರಿಗೆ ಉತ್ತಮವಾದ ಚಿಕಿತ್ಸೆಯ ಲಭ್ಯತೆ, ಕೊನೆಯ ದಿನಗಳ ಆರೈಕೆಯ ವ್ಯವಸ್ಥೆಯನ್ನು ಖಾತರಿಪಡಿಸಬೇಕು ಎನ್ನುವ ಒತ್ತಾಯ ಇದೆ.

ಆಧಾರ: ಪಿಟಿಐ, ಜರ್ನಲ್ ಆಫ್ ಪಯನೀರಿಂಗ್ ಮೆಡಿಕಲ್ ಸೈನ್ಸಸ್, ಮಾಧ್ಯಮ ವರದಿಗಳು

ಕಾನೂನು ಏನು ಹೇಳುತ್ತದೆ?

- ಅಮೆರಿಕ, ಕೆನಡಾ, ನೆದರ್‌ಲೆಂಡ್ಸ್ ಸೇರಿದಂತೆ ಕೆಲವು ರಾಷ್ಟ್ರಗಳಲ್ಲಿ ದಯಾಮರಣಕ್ಕೆ ಸಂಬಂಧಿಸಿದ ಕಾನೂನುಗಳು ಕಠಿಣವಾಗಿಲ್ಲ
- ಆದರೆ, ಭಾರತದ ಕಾನೂನು ಕಠಿಣವಾಗಿದೆ. 2018ರಿಂದ ದೇಶದಲ್ಲಿ ಪರೋಕ್ಷ ದಯಾಮರಣಕ್ಕೆ ಕಾನೂನಿನ ಅಡಿಯಲ್ಲಿ ಹಲವು ಷರತ್ತುಗಳೊಂದಿಗೆ ಅವಕಾಶ ಇದೆ. 2011ರಲ್ಲಿ ಅರುಣಾ ಶಾನ್‌ಭಾಗ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅರುಣಾ ಅವರಿಗೆ ದಯಾಮರಣಕ್ಕೆ ಅವಕಾಶ ನೀಡಿರಲಿಲ್ಲ
- 2018ರಲ್ಲಿ ಕಾಮನ್ ಕಾಸ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಘನತೆಯಿಂದ ಸಾಯುವ ಹಕ್ಕನ್ನೂ ಸಂವಿಧಾನದ 21ನೇ ವಿಧಿ ದೇಶದ ನಾಗರಿಕರಿಗೆ ನೀಡುತ್ತದೆ ಎಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿತು. ಆದರೆ, ನಿರ್ದಿಷ್ಟ ವ್ಯಕ್ತಿಗೆ ದಯಾಮರಣ ಕರುಣಿಸುವುದಕ್ಕೂ ಮೊದಲು ನ್ಯಾಯಾಲಯದ ಒಪ್ಪಿಗೆ ಬೇಕು ಎಂದೂ ಹೇಳಿತು

ಪ್ರಕ್ರಿಯೆ ಹೇಗೆ?

ಗುಣಪಡಿಸಲಾಗದ ಕಾಯಿಲೆಯಿಂದ ನರಳುತ್ತಿರುವವರು, ಸಾಯುವ ಸ್ಥಿತಿ ಅಥವಾ ಕೋಮಾದಲ್ಲಿರುವವರು, ಬದುಕುವ ಸಾಧ್ಯತೆಯೇ ಇಲ್ಲದವರು ಮತ್ತು ಜೀವಚ್ಛವದಂತೆ ಬದುಕುತ್ತಿರುವವರಿಗೆ ದಯಾಮರಣಕ್ಕೆ ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಅದು ನ್ಯಾಯಾಲಯದ ಆದೇಶದ ಮೂಲಕ ಮಾತ್ರವೇ ಜಾರಿಯಾಗಬೇಕು. ಅದಕ್ಕೆ ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ನ್ಯಾಯಾಲಯವು ನಿರ್ದಿಷ್ಟ ಪ್ರಕರಣದಲ್ಲಿ ದಯಾಮರಣಕ್ಕೆ ಅನುಮತಿ ನೀಡುವ ಸಂಬಂಧ ವೈದ್ಯಕೀಯ ತಜ್ಞರಿರುವ ಪ್ರಾಥಮಿಕ ವೈದ್ಯಕೀಯ ಮಂಡಳಿ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿಗಳನ್ನು ನೇಮಿಸುತ್ತದೆ. ಅವು ನೀಡಿದ ವರದಿಯ ಆಧಾರದಲ್ಲಿ ನ್ಯಾಯಾಲಯವು ತೀರ್ಮಾನ ಕೈಗೊಳ್ಳುತ್ತದೆ.



ನೇರ ದಯಾಮರಣ, ಪರೋಕ್ಷ ದಯಾಮರಣ

ಜಗತ್ತಿನ ಹಲವು ರಾಷ್ಟ್ರಗಳಲ್ಲಿ ನೇರ ದಯಾಮರಣ (ವಿಷದ ಚುಚ್ಚುಮದ್ದು ಚುಚ್ಚುವುದು) ಮತ್ತು ಪರೋಕ್ಷ ದಯಾಮರಣ (ಜೀವ ಹಿಡಿದಿಡುವ ಸಾಧನ/ಚಿಕಿತ್ಸೆ ನಿಲ್ಲಿಸುವುದು) ವಿಧಾನಗಳು ಚಾಲ್ತಿಯಲ್ಲಿವೆ. ಆದರೆ, ಭಾರತದಲ್ಲಿ ಉದ್ದೇಶಪೂರ್ವಕವಾಗಿ ಪ್ರಾಣ ತೆಗೆಯುವುದು ಅಪರಾಧ ಎನ್ನಿಸಿಕೊಳ್ಳುವುದರಿಂದ ನೇರ ದಯಾಮರಣಕ್ಕೆ ಅವಕಾಶವಿಲ್ಲ. ಆದಾಗ್ಯೂ, ಜೀವರಕ್ಷಕ ಸಾಧನ ತೆಗೆಯುವುದು, ಚಿಕಿತ್ಸೆ ನಿಲ್ಲಿಸುವುದು ಕೂಡ ಒಂದು ಬಗೆಯ ನೇರ ದಯಾಮರಣವೇ ಎನ್ನುವ ವಾದ ಇದೆ. ಭಾರತದಲ್ಲಿ ಬಡವರ ಸಂಖ್ಯೆ ಹೆಚ್ಚಿದ್ದು, ದೇಶದಲ್ಲಿ ದಯಾಮರಣಕ್ಕೆ ಅವಕಾಶ ನೀಡಿದರೆ, ದುರುಪಯೋಗ ಆಗುವ ಸಾಧ್ಯತೆಗಳು ಹೆಚ್ಚಿವೆ ಎನ್ನುವುದು ಹಲವರ ವಾದ.

ದಯಾಮರಣಕ್ಕೆ ಅವಕಾಶ ಸಿಕ್ಕ ಹಾದಿ

- ದೇಶದಲ್ಲಿ ದಯಾಮರಣಕ್ಕೆ ಸಂಬಂಧಿಸಿದ ಮೊದಲ ಪ್ರಮುಖ ನಿರ್ಧಾರ ಬಂದಿದ್ದು 1987ರಲ್ಲಿ. ಮಾರುತಿ ಶ್ರೀಪತಿ ಮತ್ತು ಮಹಾರಾಷ್ಟ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 309 ಅನ್ನು ವಿಶ್ಲೇಷಿಸಿತು. ಈ ಸೆಕ್ಷನ್ ಪ್ರಕಾರ, ಆತ್ಮಹತ್ಯೆಗೆ ಯತ್ನಿಸುವುದು ಅಪರಾಧ. ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಸಾಯುವ ಹಕ್ಕು ಕೂಡ ಬದುಕುವ ಹಕ್ಕಿನ ಭಾಗ. ಹಾಗಾಗಿ ಐಪಿಸಿ ಸೆಕ್ಷನ್ 309 ಅಸಾಂವಿಧಾನಿಕ ಎಂದು ಹೇಳಿತ್ತು. ಗಂಭೀರ ಅನಾರೋಗ್ಯದಿಂದ ಬಳಲುತ್ತಿರುವವರು ಅಥವಾ ತಡೆಯಲು ಸಾಧ್ಯವಾಗದಷ್ಟು ನೋವನ್ನು ಉಂಡವರಿಗೆ ತಮ್ಮ ಬದುಕನ್ನು ಕೊನೆಗೊಳಿಸಲು ಅವಕಾಶ ನೀಡಬೇಕು ಎಂದು ಬಾಂಬೆ ಹೈಕೋರ್ಟ್ ಹೇಳಿತ್ತು
- ಈ ಅಭಿಪ್ರಾಯಕ್ಕೆ ವಿರುದ್ಧವಾದ ನಿಲುವನ್ನು ಸುಪ್ರೀಂ ಕೋರ್ಟ್ 1996ರಲ್ಲಿ ವ್ಯಕ್ತಪಡಿಸಿತ್ತು. ಜ್ಞಾನ್ ಕೌರ್ ಮತ್ತು ಪಂಜಾಬ್ ಸರ್ಕಾರದ ನಡುವಿನ ಪ್ರಕರಣದಲ್ಲಿ ಅರ್ಜಿದಾರರು, ಬೇರೊಬ್ಬರು ಆತ್ಮಹತ್ಯೆ ಮಾಡಿಕೊಳ್ಳಲು ನೆರವು ನೀಡಿದ್ದ ಪ್ರಕರಣದಲ್ಲಿ ತಮಗೆ ಐಪಿಸಿಯ 306 ಸೆಕ್ಷನ್ ಅಡಿಯಲ್ಲಿ ಶಿಕ್ಷೆಯಾಗಿದ್ದನ್ನು ಪ್ರಶ್ನಿಸಿದ್ದರು. ಸಾಯುವ ಹಕ್ಕು ಮೂಲಭೂತ ಹಕ್ಕು ಆಗಿರುವುದರಿಂದ, ಆ ಹಕ್ಕನ್ನು ಚಲಾಯಿಸಲು ಬೇರೆಯವರಿಗೆ ಸಹಾಯ ಮಾಡುವುದು ಅಪರಾಧ ಕೃತ್ಯ ಆಗುವುದಿಲ್ಲ ಎಂದು ಅರ್ಜಿದಾರರು ವಾದಿಸಿದ್ದರು. ಆದರೆ, ಈ ವಾದವನ್ನು ಒಪ್ಪದಿದ್ದ ಸುಪ್ರೀಂ ಕೋರ್ಟ್, ಬದುಕುವ ಹಕ್ಕು, ಸಾಯುವ ಹಕ್ಕನ್ನು ನೀಡುವುದಿಲ್ಲ ಎಂದು ಪ್ರತಿಪಾದಿಸಿತ್ತು. ಮಾರುತಿ ಶ್ರೀಪತಿ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್‌ನ ಪ್ರತಿಪಾದನೆಯನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡರೂ, ಐಪಿಸಿ ಸೆಕ್ಷನ್ 309 ಸಂವಿಧಾನಬದ್ಧ ಎಂದು ಹೇಳಿತ್ತು
- ದಯಾಮರಣದ ಬಗ್ಗೆ ಮಹತ್ವದ ಕಾನೂನು ಚರ್ಚೆ ನಡೆದಿದ್ದು ಅರುಣಾ ಶಾನ್‌ಭಾಗ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ. ಆಸ್ಪತ್ರೆಯ ನೌಕರನಿಂದಲೇ ಅತ್ಯಾಚಾರ ಮತ್ತು ಗಂಭೀರ ದಾಳಿಗೆ ಒಳಗಾಗಿ 37 ವರ್ಷ ಜೀವಂತ ಶವವಾಗಿ ಮಲಗಿದ್ದ ನರ್ಸ್ ಅರುಣಾ ಶಾನ್‌ಭಾಗ್ ಅವರಿಗೆ ದಯಾಮರಣ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ನ್ಯಾಯಾಲಯ ಇದನ್ನು ತಳ್ಳಿಹಾಕಿತ್ತು. ಆದರೆ, ಕಠಿಣ ನಿಯಮಗಳ ಅಡಿಯಲ್ಲಿ ಪರೋಕ್ಷ ದಯಾಮರಣಕ್ಕೆ ಅವಕಾಶ ಕಲ್ಪಿಸಬಹುದು ಎಂದು ಹೇಳಿತ್ತು. ಅಪರೂಪದ ಪ್ರಕರಣಗಳಲ್ಲಿ ಪರೋಕ್ಷ ದಯಾಮರಣ ನೀಡಬಹುದು. ಆದರೆ, ಯಾವಾಗ ಅವಕಾಶ ಕೊಡಬೇಕು ಎಂಬುದರ ಬಗ್ಗೆ ಹೈಕೋರ್ಟ್‌ನಿಂದ ಅನುಮತಿ ಪಡೆಯಬೇಕು ಎಂದು ಅದು ಹೇಳಿತ್ತು
- ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ 2018ರಲ್ಲಿ ಸ್ಪಷ್ಟವಾದ ನಿರ್ಧಾರ ತೆಗೆದುಕೊಂಡಿತ್ತು. ಎನ್‌ಜಿಒ ಕಾಮನ್ ಕಾಸ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ, ಪರೋಕ್ಷ ದಯಾಮರಣಕ್ಕೆ ಅನುಮತಿ ನೀಡಿತು ಮತ್ತು ಮರಣ ಇಚ್ಛೆ ಉಯಿಲುಗಳನ್ನು ಪರಿಗಣಿಸಬಹುದು ಎಂದು ಹೇಳಿತ್ತು. ದಯಾಮರಣ ಪ್ರಕ್ರಿಯೆಯನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಸ್ಪಷ್ಟವಾದ ನಿಯಮಗಳನ್ನೂ ಅದು ರೂಪಿಸಿತ್ತು. ಪ್ರಕ್ರಿಯೆ ಮೇಲೆ ನ್ಯಾಯಾಧೀಶರ ಮೇಲ್ವಿಚಾರಣೆ, ವೈದ್ಯಕೀಯ ಮಂಡಳಿಯ ಶಿಫಾರಸುಗಳು ಮತ್ತು ಇನ್ನಿತರ ನಿಯಮಗಳನ್ನೊಳಗೊಂಡ ಮಾರ್ಗಸೂಚಿಯನ್ನು ನ್ಯಾಯಾಲಯ ಪ್ರಕಟಿಸಿತು. ಈ ತೀರ್ಮಾನವು ದಯಾಮರಣಕ್ಕೆ ಸಂಬಂಧಿಸಿದ ಭಾರತದ ಧೋರಣೆಯನ್ನು ಬದಲಿಸಿತು
- 2023ರಲ್ಲಿ ಸುಪ್ರೀಂ ಕೋರ್ಟ್ 2018ರ ಮಾರ್ಗಸೂಚಿಗಳಿಗೆ ತಿದ್ದುಪಡಿ ತಂದು ನಿಯಮಗಳನ್ನು ಮತ್ತಷ್ಟು ಸರಳಗೊಳಿಸಿತು

ರಾಷ್ಟ್ರೀಯ

‘ಪ್ರಾಣ ರಕ್ಷಣೆಗಾಗಿ ಚಿರತೆ ಹತ್ಯೆ ಮಾಡಿದರೆ ಕ್ರಮವಿಲ್ಲ’

ಮಹಾರಾಷ್ಟ್ರ ಸರ್ಕಾರದ ನಿರ್ಧಾರ

ಮುಂಬೈ (ಪಿಟಿಐ): ಚಿರತೆಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪರಿಚ್ಛೇದ 1ರಿಂದ ತೆಗೆದು ಹಾಕಿ, ಪರಿಚ್ಛೇದ 2ಕ್ಕೆ ಸೇರಿಸುವ ಪ್ರಸ್ತಾವವನ್ನು ಮಹಾರಾಷ್ಟ್ರ ಸಚಿವ ಸಂಪುಟ ಸಭೆ ಅನುಮೋದಿಸಿದೆ.

ಪರಿಚ್ಛೇದ 1ರಲ್ಲಿ ಗುರುತಿಸಲಾಗುವ ಪ್ರಾಣಿಗಳನ್ನು ಹತ್ಯೆ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಆದರೆ ಪರಿಚ್ಛೇದ 2ರಲ್ಲಿರುವ ಪ್ರಾಣಿಗಳನ್ನು ತಮ್ಮ ಪ್ರಾಣ ರಕ್ಷಣೆಗಾಗಿ ಹತ್ಯೆ ಮಾಡಿದರೆ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದಿಲ್ಲ.

‘ಚಿರತೆಗಳು ಜನವಸತಿ ಪ್ರದೇಶಕ್ಕೆ ಪ್ರವೇಶಿಸುವ ಘಟನೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಇಂಥ ಸಂದರ್ಭದಲ್ಲಿ ಪ್ರಾಣರಕ್ಷಣೆಗಾಗಿ ಅವುಗಳನ್ನು ಹತ್ಯೆ ಮಾಡಿದರೆ, ಅಂಥವರ ವಿರುದ್ಧದ ಕಾನೂನು ಕ್ರಮವನ್ನು ತಪ್ಪಿಸಲು ಸರ್ಕಾರವು ಈ ನಿರ್ಧಾರ ಕೈಗೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲಾಗುವುದು’ ಎಂದು ಅರಣ್ಯ ಸಚಿವ ಗಣೇಶ್ ನಾಯ್ಕ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಮಾನವ ವಸತಿ ಪ್ರದೇಶಕ್ಕೆ ನುಗ್ಗಿ, ಸಾವು–ನೋವು ಉಂಟುಮಾಡುವ ಮಾಡುವ ಚಿರತೆಗಳನ್ನು ‘ನರಭಕ್ಷಕ’ ಎಂದು ಘೋಷಿಸುವಂತೆಯೂ ನಿರ್ದೇಶಿಸಲಾಗಿದೆ ಎಂದರು.

150 ಚಿರತೆಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲು ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಿತ್ತು. ಪ್ರಾಯೋಗಿಕವಾಗಿ 5 ಹೆಣ್ಣು ಚಿರತೆಗಳನ್ನು ಸೆರೆ ಹಿಡಿದು ಚಿಕಿತ್ಸೆಗೊಳಪಡಿಸಲು ಕೇಂದ್ರವು ಅನುಮತಿ ನೀಡಿದೆ. ಇದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಮಾನವ– ಚಿರತೆ ಸಂಘರ್ಷ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಅರಣ್ಯ ಸಿಬ್ಬಂದಿ ಗಸ್ತು ನಡೆಸುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಶಾಲೆಗಳ ಸಮಯವನ್ನೂ ಬದಲಾಯಿಸಲಾಗಿದೆ ಎಂದರು.

‘ಸೆರೆ ಹಿಡಿಯಲಾದ ಹುಲಿಗಳು, ಚಿರತೆಗಳು ಹಾಗೂ ಇತರ ವನ್ಯಪ್ರಾಣಿಗಳನ್ನು ರಕ್ಷಿಸಿ ಇರಿಸಲಾಗುವ ಸಂರಕ್ಷಣಾ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಸೆರೆ ಹಿಡಿದಿರುವ ಚಿರತೆಗಳನ್ನು ಕೇಂದ್ರೀಯ ಮೃಗಾಲಯ ಪ್ರಾಧಿಕಾರದ ಅನುಮತಿ ಪಡೆದು ಹೊರ ರಾಜ್ಯಗಳ ಮೃಗಾಲಯ ಹಾಗೂ ಸಂರಕ್ಷಣಾ ಕೇಂದ್ರಗಳಿಗೆ ಸ್ಥಳಾಂತರಿಸುವುದಕ್ಕೂ ಪ್ರಯತ್ನ ನಡೆದಿದೆ’ ಎಂದು ತಿಳಿಸಿದರು.

‘ಲಿಂಗತ್ವ ಅಲ್ಪಸಂಖ್ಯಾತರಿಂದ ರಕ್ತದಾನ: ನಿಯಮ ಸಡಿಲಿಕೆಯಿಂದ ಹಾನಿ’

ನವದೆಹಲಿ (ಪಿಟಿಐ): ‘ಲಿಂಗತ್ವ ಅಲ್ಪಸಂಖ್ಯಾತರು, ಲೈಂಗಿಕ ಕಾರ್ಯಕರ್ತೆಯರು ಹಾಗೂ ಸಲಿಂಗ ಲೈಂಗಿಕ ಒಲವುಳ್ಳ ಪುರುಷರು ರಕ್ತದಾನ ಮಾಡುವುದನ್ನು ನಿರ್ಬಂಧಿಸಿರುವ ನಿಯಮಗಳನ್ನು ಸಡಿಲಗೊಳಿಸಿದರೆ ಅದರಿಂದ ಇತರರಿಗೆ ಹಾನಿಯಾಗುತ್ತದೆ ಎಂದು ತಜ್ಞರು ಅಭಿಪ್ರಾಯ ನೀಡಿದ್ದಾರೆ’ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಗುರುವಾರ ತಿಳಿಸಿದೆ.

2017ರಲ್ಲಿ ರಾಷ್ಟ್ರೀಯ ರಕ್ತ ವರ್ಗಾವಣಾ ಮಂಡಳಿಯು (ಎನ್‌ಬಿಟಿಸಿ) ಲಿಂಗತ್ವ ಅಲ್ಪಸಂಖ್ಯಾತರು, ಲೈಂಗಿಕ ಕಾರ್ಯಕರ್ತೆಯರು ಹಾಗೂ ಸಲಿಂಗ ಲೈಂಗಿಕ ಒಲವುಳ್ಳ ಪುರುಷರು ರಕ್ತದಾನಿಗಳಾಗುವುದನ್ನು ನಿರ್ಬಂಧಿಸಿ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿತ್ತು. ಈ ಮಾರ್ಗಸೂಚಿಗಳು ತಾರತಮ್ಯ ಎಸಗುತ್ತಿವೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠವು ಈ ಅರ್ಜಿಗಳನ್ನು ವಿಚಾರಣೆ ನಡೆಸುತ್ತಿದೆ. ಕಳೆದ ಮೇ ನಲ್ಲಿ ನಡೆದ ವಿಚಾರಣೆ ವೇಳೆ ಮಾರ್ಗಸೂಚಿಗಳ ಸರಳೀಕರಣ ಕುರಿತು ತಜ್ಞರ ಅಭಿಪ್ರಾಯ ಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಪೀಠ ಸೂಚಿಸಿತ್ತು.

ಅದರಂತೆ ಕೇಂದ್ರ ಸರ್ಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು, ‘ತಜ್ಞರು ನಿಯಮಗಳ ಸಡಿಲೀಕರಣದ ವಿರುದ್ಧ ಅಭಿಪ್ರಾಯ ನೀಡಿದ್ದಾರೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ **ತೃಣಮೂಲ ಕಾಂಗ್ರೆಸ್‌ನ** ರಾಜ್ಯಸಭಾ ಸದಸ್ಯೆ ಸಾಗರಿಕಾ ಘೋಷ್ ಅವರು ಒಂದು ವಿಡಿಯೊವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ಇಬ್ಬರು ಹೆಣ್ಣುಮಕ್ಕಳು ಒಂದು ಫ್ಲೆಕ್ಸ್ ಅನ್ನು ತೋರಿಸುವ ದೃಶ್ಯ ಅದರಲ್ಲಿದೆ. ಫ್ಲೆಕ್ಸ್‌ನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಿಂತುಕೊಂಡು ಬಿಜೆಪಿಯ ಹಿರಿಯ ನಾಗರಿಕರಿಗೆ ಭಾರತ ರತ್ನ ಪ್ರದಾನ ಮಾಡುತ್ತಿರುವುದು, ಪಕ್ಕದಲ್ಲಿ ಪ್ರಧಾನಿ ಮೋದಿ ಅವರು ಕುರ್ಚಿಯಲ್ಲಿ ಕುಳಿತುಕೊಂಡು ಚಪ್ಪಾಳೆ ತಟ್ಟುತ್ತಿರುವ ಫೋಟೊ ಇದೆ. ಇಲ್ಲಿ ಪ್ರಧಾನಿಯವರು ರಾಷ್ಟ್ರಪತಿ ಅವರಿಗೆ ಅಗೌರವ ಸೂಚಿಸಿದ್ದಾರೆ ಎಂದು ಪ್ರತಿಪಾದಿಸಲಾಗುತ್ತಿದೆ. ತೃಣಮೂಲ ಕಾಂಗ್ರೆಸ್‌ನ ಅಧಿಕೃತ ಎಕ್ಸ್ ಖಾತೆಯಲ್ಲೂ ಫ್ಲೆಕ್ಸ್‌ನಲ್ಲಿರುವ ಚಿತ್ರದ ಮೂಲ ವಿಡಿಯೊ ಹಾಕಲಾಗಿದೆ. ಆದರೆ, ಇದು ವಾಸ್ತವ ಅಲ್ಲ.

✅ **ವಿಡಿಯೊದ ಸ್ಕ್ರೀನ್‌ಶಾಟ್ ತೆಗೆದು** ಫ್ಲೆಕ್ಸ್‌ನಲ್ಲಿರುವ ಚಿತ್ರದ ಭಾಗವನ್ನು ಕ್ರಾಪ್ ಮಾಡಿ ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ರಾಷ್ಟ್ರಪತಿ ಭವನದ ಅಧಿಕೃತ ಎಕ್ಸ್ ಖಾತೆಯಲ್ಲಿರುವ ಫೋಟೊ ಸಿಕ್ಕಿತು. 2024ರ ಮಾರ್ಚ್ 31ರಂದು ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾರತ ರತ್ನ ಪುರಸ್ಕಾರವನ್ನು ಪ್ರದಾನ ಮಾಡಿದ ಸಂದರ್ಭದ ಚಿತ್ರ ಅದು. ಅಡ್ವಾಣಿ ಅವರ ಅನಾರೋಗ್ಯದ ಕಾರಣಕ್ಕೆ ಅವರ ಮನೆಯಲ್ಲೇ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು. ಅದರಲ್ಲಿ ಪ್ರಧಾನಿ ಮೋದಿ ಅವರೂ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ದ್ರೌಪದಿ ಮುರ್ಮು ಅವರಿಗೂ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಭಾರತ ರತ್ನ ಪ್ರದಾನ ಮಾಡುವಾಗ ಮುರ್ಮು ಅವರು ಅಡ್ವಾಣಿ ಅವರ ಬಳಿಗೆ ತೆರಳಿ ನಿಂತುಕೊಂಡು ಪ್ರದಾನ ಮಾಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲೂ ಈ ಸಮಾರಂಭದ ವಿಡಿಯೊ ಇತ್ತು. ಪ್ರಧಾನಿ ಅವರಲ್ಲದೆ, ಅಲ್ಲಿ ನೆರೆದಿದ್ದ ಎಲ್ಲರೂ ತಮ್ಮ ಆಸನದಲ್ಲಿ ಕುಳಿತೇ ಇದ್ದರು. ರಾಷ್ಟ್ರಪತಿ ಅವರು ಪದ್ಮ ಪ್ರಶಸ್ತಿ, ಭಾರತ ರತ್ನ ಪುರಸ್ಕಾರವನ್ನು ಪ್ರದಾನ ಮಾಡುವಾಗ ಅನುಸರಿಸಲಾಗುವ ಶಿಷ್ಟಾಚಾರದ ಬಗ್ಗೆ ಹುಡುಕಿದಾಗ, ರಾಷ್ಟ್ರಪತಿ ಮತ್ತು ಪುರಸ್ಕೃತರು ಮಾತ್ರ ಎದ್ದು ನಿಲ್ಲುವುದು (ಇಲ್ಲಿ ಅನಾರೋಗ್ಯದ ಕಾರಣಕ್ಕೆ ಅಡ್ವಾಣಿ ಕುಳಿತಿದ್ದರು), ಉಳಿದವರು ತಮ್ಮ ಆಸನಗಳಲ್ಲಿ ಕುಳಿತಿರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂದು ತಿಳಿಯಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಮಾತು ಆಡಿದರೆ ಹೋಯ್ತು

ರೇಣುಕಾ ನಿಡಗುಂದಿ

ಒಮ್ಮೆ ಒಬ್ಬ ರೈತನಿಗೆ ತನ್ನ ಪಕ್ಕದ ಹೊಲದ ಗೆಳೆಯನೊಂದಿಗೆ ಯಾವುದೋ ಮಾತಿಗೆ ಜಗಳವಾಗುತ್ತದೆ. ಕೋಪದಲ್ಲಿ ಆತ ಬಾಯಿಗೆ ಬಂದದ್ದೆಲ್ಲ ಬಯ್ಯುತ್ತಾನೆ. ಸಿಟ್ಟು ಇಳಿದ ಬಳಿಕ ರೈತನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಗೆಳೆಯನಿಗೆ ಏನೆಲ್ಲಾ ಬೈದುಬಿಟ್ಟೆನಲ್ಲಾ ಎಂದು ತಾನೇ ನೊಂದುಕೊಳ್ಳುತ್ತಾನೆ. ಸಮಾಧಾನ ಅರಸಿಕೊಂಡು ಒಬ್ಬ ಸಂತರಲ್ಲಿಗೆ ಹೋಗುತ್ತಾನೆ. ‘ನಾನು ಆಡಿದ ಕೆಟ್ಟ ಮಾತುಗಳನ್ನು ಹಿಂತೆಗೆದುಕೊಳ್ಳುವ ಉಪಾಯವಿದ್ದರೆ ಸೂಚಿಸಿ’ ಎಂದು ಸಂತರಲ್ಲಿ ಕೇಳಿಕೊಳ್ಳುತ್ತಾನೆ.

ಆಗ ಸಂತರು ರೈತನಿಗೆ, ‘ಒಂದು ಕೆಲಸ ಮಾಡು. ಹಕ್ಕಿಗಳ ಬಹಳಷ್ಟು ಗರಿಗಳನ್ನು ಸಂಗ್ರಹಿಸು, ನಂತರ ಅವುಗಳನ್ನು ನಗರದ ಮಧ್ಯಭಾಗದಲ್ಲಿ ಇಟ್ಟು ಬಾ’ ಎಂದರು. ರೈತ ಹಾಗೆಯೇ ಮಾಡಿ ಬರುತ್ತಾನೆ.

ಈಗ ಸಂತರು, ‘ಸರಿ ಈಗ ಪುನಃ ಆ ಜಾಗಕ್ಕೆ ಹೋಗಿ ಎಲ್ಲಾ ಗರಿಗಳನ್ನು ಸಂಗ್ರಹಿಸಿಕೊಂಡು ಇಲ್ಲಿಗೆ ತಾ’ ಎನ್ನುತ್ತಾರೆ.

ರೈತ ಗರಿಗಳನ್ನು ಇಟ್ಟ ಜಾಗವನ್ನು ತಲುಪುವ ಹೊತ್ತಿಗೆ ಆ ಎಲ್ಲಾ ಗರಿಗಳು ಎಲ್ಲೆಲ್ಲೋ ಹಾರಿಹೋಗಿದ್ದವು. ರೈತ ದುಃಖಿತನಾಗಿ ಸಂತರಲ್ಲಿಗೆ ಖಾಲಿ ಕೈಯಲ್ಲಿ ಮರಳುತ್ತಾನೆ. ಆಗ ಸಂತರು ರೈತನಿಗೆ, ‘ನೋಡಿದೆಯಾ, ಗರಿಗಳು ಹೇಗೆ ಎಲ್ಲಾ ಕಡೆ ಚದುರಿಹೋದವೋ ಹಾಗೆಯೇ ನಾವು ಆಡುವ ಮಾತುಗಳೂ... ಒಮ್ಮೆ ನಮ್ಮ ಬಾಯಿಂದ ಹೊರಬಿದ್ದರೆ ಅವನ್ನು ಹಿಂತೆಗೆದುಕೊಳ್ಳಲು ಸಾಧ್ಯವಾಗದು. ನೀನೆಷ್ಟೇ ಬಯಸಿದರೂ ಆಡಿದ ಮಾತು ನಿನ್ನ ಬಳಿ ಮರಳುವುದಿಲ್ಲ. ಅದನ್ನೇ ಹಿರಿಯರು ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂದಿರುವುದು. ಇದನ್ನೇ ಬಸವಣ್ಣ ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ಎಂದಿರುವರು’ ಎಂದು ವಿವರಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ, ನೆರೆಹೊರೆಯಲ್ಲಿ ಅಥವಾ ನಮ್ಮ ನಮ್ಮ ಕುಟುಂಬಗಳಲ್ಲಿಯೇ ಕೆಲವರು ಬಹಳ ಒರಟಾಗಿ ಮಾತಾಡುವುದನ್ನು, ವೃಥಾ ಸಿಟ್ಟುಗೊಳ್ಳುವುದನ್ನು, ಸರಿತಪ್ಪು ಯೋಚಿಸದೇ ಬಾಯಿಗೆ ಬಂದದ್ದನ್ನು ಆಡಿಬಿಡುತ್ತಾರೆ. ತಮ್ಮ ತಪ್ಪಿನ ಅರಿವಾದ ನಂತರ ಒಳಗೊಳಗೇ ಒದ್ದಾಡುತ್ತಾರೆ. ತಮ್ಮ ನಡೆಯಿಂದ ತಾವು ನಾಚಿಗೆಪಟ್ಟುಕೊಳ್ಳುತ್ತಾರೆ. ಆದರೆ ತಾವೇ ಸರಿ, ಮೊಲಕ್ಕೆ ಮೂರೇ ಕಾಲು ಎಂದು ವಾದಿಸುವ ವಿತಂಡವಾದಿಗಳಿಗೆ ತಮ್ಮ ತಪ್ಪು ಯಾವತ್ತೂ ಕಾಣಿಸುವುದಿಲ್ಲ.

ಇನ್ನೊಬ್ಬರನ್ನು ಕಹಿನುಡಿಗಳಿಂದ ಚುಚ್ಚಿ ಗಾಸಿಗೊಳಿಸಿದಾಗ ಅದು ನಮ್ಮನ್ನೇ ಇರಿಯತೊಡಗುತ್ತದೆ. ಮನಸ್ಸಿನ ನೆಮ್ಮದಿಯನ್ನು ಕಸಿದುಕೊಳ್ಳುತ್ತದೆ. ನಿಶ್ಚಿಂತೆಯಿಂದ ನಿದ್ದೆ ಮಾಡಲಾರಿರಿ. ಅದಕ್ಕೆ ನುಡಿಯುವ ಮಾತುಗಳು ಮುತ್ತಿನ ಹಾರದಂತೆ ಅಂದವಾಗಿರಬೇಕು, ತರ್ಕಬದ್ಧವಾಗಿರಬೇಕು. ಮಾತಿನಲ್ಲಿ ಸತ್ಯ, ಅನುನಯ, ಅನುಭವದ ಬೆಳಕು ಇರಬೇಕು ಎನ್ನುತ್ತಾರೆ ಬಸವಣ್ಣ. ನಮ್ಮ ಕಚೇರಿಯಲ್ಲಿ ವಯಸ್ಸಾದ ಹಿರಿಯರಿದ್ದರು. ಅವರ ಪ್ರಶ್ನೆಗೆ ತಿರುಗಿ ಉತ್ತರ ಕೊಟ್ಟರೆ, ಅವರಿಗದು ಉದ್ಧಟತನ, ತಿರುಗಿ ಉತ್ತರ ಕೊಡ್ತಿದೀವಿ ಎನಿಸಿ ಬಾಯಿಗೆ ಬಂದಂತೆ ಬಯ್ಯುತ್ತಿದ್ದರು. ನಂತರ ತಾವೇ ಕರೆದು ಸಮಜಾಯಿಷಿ ಕೊಡಲಾರಂಭಿಸುತ್ತಿದ್ದರು. ಅವರ ಹಿರಿತನಕ್ಕೆ ಗೌರವ ಕೊಟ್ಟು ಯಾರೂ ವಾದಕ್ಕಿಳಿಯುತ್ತಿರಲಿಲ್ಲ.

ಮಾತು ಅಮೂಲ್ಯವಾದದ್ದು, ಅದನರಿತವನೇ ಮಾತನಾಡುತ್ತಾನೆ;

ಹೃದಯದ ತಕ್ಕಡಿಯಲ್ಲಿ ತೂಗಿ ಅಳೆದ ಬಳಿಕವೇ ಬಾಯಿಂದ ಹೊರತರುತ್ತಾನೆ”

ಎಂಬ ಕಬೀರರ ದೋಹೆಯೂ ನಾವಾಡುವ ಮಾತಿನ ಕುರಿತದ್ದೇ ಆಗಿದೆ. ❖

ಗುಂಡಣ್ಣ



ಪದಬಂಧ 6342

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಲಲಿತ ಕಲೆಗಳನ್ನು ಬಲ್ಲವನು (4)
3.ಅತಿಯಾದ ದುಃಖ (4)
5.ವರ ತೋರಿಸಿದ ವ್ಯಾಯಾಮದ ಪಟ್ಟು (3)
6.ಸಂಪ್ರದಾಯವನ್ನು ಅನುಸರಿಸುವವನು (4)
7.ತಾನೇ ಊಹಿಸಿದುದು (7)
10.ಅನಿರೀಕ್ಷಿತ ಘಟನೆ (4)
11.ಚಡಪಡಿಸುತ್ತಾ ಧರಿಸಿರುವ ಮೆಟ್ಟು (3)
14.ನಾಲ್ಕು ವೇದಗಳಲ್ಲಿ ಎರಡನೆಯದು (4)
15.ಮರದ ಹತ್ತಿರ ಬಿದ್ದಿರುವ ಪಚ್ಚೆ (4)

ಮೇಲಿಂದ ಕೆಳಕ್ಕೆ

1.ಉತ್ತರದವರ ಚಿಕ್ಕಮ್ಮ (2)
2.ಹೆಂಡತಿಯನ್ನು ಕಳೆದುಕೊಂಡವನು (3)
4.ಅಗಲವಾದ ತಟ್ಟೆ (3)
5.ಹುಟ್ಟುಗುಣವೇ ಇಲ್ಲಿ ಉಲ್ಟಾಪಲ್ಟಾ ಆಗಿದೆ (3)
6.ಕರುವಿಗೆ ಈ ರೀತಿ ತೋರುತ್ತಿರುವ ದಯೆ (3)
8.ಪೋಷಾಕು ಧರಿಸಿದನೇ ಕಾಪಾಡುವವನು! (3)
9.ನೆರೆಹೊರೆಯವರಿಗೆ ನೀಡಿದ ಸಹಾಯ (3)
10.ಆಯಾಳ ಮನೆ! (3)
11.ಮರವಿದ್ದರೂ ಇದು ಬರಗಾಲ! (3)
12.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)

6341ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪೂರ್ವಗ್ರಹ 3.ಪರಿಹಾರ 5.ಕೆರ 7.ಕರಣ 8.ಮಾನ 10.ಶವ 11.ಕಶೇರು 13.ಮರ 15.ಕಲರವ 16.ರಸಾಭಾಸ

ಮೇಲಿಂದ ಕೆಳಕ್ಕೆ: 1.ಪೂರೈಕೆ 2.ಹಸ್ತಕ 3.ಪಯಣ 4.ರಸನ 6.ರಜತೋತ್ಸವ 8.ಮಾರಣಹೋಮ 10.ಶತಕ 11.ಕಕವ 12.ರುಧಿರ 14.ರಭಸ

ಸುಡೊಕು 6726

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4			5		8	2	
8		9						5
	6					3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	

6725 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಮಾರ್ಚ್ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ನವಮಿ ಗಂ 6-30 ನಕ್ಷತ್ರ: ಪೂರ್ವಾಷಾಢ ಗಂ. 27-03 ಯೋಗ: ವ್ಯತೀಪಾತ ಗಂ. 10-32 ಕರಣ: ಗರ ಗಂ, 6-30 ಕುಂಭ ಮಾಸದ 29 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-43 ಸೂರ್ಯಾಸ್ತ : 06-37, ಮುಸ್ಲಿಂ ದಿನಾಂಕ : 23 ರಂಜಾನ್, ಅದೃಷ್ಟ ಸಂಖ್ಯೆ : 9, 3

ಮೇಷ: ದೃಷ್ಟಿಯಲ್ಲಿ ಬದಲಾವಣೆ ಆಗಲೇಬೇಕಿರುವ ನಿರ್ಧಾರವನ್ನು ಸ್ಪಷ್ಟ ಮಾತುಗಳಲ್ಲಿ ಅಥವಾ ಬರಹದಲ್ಲಿ ತಿಳಿಯಪಡಿಸಿ. ಸಂಗೀತವನ್ನು ಕಲಿಯುವ ಆಸಕ್ತರಿಗೆ ತಂತಿವಾದ್ಯಗಳ ಖರೀದಿಯ ಯೋಗವಿದೆ.

ವೃಷಭ: ದಕ್ಷತೆಗೆ ಅಡ್ಡಿಯಾಗುವ ಘಟನೆಗಳು ನಡೆಯಬಹುದು. ಅದಕ್ಕೆ ಅವಕಾಶ ನೀಡಬೇಡಿ. ಸರಳ ಸ್ವಭಾವವನ್ನು ದುರುಪಯೋಗ ಪಡಿಸಿಕೊಳ್ಳದ ಹಾಗೆ ಜಾಗ್ರತೆ ವಹಿಸಿ.

ಮಿಥುನ: ವೃತ್ತಿಯಲ್ಲಿ ತಾತ್ಕಾಲಿಕ ಸಮಾಧಾನ ಹೊಂದಿರುವವರು ಬದಲಾವಣೆಯನ್ನು ಮಾಡಿಕೊಂಡರೆ ನಿರಂತರ ಸಮಾಧಾನ ಸಿಗುವಂತಾಗಲಿದೆ. ವೃತ್ತಿ ಬದುಕಿನಲ್ಲಿ ಅಭಿಪ್ರಾಯಗಳಿಗೆ ವಿರೋಧ ಬರಲಿದೆ.

ಕರ್ಕಾಟಕ: ಎಲ್ಲಾ ಕಾರ್ಯಗಳಲ್ಲೂ ಆತ್ಮವಿಶ್ವಾಸವಿರಲಿ. ಅತಿಯಾದ ಆತ್ಮ ವಿಶ್ವಾಸ ಜಯಕ್ಕೆ ಹೊಡೆತ ನೀಡುವುದು. ಹೆಂಡತಿಯ ತವರುಮನೆಯ ಕಡೆಯಿಂದ ಅಗತ್ಯದ ಸಹಾಯವಾಗಲಿದೆ.

ಸಿಂಹ: ಜಟಿಲ ಸಮಸ್ಯೆ ಬಗೆಹರಿಸಿಕೊಳ್ಳಲು ಸೂಕ್ತ ಸಲಹೆಯನ್ನು ಮಾರ್ಗದರ್ಶಕರಲ್ಲಿ ಕೇಳಿ ತಿಳಿಯಿರಿ. ನಿಧಾನಗತಿಯ ಕಟ್ಟಡದ ಕಾರ್ಯಗಳು ಚುರುಕಾಗಿ ಮನಸ್ಸಿಗೆ ನೆಮ್ಮದಿ ಬರುವುದು. ಶುಚಿತ್ವದ ಬಗ್ಗೆ ಹೆಚ್ಚಿನ ಗಮನವಹಿಸಿ.

ಕನ್ಯಾ: ಬುದ್ಧಿವಂತಿಕೆಯಿಂದ ಮತ್ತು ವಾಕ್ಚಾತುರ್ಯದಿಂದ ಕಲಹಗಳು ಅಥವಾ ಸಮಸ್ಯೆಗಳು ದೂರಾಗಲಿವೆ. ವ್ಯಕ್ತಿತ್ವಕ್ಕೆ ಸೌಜನ್ಯ ಮತ್ತಷ್ಟು ಮೆರುಗು ನೀಡಲಿದೆ. ಯಾತ್ರೆ ಕೈಗೊಳ್ಳುವ ಮನಸ್ಸಾಗಲಿದೆ.

ತುಲಾ: ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಚ್ಯುತಿ ಬರುವುದಿಲ್ಲ. ಸ್ಟೇಷನರಿ ವ್ಯಾಪಾರ ಕೈಗೊಳ್ಳುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಸುವಿರಿ.

ವೃಶ್ಚಿಕ: ಆಲೋಚನೆಗೆ ಸರಿ ಹೊಂದುವಂಥ ಶಿಕ್ಷಕರು ದೊರಕಿ ಯಶಸ್ಸಿಗೆ ದಾರಿದೀಪವಾಗುತ್ತಾರೆ. ಉದ್ಯೋಗ ಹಾಗೂ ಜೀವನ ಪ್ರವೃತ್ತಿಯಲ್ಲಿ ಮಧ್ಯಮ ರೀತಿಯ ಪ್ರಗತಿಯು ತೋರಿಬರುವುದು.

ಧನು: ಪೊಲೀಸ್ ಹುದ್ದೆಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರ ಸಂಚಾರ ಕಂಡುಬರಲಿದೆ. ತರಬೇತಿ ಪಡೆದುಕೊಳ್ಳುವುದು ಅನಿವಾರ್ಯವಾಗಲಿದೆ. ನೂತನ ವಸ್ತ್ರ ಖರೀದಿಯ ಯೋಗವಿದೆ.

ಮಕರ: ಉದ್ಯೋಗಾಕಾಂಕ್ಷಿಗಳಿಗೆ ಸಂಸ್ಥೆಯ ಲೆಕ್ಕಾಚಾರವನ್ನು ನೋಡುವ ಅಮೋಘ ಅವಕಾಶಗಳ ಸೂಚನೆ ಸಿಗಲಿದೆ. ಕುಟುಂಬದ ಸಣ್ಣ ಸಮಸ್ಯೆಯನ್ನೂ ಅನಾರೋಗ್ಯವನ್ನು ನಿರ್ಲಕ್ಷಿಸುವುದು ತರವಲ್ಲ.

ಕುಂಭ: ಪರಿಸ್ಥಿತಿಗೆ ಅನುಗುಣವಾಗಿ ಭಾವನೆ ವ್ಯಕ್ತಪಡಿಸಿ, ಇಲ್ಲದಿದ್ದರೆ ಮುಜುಗರದ ಸಂದರ್ಭ ಎದುರಿಸಬೇಕಾಗಬಹುದು. ಕುಟುಂಬದ ಹಿರಿಯರಿಂದ ಉಪದೇಶಗಳನ್ನು ಕೇಳುವಿರಿ. ಗುರಿ ಸಾಧಿಸಲು ಶ್ರಮಪಡಬೇಕಾಗಿಲ್ಲ.

ಮೀನ: ನಿರುದ್ಯೋಗಿಗಳಿಗೆ ಸಂಸ್ಥೆಯ ಆಗು-ಹೋಗುಗಳನ್ನು ನೋಡುವ ಹುದ್ದೆ ಪ್ರಾಪ್ತಿಯಾದರೆ ತಿರಸ್ಕರಿಸುವುದು ಸರಿಯಲ್ಲ. ಹೊಸ ಮನೆ ವಸ್ತುಗಳ ಖರೀದಿಗೆ ಮುಂದಾಗುವಿರಿ.

ಅನಿಲ ಕೊರತೆ: ಸೌದೆ ಒಲೆಯಲ್ಲಿ ಅಡುಗೆ

ಇಂಡಕ್ಷನ್ ಸ್ಟೌಗೂ ಕೊರತೆ • ಆಟೊ ಎಲ್‌ಪಿಜಿ ಬಂಕ್‌ಗಳಲ್ಲಿ ದಾಸ್ತಾನು ಖಾಲಿ: ಸಂಕಷ್ಟದಲ್ಲಿ ಆಟೊ ಚಾಲಕರು

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ಹೋಟೆಲ್‌ಗಳು ಮುಚ್ಚುತ್ತಿದ್ದು, ಅನೇಕ ಕಡೆ ಸೌದೆ ಒಲೆಯಲ್ಲಿ ಅಡುಗೆ ಮಾಡಲಾಗುತ್ತಿದೆ.

ಕೊಡಗಿನಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಕೃತಕ ಅಭಾವ ಸೃಷ್ಟಿಸುವ ಸಾಧ್ಯತೆಯನ್ನು ಗಮನದಲ್ಲಿರಿಸಿಕೊಂಡು, ಸಿಲಿಂಡರ್ ಪೂರೈಸುವ ಎಲ್ಲ ಏಜೆನ್ಸಿಗಳ ಮೇಲೂ ಆಹಾರ ಇಲಾಖೆ ಅಧಿಕಾರಿಗಳು ನಿಗಾ ಇರಿಸಿದ್ದಾರೆ. ಹಾಸನ ಮತ್ತು ಮಂಡ್ಯದಲ್ಲಿ ಹೋಟೆಲ್‌ಗಳು ಎಂದಿನಂತೆ ನಡೆದಿವೆ.

ಮೈಸೂರಿನಲ್ಲಿ ಇಂಡಕ್ಷನ್ ಸ್ಟೌ ಬಳಕೆಗೆ ಮಾಲೀಕರು ಆಸಕ್ತಿ ತೋರಿದ್ದು, ಅವುಗಳ ಕೊರತೆಯೂ ಎದುರಾಗಿದೆ. ಇಂದಿರಾ ಕ್ಯಾಂಟೀನ್‌ಗಳಿಗೂ ಸಿಲಿಂಡರ್ ಕೊರತೆ ಬಿಸಿ ತಟ್ಟಿದೆ. ಫಾಸ್ಟ್‌ಫುಡ್ ವ್ಯಾಪಾರಿಗಳು ರಸ್ತೆ ಬದಿಯಲ್ಲೇ ಒಲೆ ಹಾಕಿ ಅಡುಗೆ ಆರಂಭಿಸಿದ್ದಾರೆ.

ಆಟೊ ಎಲ್‌ಪಿಜಿ ಬಂಕ್‌ಗಳಲ್ಲಿ ದಾಸ್ತಾನು ಖಾಲಿಯಾಗಿದ್ದು, ಆಟೊ ಚಾಲಕರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಮಾನ್ಯ ಪೆಟ್ರೋಲ್ ಬಂಕ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸುತ್ತಿವೆ.

ಮೈಸೂರಿನ ವಿದ್ಯಾರಣ್ಯಪುರಂನ ಸೇಂಟ್ ಥಾಮಸ್ ಶಾಲೆ ಸಮೀಪದಲ್ಲಿ ಗುರುವಾರ ಫಾಸ್ಟ್‌ಫುಡ್ ವ್ಯಾಪಾರಿಯೊಬ್ಬರು ಸೌದೆ ಒಲೆ ಬಳಸಿ ಬಿರಿಯಾನಿ ಸಿದ್ಧಪಡಿಸುತ್ತಿದ್ದರು – ಚಿತ್ರ: ಅನೂಪ್ ರಾಘ ಟಿ.

ಗೃಹ ಬಳಕೆ ಸಿಲಿಂಡರ್ ಪೂರೈಕೆ ಎಂದಿನಂತೆ ಇದ್ದು, ಬುಕ್ ಮಾಡಿದ 3-4 ದಿನಗಳ ಒಳಗೆ ಸಿಲಿಂಡರ್ ಸಿಗುತ್ತಿದೆ. ಆದರೆ ಐವಿಆರ್‌ಎಸ್, ಎಸ್‌ಎಂಎಸ್ ಮೂಲಕ ಬುಕಿಂಗ್‌ನಲ್ಲಿ ತೊಂದರೆಯಿಂದಾಗಿ ಗ್ರಾಹಕರು ಗ್ಯಾಸ್ ಏಜೆನ್ಸಿಗಳತ್ತ ಧಾವಿಸುತ್ತಿದ್ದಾರೆ.

'ಶೇ 20-25ರಷ್ಟು ಹೋಟೆಲ್‌ಗಳು ಮುಚ್ಚಿವೆ. ಕೆಲವೆಡೆ ಸೌದೆ ಒಲೆ ಆರಂಭಿಸಿದ್ದು, ಸೀಮಿತ ಸಂಖ್ಯೆಯಲ್ಲಿ ಉಪಾಹಾರ ಸೇವೆ ನೀಡಲಾಗುತ್ತಿದೆ' ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಕೊಡಗಿನಲ್ಲಿ ಹಾಸ್ಟೆಲ್‌ಗಳು, ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿಗಳು ಮತ್ತು ಶಾಲೆಗಳಿಗೆ ಪತ್ರ ಬರೆದಿರುವ ಆಹಾರ ಇಲಾಖೆ ಅಧಿಕಾರಿಗಳು, ಸಿಲಿಂಡರ್ ಕೊರತೆಯಾದರೆ ತಕ್ಷಣ ಗಮನಕ್ಕೆ ತರುವಂತೆ ಕೋರಿದ್ದಾರೆ. ಸಹಾಯವಾಣಿ ಆರಂಭಿಸಲೂ ಸಿದ್ಧತೆ ನಡೆಸಿದ್ದಾರೆ.

'ಗೃಹಬಳಕೆ, ವಾಹನ ಬಳಕೆಗೆ ನೈಸರ್ಗಿಕ ಅನಿಲ ಕಡಿತವಿಲ್ಲ'

ಮಂಗಳೂರು: ಜಿಲ್ಲೆಯಾದ್ಯಂತ ಮನೆಗಳು ಹಾಗೂ ಹೋಟೆಲ್‌ಗಳಿಗೆ ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಕೆಯಲ್ಲಿ (ಪಿಎನ್‌ಜಿ) ಯಾವುದೇ ವ್ಯತ್ಯಯ ಆಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಹನಗಳಿಗೆ ನೈಸರ್ಗಿಕ ಅನಿಲ ಪೂರೈಸುವ 35 ಸಿಎನ್‌ಸಿ ಸ್ಟೇಷನ್‌ಗಳಿದ್ದು, ಅವುಗಳಿಗೆ ಎಂದಿನಂತೆಯೇ ಇಂಧನ ಪೂರೈಕೆ ಆಗುತ್ತಿದೆ.

ಅಡುಗೆಗೆ ಎಲ್‌ಪಿಜಿ ಅವಲಂಬಿಸಿದ್ದ ನಗರದ ಹೋಟೆಲ್‌ಗಳು, ಎಲ್‌ಪಿಜಿ ಸಿಲಿಂಡರ್ ಪೂರೈಕೆ ವ್ಯತ್ಯಯದಿಂದಾಗಿ ತೀವ್ರ ಸಮಸ್ಯೆ ಎದುರಿಸುತ್ತಿವೆ. ಆದರೆ ಪಿಎನ್‌ಜಿ ಸಂಪರ್ಕವಿರುವ ಹೋಟೆಲ್‌ಗಳು ಎಂದಿನಂತೆ ಕಾರ್ಯಾಚರಿಸುತ್ತಿವೆ. 'ನಾವು ನಾಲ್ಕು ತಿಂಗಳಿನಿಂದ ಅಡುಗೆಗೆ ಪಿಎನ್‌ಜಿಯನ್ನು ಇಂಧನವಾಗಿ ಬಳಸುತ್ತಿದ್ದೇವೆ. ಕೊಲ್ಲಿ ಯುದ್ಧ ಆರಂಭವಾದ ಬಳಿಕವೂ ನಮಗೆ ಪಿಎನ್‌ಜಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಆಗಿಲ್ಲ' ಎಂದು ಸುರತ್ಕಲ್‌ನ ಸೂರಜ್ ಇಂಟರ್‌ನ್ಯಾಷನಲ್ ಹೋಟೆಲ್‌ನವರು ತಿಳಿಸಿದರು.

ಊಟಕ್ಕೆ ಪರದಾಡಿದ ವಿದ್ಯಾರ್ಥಿಗಳು

ಕೊಪ್ಪಳ: ಇಲ್ಲಿನ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಕಿಮ್ಸ್) ವಿದ್ಯಾಭ್ಯಾಸ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಗುರುವಾರ ವಾಣಿಜ್ಯ ಬಳಕೆಯ ಸಿಲಿಂಡರ್ ಕೊರತೆ ಕಾಡಿದ್ದು ಮಧ್ಯಾಹ್ನದ ಊಟಕ್ಕೆ ಪರದಾಡುವಂತಾಯಿತು.

360 ವಿದ್ಯಾರ್ಥಿಗಳನ್ನು ಹೊಂದಿರುವ ಹಾಸ್ಟೆಲ್‌ನಲ್ಲಿ ಮಧ್ಯಾಹ್ನ ಅಡುಗೆ ತಯಾರಿಸುವ ಕೋಣೆ ಬಂದ್ ಮಾಡಲಾಗಿತ್ತು. ಬೆಳಿಗ್ಗೆಯ ಉಪಾಹಾರ ತಯಾರಿಸಲು ಬೇಕಾದಷ್ಟು ಮಾತ್ರ ಸಿಲಿಂಡರ್ ಇತ್ತು. ಆದ್ದರಿಂದ ವಿದ್ಯಾರ್ಥಿಗಳು ಊಟಕ್ಕಾಗಿ ಹೋಟೆಲ್‌ಗಳ ಮೊರೆ ಹೋದರು. ಸಂಜೆ ಸಮಸ್ಯೆ ಪರಿಹಾರವಾಯಿತು.

'ಸಿಲಿಂಡರ್ ಖಾಲಿಯಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾದ ಮಾಹಿತಿ ಬಂದ ತಕ್ಷಣ ಜಿಲ್ಲಾಧಿಕಾರಿ ಜೊತೆ ಮಾತನಾಡಿ ಸಮಸ್ಯೆ ಪರಿಹರಿಸಿದ್ದೇನೆ. ಸಂಜೆ ಸಿಲಿಂಡರ್ ಲಭಿಸಿವೆ' ಎಂದು ಕಿಮ್ಸ್ ನಿರ್ದೇಶಕ ಡಾ.ವಿಜಯನಾಥ ಇಟಗಿ ತಿಳಿಸಿದರು.

ಸೌದೆ ದರ ದಿಢೀರ್ ಏರಿಕೆ

ಚಾಮರಾಜನಗರ: ಸೌದೆ ಒಲೆಗಳ ಬಳಕೆ ಶುರುವಾದ ಬೆನ್ನಿಗೇ ಸೌದೆಗೆ ದಿಢೀರ್ ಬೇಡಿಕೆ ಹೆಚ್ಚಾಗಿದ್ದು, ದರವೂ ಗಗನಕ್ಕೇರಿದೆ. ಕ್ವಿಂಟಲ್ ಸೌದೆಯ ದರವು ₹2 ಸಾವಿರದಿಂದ ₹3 ಸಾವಿರಕ್ಕೆ ಏರಿಕೆಯಾಗಿದೆ.

ಮೈಸೂರು, ನೆರೆಯ ತಮಿಳುನಾಡಿನಿಂದ ವುಡ್ ಫೈರ್ ಸ್ಟೌಗಳನ್ನು ತರಿಸಿಕೊಳ್ಳಲಾಗುತ್ತಿದೆ. ಕೆಲವು ಹೋಟೆಲ್‌ಗಳಲ್ಲಿ ಹೆಚ್ಚು ಗ್ಯಾಸ್ ಬೇಡುವ ಚೈನೀಸ್ ಹಾಗೂ ಎಣ್ಣೆಯಲ್ಲಿ ಕರಿದ ಖಾದ್ಯಗಳ ತಯಾರಿಯನ್ನು ಕೈಬಿಡಲಾಗಿದೆ ಎಂದು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ಪ್ರತಾಪ್ ತಿಳಿಸಿದರು.

ಸುದ್ದಿ 2 ನಿಮಿಷ

'ಎಲ್‌ಪಿಜಿ ಸಿಲಿಂಡರ್ ಕೊರತೆ: ಸಂಸದರು ನ್ಯಾಯ ಒದಗಿಸಲಿ'

ಬೆಂಗಳೂರು: 'ರಾಜ್ಯದ ಸಂಸದರು ಎಲ್‌ಪಿಜಿ ಸಿಲಿಂಡರ್ ಕೊರತೆ ವಿಚಾರವಾಗಿ ಸಂಸತ್ತಿನಲ್ಲಿ ಮಾತನಾಡಿ ನ್ಯಾಯ ಒದಗಿಸಿಕೊಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಈ ವಿಚಾರವಾಗಿ ಬಿಜೆಪಿಯ ಯಾವುದೇ ಸಂಸದರು ಬಾಯಿ ಬಿಡುತ್ತಿಲ್ಲ' ಎಂದರು.

'ಇಂಧನ ಬೆಲೆ ಏರಿಕೆಯಿಂದ ಜನರು ಪರದಾಡುತ್ತಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಏನೂ ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರ ಇದಕ್ಕೆ ಹೊಣೆ. ಕೇಂದ್ರ ಸರ್ಕಾರವು ವಿದೇಶಾಂಗ ನೀತಿಯ ಬಗ್ಗೆ ಸ್ಪಷ್ಟವಾಗಿ ಮಾತನಾಡುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನಾಗರಿಕರಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಮುಂದೆ ಪರಿಸ್ಥಿತಿ ಹೇಗಿರುತ್ತದೆಯೊ? ಈಗಾಗಲೇ ಗ್ಯಾಸ್ ಬಳಕೆಯ ಆಟೊಗಳು ಸಂಚಾರ ಸ್ಥಗಿತಗೊಂಡಿದ್ದು, ಸಮಸ್ಯೆ ಹೆಚ್ಚುತ್ತಿದೆ' ಎಂದರು.

₹97 ಲಕ್ಷ ಮೌಲ್ಯದ ಚಿನ್ನ ಕಳವು

ಕೊಪ್ಪಳ: ನಗರದ ಹಲಗೇರಿ ಗ್ರಾಮದ ಬಳಿಯ ತವ ಪಂಜಾಬ್ ಹೋಟೆಲ್ ಮುಂಭಾಗದಲ್ಲಿ ಊಟಕ್ಕೆ ನಿಲ್ಲಿಸಿದ್ದ ಖಾಸಗಿ ಸ್ಲೀಪರ್ ಕೋಚ್ ಬಸ್‌ನಲ್ಲಿದ್ದ ₹97 ಲಕ್ಷ ಮೌಲ್ಯದ ಚಿನ್ನದ ಬ್ಯಾಗ್ ಬುಧವಾರ ರಾತ್ರಿ ದೋಚಲಾಗಿದೆ.

ಮಂಗಳೂರಿನ ಯುನಿಷೇಪ್ ಡೈಮಂಡ್ ಎಲ್‌ಎಲ್‌ಪಿ ಕಂಪನಿಯ ಪ್ರತಿನಿಧಿಗಳಾಗಿದ್ದ ಮಹಮ್ಮದ್ ಅಸ್ಗರ್ ಮತ್ತು ಇರ್ಷಾದ್ ಅವರು ಬಂಗಾರ ಮಾರಾಟಕ್ಕಾಗಿ ರಾಯಚೂರು ಜಿಲ್ಲೆಯ ಸಿಂಧನೂರಿಗೆ ಬಂದು ವಾಪಸ್ ಹೋಗುವಾಗ ಘಟನೆ ನಡೆದಿದೆ.

ಮಹಮ್ಮದ್ ಹಾಗೂ ಇರ್ಷಾದ್ ಸಿಂಧನೂರಿನಲ್ಲಿ ಆಭರಣದ ಅಂಗಡಿಯೊಂದರಲ್ಲಿ 4 ತಾಸು ಕಳೆದಿದ್ದು, ಯಾವ ಬಸ್‌ನಲ್ಲಿ ವಾಪಸ್ ಹೋಗಬೇಕು ಎಂಬ ಬಗ್ಗೆ ಚರ್ಚಿಸಿದ್ದರು. ಈ ವಿಷಯ ತಿಳಿದುಕೊಂಡ ನಾಲ್ಕರು ಆರೋಪಿಗಳ ಪೈಕಿ ಒಬ್ಬ ಚಿನ್ನದ ವ್ಯಾಪಾರಿಗಳಿದ್ದ ಬಸ್‌ನಲ್ಲಿಯೇ ಬಂದಿದ್ದಾನೆ. ಉಳಿದ ಮೂವರು ಬೇರೆ ವಾಹನದಲ್ಲಿ ಹಿಂಬಾಲಿಸಿಕೊಂಡು ಬಂದಿದ್ದಾರೆ. ಕೊಪ್ಪಳದಲ್ಲಿ ಊಟಕ್ಕೆಂದು ಬಸ್ ನಿಲ್ಲಿಸಿದಾಗ ಆರೋಪಿ ಬ್ಯಾಗ್ ತೆಗೆದುಕೊಂಡು ಹೋಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲ್‌ಪಿಜಿ ಬಿಕ್ಕಟ್ಟಿಗೆ 'ಎಥೆನಾಲ್ ಸ್ಟೌ' ಪರಿಹಾರ: ಮುರುಗೇಶ್ ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಪೂರೈಕೆಯಲ್ಲಿ ಉಂಟಾಗಿರುವ ಅಭಾವವನ್ನು ಸಮರ್ಥವಾಗಿ ಎದುರಿಸಲು, ಸ್ವದೇಶಿ ತಂತ್ರಜ್ಞಾನದ 'ಎಥೆನಾಲ್ ಸ್ಟೌ' ಬಳಕೆಗೆ ಸರ್ಕಾರ ಹೆಚ್ಚಿನ ಒತ್ತು ನೀಡಬೇಕು ಎಂದು ಎಂಆರ್‌ಎನ್ ಉದ್ಯಮ ಸಮೂಹದ ಸಂಸ್ಥಾಪಕ ಮುರುಗೇಶ್ ಆರ್. ನಿರಾಣಿ ಅವರು ಸರ್ಕಾರದ ಮುಂದೆ ಪ್ರಸ್ತಾವ ಇಟ್ಟಿದ್ದಾರೆ.

'ಎಥೆನಾಲ್ ಸ್ಟೌಗಳನ್ನು 2004ರಲ್ಲೇ ಅಭಿವೃದ್ಧಿಪಡಿಸಲಾಗಿದ್ದು, ಸೀಮೆಎಣ್ಣೆ ಒಲೆಗಳ ಮಾದರಿಯಲ್ಲೇ ಅತ್ಯಂತ ಸರಳ ಹಾಗೂ ಜನಸ್ನೇಹಿ ವಿನ್ಯಾಸ ಹೊಂದಿವೆ. ದೇಶದ ವಿವಿಧೆಡೆ 24 ಲಕ್ಷಕ್ಕೂ ಅಧಿಕ ಕುಟುಂಬಗಳು ಈ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿವೆ' ಎಂದಿದ್ದಾರೆ.

'ಎಲ್‌ಪಿಜಿಗೆ ಹೋಲಿಸಿದರೆ ಎಥೆನಾಲ್ ತುಸು ದುಬಾರಿ ಎನಿಸಿದರೂ ಇದು ಸಂಪೂರ್ಣವಾಗಿ ಪರಿಸರಸ್ನೇಹಿ ಇಂಧನವಾಗಿದೆ. ಎಥೆನಾಲ್ ತಯಾರಿಕೆಗೆ ಕಬ್ಬು, ಮೆಕ್ಕೆಜೋಳ, ಕಳಪೆ ಗುಣಮಟ್ಟದ ಅಕ್ಕಿ, ಹುಲ್ಲು ಹಾಗೂ ಸಿಹಿ

'ಎಥೆನಾಲ್ ಸ್ಟೌ'

ಜೋಳದಂತಹ ಕೃಷಿ ಉತ್ಪನ್ನಗಳು ಮತ್ತು ತ್ಯಾಜ್ಯಗಳನ್ನು ಬಳಸಬಹುದಾಗಿದೆ. ಗೃಹಬಳಕೆಯ ಇಂಧನವಾಗಿ ಎಥೆನಾಲ್ ಮನ್ನಣೆ ಪಡೆದರೆ, ಕೃಷಿ ಉತ್ಪನ್ನಗಳಿಗೆ ಸುಸ್ಥಿರ ಮಾರುಕಟ್ಟೆ ಲಭ್ಯವಾಗಿ ರೈತರ ಆದಾಯ ದುಪ್ಪಟ್ಟಾಗಲಿದೆ' ಎಂದು ಹೇಳಿದ್ದಾರೆ.

'ಮುಂದುವರಿದಿರುವ ದೇಶಗಳು ಎಥೆನಾಲ್ ಬಳಕೆ ಪದ್ಧತಿಯನ್ನು ಅಳವಡಿಸಿಕೊಂಡಿದೆ. ದೇಶದಲ್ಲಿ ಪ್ರಸ್ತುತ ಎಥೆನಾಲ್ ಉತ್ಪಾದನೆಯು ಹೇರಳವಾಗಿದೆ. ಈ ಸಂಪನ್ಮೂಲವನ್ನು ಸಮರ್ಪಕವಾಗಿ ವಿನಿಯೋಗಿಸಲು ಸರ್ಕಾರವು ಮೊದಲ ಹಂತದಲ್ಲಿ ಹೋಟೆಲ್, ವಸತಿನಿಲಯ ಹಾಗೂ ಲಾಡ್ಜ್‌ಗಳಲ್ಲಿ ಎಥೆನಾಲ್ ಸ್ಟೌ ಬಳಕೆಯನ್ನು ಕಡ್ಡಾಯಗೊಳಿಸಬೇಕು' ಎಂದು ಅವರು ಆಶಿಸಿದ್ದಾರೆ.

450 ಎಕರೆ ಸರ್ಕಾರಿ ಭೂಮಿ ಕಬಳಿಕೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಕಲಿ ಸಾಗುವಳಿ ಚೀಟಿ, ಮ್ಯುಟೇಷನ್ ಸೃಷ್ಟಿಸಿ ರೆಕಾರ್ಡ್ ರೂಂ ಕಡತದಲ್ಲಿ ಸೇರಿಸುವ ಮೂಲಕ 450 ಎಕರೆ ಸರ್ಕಾರಿ ಭೂಮಿ ಕಬಳಿಸಿರುವುದು ಪತ್ತೆಯಾಗಿದ್ದು, ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

1996ರಿಂದ 2001ರ ಅವಧಿಯಲ್ಲಿ 10 ಗುಂಟೆಯಿಂದ 4ಎಕರೆ ತನಕ 147 ಜನರಿಗೆ ಭೂ ಮಂಜೂರಾತಿ ಆಗಿದೆ ಎಂಬಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಅಲ್ಲದೇ ಅಷ್ಟೂ ಮ್ಯುಟೇಷನ್ ಮತ್ತು ಕೈ ಬರಹದ ಪಹಣಿಗಳನ್ನು ತರೀಕೆರೆಯ ಸರ್ಕಾರಿ ಅಭಿಲೇಖಾಲಯದ ಪಟ್ಟಿಗೆ ಅನಧಿಕೃತವಾಗಿ ಸೇರ್ಪಡೆ ಮಾಡಲಾಗಿದೆ. ಒಟ್ಟಾರೆ 450 ಎಕರೆ 23 ಗುಂಟೆ ಕಬಳಿಸಲಾಗಿದೆ ಎಂದು ತಹಶೀಲ್ದಾರ್ ನೇತೃತ್ವದ ತನಿಖಾ ತಂಡ ವರದಿ ಮಾಡಿದೆ.

ಸಾಗುವಳಿ ಚೀಟಿಯೊಂದಿಗೆ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯಕ್ಕೆ ದಾಖಲೆ ಒದಗಿಸಲು ತರೀಕೆರೆ ರೆಕಾರ್ಡ್ ರೂಂನಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಆ ಸಂಖ್ಯೆಯ ದಾಖಲೆಗಳು ಪತ್ತೆಯಾಗಿಲ್ಲ. ನ್ಯಾಯಾಲಯಕ್ಕೆ ಸಲ್ಲಿಕೆಯಾಗಿರುವ ಸಾಗುವಳಿ ಚೀಟಿಗಳಲ್ಲಿ ನಮೂದಾಗಿರುವ ಸಂಖ್ಯೆಯನ್ನು ಗಮನಿಸಿದರೆ ಅದು ಬೇರೆ ಊರಿನಲ್ಲಿ ನೀಡಿರುವ ಸಾಗುವಳಿ ಚೀಟಿಯಾಗಿದೆ. ಮನಸ್ಸಿಗೆ ಬಂದಂತೆ ಸಾಗುವಳಿ ಚೀಟಿ ಸಂಖ್ಯೆ ನೀಡಿ ನಕಲಿಯಾಗಿ ಸೃಷ್ಟಿಸಿ ಹಂಚಿಕೆ ಮಾಡಲಾಗಿದೆ ಎಂದು ದೂರಲಾಗಿತ್ತು.

ಈ ಜಾಡು ಹಿಡಿದು ಅಷ್ಟೂ ದಾಖಲೆಗಳನ್ನು ತಹಶೀಲ್ದಾರ್ ವಿನಾಯಕ ಸಾಗರ್ ನೇತೃತ್ವದ ತನಿಖಾ ತಂಡ ಪರಿಶೀಲನೆ ನಡೆಸಿದೆ. ಈ ಸಂದರ್ಭದಲ್ಲಿ 147 ಪ್ರಕರಣಗಳಲ್ಲಿ ಮ್ಯುಟೇಷನ್‌ಗಳು ಮತ್ತು ಕೈಬರಹದ ಪಹಣಿಗಳನ್ನು ರೆಕಾರ್ಡ್ ರೂಂ ಕಡತಗಳಲ್ಲಿ ಸೇರ್ಪಡೆ ಮಾಡಿರುವುದು ಗೊತ್ತಾಗಿದೆ. ಆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ತಹಶೀಲ್ದಾರ್, ಕಂದಾಯ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ ಸಹಿಗಳು ಬೇರೆ ಬೇರೆ ಕಡತಗಳಲ್ಲಿ ಹುಡುಕಿ ತಾಳೆ ಹಾಕಲಾಗಿದೆ. ಆದರೆ, ಸಹಿಗಳು ತಾಳೆಯಾಗುತ್ತಿಲ್ಲ.

ತರೀಕೆರೆ ತಾಲ್ಲೂಕಿನ ಸಿದ್ದರಹಳ್ಳಿ, ದೋರನಾಳು, ಹುರುಳಿಹಳ್ಳಿ, ಯರೇಬೈಲು, ಮಳಲಿಚನ್ನೇನಹಳ್ಳಿ, ಜೋಡಿಕೋಡಿಹಳ್ಳಿ, ಎಚ್.ತಿಮ್ಮಾಪುರ, ಯಲುಗೆರೆ, ಎಚ್.ರಂಗಾಪುರ, ಹಿರೇಕಾತೂರು, ಹೊಸಹಳ್ಳಿ, ಮುಂಡ್ರೆ, ಲಕ್ಕವಳ್ಳಿ ಹೋಬಳಿಯ ಗುರುಪುರ, ಶಾಂತಿಪುರ, ಗುಡ್ಡದಬೀರನಹಳ್ಳಿ, ಕರಕುಚ್ಚಿ, ಹಿರಿಗಾಪುರ, ವಡ್ಡರದಿಬ್ಬ, ಗೋಪಾಲ ಗ್ರಾಮಗಳ ಸರ್ಕಾರಿ ಜಮೀನಿಗೆ ಸಂಬಂಧಿಸಿದ ಅಕ್ರಮ ಮ್ಯುಟೇಷನ್‌ಗಳು ಸೃಷ್ಟಿಯಾಗಿವೆ ಎಂಬುದನ್ನು ತನಿಖಾ ತಂಡ ಪಟ್ಟಿ ಮಾಡಿದೆ. ಎಚ್. ತಿಮ್ಮಾಪುರ, ಶಾಂತಿಪುರ ಮತ್ತು ಗುಡ್ಡದಬೀರನಹಳ್ಳಿ ಗ್ರಾಮಗಳ ಸರ್ವೆ ನಂಬರ್‌ಗಳಲ್ಲೇ ಹೆಚ್ಚು ಅಕ್ರಮ ಮ್ಯುಟೇಷನ್‌ಗಳು ಸೃಷ್ಟಿಯಾಗಿವೆ ಎಂಬುದನ್ನು ತನಿಖಾ ವರದಿ ಹೇಳುತ್ತದೆ.

ಮ್ಯುಟೇಷನ್ ಪುಸ್ತಕವೇ ಇಲ್ಲ

ನಾಗೇನಹಳ್ಳಿ, ಸಂತೇದಿಬ್ಬದ ಕಾವಲು, ಶಿವಪುರ, ಕೆ.ಚಟ್ನಹಳ್ಳಿ, ನೇರಲೆಕೆರೆ, ಮುಂಡನಹಳ್ಳಿ, ಎ.ಗೊಲ್ಲರಹಳ್ಳಿ, ಸಾವೆ ಮರಡಿಕಾವಲು, ಗುಂಡೇನಹಳ್ಳಿ, ಅರಸೀಕೆರೆ ಗ್ರಾಮಗಳಿಗೆ ಸಂಬಂಧಿಸಿದ ಮ್ಯುಟೇಷನ್ ಪುಸ್ತಕಗಳೇ ಕಚೇರಿಯಲ್ಲಿ ಲಭ್ಯ ಇಲ್ಲದಿರುವುದನ್ನೂ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪುಸ್ತಕ ಲಭ್ಯವಿಲ್ಲದಿರುವುದರಿಂದ ಆ ಗ್ರಾಮಗಳ ಸಾಗುವಳಿ ಚೀಟಿಗಳ ನೈಜತೆ ಪರಿಶೀಲನೆ ಸಾಧ್ಯವಾಗಿಲ್ಲ. 147 ಪ್ರಕರಣಗಳಲ್ಲಿ ಕೇವಲ ಕೈ ಬರಹದ ಮ್ಯುಟೇಷನ್‌ಗಳಾಗಿದ್ದು, ನಂತರದಲ್ಲಿ ಡಿಜಿಟಲ್ ಆರ್‌ಟಿಸಿಯಲ್ಲಿ ನಮೂದಾಗಿಲ್ಲ. 26 ವರ್ಷಗಳ ನಂತರವೂ ಇಷ್ಟು ಮ್ಯುಟೇಷನ್‌ಗಳು ಡಿಜಿಟಲ್ ಆರ್‌ಟಿಸಿಯಲ್ಲಿ ನಮೂದಾಗದಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಸರ್ಕಾರಿ ಜಾಗ ಕಬಳಿಸಲು ಅನಧಿಕೃತವಾಗಿ ಸೃಷ್ಟಿಸಿ ಕಚೇರಿಯ ರೆಕಾರ್ಡ್ ರೂಂ ಕಡತಗಳಲ್ಲಿ ಸೇರಿಸಲಾಗಿದೆ ಎಂದು ತಂಡ ಶಂಕಿಸಿದೆ. ನಕಲಿ ದಾಖಲೆಗಳನ್ನು ಕಡತಗಳಲ್ಲಿ ಸೇರಿಸುವಲ್ಲಿ ಕಚೇರಿಯ ಸಿಬ್ಬಂದಿ ಮತ್ತಿತರರ ಕೈವಾಡವಿರುವ ಶಂಕೆ ಇದೆ. ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತರೀಕೆರೆ ಠಾಣೆಗೆ ತಹಶೀಲ್ದಾರ್ ದೂರು ನೀಡದ್ದು, ಬುಧವಾರ ಎಫ್‌ಐಆರ್ ದಾಖಲಾಗಿದೆ.

ರಥೋತ್ಸವ...

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಜಾತ್ರೋತ್ಸವದ ಪ್ರಯುಕ್ತ ಗುರುವಾರ ನಡೆದ ರಥೋತ್ಸವದಲ್ಲಿ ಭಾಗವಹಿಸಿದ ಭಕ್ತರು

ಕೆಪಿಎಸ್‌ಸಿ: ವ್ಯಕ್ತಿತ್ವ ಪರೀಕ್ಷೆ ರದ್ದು

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ 1:3 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಮಾರ್ಚ್ 23ರಿಂದ ಮೇ 4ರವರೆಗೆ ನಡೆಸಲು ಉದ್ದೇಶಿಸಿದ್ದ ವ್ಯಕ್ತಿತ್ವ ಪರೀಕ್ಷೆಯನ್ನು (ಸಂದರ್ಶನ) ಕೆಪಿಎಸ್‌ಸಿ ರದ್ದುಪಡಿಸಿದೆ.

ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ಜ್ಯೋತಿ, 'ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸಿದ್ದ ವೇಳಾಪಟ್ಟಿಯನ್ನು ಆಡಳಿತಾತ್ಮಕ ಕಾರಣಗಳಿಗೆ ಹಿಂಪಡೆಯಲಾಗಿದೆ. ಪರಿಷ್ಕೃತ ದಿನಾಂಕ ಮತ್ತು ಸಮಯ ಶೀಘ್ರ ಪ್ರಕಟಿಸಲಾಗುವುದು' ಎಂದು ತಿಳಿಸಿದ್ದಾರೆ.

ಮುಖ್ಯ ಪರೀಕ್ಷೆಯಿಂದ ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ 1,152 ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಎಸ್‌ಸಿ ಮಾರ್ಚ್ 2ರಂದು ಪ್ರಕಟಿಸಿತ್ತು. ಅರ್ಹರ ಆಯ್ಕೆಯ ವೇಳೆ ಅಕ್ರಮ ನಡೆದಿದೆ ಎಂದು ಹಲವು ಅಭ್ಯರ್ಥಿಗಳು ಆರೋಪಿಸಿದ್ದರಿಂದ ಪರೀಕ್ಷೆ ರದ್ದಾಗಿತ್ತು.

ಮಾಜಿ ಸಚಿವರ ವಿರುದ್ಧ ಪ್ರಕರಣ ದಾಖಲಿಸಲು ಮನವಿ

ಬೆಂಗಳೂರು: ಮಾಜಿ ಸಚಿವ ಶಿವನಗೌಡ ನಾಯಕ ಅವರ ವಿರುದ್ಧ ಬೆದರಿಕೆ ಹಾಗೂ ದ್ವೇಷ ಮೂಡಿಸುವ ಆರೋಪದ ಅಡಿ ಪ್ರಕರಣ ದಾಖಲಿಸುವಂತೆ ಆಗ್ರಹಿಸಿ ಸಾಮಾಜಿಕ ಕಾರ್ಯಕರ್ತ ಲಕ್ಷ್ಮೀಕಾಂತ ಸಿಂಗೆ ಅವರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದಾರೆ.

ದೂರಿನ ಪ್ರತಿಯನ್ನು ಸ್ವೀಕರಿಸಿರುವ ಕಮಿಷನರ್ ಕಚೇರಿಯ ಅಧಿಕಾರಿಗಳು, ಸಂಬಂಧಿಸಿದ ಠಾಣೆಗೆ ದೂರನ್ನು ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಒಳಮೀಸಲಾತಿಗೆ ಸಂಬಂಧಿಸಿದ ಮಸೂದೆಯನ್ನು ಸರ್ಕಾರವೇ ಮಂಡಿಸಿದೆ. ರಾಜ್ಯಪಾಲರು ಅಂಕಿತ ಹಾಕಬೇಕೆಂದು ಸಚಿವರೇ ವಿನಂತಿ ಮಾಡಿದ್ದಾರೆ. ಹೀಗಿದ್ದರೂ, ದೇವದುರ್ಗ ಕ್ಷೇತ್ರದ ಮಾಜಿ ಶಾಸಕರೂ ಆಗಿರುವ ಶಿವನಗೌಡ ನಾಯಕ ಅವರು, ಚಿತ್ರದುರ್ಗದಲ್ಲಿ ಮಾರ್ಚ್ 8ರಂದು ನಡೆದಿದ್ದ ಬಿಜೆಪಿ ಎಸ್‌ಸಿ, ಎಸ್‌ಟಿ ನಾಯಕರ ಜನಾಂದೋಲನಾ ಸಭೆಯಲ್ಲಿ ಸಚಿವ ಎಚ್.ಸಿ.ಮಹದೇವಪ್ಪ ಅವರಿಗೆ ಬೆದರಿಕೆ ಒಡ್ಡುವ ರೀತಿಯಲ್ಲಿ ಮಾತನಾಡಿದ್ದಾರೆ. ಅಲ್ಲದೇ, ಸಾರ್ವಜನಿಕರನ್ನು ಪ್ರಚೋದಿಸುವಂತೆ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಲಕ್ಷ್ಮೀಕಾಂತ ಸಿಂಗೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ

ಫೋನ್-ಇನ್ ಕಾರ್ಯಕ್ರಮ

ಪ್ರಶ್ನೆ ಕೇಳಿ, ಸಮಸ್ಯೆ ಬಗೆಹರಿಸಿಕೊಳ್ಳಿ

ಸರ್ಕಾರಿ ನೌಕರರ ಸಮಸ್ಯೆಗಳಿಗೆ ಏನು ಪರಿಹಾರ

- ಹಳೇ ಪಿಂಚಣಿ ಯೋಜನೆ ಜಾರಿಯಾಗಲಿದೆಯೇ?
- ಕರ್ನಾಟಕ ಆರೋಗ್ಯ ಸಂಜೀವಿನಿ ಅನುಷ್ಠಾನದಲ್ಲಿ ತೊಡಕುಗಳಿವೆಯೇ?
- ಮುಟ್ಟಿನ ರಜೆ ನೀಡಿದರೂ ರಜೆ ಪಡೆಯಲು ಸಮಸ್ಯೆಯೇ?
- ಕೇಂದ್ರ ಸರ್ಕಾರಿ ನೌಕರರಿಗೆ ಸರಿಸಮನಾದ ವೇತನ 8ನೇ ವೇತನ ಆಯೋಗದಲ್ಲಾದರೂ ನಿರೀಕ್ಷಿಸಬಹುದೇ?
- ನೌಕರರ ರಕ್ಷಣೆ, ಕೆಲಸದ ಸ್ಥಳದಲ್ಲಿ ಉತ್ತಮ ವಾತಾವರಣ ಕಲ್ಪಿಸಲು ಕ್ರಮವೇನು

ಪಾಲ್ಗೊಳ್ಳುವವರು

ಸಿ.ಎಸ್. ಷಡಾಕ್ಷರಿ
ರಾಜ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ದಿನಾಂಕ 14.03.2026 ಶನಿವಾರ

ಸಮಯ: ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ

ಕರೆ ಮಾಡಿ ದೂರವಾಣಿ ಸಂಖ್ಯೆ: 080 45557230

'ಅನುದಾನ ದುರ್ಬಳಕೆ ಶಂಕೆ'

ಹರಿಹರದ ಪಂಚಮಸಾಲಿ ಪೀಠದ ಗೊಂದಲ: ಆರೋಪ

ಪ್ರಜಾವಾಣಿ ವಾರ್ತೆ

ಹರಿಹರ: 'ಸರ್ಕಾರದಿಂದ ಬಂದ ಅನುದಾನ ಮತ್ತು ಭಕ್ತರು ನೀಡಿದ ದೇಣಿಗೆಯಲ್ಲಿ ಕೋಟ್ಯಂತರ ಮೊತ್ತವನ್ನು ಗುರುಪೀಠದ ಮೂವರು ಟ್ರಸ್ಟಿಗಳು ದುರುಪಯೋಗ ಮಾಡಿಕೊಂಡ ಅನುಮಾನವಿದೆ' ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಆಡಳಿತಾಧಿಕಾರಿ ಡಾ.ಎಚ್.ಪಿ. ರಾಜಕುಮಾರ್ ಆರೋಪಿಸಿದರು.



ಡಾ.ಎಚ್.ಪಿ. ರಾಜಕುಮಾರ್

'ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಸದಸ್ಯರಾದ ಚಂದ್ರಶೇಖರ್ ಪೂಜಾರ್, ಜ್ಯೋತಿ ಪ್ರಕಾಶ್ ಹಣ ದುರುಪಯೋಗ ಮಾಡಿಕೊಂಡ ಅನುಮಾನವಿದೆ. ಇವರಿಗೆ ಲೆಕ್ಕಪತ್ರ ಕೇಳಿದಾಗಲೆಲ್ಲ ಗುರುಪೀಠದ ಪೀಠಾಧಿಪತಿ ವಚನಾನಂದ ಶ್ರೀಗಳು ಪೀಠತ್ಯಾಗ ಮಾಡಬೇಕೆಂದು ಒತ್ತಾಯಿಸುತ್ತಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಗುರುಪೀಠದ ಆವರಣದ ಜಮೀನು ಖರೀದಿಗೆ ಮಾಜಿ ಸಚಿವರಾದ ಕರುಣಾಕರ ರೆಡ್ಡಿ, ಶಿವ ದೇವಸ್ಥಾನಕ್ಕೆ ದಿ.ಶಾಮನೂರು ಶಿವಶಂಕರಪ್ಪ, ಗುರುಧ್ಯಾನ ಮಂದಿರಕ್ಕೆ ಮಾಜಿ ಸಿ.ಎಂ. ಬಸವರಾಜ ಬೊಮ್ಮಾಯಿ ದೇಣಿಗೆ ನೀಡಿದ್ದಾರೆ. ಮಠದ ಸಮೀಪದಲ್ಲಿ 4 ಎಕರೆ ಜಮೀನು ಖರೀದಿಗೆ ಹರಿಹರ, ರಾಣೆಬೆನ್ನೂರು, ಸಮುದಾಯದ ಜನರ ನೆರವಿದೆ. ಅಲ್ಲದೆ, ಸರ್ಕಾರದ ಅನುದಾನ, ಭಕ್ತರ ದೇಣಿಗೆಯ ಲೆಕ್ಕ ಕೊಡಬೇಕಿದೆ' ಎಂದು ಹೇಳಿದರು.

'ನಿಯಮಾನುಸಾರ ಲೆಕ್ಕ ಕೇಳಲಾಗುತ್ತಿದೆ. ಮಠದ ಹೆಸರಲ್ಲಿ 4 ಬ್ಯಾಂಕ್ ಖಾತೆಗಳ ಬದಲಿಗೆ, 14 ಖಾತೆಗಳಿರುವುದು ಪರಿಶೀಲನೆ ವೇಳೆ ಗೊತ್ತಾಗಿದೆ. ಬ್ಯಾಂಕ್ ಖಾತೆ ನಿರ್ವಹಣೆಗೆ ಬಿ.ಸಿ.ಉಮಾಪತಿ ಹಾಗೂ ಚಂದ್ರಶೇಖರ್ ಪೂಜಾರ್ ಅವರ ಸಹಿಯೊಂದಿಗೆ ಆಡಳಿತಾಧಿಕಾರಿ ಸಹಿ ಸೇರಿಸಿ ಎಂದರೂ ಸೇರಿಸಿಲ್ಲ' ಎಂದರು.

'ಗುರುಪೀಠದ ಆವರಣದ ಕಟ್ಟಡದ ನಿರ್ಮಾಣಕ್ಕಾಗಿ ನಾನು ವೈಯಕ್ತಿಕವಾಗಿ ₹ 15 ಲಕ್ಷ ಮೊತ್ತದ ದೇಣಿಗೆ ಚೆಕ್ ಟ್ರಸ್ಟಿ ಚಂದ್ರಶೇಖರ್ ಪೂಜಾರ್ ಅವರಿಗೆ ನೀಡಿದ್ದೇನೆ. ಈವರೆಗೂ ರಶೀದಿ ನೀಡಿಲ್ಲ. ಗುರುಪೀಠದ ಇತರ ಆಸ್ತಿಗಳ ರಕ್ಷಣೆಗೆ ಕ್ರಮಕೈಗೊಳ್ಳದೇ ನಿರ್ಲಕ್ಷ್ಯ ವಹಿಸಲಾಗಿದೆ' ಎಂದು ಸಮುದಾಯದ ಮುಖಂಡ ಸೋಮಣ್ಣ ಬೇವಿನಮರದ ದೂರಿದರು.

'ಶ್ರೀಗಳ ಪೀಠ ತ್ಯಾಗದ ಪ್ರಕ್ರಿಯೆ ನಡೆಸಿದರೆ ಈ ಮೂವರ ವಿರುದ್ಧ ಸಮುದಾಯದ ಜನರೊಂದಿಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಅವರು ಹೇಳಿದರು.

2 ಎಕರೆ ಜಮೀನು ದುರುಪಯೋಗ

ಸುದ್ದಿಗೋಷ್ಠಿ ನಡೆಯುವಾಗಲೇ ಸಮುದಾಯದ ಮುಖಂಡ, ಹೊನ್ನಾಳಿಯ ಪ್ರಶಾಂತ್ ಪ್ಯಾಟಿ ಎಂಬವರು ಏರುಧ್ವನಿಯಲ್ಲಿ ಮಾತನಾಡಿ, ಸೋಮಣ್ಣ ಬೇವಿನಮರದ ಅವರು ಶಿಗ್ಗಾವಿಯಲ್ಲಿನ ಗುರುಪೀಠಕ್ಕೆ ಸೇರಿದ 2 ಎಕರೆ ಜಮೀನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಆರೋಪಿಸಿದಾಗ, ಕೆಲಕಾಲ ಗೊಂದಲ ಸೃಷ್ಟಿಯಾಯಿತು. ನಂತರ ಪೊಲೀಸರು ಅವರನ್ನು ಹೊರಕ್ಕೆ ಕಳಿಸಿದರು.

ಬೀದಿ ರಂಪ ಮಾಡಬೇಡಿ: ಆಗ್ರಹ

ಹೊನ್ನಾಳಿಯ ಪ್ರಶಾಂತ್ ಪ್ಯಾಟಿ, ಶಶಿಧರ ಗೌಡ, ಹಾಲೇಶ, ಚಂದ್ರ ಪಾಟೀಲ್, ರಾಜುಗೌಡ ಎಂಬವರು ಗುರುಪೀಠದ ಆವರಣದಲ್ಲಿ ಪ್ರತ್ಯೇಕ ಸುದ್ದಿಗೋಷ್ಠಿ ನಡೆಸಿ, ಎರಡೂ ಗುಂಪುಗಳು ಸಮನ್ವಯದಿಂದ ನಾಲ್ಕು ಗೋಡೆಗಳ ಮಧ್ಯದಲ್ಲಿ ಗೊಂದಲಗಳನ್ನು ಬಗೆಹರಿಸಿಕೊಳ್ಳಬೇಕು. ಇದನ್ನು ಹಾದಿ, ಬೀದಿ ರಂಪಾಟ ಮಾಡಬಾರದೆಂದು ಆಗ್ರಹಿಸಿದರು.

ಬೆಂಗಳೂರಿನಲ್ಲಿ ಮಾದಿಗ, ಅಲೆಮಾರಿ ಹಾಗೂ ಇತರೆ ಸಮುದಾಯಗಳಿಂದ ಬೃಹತ್ ಪ್ರತಿಭಟನೆ

'ಸುಪ್ರೀಂ' ತೀರ್ಪು: ಒಳಮೀಸಲು ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಒಳ ಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಮಾದಿಗ, ಅಲೆಮಾರಿ ಹಾಗೂ ಇತರೆ ಸಮುದಾಯಗಳ ಸಾವಿರಾರು ಜನರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. 'ಒಳಮೀಸಲಾತಿ ಜಾರಿ ಮಾಡಿ, ಇಲ್ಲವೇ ಕುರ್ಚಿ ಖಾಲಿ ಮಾಡಿ' ಎಂಬ ಘೋಷಣೆಗಳನ್ನು ಮೊಳಗಿಸಿದರು.

ಮೂರು ದಶಕಗಳಿಂದ ಹೋರಾಟ ನಡೆಸುತ್ತಿದ್ದರೂ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನೇತೃತ್ವದ ಸರ್ಕಾರಗಳು ಬೇಡಿಕೆ ಈಡೇರಿಸಲಿಲ್ಲ. ಚುನಾವಣೆ ವೇಳೆ ಕೇವಲ ಭರವಸೆ ನೀಡಿ ಮೋಸ ಮಾಡುತ್ತಿವೆ ಎಂದು ಸಮುದಾಯದ ನಾಯಕರು ಕಿಡಿಕಾರಿದರು.

ಒಳಮೀಸಲಾತಿ ತಪ್ಪಿಸುವ ಹುನ್ನಾರದಿಂದ ಫೆಬ್ರುವರಿ 27ರಂದು ಹೊರಡಿಸಿರುವ ಆದೇಶವನ್ನು ತಕ್ಷಣ ಹಿಂಪಡೆದು, ನೇಮಕಾತಿಯಲ್ಲಿ ಒಳಮೀಸಲಾತಿ ಕಡ್ಡಾಯಗೊಳಿಸಬೇಕು. ನೇರ ನೇಮಕಾತಿ, ಬಡ್ತಿ, ಮುಂಬಡ್ತಿ ಮತ್ತು ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಬೆಂಗಳೂರಿನಲ್ಲಿ 'ಒಳಮೀಸಲಾತಿ ಹೋರಾಟ ಸಮಿತಿ' ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ಮುಖಂಡ ಬಸವರಾಜ್ ಕೌತಾಳ್ ಮಾತನಾಡಿ, 'ಸಿದ್ದರಾಮಯ್ಯ ಅವರು ಮಾರ್ಚ್ 27ರವರೆಗೂ ಕಾಯದೆ ಎರಡು ದಿನದಲ್ಲಿ ಸಂಪುಟ ಸಭೆ ನಡೆಸಿ, ತೀರ್ಮಾನ ಪ್ರಕಟಿಸಬೇಕು. ನೇಮಕಾತಿಗಳಲ್ಲಿ ವಿಶ್ವವಿದ್ಯಾಲಯವನ್ನು ಒಂದು ಘಟಕ ಎಂದು ಪರಿಗಣಿಸಬೇಕು ಎನ್ನುವ ಪ್ರಸ್ತಾವ ಕೈಬಿಡಬೇಕು. ಅಲೆಮಾರಿ ಸಮುದಾಯಗಳಿಗೆ ಶೇಕಡ 1ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿದರು.

ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಮಾತನಾಡಿ, 'ಒಳಮೀಸಲಾತಿ ಜಾರಿ ಮಾಡಲು ಸರ್ಕಾರ ಹಿಂದೇಟು ಹಾಕಬಾರದು. ದಲಿತರು, ಮುಸ್ಲಿಂ ಸಮುದಾಯದವರು ಒಂದಾದರೆ 131 ವಿಧಾನಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಬಹುದು. ಮೀಸಲಾತಿ ಪಡೆಯುವವರೆಗೂ ಹೋರಾಟ ನಿಲ್ಲಿಸಬೇಡಿ' ಎಂದರು.

ಇದೇ ವೇಳೆ ಕ್ರಾಂತಿಕಾರಿ ಗೀತೆಗಳನ್ನು ಹಾಡಲಾಯಿತು.

ಪ್ರತಿಭಟನೆಯಲ್ಲಿ ಮುಖಂಡರಾದ ಮಾರಸಂದ್ರ ಮುನಿಯಪ್ಪ, ಹನುಮೇಗೌಡ ಬೀರನಕಲ್, ಎಸ್. ಮಾರಪ್ಪ, ಅಂಬಣ್ಣ ಅರೋಲಿಕರ್, ನರಸಪ್ಪ ದಂಡೋರ, ಬಿ.ಆರ್. ಭಾಸ್ಕರ್ ಪ್ರಸಾದ್, ಹರಿರಾಮ್, ಕೇಶವಮೂರ್ತಿ, ಫರ್ನಾಂಡಿಸ್ ಇಪ್ಪಳಗಾಂವ್, ಕರಿಯಪ್ಪ ಗುಡಿಮನಿ ಭಾಗವಹಿಸಿದ್ದರು.

'ತೀರ್ಮಾನಕ್ಕೆ ಒಂದು ದಿನ ಸಾಕು'

'ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಮುಖ್ಯಮಂತ್ರಿಗೆ ಒಂದು ದಿನ ಸಾಕು. ಮಾದಿಗ ಹಾಗೂ ಇತರೆ ಸಮುದಾಯಕ್ಕೆ ಒಳ ಮೀಸಲಾತಿ ನೀಡಲು ಇಷ್ಟವಿಲ್ಲದಿದ್ದರೆ ಸರ್ಕಾರ ನಿರ್ಧಾರ ತಿಳಿಸಲಿ. ಮುಂದಿನ ದಾರಿ ನೋಡಿಕೊಳ್ಳುತ್ತೇವೆ' ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಎಚ್ಚರಿಸಿದರು.

ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ಒಳಮೀಸಲಾತಿಗಾಗಿ ನಡೆದ ಹೋರಾಟದಲ್ಲಿ ಕೆಲವರು ಪ್ರಾಣ ಕಳೆದುಕೊಂಡಿದ್ದಾರೆ. ಸದಾಶಿವ ಆಯೋಗ, ನಾಗಮೋಹನದಾಸ್ ಆಯೋಗದ ವರದಿಯನ್ನು ತಿರಸ್ಕರಿಸಲಾಗಿದೆ. ತೆಲಂಗಾಣ, ಆಂಧ್ರ ಪ್ರದೇಶ, ಪಂಜಾಬ್‌ನಲ್ಲಿ ಒಳಮೀಸಲಾತಿ ಜಾರಿಯಾಗಿದೆ. ಈ ರಾಜ್ಯಗಳಲ್ಲಿಇಲ್ಲದ ಕಾನೂನು ತೊಡಕು, ಕರ್ನಾಟಕದಲ್ಲಿ ಮಾತ್ರ ಏಕೆ ಇದೆ' ಎಂದು ಪ್ರಶ್ನಿಸಿದರು.

27ರಂದು ತೀರ್ಮಾನ: ಆಂಜನೇಯ

'ಬಸವಮೂರ್ತಿ ಸ್ವಾಮೀಜಿ ಮತ್ತು ಹೋರಾಟಗಾರರ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಲಾಗಿದೆ. 56,432 ಹುದ್ದೆಗಳಿಗೆ ಮೀಸಲಾತಿ ನೀಡಲೇಬೇಕು. ಮಾರ್ಚ್ 27ರಂದು ನಡೆಯುವ ಸಂಪುಟ ಸಭೆಯಲ್ಲಿ ನಮ್ಮ ಪಾಲು ಹಂಚಿಕೆಯಾಗುತ್ತದೆ. ನಂತರ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ಯಾರೂ ಆತಂಕ ಪಡುವುದು ಬೇಡ' ಎಂದು ಮಾಜಿ ಸಚಿವ ಎಚ್.ಆಂಜನೇಯ ತಿಳಿಸಿದರು.

ಈ ವೇಳೆ ಸಚಿವ ಕೆ.ಎಚ್. ಮುನಿಯಪ್ಪ, ರಾಷ್ಟ್ರೀಯ ಒಳಮೀಸಲಾತಿ ಹೋರಾಟಗಾರ ಮಂದಕೃಷ್ಣ ಮಾದಿಗ ಹಾಜರಿದ್ದರು.

ಲೋಕಸಭೆ: ಎಲ್‌ಪಿಜಿ ಸಿಲಿಂಡರ್ ಕೋಲಾಹಲ

ರಾಹುಲ್ ಭಾಷಣಕ್ಕೆ ತಡೆ: ಕಟ್ಟುನಿಟ್ಟಾಗಿ ಸದನದ ನಿಯಮ ಪಾಲನೆ: ಸ್ಪೀಕರ್ ಓಂ ಬಿರ್ಲಾ

ನವದೆಹಲಿ (ಪಿಟಿಐ): ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆಗೆ ಸೋಲಾದರೂ, ಲೋಕಸಭೆಯಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಕ್ಸಮರ ಗುರುವಾರವೂ ಮುಂದುವರಿಯಿತು.

ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದಾದ್ಯಂತ ಉಂಟಾಗಿರುವ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಕೊರತೆಯನ್ನು ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಪ್ರಧಾನಿ ಅಮೆರಿಕದೊಂದಿಗೆ ಮಾಡಿಕೊಂಡಿರುವ 'ರಾಜಿ ಒಪ್ಪಂದ'ವನ್ನು ಬಿಡಿಸಿದ್ದೇನೆ' ಎಂದರು.

ಆದರೆ, ಎಲ್‌ಪಿಜಿ ವಿಷಯವಾಗಿ ಪೆಟ್ರೋಲಿಯಂ ಸಚಿವ ಹರದೀಪ್‌ಸಿಂಗ್ ಪುರಿ ಅವರನ್ನು ಎಪ್‌ಸ್ಟೀನ್ ಫೈಲ್ಸ್ ಜತೆಗೆ ನಂಟು ಹಾಕಲು ಪ್ರಯತ್ನಿಸಿದಾಗ, ರಾಹುಲ್ ಭಾಷಣಕ್ಕೆ ಸ್ಪೀಕರ್ ತಡೆಯೊಡ್ಡಿದರು.

'ಸದನದಲ್ಲಿ ಮಾತನಾಡಲು ತಮಗೆ ಪದೇ ಪದೇ ಅವಕಾಶ ನಿರಾಕರಿಸಲಾಗುತ್ತಿದೆ' ಎಂದು ರಾಹುಲ್ ಸ್ಪೀಕರ್ ವಿರುದ್ಧ ಆರೋಪಿಸಿದ್ದರು. ಅವಿಶ್ವಾಸ ನಿರ್ಣಯಕ್ಕೆ ಸೋಲಾದ ಬೆನ್ನಲ್ಲೇ, ಸದನದಲ್ಲಿ ವಿರೋಧ ಪಕ್ಷದ ನಾಯಕರಿಗೆ, 'ವಿಶೇಷ ಸೌಲಭ್ಯ ಇರುವುದಿಲ್ಲ' ಎಂದು ಸ್ಪೀಕರ್ ಹೇಳಿದರು.

ಗುರುವಾರ ಕಲಾಪ ಆರಂಭಗೊಂಡಾಗ ಮತ್ತೆ ಇಬ್ಬರೂ ಮುಖಾಮುಖಿಯಾದರು. 'ದೇಶದ ಇಂಧನ ಮತ್ತು ಆರ್ಥಿಕ ಭದ್ರತೆಯ ಬಗ್ಗೆ ಮಾತನಾಡುವುದಾಗಿ' ರಾಹುಲ್ ಹೇಳಿದರು. 'ಮುಂಚಿತವಾಗಿ ನೋಟಿಸ್ ನೀಡದೆ ಸಂಸದರ ವಿರುದ್ಧ ಆರೋಪ ಮಾಡಲು ಅವಕಾಶ ಇಲ್ಲ' ಎಂದ ಸ್ಪೀಕರ್, ರಾಹುಲ್ ಮಾತು ಮುಂದುವರಿಸಲು ಅವಕಾಶ ನಿರಾಕರಿಸಿದರು.

ರಾಹುಲ್ ಅವರಿಗೆ ಮಾತು ಮುಂದುವರಿಸಲು ಅವಕಾಶ ನೀಡುವಂತೆ ಸಮಾಜವಾದಿ ಪಕ್ಷದ ಧರ್ಮೇಂದ್ರ ಯಾದವ್ ಮನವಿ ಮಾಡಿದರು. ಸ್ಪೀಕರ್ ಅವಕಾಶ ನಿರಾಕರಿಸಿದಾಗ ಕಾಂಗ್ರೆಸ್ ಸಂಸದರು ಸದನದ ಬಾವಿಗಿಳಿದು ಘೋಷಣೆಗಳನ್ನು ಕೂಗಿದರು.

ಬಿಟ್ಟು ಬಿಡಿಸಿದ್ದೇನೆ: 'ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಭಾರತ ಅಮೆರಿಕದ ಅನುಮತಿ ಪಡೆಯಬೇಕಾಗಿದೆ ಹಾಗೂ ತೈಲ, ಅನಿಲ ಪೂರೈಕೆದಾರ ದೇಶಗಳನ್ನು ಆಯ್ಕೆಮಾಡಿಕೊಳ್ಳುವ ಭಾರತದ ಹಕ್ಕನ್ನು ಅಮೆರಿಕದೊಂದಿಗೆ ವಿನಿಮಯ ಮಾಡಿಕೊಳ್ಳಲಾಗಿದೆ. ಇಂಧನ ಭದ್ರತೆ ಪ್ರತಿಯೊಂದು ದೇಶದ ಅಡಿಪಾಯವಾಗಿದ್ದು, ಪ್ರಧಾನಿಯ ರಾಜಿ ಒಪ್ಪಂದವನ್ನು ಬಿಡಿಸಿದ್ದೇನೆ' ಎಂದು ರಾಹುಲ್ ಹೇಳಿದರು.

ಶೂನ್ಯ ವೇಳೆಯಲ್ಲಿ ಮತ್ತೆ ವಿಷಯ ಪ್ರಸ್ತಾಪಿಸಲು ರಾಹುಲ್ ಮುಂದಾದರು. ಆದರೆ, ಪೆಟ್ರೋಲಿಯಂ ಸಚಿವರ ಬಗ್ಗೆ ಪ್ರತಿಕ್ರಿಯೆ ನೀಡುತ್ತಿದ್ದ ಮತ್ತು ಹರದೀಪ್‌ಸಿಂಗ್ ಪುರಿ ಲಭ್ಯವಿದ್ದಾಗ ಸದನದಲ್ಲಿ ಈ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳಲಾಗುವುದು ಎಂದು ಸ್ಪೀಕರ್ ಹೇಳಿದರು.

ನಿಷ್ಪಕ್ಷಪಾತ ಕಾರ್ಯ: 'ಲೋಕಸಭೆಯ ಕಲಾಪ ಕಟ್ಟುನಿಟ್ಟಾಗಿ ಸದನದ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ನಡೆಯುತ್ತದೆ. ಇದು ಸದಸ್ಯರಿಗೆ ಸ್ವೀಕಾರಾರ್ಹವೋ ಇಲ್ಲವೋ ಎನ್ನುವುದನ್ನು ಪರಿಗಣಿಸುವುದಿಲ್ಲ. ಆದರೆ, ಎಲ್ಲ ಸದಸ್ಯರಿಗೂ ನ್ಯಾಯಸಮ್ಮತ ರೀತಿಯಲ್ಲಿ ಇರುತ್ತದೆ' ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು.

ತಮ್ಮ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆಗೆ ಸೋಲಾದ ಬಳಿಕ ಗುರುವಾರ ಲೋಕಸಭೆಯಲ್ಲಿ ನಡೆದ ಕಲಾಪದಲ್ಲಿ ಅವರು ಮಾತನಾಡಿದರು. 'ಸ್ಪೀಕರ್ ಪೀಠವು ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ, ಅದು ಲೋಕಸಭೆಯ ಘನತೆಯ ಸಂಕೇತ. ಮುಂದೆಯೂ ಕಟ್ಟುನಿಟ್ಟಾಗಿ ಮತ್ತು ನಿಷ್ಪಕ್ಷಪಾತವಾಗಿ ಕರ್ತವ್ಯವನ್ನು ನಿರ್ವಹಿಸುತ್ತೇನೆ' ಎಂದು ಬಿರ್ಲಾ ಹೇಳಿದರು. ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಸಂತಸ ವ್ಯಕ್ತಪಡಿಸಿದರು.

'ಸದನದಲ್ಲಿ ಮಾತನಾಡುವ ಹಕ್ಕು ಎಲ್ಲ ಸದಸ್ಯರಿಗೆ ಇದೆ. ಯಾರು, ಯಾವ ಸಮಯದಲ್ಲಿ ಬೇಕಾದರೂ ಯಾವುದೇ ವಿಷಯದ ಕುರಿತು ಮಾತನಾಡಬಹುದು. ಆದರೆ, ಸ್ಪೀಕರ್ ಅನುಮತಿಯನ್ನು ಪಡೆದಿರಬೇಕು. ಪೀಠದ ಅಧ್ಯಕ್ಷರ ಅನುಮತಿ ಇಲ್ಲದೆ ಪ್ರಧಾನಿ ಸೇರಿದಂತೆ ಯಾರಿಗೂ ಮಾತನಾಡುವ ಅವಕಾಶ ಇಲ್ಲ. ಸದನದ ನಿಯಮಗಳಿಗೆ ಎಲ್ಲರೂ ಬದ್ಧ' ಎಂದು ಅವರು ಹೇಳಿದರು.

ಬಜೆಟ್ ಅಧಿವೇಶನದ ಮೊದಲ ಅವಧಿಯಲ್ಲಿ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ನೋಟಿಸ್ ನೀಡಲಾಗಿತ್ತು. ನೋಟಿಸ್ ಸಲ್ಲಿಸಿದ ದಿನಾಂಕದಿಂದ ಬಿರ್ಲಾ ಅವರು ಸದನದ ಕಲಾಪಗಳಿಂದ ಹಿಂದೆ ಸರಿದಿದ್ದರು. ಗುರುವಾರ ಅವರು ಪೀಠಕ್ಕೆ ಮರಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಿರುವ ತೈಲ ಬಿಕ್ಕಟ್ಟು ದೇಶದಾದ್ಯಂತ ಆತಂಕ ಸೃಷ್ಟಿಸಿದ್ದು, ಹೋಟೆಲ್, ರೆಸ್ಟೋರೆಂಟ್ ಮುಚ್ಚಿವೆ. ವ್ಯಾಪಾರಿಗಳು ಕಂಗಾಲಾಗಿದ್ದಾರೆ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಸಿಇಸಿ ಪದಚ್ಯುತಿ: 193 ಸಂಸದರ ಸಹಿ

ನವದೆಹಲಿ (ಪಿಟಿಐ): ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವ ನಿರ್ಣಯ ಮಂಡಿಸಲು ಸಲ್ಲಿಸುವ ನೋಟಿಸ್‌ನ ಪ್ರತಿಗೆ ಇದುವರೆಗೆ ಲೋಕಸಭೆಯ 130 ಹಾಗೂ ರಾಜ್ಯಸಭೆಯ 63 ಸದಸ್ಯರು ಸಹಿ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶುಕ್ರವಾರ ಸದನದಲ್ಲಿ ನೋಟಿಸ್ ಸಲ್ಲಿಸುವ ಯೋಜನೆ ಇದ್ದು, ಮೊದಲು ಯಾವ ಸದನದಲ್ಲಿ ನೋಟಿಸ್ ಸಲ್ಲಿಸಲಿದ್ದಾರೆ ಎನ್ನುವುದು ಖಚಿತವಾಗಿಲ್ಲ.

ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯಕ್ಕೆ ಕೇಂದ್ರ ಸರ್ಕಾರದ ನೀತಿಯೇ ಕಾರಣ ಎಂದು ಆರೋಪಿಸಿ ಕಾಂಗ್ರೆಸ್ ಸಂಸದರು ಸಂಸತ್ ಭವನದ ಎದುರು ಗುರುವಾರ ಪ್ರತಿಭಟನೆ ನಡೆಸಿದರು. ಈ ವೇಳೆ ರಾಜ್ಯದ ಸಂಸದರು ಕನ್ನಡ ಫಲಕಗಳನ್ನು ಹಿಡಿದಿದ್ದರು

ರಾಹುಲ್ ಪಿತೂರಿ: ದುಬೆ

ನವದೆಹಲಿ (ಪಿಟಿಐ): 'ಚೀನಾ, ರಷ್ಯಾ ಮತ್ತು ಅಮೆರಿಕ ಭಾರತದ ಮೇಲೆ ಒತ್ತಡ ಹೇರಿ ದಾಳಿ ಮಾಡಿದರೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ' ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಹೇಳಿದ್ದಾರೆ.

ಗುರುವಾರ ಸಂಸತ್ತಿನ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿರುವ ರಾಹುಲ್ ಗಾಂಧಿ ಅವರು, ದೇಶವನ್ನು ಒಡೆಯುವ ಪಿತೂರಿ'ಯಲ್ಲಿ ಭಾಗಿಯಾಗಿದ್ದಾರೆ' ಎಂದು ಆರೋಪಿಸಿದರು.

ಪ್ರಧಾನಿ ಕಂಗಾಲು: ರಾಹುಲ್

'ಜನರು ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ಹೇಳುತ್ತಿರುವ ಪ್ರಧಾನಿ, ಈಗ ಬೇರೆ ಕಾರಣಗಳಿಂದ ಸ್ವತಃ ತಾವೇ ಗಾಬರಿಗೊಂಡಿದ್ದಾರೆ' ಎಂದು ರಾಹುಲ್ ಗಾಂಧಿ ಹೇಳಿದರು.

'ಎಪ್‌ಸ್ಟೀನ್ ಫೈಲ್ಸ್ ಮತ್ತು ಅದಾನಿ ವಿರುದ್ಧ ಅಮೆರಿಕದ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಯಿಂದ ಪ್ರಧಾನಿ ಭಯಗೊಂಡಿದ್ದಾರೆ' ಎಂದು ಅವರು ಹೇಳಿದರು.

ಪೊಲೀಸ್ ರಕ್ಷಣೆಯಲ್ಲಿ ಮೊನಾಲಿಸಾ ಮದುವೆ

ತಿರುವನಂತಪುರ (ಪಿಟಿಐ): ಪ್ರಯಾಗರಾಜ್ ಮಹಾ ಕುಂಭಮೇಳದಲ್ಲಿ ರುದ್ರಾಕ್ಷಿ ಮಾಲೆ ಮಾರಾಟ ಮಾಡುತ್ತಾ ತನ್ನ ಹೊಳೆಯುವ ಕಣ್ಣು ಮತ್ತು ಸೌಂದರ್ಯದಿಂದಾಗಿ ಗಮನ ಸೆಳೆದಿದ್ದ ಮೊನಾಲಿಸಾ ಭೋಸ್ಲೆ ಅವರು ತನ್ನ ಪ್ರಿಯಕರ, ಮುಸ್ಲಿಂ ಯುವಕನ ಜೊತೆ ಪೂವರ್‌ನ ದೇವಾಲಯದಲ್ಲಿ ವಿವಾಹವಾಗಿದ್ದಾರೆ.

ಇಂದೋರ್‌ನ ಮೊನಾಲಿಸಾ ಮತ್ತು ಮಹಾರಾಷ್ಟ್ರದ ನಟ ಫರ್ಮಾನ್ ಖಾನ್ ಅವರು ಅರುಮನೂರ್ ನೈನಾರ್ ದೇಗುಲದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಕೇರಳ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ, ಸಿಪಿಎಂ ರಾಜ್ಯ ಕಾರ್ಯದರ್ಶಿ ಎಂ.ವಿ.ಗೋವಿಂದನ್, ರಾಜ್ಯಸಭೆ ಸದಸ್ಯ ಎ.ಎ.ರಹೀಮ್ ಸಾಕ್ಷಿಯಾದರು.

ಗುರುವಾರ ಇಲ್ಲಿ ಪತಿ ಫರ್ಮಾನ್ ಜೊತೆಗೂಡಿ ಪತ್ರಿಕಾಗೋಷ್ಠಿ ನಡೆಸಿದ ಮೊನಾಲಿಸಾ , 'ನಾವಿಬ್ಬರೂ ಸಾಮಾಜಿಕ ಮಾಧ್ಯಮದಿಂದ ಸ್ನೇಹಿತರಾದೆವು. ಆರು ತಿಂಗಳಿನಿಂದ ಪ್ರೀತಿಸುತ್ತಿದ್ದೆವು. ನನಗೆ ಮಲಯಾಳ ಭಾಷೆಯ ಸಿನಿಮಾದಲ್ಲಿ ಅವಕಾಶಗಳು ಬಂದಿವೆ. ಇಲ್ಲೇ ನೆಲಸಲು ಬಯಸಿದ್ದೇನೆ' ಎಂದು ತಿಳಿಸಿದ್ದಾರೆ. 'ನಮ್ಮಿಬ್ಬರ ಪ್ರೀತಿಯನ್ನು ನನ್ನ ಕುಟುಂಬ ಒಪ್ಪಿರಲಿಲ್ಲ. ಇನ್ನೊಬ್ಬರನ್ನು ಮದುವೆ ಆಗುವಂತೆ

ದಾಂಪತ್ಯ ಜೀವನಕ್ಕೆ ಅಡಿಯಿಟ್ಟ ಮೊನಾಲಿಸಾ ಹಾಗೂ ಫರ್ಮಾನ್ ಖಾನ್

ಒತ್ತಡ ಹೇರಿದ್ದರು. ಹೀಗಾಗಿ ಇಲ್ಲಿ ಮದುವೆಯಾದೆವು. ಕೇರಳ ರಾಜ್ಯವು ಧರ್ಮ ಮತ್ತು ಜಾತಿ ಮೀರಿ ಜನರನ್ನು ಬೆಂಬಲಿಸುತ್ತದೆ. ತಮ್ಮ ಇಚ್ಛೆಯಂತೆ ಮದುವೆಯಾಗುವ ಅವಕಾಶ ಇಲ್ಲಿದೆ. ಹೀಗಾಗಿ ಇಲ್ಲಿ ಮದುವೆ ಆಗಿದ್ದೇವೆ' ಎಂದರು.

ಕೇರಳ ರಾಜಧಾನಿಯಲ್ಲಿ ಸಿನಿಮಾ ಚಿತ್ರೀಕರಣವೊಂದರಲ್ಲಿ ಭಾಗಿಯಾಗಿದ್ದ ಮೊನಾಲಿಸಾ ಥಾಂಪನೂರ್ ಪೊಲೀಸ್ ಠಾಣೆಗೆ ಚಿತ್ರೀಕರಣ ತಂಡ ಮತ್ತು ಫರ್ಮಾನ್ ಖಾನ್ ಜೊತೆ ಬಂದು ರಕ್ಷಣೆ ಕೋರಿದ್ದರು.

'ನನ್ನ ತಂದೆ ಬಲವಂತದಿಂದ ಮನೆಗೆ ಕರೆದೊಯ್ಯಲು ಮುಂದಾಗಿದ್ದಾರೆ. ನನ್ನ ಪ್ರಿಯಕರನನ್ನು ಮದುವೆ ಆಗುತ್ತಿದ್ದೇನೆ. ಭದ್ರತೆ ನೀಡಿ' ಎಂದು ಪೊಲೀಸರು ಹಾಗೂ ತಂದೆಯ ಮುಂದೆ ಹೇಳಿಕೆ ನೀಡಿದ್ದರು.

ಚಿಟಿಕೆ ಸುದ್ದಿ

ಗಡಿ ಸಂಘರ್ಷ: ಪಾಕ್ ಸಂಕಥನ ತಳ್ಳಿ ಹಾಕಿದ ಭಾರತ

ನವದೆಹಲಿ (ಪಿಟಿಐ): 'ಪಾಕಿಸ್ತಾನದ ಸೇನೆ ಮತ್ತು ತಾಲಿಬಾನ್ ನಡುವೆ ಇತ್ತೀಚೆಗೆ ನಡೆದ ಸಂಘರ್ಷದಲ್ಲಿ ಭಾರತದ ಕೈವಾಡವಿದೆ' ಎಂಬ ಪಾಕಿಸ್ತಾನದ ಆರೋಪವನ್ನು ಭಾರತ ಗುರುವಾರ ತಳ್ಳಿಹಾಕಿದೆ.

'ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆಯನ್ನು ಬೆಂಬಲಿಸುತ್ತದೆ ಎಂಬ ಸತ್ಯವನ್ನು ಅದರ ಯಾವುದೇ ರೀತಿಯ ಕಟ್ಟುಕಥೆಗಳು ಬದಲಾಯಿಸಲು ಸಾಧ್ಯವಿಲ್ಲ' ಎಂದು ಭಾರತ ಹೇಳಿದೆ.

ಭಾರತ ಮತ್ತು ಕೆನಡಾ ನಡುವಿನ ಯುರೇನಿಯಂ ಒಪ್ಪಂದವನ್ನು ಪಾಕಿಸ್ತಾನ ಟೀಕಿಸಿತ್ತು. ಆ ಟೀಕೆಯನ್ನು ಭಾರತ ತಿರಸ್ಕರಿಸಿದೆ. ಪಾಕಿಸ್ತಾನದ ಈ ಪ್ರತಿಕ್ರಿಯೆಯು 'ಹಾಸ್ಯಾಸ್ಪದ' ಮತ್ತು ತನ್ನದೇ ಆದ 'ಕಳಪೆ ದಾಖಲೆ'ಯಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನವಾಗಿದೆ' ಎಂದು ಕಿಡಿಕಾರಿದೆ.

ಮೋದಿ ನಿಜವಾದ ಮುತ್ಸದ್ದಿ: ನಟ ಮೋಹನ್ ಲಾಲ್

ಕೊಚ್ಚಿ (ಪಿಟಿಐ): ಸಿನಿಮಾ ತಾರೆ ಮೋಹನ್ ಲಾಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿದ್ದು, 'ಅವರು ಕಲಾವಿದರು ಮತ್ತು ಸೃಜನಶೀಲರನ್ನು ಗೌರವಿಸುವ ನಿಜವಾದ ಮುತ್ಸದ್ದಿ ಮತ್ತು ದೂರದೃಷ್ಟಿ ಹೊಂದಿರುವವರು' ಎಂದು ಬಣ್ಣಿಸಿದ್ದಾರೆ.

ಮೋಹನ್ ಲಾಲ್

ಕೇಂದ್ರ ಸರ್ಕಾರದ 'ಮೈಗೌಇಂಡಿಯಾ' ನಾಗರಿಕ ಸಂವಹನ ವೇದಿಕೆಯ ಜಿಡಿಪಿ@ಮೈಗೌ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಮೋಹನ್ ಲಾಲ್ ಅವರು ಈ ಹೇಳಿಕೆ ನೀಡಿದ್ದಾರೆ.

ಎಸ್‌ಎನ್‌ಡಿಪಿ ಯೋಗಂ ಆಡಳಿತ ಮಂಡಳಿ ವಜಾ

ಕೊಚ್ಚಿ (ಪಿಟಿಐ): ಕೇರಳದ ಶ್ರೀನಾರಾಯಣ ಧರ್ಮ ಪರಿಪಾಲನ ಯೋಗಂ (ಎಸ್‌ಎನ್‌ಡಿಪಿ ಯೋಗಂ)ನ ಪಧಾನ ಕಾರ್ಯದರ್ಶಿ ವೆಳ್ಳಾಪ್ಪಳ್ಳಿ ನಟೇಶನ್ ಮತ್ತು ಇತರ ನಿರ್ದೇಶಕರನ್ನು ಅನರ್ಹಗೊಳಿಸಿರುವ ಕೇರಳ ಹೈಕೋರ್ಟ್, ಯೋಗಂನ ಸಂಪೂರ್ಣ ನಿರ್ದೇಶಕ ಮಂಡಳಿಯನ್ನು ವಜಾಗೊಳಿಸಿದೆ.

ಕಂಪನಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಎಸ್‌ಎನ್‌ಡಿಪಿ ಯೋಗಂ ಆಡಳಿತ ಮಂಡಳಿಯನ್ನು ವಜಾಗೊಳಿಸಲಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಟಿ.ಆರ್. ರವಿ ಆದೇಶದಲ್ಲಿ ತಿಳಿಸಿದ್ದಾರೆ.

ಕೇರಳದ ಪ್ರಭಾವಿ ಈಳವ ಸಮುದಾಯದ ಸಂಘಟನೆಯಾದ ಎಸ್‌ಎನ್‌ಡಿಪಿ ಯೋಗಂ ಅನ್ನು ವೆಳ್ಳಾಪ್ಪಳ್ಳಿ ನಟೇಶನ್ ಅವರು ಎರಡೂವರೆ ದಶಕಗಳಿಂದ ಮುನ್ನಡೆಸುತ್ತಿದ್ದರು. ಎಸ್‌ಎನ್‌ಡಿಪಿ ಯೋಗಂನ ಅಕ್ರಮಗಳ ಕುರಿತು ಪ್ರೊ. ದಿವಂಗತ ಎಂ.ಕೆ. ಸಾನು ಮತ್ತಿತರರು ಕೋರ್ಟ್ ಮೊರೆ ಹೋಗಿದ್ದರು.

ದೇವರು ನನ್ನನ್ನು ಉಳಿಸಿದ: ಫಾರೂಕ್

ಜಮ್ಮು (ಪಿಟಿಐ): 'ದೇವರು ನನ್ನನ್ನು ಉಳಿಸಿದ. ನಾನು ಆರಾಮವಾಗಿದ್ದೇನೆ' ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ (ಎನ್‌ಸಿ) ಮುಖ್ಯಸ್ಥ ಮತ್ತು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಗುರುವಾರ ಹೇಳಿದರು.

ವ್ಯಕ್ತಿಯೊಬ್ಬರು ತಮ್ಮ ಹತ್ಯೆಗೆ ಯತ್ನಿಸಿದ ಬಳಿಕ ಅವರು ಮೊದಲ ಬಾರಿಗೆ ಪ್ರಕ್ರಿಯೆ ನೀಡಿದ್ದಾರೆ.

ಇಲ್ಲಿ ಬುಧವಾರ ನಡೆದ ಮದುವೆ ಸಮಾರಂಭವೊಂದರಲ್ಲಿ ಕಮಲ್ ಸಿಂಗ್ ಜಾಮ್ವಾಲ್ ಎಂಬವರು ಫಾರೂಕ್ ಅವರ ಹತ್ಯೆಗೆ ಯತ್ನಿಸಿದ್ದರು. ಫಾರೂಕ್ ಅವರು ಸಮಾರಂಭದಿಂದ ತೆರಳುವಾಗ ಹಿಂಬದಿಯಿಂದ ಗುಂಡು ಹಾರಿಸಲಾಗಿತ್ತು. ಸ್ವಲ್ಪವೇ ಅಂತರದಲ್ಲಿ ಫಾರೂಕ್ ಅವರು ಗುಂಡೇಟಿನಿಂದ ತಪ್ಪಿಸಿಕೊಂಡರು.

'ಇಂಥದ್ದೊಂದು ಅವಕಾಶಕ್ಕಾಗಿ 20 ವರ್ಷಗಳಿಂದ ಕಾಯುತ್ತಿದ್ದೆ' ಎಂದು ಹತ್ಯೆಗೆ ಯತ್ನಿಸಿದ ಕಮಲ್ ಸಿಂಗ್ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾರೆ. ಝೆಡ್ ಪ್ಲಸ್ ಭದ್ರತೆ ಇರುವ ಮಾಜಿ ಮುಖ್ಯಮಂತ್ರಿಯೊಬ್ಬರ ಮೇಲೆ ಹತ್ಯೆಗೆ ಯತ್ನ ನಡೆಸಿರುವುದು ಸೂಕ್ಷ್ಮವಾಗಿರುವ ಕೇಂದ್ರಾಡಳಿತ ಪ್ರದೇಶದಲ್ಲಿನ ಕಾನೂನು ಸುವ್ಯವಸ್ಥೆಯ ಬಗ್ಗೆ ಕಳವಳಕ್ಕೆ ಕಾರಣವಾಗಿದೆ.


ಫಾರೂಕ್

ಘಟನೆಯನ್ನು ನೆನಪಿಸಿಕೊಂಡ ಫಾರೂಕ್ ಅವರು, 'ಕೊನೇ ಕ್ಷಣದಲ್ಲಿ ಭದ್ರತಾ ಸಿಬ್ಬಂದಿ ಮತ್ತು ಎನ್‌ಎಸ್‌ಜಿಯವರು ಆ ವ್ಯಕ್ತಿಯನ್ನು ದೂಡಿದರು. ತಕ್ಷಣವೇ ನನ್ನನ್ನು ಕಾರಿನಲ್ಲಿ ಕೂರಿಸಿ, ಅಲ್ಲಿಂದ ಕರೆದುಕೊಂಡು ಹೋಗಲಾಯಿತು' ಎಂದು 'ಪಿಟಿಐ' ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿದರು.

'ಇಲ್ಲಿ ಉತ್ತರಗಳಿಗಿಂತ ಪ್ರಶ್ನೆಗಳೇ ಅಧಿಕವಾಗಿವೆ. ಝೆಡ್ ಪ್ಲಸ್ ಎನ್‌ಎಸ್‌ಜಿ ಅವರ ಭದ್ರತೆಯನ್ನೂ ಮೀರಿ ಯಾರೋ ಒಬ್ಬರು ಹೇಗೆ ಇಷ್ಟು ಹತ್ತಿರ ಬಂದು ಹತ್ಯೆಗೆ ಯತ್ನಿಸಿದರು' ಎಂದು ಫಾರೂಕ್ ಅವರ ಪುತ್ರ, ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ 'ಎಕ್ಸ್'ನಲ್ಲಿ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ: ಫಾರೂಕ್ ಅಬ್ದುಲ್ಲಾ ಅವರ ಮೇಲಿನ ಹತ್ಯೆ ಯತ್ನವನ್ನು ಖಂಡಿಸಿ ಎನ್‌ಸಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು. ಘಟನೆ ಕುರಿತು ತನಿಖೆ ನಡೆಸಬೇಕು ಮತ್ತು ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆಯನ್ನು ಸರಿದಾರಿಗೆ ತರಬೇಕು ಎಂದು ಈ ವೇಳೆ ಒತ್ತಾಯಿಸಿದರು.

ಫಾರೂಕ್ ಅವರು ಆರಾಮವಾಗಿದ್ದಾರೆ ಎಂದು ತಿಳಿದು ಸಮಾಧಾನವಾಯಿತು. ಘಟನೆಯನ್ನು ಕಟುವಾಗಿ ಖಂಡಿಸಬೇಕು, ಕಠಿಣ ಕ್ರಮ ಕೈಗೊಳ್ಳಬೇಕು
ಹೇಮಂತ್ ಸೊರೇನ್, ಜಾರ್ಖಂಡ್ ಮುಖ್ಯಮಂತ್ರಿ

ಫಾರೂಕ್ ಹತ್ಯೆ ಯತ್ನವನ್ನು ಖಂಡಿಸುತ್ತೇವೆ. ಇಲ್ಲಿನ ಕಾನೂನು ಸುವ್ಯವಸ್ಥೆ ನಿರ್ವಹಿಸುವವರನ್ನು ಜವಾಬ್ದಾರರನ್ನಾಗಿಸಬೇಕು
ತಾರಿಕ್ ಹಮೀದ್ ಕಾರ್, ಜಮ್ಮು ಮತ್ತು ಕಾಶ್ಮೀರ ಘಟಕದ ಕಾಂಗ್ರೆಸ್ ಅಧ್ಯಕ್ಷ

ಹತ್ಯೆ ಯತ್ನವನ್ನು ಪಕ್ಷವು ವಿರೋಧಿಸುತ್ತದೆ. ಶಾಂತಿಗೆ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಗೆ ಬೆದರಿಕೆ ಒಡ್ಡುವ ಕೃತ್ಯಕ್ಕೆ ಪಕ್ಷದ ಬೆಂಬಲವಿಲ್ಲ
ಸುನಿಲ್ ಸೇಥಿ, ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ವಕ್ತಾರ

ಟಿಎಂಸಿ ನಿಯೋಗ ಭೇಟಿಗೆ ಸಿಗದ ಅವಕಾಶ

'ಸಮಯದ ಅಭಾವ'ದ ಕಾರಣ ನೀಡಿದ ರಾಷ್ಟ್ರಪತಿ ಭವನ

ನವದೆಹಲಿ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದರು ಪಶ್ಚಿಮ ಬಂಗಾಳ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭೇಟಿಗೆ ಸಮಯ ಕೋರಿದ್ದರು. ಆದರೆ, 'ಸಮಯದ ಅಭಾವ'ದ ಕಾರಣ ನೀಡಿ ರಾಷ್ಟ್ರಪತಿ ಭವನವು ಅವರ ವಿನಂತಿಯನ್ನು ತಿರಸ್ಕರಿಸಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಅಂತರರಾಷ್ಟ್ರೀಯ ಬುಡಕಟ್ಟು ಸಮ್ಮೇಳನದಲ್ಲಿ ಭಾಗವಹಿಸಲು ಬಗಡೋಗರ ವಿಮಾನ ನಿಲ್ದಾಣಕ್ಕೆ ರಾಷ್ಟ್ರಪತಿಯವರು ಬಂದಾಗ ಅವರನ್ನು ಸ್ವಾಗತಿಸಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಥವಾ ಯಾವುದೇ ಸಚಿವರು ಹಾಜರಿರಲಿಲ್ಲ. ಹೀಗಾಗಿ, 'ಪಶ್ಚಿಮ ಬಂಗಾಳದ ಭೇಟಿಯ ವೇಳೆ ರಾಜ್ಯ ಸರ್ಕಾರವು ಶಿಷ್ಟಾಚಾರ ಪಾಲಿಸಿಲ್ಲ' ಎಂದು ದ್ರೌಪದಿ ಮುರ್ಮು ಅವರೇ ಖುದ್ದು ಆರೋಪಿಸಿದ್ದರು. ಇದು ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು.

ಟಿಎಂಸಿಯ ಹಿರಿಯ ನಾಯಕರೊಬ್ಬರು ಮುರ್ಮು ಅವರಿಗೆ ಮಾರ್ಚ್ 9ರಂದು ಪತ್ರ ಬರೆದಿದ್ದು, ಸಂಸದರು ಮತ್ತು ರಾಜ್ಯದ ಸಚಿವರನ್ನು ಒಳಗೊಂಡ 12ರಿಂದ 15 ಸದಸ್ಯರ ನಿಯೋಗದ ಭೇಟಿಗೆ ಅವಕಾಶ ನೀಡುವಂತೆ ಕೋರಿದ್ದರು.

'ಸಮಾಜದ ಎಲ್ಲ ವರ್ಗಗಳ ಸಮಗ್ರ ಅಭಿವೃದ್ಧಿಗಾಗಿ ಪಶ್ಚಿಮ ಬಂಗಾಳ ಸರ್ಕಾರ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ವಿವರಗಳನ್ನು ಮುರ್ಮು ಅವರೊಂದಿಗೆ ಹಂಚಿಕೊಳ್ಳಲು ನಿಯೋಗ ಬಯಸಿದೆ' ಎಂದು ಪತ್ರದಲ್ಲಿ ತಿಳಿಸಲಾಗಿತ್ತು.

'ಟಿಎಂಸಿಯು ರಾಷ್ಟ್ರಪತಿ ಕಚೇರಿಗೆ ಮತ್ತೆ ಪತ್ರ ಬರೆದಿದ್ದು, ಮುಂದಿನ ವಾರ ಸಮಯ ನೀಡುವಂತೆ ಕೋರಿದೆ' ಎಂದು ಮೂಲಗಳು ತಿಳಿಸಿವೆ.

ನಿಷ್ಪಕ್ಷಪಾತ ತನಿಖೆಗೆ ರಾಹುಲ್ ಆಗ್ರಹ

ನವದೆಹಲಿ(ಪಿಟಿಐ): ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿದ್ದ ಅಜಿತ್ ಪವಾರ್ ಅವರ ದುರ್ಮರಣಕ್ಕೆ ಕಾರಣವಾದ ವಿಮಾನ ಅಪಘಾತ ಕುರಿತು ನಿಷ್ಪಕ್ಷಪಾತ ಹಾಗೂ ಪಾರದರ್ಶಕ ತನಿಖೆ ನಡೆಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಆಗ್ರಹಿಸಿದ್ದಾರೆ.

ಎನ್‌ಸಿಪಿ ವರಿಷ್ಠ ಶರದ್ ಪವಾರ್ ಮೊಮ್ಮಗ ಹಾಗೂ ಶಾಸಕರೂ ಆದ ರೋಹಿತ್ ಪವಾರ್ ಅವರು ತಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ ರಾಹುಲ್ ಗಾಂಧಿ ಈ ಆಗ್ರಹ ಮಾಡಿದ್ದಾರೆ. 'ಈ ವಿಷಯವು ಅತ್ಯಂತ ಗಂಭೀರ ನಿಷ್ಪಕ್ಷಪಾತ ತನಿಖೆಯ ಅಗತ್ಯವಿದೆ' ಎಂದಿದ್ದಾರೆ.

ಕಲಬೆರಕೆ ಹಾಲು ಸೇವನೆ: 13 ಸಾವು

ರಾಜಮಹೇಂದ್ರವರಂ(ಆಂಧ್ರ ಪ್ರದೇಶ) (ಪಿಟಿಐ): ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ರಾಜಮಹೇಂದ್ರವರಂನಲ್ಲಿ ಶಂಕಿತ ಕಲಬೆರಕೆ ಹಾಲು ಸೇವನೆ ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ.

ಫೆಬ್ರುವರಿ 22ರಂದು ಈ ಘಟನೆ ನಡೆದಿತ್ತು. ಶಂಕಿತ ಕಲಬೆರಕೆ ಹಾಲು ಸೇವನೆಯಿಂದಾಗಿ ಹಲವರು ವಾಂತಿ, ಹೊಟ್ಟೆ ನೋವು ತೊಂದರೆಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಕಲಬೆರಕೆ ಹಾಲು ಪೂರೈಕೆ ಮಾಡಿದ ಆರೋಪದಡಿ ಎ.ಗಣೇಶ್ವರರಾವ್ (33) ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಹಾಲು ಪೂರೈಕೆಗೆ ನಂಟು ಹೊಂದಿದ್ದ ವರಲಕ್ಷ್ಮಿ ಹಾಲಿನ ಡೇರಿಗೆ ಬೀಗ ಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹12 ಕೋಟಿ ಮೌಲ್ಯದ ಹೆರಾಯಿನ್ ವಶ

ಜಮ್ಮು (ಪಿಟಿಐ): ಇಲ್ಲಿನ ಭಾರತ ಮತ್ತು ಪಾಕಿಸ್ತಾನದ ಅಂತರರಾಷ್ಟ್ರೀಯ ಗಡಿ ಬಳಿ ಡ್ರೋನ್ ಮೂಲಕ ಎಸೆಯಲಾದ ₹12 ಕೋಟಿ ಮೌಲ್ಯದ 2 ಕೆ.ಜಿಯಷ್ಟು ಹೆರಾಯಿನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

ಬಿಷ್ಣಾಹ್ ಪ್ರದೇಶದ ಬಹದೂರ್‌ಪುರ ಗ್ರಾಮದಲ್ಲಿನ ಕೃಷಿ ಜಮೀನಿನಲ್ಲಿ ಬುಧವಾರ ರಾತ್ರಿ ಹೆರಾಯಿನ್ ಪತ್ತೆಯಾಗಿದೆ.

ಜಮ್ಮು ಪೊಲೀಸರು ಹಾಗೂ ಗಡಿ ಭದ್ರತಾ ಪಡೆಯ 101ನೇ ತುಕಡಿಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಅದನ್ನು ವಶಪಡಿಸಿಕೊಂಡರು. ಈ ಬಗ್ಗೆ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ ಎಂದರು.

ಬೇಸಿಗೆ ಅವಧಿಯ ದ್ವಿತೀಯಾರ್ಧದಲ್ಲಿ ಬೀಳುವ ಮಳೆ: ಹವಾಮಾನ ತಜ್ಞರ ವಿಶ್ಲೇಷಣೆ

ಮುಂಗಾರು ಮೇಲೆ ಎಲ್‌ನಿನೊ ಪರಿಣಾಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಈ ಬಾರಿ ಬೇಸಿಗೆ ಅವಧಿಯ ದ್ವಿತೀಯಾರ್ಧದಲ್ಲಿ ಬೀಳುವ ಮಳೆ ಮೇಲೆ ಎಲ್ ನಿನೊ ಪರಿಣಾಮ ಬೀರಲಿದೆ. ಇದು ಮುಂದಿನ ವರ್ಷದ ಮುಂಗಾರಿನ ಮೇಲೂ ಪರಿಣಾಮ ಬೀರುವ ಸಾಧ್ಯತೆಯೂ ಹೆಚ್ಚು ಎಂದು ಹವಾಮಾನತಜ್ಞರು ಗುರುವಾರ ಹೇಳಿದ್ದಾರೆ.

'ಎಲ್ ನಿನೊ ಬೀರುವ ಪರಿಣಾಮ ಸಾಧಾರಣ ಅಥವಾ ಪ್ರಬಲವಾಗಿರಬಹುದು. ಆದರೆ, ಪೆಸಿಫಿಕ್ ಸಾಗರದಲ್ಲಿ ಉಷ್ಣತೆಯಲ್ಲಿ ಕಂಡುಬರುವ ಹೆಚ್ಚಳವು 'ಸೂಪರ್ ಎಲ್‌ನಿನೊ' ಆಗಿ ಪರಿವರ್ತನೆಗೊಳ್ಳಲಿದೆಯೇ ಎಂಬುದನ್ನು ಈಗಲೇ ಅಂದಾಜಿಸಲಾಗದು' ಎಂದೂ ಹೇಳಿದ್ದಾರೆ.

'ಆಗಸ್ಟ್ ವೇಳೆಗೆ ಎಲ್‌ನಿನೊ ಪರಿಣಾಮ ಸಾಧಾರಣ ಇರುವ ಸಾಧ್ಯತೆ ಶೇಕಡ 98ರಷ್ಟು ಹಾಗೂ ಪ್ರಬಲವಾಗಿರುವ ಸಾಧ್ಯತೆ ಶೇ 80ರಷ್ಟು ಇರಲಿದೆ. ಸೂಪರ್ ಎಲ್ ನಿನೊ ಆಗಿ ಪರಿವರ್ತನೆಯಾಗುವ ಸಾಧ್ಯತೆ ಶೇ 22ರಷ್ಟು' ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಹೇಳಿದೆ.

'ಸೂಪರ್ ಎಲ್ ನಿನೊ ಪರಿಣಾಮದ ಬಗ್ಗೆ ಸ್ಪಷ್ಟ ಚಿತ್ರಣವು ಮೇ ಅಂತ್ಯದ ವೇಳೆಗೆ ಸಿಗಲಿದೆ' ಎಂದು ಐಎಂಸಿ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಎಲ್‌ನಿನೊ ಎಂದರೆ ಸಮುದ್ರದ ಉಷ್ಣತೆ ಹೆಚ್ಚಾಗುವುದು. ಲಾನಿನಾ ಎಂದರೆ ಸಮುದ್ರದ ಉಷ್ಣತೆ ಕಡಿಮೆ ಆಗುವುದು. ಎಲ್ ನಿನೊ ಎಂದರೆ ಮಳೆ ಕಡಿಮೆ, ಲಾನಿನಾ ಎಂದರೆ ಮಳೆ ಹೆಚ್ಚು ಬರುವುದು. ಇವೆರಡೂ ಭಾರತದ ಮುಂಗಾರಿನ ಮೇಲೆ ಪರಿಣಾಮ ಬೀರುವಂತಹ ಬೆಳವಣಿಗೆಗಳು.

ಎಲ್ ನಿನೊವನ್ನು ಆಧರಿಸಿ ಭಾರತದ ಮಳೆಯ ಪರಿಸ್ಥಿತಿಯನ್ನು ಮೂರು ತಿಂಗಳ ಮುಂಚೆ ಹೇಳಬಹುದು.

ಮುಖ್ಯಾಂಶಗಳು
- ಎಲ್‌ನಿನೊ ಆಧರಿಸಿ ಭಾರತದ ಮಳೆಯ ಪರಿಸ್ಥಿತಿ ಅವಲೋಕನ
- ಸೂಪರ್ ಎಲ್ ನಿನೊ ಪರಿಣಾಮ: ಮೇ ಅಂತ್ಯಕ್ಕೆ ಸ್ಪಷ್ಟ ಚಿತ್ರಣ
- ಪೆಸಿಫಿಕ್ ಸಾಗರದಲ್ಲಿ ಉಷ್ಣತೆಯಲ್ಲಿ ಹೆಚ್ಚಳ

ಕರ್ನಾಟಕ ಸರ್ಕಾರ
ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನೆಹರು ಗಂಜ್, ಕಲಬುರಗಿ-585 104
E-mail : apmckalburgi@gmail.com, apmcgulbarga@rediffmail.com Ph: 08472-257469
ಸಂ:ಕೃಮಾಇ/ಕೃಉಮಾಸ/ಕ/ಭ&ಸ್ವ.ಟೆ.ಪ/2266/2025-26 ದಿನಾಂಕ: 10-03-2026

:: CORRINGENDUM ::

ಕಲಬುರಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಇ-ಪ್ರೊಕ್ಯೂರಮೆಂಟ್ INDENT ನಂಬರ್: APMC/KLB/SEC2025-26/Security Gard 0826 & APMC/KLB/SEC2025-26/Cleaning 0827 ರ ಪ್ರಕಟಣೆಯಲ್ಲಿ ಸೇರ್ಪಡೆ/ತಿದ್ದುಪಡಿಯಲ್ಲಿ ಸೆಕ್ಷನ್ 3 (B) Financial Tender Condition ಪ್ರಕಾರ ಗುತ್ತಿಗೆದಾರರು/ಏಜೆನ್ಸಿದಾರರು ಸೇವಾ ಶುಲ್ಕವನ್ನು Percentage ನಲ್ಲಿ ಮಾತ್ರ ನಮೂದಿಸತಕ್ಕದ್ದು. ಗುತ್ತಿಗೆದಾರರು ಸೇವಾ ಶುಲ್ಕವನ್ನು Basic & VDA ಮೇಲೆ ಮಾತ್ರ ನಮೂದಿಸತಕ್ಕದ್ದು ಹಾಗೂ ಸೇವಾ ಶುಲ್ಕ 5% ಕ್ಕಿಂತ ಕಡಿಮೆ ನಮೂದಿಸಬಾರದು. ಹಾಗೂ ಟೆಂಡರ್ ಹಾಕುವ ಕೊನೆಯ ದಿನಾಂಕ 16-03-2026 ರ ಬದಲು 23-03-2026, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18-03-2026 ರ ಬದಲು 25-03-2026 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 20-03-2026 ರ ಬದಲು 27-03-2026 ರಂದು ವಿಸ್ತರಿಸಲಾಗಿರುತ್ತದೆ.

ಸಹಿ/- ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1165/ಕೆ.ಎಸ್.ಎಂ.ಸಿ.&ಎ/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮೆ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ತಾ: ಹುಣಸಗಿ
Office of the EXECUTIVE ENGINEER, KBJNL, Dam Safety Unit-3 Narayanpur-585219
KBJNL/DSU-3/PB/AWP/2025-26/2431 Dated:-11.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಅಡಿ ಅನುಮೋದನೆಗೊಂಡಿರುವ ಟೆಂಡರು ಪ್ರಕಟಣೆ ಸಂ,2422 ದಿನಾಂಕ: 10.03.2026 ಮತ್ತು 2407 ದಿನಾಂಕ: 09.03.2026 ಈ ವಿಭಾಗದಡಿಯಲ್ಲಿ ಬರುವ ವಾರ್ಷಿಕ ನಿರ್ವಹಣೆ ಕಾಮಗಾರಿಗಾಗಿ Single E-Document System ನ ಟೆಂಡರ್‌ಗಾಗಿ ಇ-ಪೋರ್ಟಲ್ https://kppp.karnataka.gov.in ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದ್ದು, Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲೆಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಟೆಂಡರ್ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ:11.03.2026 ರಿಂದ ದಿ:20.03.2026 ಸಂಜೆ 5.00 ಗಂಟೆಯವರೆಗೆ
2.	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿ: 20.03.2026 ಸಂಜೆ 5.00 ಗಂಟೆಯವರೆಗೆ
3.	ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ: 23.03.2026 ಬೆಳಿಗ್ಗೆ 11.00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಇ-ಪೋರ್ಟಲ್ https://kppp.karnataka.gov.in ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳನ್ನು, ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3,
ನಾರಾಯಣಪೂರ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
No.EE/MID/VJP/AE-2,3/4702 & 2702/TND/2025-26/4731 Date:11.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :- ಒಟ್ಟು 1 ಕಾಮಗಾರಿ(2ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.451.77ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು :- ಒಟ್ಟು 14 ಕಾಮಗಾರಿಗಳು/ಪ್ಯಾಕೇಜ ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.79.20ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

4702 ಟಿ.ಎಸ್.ಪಿ. ಕಾಮಗಾರಿಗಳು :- ಒಟ್ಟು 9 ಕಾಮಗಾರಿಗಳು/ಪ್ಯಾಕೇಜ ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.57.60ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

2702 ಎಂ&ಆರ್ ಕಾಮಗಾರಿಗಳು :- ಒಟ್ಟು 1 ಕಾಮಗಾರಿ, ಟೆಂಡರಿಗಿಟ್ಟ ಮೊತ್ತ **ರೂ.33.89ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಆರು(6) ತಿಂಗಳುಗಳು.**

4702 ಕನ್ಸಲ್ಟೆನ್ಸಿ ಕಾಮಗಾರಿಗಳು :- ಒಟ್ಟು 1 ಕಾಮಗಾರಿ, ಟೆಂಡರಿಗಿಟ್ಟ ಮೊತ್ತ **ರೂ.1.17ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಒಂದು(1) ತಿಂಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **12.03.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **23.03.2026** ರ 17-30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ: **20.03.2026** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ-ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **17.03.2026** ರ 17-30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ-080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/797/ಕೆಎಸ್‌ಎಂಸಿಎ/2025-26

ಎಲ್‌ಪಿಜಿ ಹಂಚಿಕೆಗೆ ರಫ್ತುದಾರರ ಮನವಿ

ನವದೆಹಲಿ (ಪಿಟಿಐ): ರಫ್ತು ಆಧಾರಿತ ತಯಾರಿಕಾ ಘಟಕಗಳಿಗೆ ಎಲ್‌ಪಿಜಿ ಮತ್ತು ನೈಸರ್ಗಿಕ ಅನಿಲವನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡುವಂತೆ ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟವು (ಎಫ್‌ಐಇಒ) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಕ್ಕೆ ಈ ಕುರಿತು ಎಫ್‌ಐಇಒ ಅಧ್ಯಕ್ಷ ಎಸ್‌. ಸಿ. ರಲ್ಹಾನ್ ಪತ್ರ ಬರೆದಿದ್ದಾರೆ.

ಇಂಧನ ಪೂರೈಕೆಯಲ್ಲಿನ ಯಾವುದೇ ಅಡಚಣೆಯು ತಯಾರಿಕಾ ವಲಯಕ್ಕೆ ಸಮಸ್ಯೆ ಸೃಷ್ಟಿಸಲಿದೆ. ಇದರಿಂದ ಈ ವಲಯದ ರಫ್ತುದಾರರು ಸಮಸ್ಯೆ ಎದುರಿಸಲಿದ್ದಾರೆ. ಹೀಗಾಗಿ, ಆದ್ಯತೆಯ ಮೇರೆಗೆ ಎಲ್‌ಪಿಜಿ, ನೈಸರ್ಗಿಕ ಅನಿಲವನ್ನು ರಫ್ತು ಆಧಾರಿತ ಘಟಕಗಳಿಗೆ ತ್ವರಿತವಾಗಿ ಒದಗಿಸಬೇಕಿದೆ ಎಂದು ರಲ್ಹಾನ್ ಹೇಳಿದ್ದಾರೆ.

ಇಂಧನ ಲಭ್ಯತೆಯಲ್ಲಿ ಅಡಚಣೆ ಉಂಟಾದರೆ ದೇಶದ ರಫ್ತುದಾರರು ನಿಗದಿತ ಸಮಯಕ್ಕೆ ಉತ್ಪಾದನಾ ಗುರಿ ತಲುಪಲು ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ, ಅಂತರ-ರಾಷ್ಟ್ರೀಯ ಖರೀದಿದಾರರು ಬೇರೆ ರಾಷ್ಟ್ರಗಳ ಬಳಿ ಖರೀದಿಗೆ ಮುಂದಾಗಲಿದ್ದಾರೆ ಎಂದು ತಿಳಿಸಿದ್ದಾರೆ.

ಮೊಟ್ಟೆ ರಫ್ತಿಗೂ ಯುದ್ಧದ ಬಿಸಿ

ಕೋಟೆನಾಡಿನಲ್ಲಿ ಅತಿ ಹೆಚ್ಚು ಕೋಳಿ ಸಾಕಣೆ • ಅರಬ್ ರಾಷ್ಟ್ರಗಳಿಗೆ ರಫ್ತು ಸ್ಥಗಿತ

• ಕೊಂಡ್ಲಹಳ್ಳಿ ಜಯಪ್ರಕಾಶ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ಅರಬ್ ರಾಷ್ಟ್ರಗಳಿಗೆ ಇಲ್ಲಿಂದ ಸಾಗಣೆಯಾಗುತ್ತಿದ್ದ ಕೋಳಿಮೊಟ್ಟೆ ರಫ್ತು ವಹಿವಾಟು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಸ್ಥಗಿತಗೊಂಡಿದೆ. ಇದರಿಂದ ಮೊಟ್ಟೆ ಬೆಲೆಯೂ ಕುಸಿದಿದ್ದು, ಕೋಳಿ ಸಾಕಾಣಿಕೆಗೆ ತೊಂದರೆ ಉಂಟಾಗಿದೆ.

ಆಂಧ್ರಪ್ರದೇಶದ ಜೊತೆ ಗಡಿ ಹಂಚಿಕೊಂಡಿರುವ ಮೊಳಕಾಲ್ಮುರು, ಚಳ್ಳಕೆರೆ ತಾಲ್ಲೂಕುಗಳಲ್ಲಿ ಅತಿ ಹೆಚ್ಚು ಕೋಳಿ ಫಾರಂಗಳಿವೆ. ಜಿಲ್ಲೆಯಲ್ಲಿ ಒಟ್ಟಾರೆ 40 ಲಕ್ಷ ಕೋಳಿಗಳನ್ನು ಸಾಕಲಾಗುತ್ತಿದೆ. ಇದರಲ್ಲಿ 32 ಲಕ್ಷ ಕೋಳಿಗಳ ಸಾಕಣೆ ಈ ಎರಡು ತಾಲ್ಲೂಕುಗಳಲ್ಲೇ ನಡೆಯುತ್ತಿದೆ. ಜಿಲ್ಲೆಯಿಂದ ರಾಜ್ಯ, ಹೊರರಾಜ್ಯಗಳಿಗೆ ಮಾತ್ರವಲ್ಲದೇ ಹೊರ ದೇಶಗಳಿಗೂ ಮೊಟ್ಟೆ ರಫ್ತಾಗುತ್ತದೆ. ಆಂಧ್ರ ಮತ್ತು ಅಕ್ಕಪಕ್ಕದ ಜಿಲ್ಲೆಗಳಿಂದ ಬಂದ ಅಂದಾಜು 1 ಕೋಟಿಯಷ್ಟು ಮೊಟ್ಟೆಯನ್ನು ಪ್ರತಿದಿನ ಕಳುಹಿಸಲಾಗುತ್ತದೆ. ಕೋಳಿ ಸಾಕಣೆ, ವಿದೇಶಿ ರಫ್ತಿಗೆ ಹೆಸರು-ವಾಸಿಯಾಗಿರುವ ತಮಿಳುನಾಡಿನ ನಾಮಕ್ಕಲ್ ಮೂಲಕ ಮೊಟ್ಟೆ ರಫ್ತು ಮಾಡಲಾಗುತ್ತದೆ. ಯುದ್ಧ ನಡೆಯುತ್ತಿರುವ ಕಾರಣ ನಾಮಕ್ಕಲ್‌ನಿಂದ ರಫ್ತು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು ಮೊಟ್ಟೆಗಳು ಮಾರಾಟವಾಗದೇ ಹಾಳಾಗುತ್ತಿವೆ.

‘ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ (ಎನ್‌ಇಸಿಸಿ) ನಿಗದಿ ಮಾಡಿರುವ ದರದ ಅನುಸಾರ ತಿಂಗಳ ಹಿಂದೆ ಪ್ರತಿ ಸಗಟು ಕೋಳಿ ಮೊಟ್ಟೆ ದರ ₹5.50ರಿಂದ ₹5.60 ಇತ್ತು. ಆದರೆ ಈಗ ₹3.80ರಿಂದ ₹3.90ಕ್ಕೆ ಕುಸಿದಿದೆ. ಇದರಿಂದ ಮೊಟ್ಟೆ ವಹಿವಾಟಿನ ಮೇಲೆ ಆತಂಕದ ಕಾರ್ಮೋಡ ಕವಿದಿದೆ’ ಎಂದು ರಾಜ್ಯ ಕೋಳಿ ಸಾಕಣೆದಾರರ ಮಂಡಳಿ ನಿರ್ದೇಶಕ ಕೆ.ಆರ್. ಕೇಶವರೆಡ್ಡಿ ಹೇಳಿದರು.

ರಫ್ತು ಪ್ರಕ್ರಿಯೆ ಸ್ಥಗಿತಗೊಂಡಿದ್ದರಿಂದ ಉತ್ಪಾದನೆಗೆ ಅನುಗುಣವಾಗಿ ಬೇಡಿಕೆ ಇಲ್ಲದೇ ಸ್ಥಳೀಯ ಮಾರುಕಟ್ಟೆಯಲ್ಲಿ ದರ ಕುಸಿದಿದೆ. ದಾಸ್ತಾನನ್ನು ವಾರಕ್ಕಿಂತ ಹೆಚ್ಚು ಅವಧಿಗೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಅನಿವಾರ್ಯವಾಗಿ ಕಡಿಮೆ ದರಕ್ಕೆ ಮಾರಾಟ ಮಾಡಬೇಕಾಗಿದೆ ಎಂದು ವರ್ತಕರು ತಿಳಿಸಿದರು.

‘ಯುದ್ಧದ ಪರಿಣಾಮದಿಂದಾಗಿ ಹೊರದೇಶಗಳಿಂದ ಬರುತ್ತಿದ್ದ ಕೋಳಿಯ ಆಹಾರ ಸಾಮಗ್ರಿಗಳೂ ಬರುತ್ತಿಲ್ಲ. ಸಾಮಗ್ರಿ ಬೆಲೆ ಶೇ 20ರಷ್ಟು ಹೆಚ್ಚಾಗಿದೆ. ಬೇಸಿಗೆ ರಜೆ ಆರಂಭವಾದರೆ ಶಾಲೆ, ಅಂಗನವಾಡಿಗಳ ಮೊಟ್ಟೆಯ ಬೇಡಿಕೆಯೂ ಕುಸಿಯಲಿದ್ದು, ಕುಕ್ಕುಟೋದ್ಯಮದ ವಹಿವಾಟಿನ ನಷ್ಟ ಮತ್ತಷ್ಟು ಹೆಚ್ಚಲಿದೆ’ ಎಂದು ಉದ್ಯಮಿ ಹಾನಗಲ್‌ನ ಟಿ. ರಮೇಶ್ ಹೇಳಿದರು.

ಮೊಳಕಾಲ್ಮುರು ತಾಲ್ಲೂಕಿನ ಹಾನಗಲ್ ಬಳಿ ಕೋಳಿಫಾರಂ ಒಂದರಲ್ಲಿ ದಾಸ್ತಾನು ಮಾಡಿರುವ ಕೋಳಿ ಮೊಟ್ಟೆಗಳು

> ತಮಿಳುನಾಡಿನ ನಾಮಕ್ಕಲ್ ಮೂಲಕ ಅರಬ್ ರಾಷ್ಟ್ರಗಳಿಗೆ ಮೊಟ್ಟೆ ರಫ್ತು ಪ್ರಕ್ರಿಯೆ ನಡೆಯುತ್ತಿತ್ತು. ಇದೀಗ ಪ್ರಕ್ರಿಯೆ ಸ್ಥಗಿತವಾಗಿದ್ದರೂ ಮುಂಬೈ ಬಂದರಿನ ಮೂಲಕ ರಫ್ತು ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂಬ ಮಾಹಿತಿ ಸಿಕ್ಕಿದೆ. ಇದು ಆದಷ್ಟು ಬೇಗ ಆರಂಭವಾಗಬೇಕು
>
> **ಎಂ.ಎಸ್.ಆರ್. ಪ್ರಸಾದ್,** ಎನ್‌ಇಸಿಸಿ ಹೊಸಪೇಟೆ ವಿಭಾಗದ ಅಧ್ಯಕ್ಷ

ಎಲ್‌ಪಿಜಿ: ಆತಂಕ ಸೃಷ್ಟಿಸುವವರ ವಿರುದ್ಧ ಮೋದಿ ಕಿಡಿ

ನವದೆಹಲಿ(ಪಿಟಿಐ): ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಲಭ್ಯತೆ ವಿಚಾರವಾಗಿ ಜನರಲ್ಲಿ ಆತಂಕ ಸೃಷ್ಟಿಸಲು ಯತ್ನಿಸುತ್ತಿರುವವರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಗುರುವಾರ ವಾಗ್ದಾಳಿ ನಡೆಸಿದ್ದಾರೆ.

‘ಇಂತಹ ಪ್ರಯತ್ನಗಳಲ್ಲಿ ತೊಡಗಿರುವವರು ತಮ್ಮ ಮುಖವಾಡಗಳನ್ನು ತಾವೇ ಕಳಚುತ್ತಿರುವುದು ಮಾತ್ರವಲ್ಲ, ದೇಶಕ್ಕೆ ಹಾನಿ ಉಂಟು ಮಾಡುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

‘ಎನ್‌ಎಕ್ಸ್‌ಟಿ ಶೃಂಗಸಭೆ’ಯಲ್ಲಿ ಮಾತನಾಡಿದ ಅವರು, ‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಸಂಕಷ್ಟ ಎದುರಿಸದ ದೇಶವೇ ಇಲ್ಲ. ಆದರೆ, ಈ ವಿದ್ಯಮಾನಗಳಿಂದ ಎದುರಾಗಿರುವ ಸವಾಲುಗಳನ್ನು ಎದುರಿಸಲು ಭಾರತ ಸಂಪೂರ್ಣ ಸಜ್ಜಾಗಿದೆ. ದೇಶದ ಇಂಧನ ಸುರಕ್ಷತೆ ಕಾಪಾಡುವುದಕ್ಕೆ ಸಂಬಂಧಿಸಿ ಯಾವುದೇ ಅವಕಾಶವನ್ನೂ ಬಿಟ್ಟುಕೊಡುವುದಿಲ್ಲ’ ಎಂದರು.

‘ಪ್ರಸಕ್ತ ಸನ್ನಿವೇಶದ ದುರುಪಯೋಗಪಡಿಸಿಕೊಳ್ಳುವ ಮೂಲಕ ಕೆಲವರು ನಿರ್ದಿಷ್ಟ ವಸ್ತುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಯತ್ನಿಸುತ್ತಿದ್ದಾರೆ. ಇಂತಹ ಕುತಂತ್ರ ನಡೆಸುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮೋದಿ ಎಚ್ಚರಿಸಿದರು.

ಭಾರತದ ಕಾಫಿ ರಫ್ತಿಗೆ ಯುದ್ಧದ ಕರಿನೆರಳು

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಭಾರತದ ಕಾಫಿ ರಫ್ತಿಗೆ ಯುದ್ಧ ಅಡ್ಡಿ ಉಂಟುಮಾಡಿದೆ. ಇರಾನ್ ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಭಾರತದ ಕಾಫಿ ಯುರೋಪ್ ರಾಷ್ಟ್ರಗಳಿಗೆ ಸರಬರಾಜು ಆಗಲು ಅಡ್ಡಿ ಆಗಿದೆ. ಬದಲಿಗೆ ದೂರದ ಹಾದಿ ಬಳಸುತ್ತಿರುವುದರಿಂದ ನಿರೀಕ್ಷಿತ ಅವಧಿಯಲ್ಲಿ ಭಾರತದ ಕಾಫಿ ಯುರೋಪಿಯನ್ ರಾಷ್ಟ್ರಗಳಿಗೆ ತಲುಪುತ್ತಿಲ್ಲ.

‘ಹೊರ್ಮುಜ್ ಜಲಸಂಧಿ ಮುಚ್ಚಿದ್ದರಿಂದ ಭಾರತದ ಕಾಫಿ ಕೇಪ್ ಆಫ್ ಗುಡ್ ಹೋಪ್ ಮಾರ್ಗವಾಗಿ ಆಫ್ರಿಕಾ ಖಂಡದ ದಕ್ಷಿಣ ಭಾಗದ ಮೂಲಕ ಸಾಗಬೇಕಾಗಿದೆ. ಇದು ಕಾಫಿ ಮೇಲಿನ ವಿಮೆ ಮತ್ತು ಕಾಫಿ ಸಾಗಣೆ ವೆಚ್ಚವನ್ನು ಬಹಳಷ್ಟು ಹೆಚ್ಚಿಸುತ್ತಿದೆ. ಜೊತೆಗೆ ಸಾಗಣೆಯ ಅವಧಿ 10 ದಿನ ಹೆಚ್ಚಾಗುತ್ತಿದ್ದು, ರಫ್ತುದಾರರಿಗೆ ತೊಂದರೆ ಆಗುತ್ತಿದೆ’ ಎಂದು ಕಾಫಿ ರಫ್ತು ಉದ್ಯಮದಲ್ಲಿ ತೊಡಗಿರುವ ಗೋಳಗಾರ್ ಪ್ರಸನ್ನ ಹೇಳಿದರು.

ಬೆಳೆಗಾರರಿಂದ ಕಚ್ಚಾ ಕಾಫಿ ಖರೀದಿಸಿದ ಸಂಸ್ಥೆಗಳು ಅದನ್ನು ಕಾಫಿ ಬೇಳೆಯಾಗಿ ಸಂಸ್ಕರಣೆ ಮಾಡಿ ರಫ್ತು ಮಾಡುತ್ತವೆ. ಯುದ್ಧದ ಕಾರಣಕ್ಕೆ ಬೆಲೆ ಇಳಿಯುತ್ತದೆ ಎಂದು ವ್ಯಾಪಾರಿಗಳು ವಾರದ ಹಿಂದೆಯೇ ಅಂದಾಜಿಸಿದ್ದರು. ಆದರೆ, ಯುದ್ಧದ ಕಾರಣಕ್ಕೆ ನಿರೀಕ್ಷಿಸಿದಷ್ಟು ಬೆಲೆ ಕುಸಿತ ಆಗಿಲ್ಲ. ಸಾಗಣೆಯ ಕಿರಿಕಿರಿ ಮತ್ತು ಹೆಚ್ಚುವರಿ ವೆಚ್ಚದ ಕಾರಣಕ್ಕೆ ಬೆಲೆ ಇಳಿಕೆ ಆಗುತ್ತಿದೆ.

‘ವಾರದ ಹಿಂದೆ ಕೆ.ಜಿಗೆ ₹370ವರೆಗೆ ಇದ್ದ ರೊಬಸ್ಟಾ ಕಾಫಿ ಬೇಳೆಯ ಬೆಲೆ ಇದೀಗ ₹350ರ ಆಸುಪಾಸಿನಲ್ಲಿ ಇದೆ. ಆದರೂ ಕಾಫಿಗೆ ಬೇಡಿಕೆ ಇದ್ದೇ ಇದೆ. ಬ್ರೆಜಿಲ್ ದೇಶದಲ್ಲಿ ಮುಂಬರುವ ಅರೇಬಿಕಾ ಕಾಫಿ ಫಸಲು ಗರಿಷ್ಠ ಆಗಲಿದೆ ಎಂಬ ಅಂದಾಜಿನ ಮೇರೆಗೆ ಬೆಲೆ ಇಳಿಯುತ್ತಿದೆ. ಬೆಲೆ ಇಳಿಕೆಗೆ ಯುದ್ಧ ಏಕೈಕ ಕಾರಣವಲ್ಲ’ ಎಂಬುದು ಕಾಫಿ ವ್ಯಾಪಾರಿ ನಮಿತ್ ಕೊಂಡದಮನೆ ಅವರ ವಿವರಣೆ.

‘ಯುದ್ಧ ಮತ್ತು ಮಾರುಕಟ್ಟೆಯಲ್ಲಿನ ಕಾಫಿ ಬೆಲೆ ಏರಿಳಿತ ಕಾಫಿ ವ್ಯಾಪಾರಕ್ಕೆ ಕಠಿಣ ಸವಾಲು ಕೊಡುತ್ತಿವೆ’ ಎಂದು ಕಾಫಿ ವ್ಯಾಪಾರಿ ಗೋಪಾಲ್ ಅಭಿಪ್ರಾಯಪಡುತ್ತಾರೆ.

ಹೆಚ್ಚಿನ ಬೆಳೆಗಾರರು ಕಾಫಿಯನ್ನು ಮಾರಾಟ ಮಾಡುತ್ತಿದ್ದು, ಕೆಲವರು ಮಾತ್ರ ಇನ್ನಷ್ಟು ಉತ್ತಮ ಬೆಲೆಯ ನಿರೀಕ್ಷೆಯಲ್ಲಿದ್ದಾರೆ.

ಇರಾನ್ ಅಧ್ಯಕ್ಷ ಜತೆ ಮೋದಿ ಮಾತು



ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರ ಜೊತೆ ಗುರುವಾರ ರಾತ್ರಿ ದೂರವಾಣಿ ಮೂಲಕ ಮಾತನಾಡಿದ್ದು, ‘ಪಶ್ಚಿಮ ಏಷ್ಯಾದಲ್ಲಿನ ಗಂಭೀರ ಪರಿಸ್ಥಿತಿ’ ಕುರಿತು ಚರ್ಚಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಉಲ್ಬಣಗೊಳ್ಳುತ್ತಿರುವುದು, ಸಾವು-ನೋವು ಹಾಗೂ ಮೂಲಸೌಕರ್ಯಗಳಿಗೆ ಹಾನಿಯಾಗಿರುವ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ್ದಾಗಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಇರಾನ್‌ನಲ್ಲಿರುವ ಭಾರತೀಯರ ಸುರಕ್ಷತೆ, ಸರಕು ಹಾಗೂ ತೈಲದ ಸುಗಮ ಸಾಗಣೆ ಭಾರತದ ಪರಮ ಆದ್ಯತೆಗಳಾಗಿವೆ ಎಂಬುದಾಗಿ ಅಧ್ಯಕ್ಷ ಪೆಜೆಶ್ಕಿಯಾನ್ ಅವರಿಗೆ ತಿಳಿಸಲಾಯಿತು’ ಎಂದೂ ವಿವರಿಸಿದ್ದಾರೆ.

ಕೈಗಾರಿಕಾ ಉತ್ಪಾದನೆ ಕುಸಿತ; ರಫ್ತು ವಹಿವಾಟಿನ ಮೇಲೂ ಪರಿಣಾಮ?

26 ಕೈಗಾರಿಕೆಗಳಿಗೆ ನೈಸರ್ಗಿಕ ಅನಿಲ ಪೂರೈಕೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೊಲ್ಲಿ ಯುದ್ಧದಿಂದಾಗಿ ನೈಸರ್ಗಿಕ ಅನಿಲ ಪೂರೈಕೆ ಜಾಲದ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ನೈಸರ್ಗಿಕ ಅನಿಲವನ್ನು ಇಂಧನವಾಗಿ ಬಳಸುತ್ತಿರುವ ಈ ಪ್ರದೇಶದ ಕೈಗಾರಿಕೆಗಳಿಗೆ, ಅವುಗಳ ಬೇಡಿಕೆಯ ಶೇ 80ರಷ್ಟು ಅನಿಲ ಪೂರೈಕೆಯನ್ನು ಗೇಲ್ ಗ್ಯಾಸ್ ಲಿಮಿಟೆಡ್ (ಜಿಜಿಎಲ್) ಕಡಿತಗೊಳಿಸಿದೆ.

ಬಿಎಸ್‌ಎಫ್, ಕಾರ್ಡೊಲೈಟ್, ಎಂಎಸ್‌ಇಜೆಡ್, ಅದಾನಿ ವಿಲ್ಮರ್, ಲೆಮಿನಾ ಸೇರಿದಂತೆ 26 ಕೈಗಾರಿಕೆಗಳಿಗೆ ನೈಸರ್ಗಿಕ ಅನಿಲ ಪೂರೈಕೆ ವ್ಯತ್ಯಯವಾಗಿದೆ.

‘ಮಂಗಳೂರಿನ ಬೈಕಂಪಾಡಿ, ಪಣಂಬೂರು ಪ್ರದೇಶದ 26 ಕೈಗಾರಿಕೆಗಳಿಗೆ ನೈಸರ್ಗಿಕ ಅನಿಲ ಪೂರೈಕೆ ಆಗುತ್ತಿದೆ. ಕೈಗಾರಿಕಾ ಘಟಕಗಳಿಗೆ ಪೂರೈಸುವ ನೈಸರ್ಗಿಕ ಅನಿಲವನ್ನು ಶೇ 80ರಷ್ಟು ಕಡಿತಗೊಳಿಸುವಂತೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಸದ್ಯಕ್ಕೆ ಈ ಕೈಗಾರಿಕೆಗಳ ಬೇಡಿಕೆಯ ಶೇ 20ರಷ್ಟು ಅನಿಲವನ್ನು ಮಾತ್ರ ಪೂರೈಸಲಾಗು-ತ್ತಿದೆ’ ಎಂದು ಜಿಜಿಎಲ್ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಮುಖ್ಯಾಂಶಗಳು

- ಬೇಡಿಕೆಯ ಶೇ 80ರಷ್ಟು ಪಿಎನ್‌ಜಿ ಪೂರೈಕೆ ಮಾರ್ಚ್ 10ರಿಂದ ಕಡಿತ
- ಪರ್ಯಾಯ ಇಂಧನ ಲಭ್ಯ ಇಲ್ಲದೇ ಕೈಗಾರಿಕೆಗಳಿಗೆ ಸಮಸ್ಯೆ

ಕೇರಳದ ಕೊಚ್ಚಿಯಿಂದ ನಗರಕ್ಕೆ ನೈಸರ್ಗಿಕ ಅನಿಲ ಕೊಳವೆ ಮೂಲಕ ಪೂರೈಕೆಯಾಗುತ್ತದೆ. ಅಲ್ಲಿಂದ, ಕೈಗಾರಿಕಾ ಘಟಕಗಳಿಗೆ ಮತ್ತು ಗೃಹ ಸಂಪರ್ಕಗಳಿಗೆ ಕೊಳವೆಗಳ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಸಲಾಗುತ್ತದೆ. ವಾಹನ ಬಳಕೆಗೆ ಸಾಂದ್ರೀಕೃತ ನೈಸರ್ಗಿಕ ಅನಿಲವನ್ನು (ಸಿಎನ್‌ಜಿ) ಸಿಲಿಂಡರ್‌ಗಳಲ್ಲಿ ತುಂಬಿ ಪೂರೈಸಲಾಗುತ್ತದೆ.

ಕೊಚ್ಚಿಯ ಘಟಕಕ್ಕೆ ನೈಸರ್ಗಿಕ ಅನಿಲ ಆಮದಾಗುವುದು ಆಸ್ಟ್ರೇಲಿಯಾದಿಂದ. ಆದರೆ ದೇಶದ ಬೇರೆ ಬೇರೆ ಭಾಗಗಳ ಕೆಲ ನೈಸರ್ಗಿಕ ಅನಿಲ ಘಟಕಗಳು ಕತಾರ್ ಮತ್ತಿತರ ಕೊಲ್ಲಿ ದೇಶಗಳಿಂದ ನೈಸರ್ಗಿಕ ಅನಿಲವನ್ನು ಆಮದು ಮಾಡಿಕೊಳ್ಳುತ್ತಿದ್ದವು. ಅವು ಕೊಲ್ಲಿ ಯುದ್ಧ ಶುರುವಾದ ಬಳಿಕ ನೈಸರ್ಗಿಕ ಅನಿಲದ ತೀವ್ರ ಕೊರತೆ ಎದುರಿಸುತ್ತಿವೆ. ಆಸ್ಟ್ರೇಲಿಯಾದಿಂದ ಆಮದಾಗುವ ನೈಸರ್ಗಿಕ ಅನಿಲವನ್ನು ಆ ಘಟಕಗಳಿಗೂ ಹಂಚಿಕೆ ಮಾಡಲು ಕೇಂದ್ರ ಸರ್ಕಾರ ಕ್ರಮವಹಿಸಿದೆ ಎಂದು ಜಿಜಿಎಲ್ ಮೂಲಗಳು ಹೇಳಿವೆ.

ಪಿಎನ್‌ಜಿ ಪೂರೈಕೆ ಕಡಿತದಿಂದ ಕೈಗಾರಿಕೆಗಳ ಕಾರ್ಯಾಚರಣೆ ಮೇಲೆ ಹೊಡೆತ ಬಿದ್ದಿದೆ. ಕೆಲ ಕೈಗಾರಿಕೆಗಳ ಉತ್ಪಾದನೆ ಭಾರಿ ಪ್ರಮಾಣದಲ್ಲಿ ಕುಸಿಯುವ, ರಫ್ತು ವಹಿವಾಟಿನ ಮೇಲೆ ಹೊಡೆತ ಬೀಳುವ ಆತಂಕ ಎದುರಾಗಿದೆ.

‘ನಮ್ಮ ಕೈಗಾರಿಕೆ ಎರಡು ವರ್ಷಗಳಿಂದ ಪಿಎನ್‌ಜಿಯನ್ನು ಇಂಧನವಾಗಿ ಬಳಸುತ್ತಿದ್ದೇವೆ. ಪಿಎನ್‌ಜಿ ಪೂರೈಕೆಯನ್ನು ಶೇ 80ರಷ್ಟು ಕಡಿತ-ಗೊಳಿಸುವುದಾಗಿ ನಮಗೆ ಇ- ಮೇಲ್ ಮೂಲಕ ಮಂಗಳವಾರ ಮಾಹಿತಿ ನೀಡಲಾಗಿದೆ. ನಮ್ಮ ಉತ್ಪಾದನೆಯನ್ನೂ ಶೇ 80ರಷ್ಟು ಕಡಿತಗೊಳಿಸಬೇಕಾಗಿದೆ’ ಎಂದು ಬೈಕಂಪಾಡಿಯ ಲೆಮಿನಾ ಸಸ್ಟೆನ್ಸ್ ಪ್ರಾಡಕ್ಟ್ ಲಿಮಿಟೆಡ್ ಸಂಸ್ಥೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ನೈಸರ್ಗಿಕ ಅನಿಲಕ್ಕೆ ಪರ್ಯಾಯ ಇಂಧನವಾಗಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಬಳಸಬಹುದು. ಆದರೆ ಈಗ ಎಲ್‌ಪಿಜಿಯೂ ಲಭ್ಯ ಇಲ್ಲ. ಫರ್ನೇಸ್ ಆಯಿಲ್ ಅನ್ನು ಇಂಧನವಾಗಿ ಬಳಸಬಹುದಾದರೂ ಅದಕ್ಕೆ ಕೆಲವೊಂದು ಮಾರ್ಪಾಟು ಮಾಡಬೇಕಾಗುತ್ತದೆ. ಇದಕ್ಕೆ ಏನಿಲ್ಲವೆಂದರೂ ಒಂದು ತಿಂಗಳು ಕಾಲಾವಕಾಶಬೇಕು. ಫರ್ನೇಸ್ ಆಯಿಲ್ ಅನ್ನು ನಮ್ಮ ಕೆಲವು ಘಟಕಗಳಿಗೆ ಇಂಧನವಾಗಿ ಬಳಸಲಾಗದು’ ಎಂದು ತಿಳಿಸಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಶ್ರದ್ಧಾಂಜಲಿ

ಶತಾಯುಷಿ ಶ್ರೀಮತಿ ಗುಂಡಮ್ಮನವರು

ದಿವಂಗತ ಗುಡ್ಡದರಂಗಪ್ಪನವರ ಧರ್ಮಪತ್ನಿ

ಇವರು ದಿನಾಂಕ: 09.03.2026ನೇ ಸೋಮವಾರ ದೈವಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಭೂಶಾಂತಿ ಮತ್ತು ಪುಣ್ಯಾನುಮೋದನೆ ವಿದಿಗಳನ್ನು ದಿನಾಂಕ: 15.03.2026 ರಂದು ಭಾನುವಾರ ಬೆಳಗ್ಗೆ 10.00 ಗಂಟೆಗೆ ಮೃತರ ಸ್ವಗೃಹ ಹನುಮೇಗೌಡನ ಪಾಳ್ಯದಲ್ಲಿ (ಬರಗೂರು ಅಂಚೆ) ನೆರವೇರಿಸಲಾಗುವುದು.

ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:

ಜಿ. ತಿಪ್ಪೇಸ್ವಾಮಿ ಆಕಾಶವಾಣಿ ಅಧಿಕಾರಿ(ನಿ) ಮತ್ತು ರಾಚಪ್ಪ ಕುಟುಂಬದವರು, ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು, ಬಂದು-ಮಿತ್ರರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,866
ಇಂದಿನ ಅಂತ್ಯ:	23,639
ದಿನದ ಕನಿಷ್ಠ:	23,556
	227

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹480
12 ಕ್ಕೆ	₹72
ಮೈಸೂರು: 100 ಕ್ಕೆ	₹485

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹211
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹188

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹512-800
ದ್ವಿತಳಿ (ಬಿ.ವಿ)	₹389-895

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1720 (1710)
ಸೋಯಾ (ರಿಫೈನ್ಡ್)	₹1430 (1430)
ಸೂರ್ಯಕಾಂತಿ (ರಿಫೈನ್ಡ್)	₹1730 (1710)
ಪಾಮೋಲಿನ್	₹1425 (1410)

ಅಡಿಕೆ ಧಾರಣೆ

ಚಿತ್ರದುರ್ಗ		ಸಾಗರ		ಸಿದ್ದಾಪುರ	
ಆಪಿ	54419-54829	ಬಿಳಿಗೋಟು	10786-34070	ಬಿಳಿಗೋಟು	27099-38699
ಬೆಟ್ಟೆ	37949-38379	ಚಾಲಿ	26999-43299	ಚಾಲಿ	39319-46719
ಕೆಂಪುಗೋಟು	31709-32110	ಕೋಕ	10989-32899	ಕೋಕ	23099-31909
ರಾಶಿ	53939-54369	ಕೆಂಪುಗೋಟು	20169-39269	ಕೆಂಪುಗೋಟು	30600-34299
ಕುಮಟಾ		ರಾಶಿ	37899-58399	ರಾಶಿ	41099-52899
ಚಾಲಿ	41069-49299	ಸಿಪ್ಪೆಗೋಟು	10899-22600	ತಟ್ಟಿಬೆಟ್ಟೆ	37299-41689
ಚಿಪ್ಪು	16119-42869	**ಶಿವಮೊಗ್ಗ**		**ಶಿರಸಿ**	
ಕೋಕ	18209-37269	ಸರಕು	50859-91700	ಬೆಟ್ಟೆ	40096-51018
ಹೊಸಚಾಲಿ	38289-45599	ಬೆಟ್ಟೆ	50119-62910	ಬಿಳಿಗೋಟು	28099-39099
ಪುತ್ತೂರು		ರಾಶಿ	47089-54869	ಚಾಲಿ	43618-47630
ಕೋಕ	20000-35000	ಗೊರಬಲು	19000-40169	ಕೆಂಪುಗೋಟು	15199-39699
ಹೊಸತು	26000-46500			ರಾಶಿ	49609-53528

ಮುದ್ರೆಮನೆ ಕಾಫಿ

ಎಪಿ	₹22800
ಎಸಿ	₹13100
ಆರ್‌ಪಿ	₹18450
ಆರ್‌ಸಿ	₹9700

ಚಿಲ್ಲರೆ ಹಣದುಬ್ಬರ ಏರಿಕೆ

ಆಹಾರ ಪದಾರ್ಥಗಳ ಬೆಲೆ ಏರಿಕೆ ಹಣದುಬ್ಬರ ಹೆಚ್ಚಳಕ್ಕೆ ಕಾರಣ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಫೆಬ್ರುವರಿ ತಿಂಗಳಿನಲ್ಲಿ ಶೇ 3.21ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಗುರುವಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ.

ಜನವರಿಯಲ್ಲಿ ಚಿಲ್ಲರೆ ಹಣದುಬ್ಬರವು ಶೇ 2.74ರಷ್ಟಿತ್ತು. ಆಹಾರ ಪದಾರ್ಥಗಳ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರದ ಪ್ರಮಾಣವು ಶೇ 4ರ ಹಂತದಲ್ಲಿ ಇರಬೇಕು ಎಂಬುದು ಕೇಂದ್ರ ಸರ್ಕಾರವು ಆರ್‌ಬಿಐಗೆ ನಿಗದಿ ಮಾಡಿರುವ ಗುರಿ. ಜನವರಿಯಿಂದ ಚಿಲ್ಲರೆ ಹಣದುಬ್ಬರ ಅಳೆಯಲು 2024ನೇ ಇಸವಿಯನ್ನು ಮೂಲ ವರ್ಷವನ್ನಾಗಿ ಇರಿಸಿಕೊಳ್ಳಲಾಗಿದೆ.

ಜನವರಿಯಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆ ಪ್ರಮಾಣ ಶೇ 2.13ರಷ್ಟಿತ್ತು. ಅದು ಫೆಬ್ರುವರಿಯಲ್ಲಿ ಶೇ 3.47ಕ್ಕೆ ಹೆಚ್ಚಳವಾಗಿದೆ.

ಚಿನ್ನ, ಬೆಳ್ಳಿ, ವಜ್ರ, ಪ್ಲಾಟಿನಂ ಆಭರಣಗಳು, ಕೊಬ್ಬರಿ, ಟೊಮೆಟೊ ಮತ್ತು ಹೂಕೋಸು ಬೆಲೆಯಲ್ಲಿ ಏರಿಕೆಯಾಗಿದೆ. ಬೆಳ್ಳುಳ್ಳಿ, ಈರುಳ್ಳಿ, ಆಲೂಗೆಡ್ಡೆ, ಲಿಚಿ ಹಣ್ಣು ಬೆಲೆಯಲ್ಲಿ ಇಳಿಕೆಯಾಗಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಚಿಲ್ಲರೆ ಹಣದುಬ್ಬರವು ಕ್ರಮವಾಗಿ ಶೇ 3.37ರಷ್ಟು ಮತ್ತು ಶೇ 3.02ರಷ್ಟಿದೆ. ತೆಲಂಗಾಣದಲ್ಲಿ ಹಣದುಬ್ಬರ ಅತಿ ಹೆಚ್ಚು (ಶೇ 5.02ರಷ್ಟು) ಆಗಿದೆ, ಮಿಜೋರಾಂನಲ್ಲಿ ಅತಿ ಕಡಿಮೆ (ಶೇ 0.1ರಷ್ಟು) ಇದೆ ಎಂದು ತಿಳಿಸಿದೆ.

‘ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟು ದೀರ್ಘಾವಧಿಗೆ ಮುಂದುವರಿದರೆ ಹಣದುಬ್ಬರದ ಮೇಲೆ ಪರಿಣಾಮ ಉಂಟಾಗಬಹುದು’ ಎಂದು ಐಸಿಆರ್‌ಎನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತತೆಯಿಂದ ಮುಂದಿನ ಬಾರಿ ರೆಪೊ ದರ ವಿಚಾರದಲ್ಲಿ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ತಟಸ್ಥ ನಿಲುವು ಅನುಸರಿಸಬಹುದು ಎಂದು ಹೇಳಿದ್ದಾರೆ. ಏಪ್ರಿಲ್ 6ರಿಂದ 8ರವರೆಗೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆ ನಡೆಯಲಿದೆ.

‘ಆಹಾರೇತರ ಪದಾರ್ಥಗಳು, ಇಂಧನ, ಲೋಹದ ಬೆಲೆ ಹೆಚ್ಚಳ ಸಹ ಹಣದುಬ್ಬರ ಏರಿಕೆಗೆ ಕಾರಣವಾಗಿವೆ’ ಎಂದು ನೈಟ್ ಫ್ರಾಂಕ್ ಇಂಡಿಯಾದ ಸಂಶೋಧನಾ ವಿಭಾಗದ ರಾಷ್ಟ್ರೀಯ ನಿರ್ದೇಶಕ ವಿವೇಕ್ ರಥಿ ಹೇಳಿದ್ದಾರೆ.

> ಕಚ್ಚಾ ತೈಲದ ಬೆಲೆಯಲ್ಲಿನ ಶೇ 10ರಷ್ಟು ಹೆಚ್ಚಳದಿಂದ, ಚಿಲ್ಲರೆ ಹಣದುಬ್ಬರವು ಶೇ 0.40ರಿಂದ ಶೇ 0.60ರಷ್ಟು ಏರಿಕೆ ಆಗಲಿದೆ
>
> ಐಸಿಆರ್‌ಎ

ಮುಖ್ಯಾಂಶಗಳು

- ಫೆಬ್ರುವರಿಯಲ್ಲಿ ಆರ್‌ಬಿಐನ ಮಿತಿಯಲ್ಲೇ ಚಿಲ್ಲರೆ ಹಣದುಬ್ಬರ
- ಪಶ್ಚಿಮ ಏಷ್ಯಾದ ಬಿಕ್ಕಟ್ಟು ಹಣದುಬ್ಬರದ ಮೇಲೆ ಪರಿಣಾಮ
- ತೆಲಂಗಾಣದಲ್ಲಿ ಹಣದುಬ್ಬರ ಅತಿ ಹೆಚ್ಚು ದಾಖಲು

ಮುಂಬೈ ಧಾರಣೆ (ಶೇಂಗಾ)

12-03-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1730 (1720)
ಒಂದು ವಾರದ ಡೆಲಿವರಿ	1725 (1715)
ಪಾಮ್ ವಾರದ ಡೆಲಿವರಿ	1423 (1408)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,59,200 (1,59,500)
ಬೆಳ್ಳಿ ಕೆ.ಜಿಗೆ	2,65,500 (2,63,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕಚ್ಚಾ ತೈಲವಿರುವ ಹಡಗುಗಳ ಮೇಲೆ ಇರಾನ್ ದಾಳಿ ಮಾಡುತ್ತಿರುವುದು ನ್ಯಾಯೋಚಿತವೇ?

●ಹೌದು ●ಇಲ್ಲ ●ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಹೊಸ ಆಮದು ಸುಂಕ ವಿಧಿಸಲು ಮುಂದಾದ ಅಮೆರಿಕ

ಭಾರತ ಸೇರಿ 16 ದೇಶಗಳ ಮೇಲೆ ಕ್ರಮ

ವಾಷಿಂಗ್ಟನ್ (ಎಪಿ): ಭಾರತ ಸೇರಿ ಒಟ್ಟು 16 ದೇಶಗಳ ಮೇಲೆ ಹೊಸ ರೀತಿಯ ಆಮದು ಸುಂಕ ವಿಧಿಸಲು ಅಮೆರಿಕ ಮುಂದಾಗಿದೆ.

‘ನಮ್ಮೊಂದಿಗೆ ವ್ಯಾಪಾರ ನಡೆಸುವ ದೇಶಗಳು, ನಮಗೆ ರಫ್ತು ಮಾಡುವ ಉದ್ದೇಶದಿಂದಲೇ ಅಧಿಕ ಪ್ರಮಾಣದಲ್ಲಿ ಸರಕು ತಯಾರಿಸುತ್ತಿವೆ. ಇದರಿಂದ ನಮ್ಮ ದೇಶದ ತಯಾರಿಕಾ ಕ್ಷೇತ್ರದ ಸಾಮರ್ಥ್ಯವು ಕುಗ್ಗಿದೆ. ಆದ್ದರಿಂದ ಈ ಬಗ್ಗೆ ತನಿಖೆ ನಡೆಸಲು ಮುಂದಾಗಿದ್ದೇವೆ’ ಎಂದು ಅಮೆರಿಕ ಹೇಳಿದೆ. ಈ ಬಗ್ಗೆ ಇಲ್ಲಿನ ವ್ಯಾಪಾರ ಪ್ರತಿನಿಧಿಗಳ ಇಲಾಖೆಯು ಬುಧವಾರ ಹೇಳಿಕೆ ಬಿಡುಗಡೆ ಮಾಡಿದೆ.

ಚೀನಾ, ಐರೋಪ್ಯ ಒಕ್ಕೂಟ, ಸಿಂಗಪುರ, ಸ್ವಿಟ್ಜರ್ಲೆಂಡ್, ನಾರ್ವೆ, ಇಂಡೊನೇಷ್ಯಾ, ಮಲೇಷ್ಯಾ, ಕಾಂಬೋಡಿಯಾ, ಥಾಯ್ಲೆಂಡ್, ಕೊರಿಯಾ, ವಿಯೆಟ್ನಾಂ, ತೈವಾನ್, ಬಾಂಗ್ಲಾದೇಶ, ಮೆಕ್ಸಿಕೊ, ಜಪಾನ್ ಮತ್ತು ಭಾರತವನ್ನು ಗುರಿಯಾಗಿಸಿ ತನಿಖೆ ನಡೆಯಲಿದೆ.

‘1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 301 (ಬಿ) ಅನ್ವಯ ತನಿಖೆ ನಡೆಸಲಾಗುವುದು. ನಮಗೆ ಹೆಚ್ಚಿನ ಪ್ರಮಾಣದ ರಫ್ತು ಮಾಡಬೇಕೆಂಬ ದೃಷ್ಟಿಯಿಂದ ರೂಪಿಸಿಕೊಂಡ ವಿದೇಶಿ ಸರ್ಕಾರಗಳ ನೀತಿಗಳ ಬಗ್ಗೆ ತನಿಖೆ ನಡೆಸಲಾಗುವುದು. ಇಂಥ ನೀತಿಗಳು ಅಮೆರಿಕದ ವ್ಯಾಪಾರದ ಕುರಿತಾಗಿ ತಾರತಮ್ಯದ ಧೋರಣೆ ಹೊಂದಿವೆ ಮತ್ತು ನಮಗೆ ಹೊರೆಯಾಗಿವೆ’ ಎಂದು ಇಲಾಖೆ ಹೇಳಿದೆ.

‘ನಮ್ಮಲ್ಲಿ ಉದ್ಯೋಗ ಸೃಷ್ಟಿಯೇ ಗುರಿ’

> ಅಮೆರಿಕದಲ್ಲಿ ಉದ್ಯೋಗ ಸೃಷ್ಟಿಸುವುದೇ ನಮ್ಮ ಗುರಿ. ಇದೇ ನಮ್ಮ ನೀತಿ. ಆದರೆ, ಅದಕ್ಕೆ ಬಳಸುವ ಪ್ರಕ್ರಿಯೆ ಮಾತ್ರವೇ ಬದಲು... ಡಿಜಿಟಲ್ ಸೇವೆಗಳು ಮತ್ತು ಔಷಧೀಯ ವಸ್ತುಗಳ ಮೇಲಿನ ತೆರಿಗೆ ಮತ್ತು ಸರಕು ತಯಾರಿಸಲು ಸಮುದ್ರವನ್ನು ಮಲಿನಗೊಳಿಸಲಾಗುತ್ತಿದೆಯೇ ಎಂಬೆಲ್ಲಾ ವಿಷಯಗಳ ಕುರಿತು ತನಿಖೆ ನಡೆಸಲಾಗುತ್ತದೆ. ಇದೇ ವಿಷಯಕ್ಕೆ ಸಂಬಂಧಿಸಿ ವಾಣಿಜ್ಯ ಇಲಾಖೆಯು ಪ್ರತ್ಯೇಕವಾಗಿ ತನಿಖೆ ನಡೆಸುತ್ತದೆ
>
> **ಜ್ಯಾಮಿಸನ್ ಗ್ರೇರ್,** ವ್ಯಾಪಾರ ಪ್ರತಿನಿಧಿಗಳ ಇಲಾಖೆಯ ಮುಖ್ಯಸ್ಥ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು ವೃದ್ದರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ. ಬೆಂಗಳೂರು-76 ಸಂಬಳ: 17,000/- ರಿಂದ 25,000/- ತಕ್ಷಣ ಸಂಪರ್ಕಿಸಿ: 9008835841, 9148525233

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel Agencies

ಕಾಶ್ಮೀರ ವೈಷ್ಣೋದೇವಿ ಪ್ರವಾಸ 9 ದಿನಗಳು 28/4, ಚಾರ್ ಧಾಮ್ ಪ್ರವಾಸ 15/5 ಮತ್ತು 26/5. 13 ದಿನಗಳು ನೇಪಾಳ ಪ್ರವಾಸ 9 ದಿನಗಳು 20/4 ಸುವರ್ಣಯಾತ್ರ 9008381022 6360146483

Travel

ಹೆಸರಾಂತ ಏಷ್ಯನ್ ಟ್ರಾವೆಲ್ಸ್ ಏಜೆನ್ಸಿ ವತಿಯಿಂದ 24.03.2026 12.04.2026 ಕಾಶಿ,ಅಯೋಧ್ಯ,ಬುದ್ಧಗಯಾ 19.04.2026 03.05.2026 ಚಾರ್‌ಧಾಮ ಪ್ರವಾಸ. 20.04.2026, ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಜ್ವಾಲಾಮುಖಿ. 05.07.2026 ಅಮರನಾಥ್ ಹಿಮಲಿಂಗ ದರ್ಶನ. 19.06.2026 ನೇಪಾಳ,ಮುಕ್ತಿನಾಥ ಪೋಖ್ರಾ. ಸಂಪರ್ಕಿಸಿ. 84310888138 8317446683 9686708171

ರಿಯಲ್ ಎಸ್ಟೇಟ್ ಸೆಲ್ಲಿಂಗ್

Kengeri

LUXURY APARTMENT Booking Started Call Kirti Mehta 9341218992 By Landmark, Next to kingeri metro station 4 tower of 69-79-89-99 floor, 2016 unit Payment in 36 months 3 BHK, 2,250 to 2,601 sft 3.6cr to 4.16cr++

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಾಂಗ್ಲಾ: ಮನಮೋಹನ್ ಸಿಂಗ್‌ಗೆ ಸಂತಾಪ



ಮನಮೋಹನ್ ಸಿಂಗ್

ಢಾಕಾ (ಪಿಟಿಐ): ಭಾರತದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಬಾಂಗ್ಲಾದೇಶದ ಖಲೀದಾ ಜಿಯಾ ಹಾಗೂ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ಜಂಟಿ ದಾಳಿಯಲ್ಲಿ ಹತ್ಯೆಗೀಡಾದ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಸೇರಿದಂತೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ನಾಯಕರ ನಿಧನಕ್ಕೆ ಬಾಂಗ್ಲಾದೇಶದ ಸಂಸತ್ತು, ಸಂತಾಪ ಸೂಚಿಸಿತು.

13ನೇ ಸಂಸತ್ತಿನ ಮೊದಲ ಅಧಿವೇಶನವು ಗುರುವಾರ ಆರಂಭವಾಯಿತು. ದಿವಂಗತ ಪೋಪ್ ಫ್ರಾನ್ಸಿಸ್ ಸೇರಿದಂತೆ 31 ನಾಯಕರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಸರ್ಕಾರವನ್ನು ಉರುಳಿಸಿದ, ದಂಗೆಯಲ್ಲಿ ಸಾವಿಗೀಡಾದವರ ಹೆಸರುಗಳೂ ಪಟ್ಟಿಯಲ್ಲಿದ್ದವು.

‘ಸಮಸ್ಯೆಗೆ ವಾರದಲ್ಲೇ ಪರಿಹಾರ’

ಒಂದನೇ ಪುಟದಿಂದ...

ಇರಾನ್ ಈಗಾಗಲೇ ಹೊರ್ಮುಜ್ ಜಲಸಂಧಿ ಮೂಲಕ ಭಾರತದ ಅನಿಲ ಸಾಗಣೆಗೆ ಅನುಮತಿ ನೀಡಿದೆ. ಎರಡು ಹಡಗುಗಳು ಮುಂಬೈ ಬಂದು ಸೇರಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ಹೇಳಿದರು.

ಅಗತ್ಯವಿರುವ ಅನಿಲದಲ್ಲಿ ಶೇ 30ರಷ್ಟು ಉತ್ಪಾದನೆ ಭಾರತದಲ್ಲೇ ಆಗುತ್ತದೆ. ಉಳಿದ ಶೇ 70ರಷ್ಟು ಆಮದು ಮಾಡಿಕೊಳ್ಳಲಾಗುತ್ತದೆ. ಹತ್ತು ದಿನಗಳಿಗೆ ಬೇಕಾಗುವ ದಾಸ್ತಾನು ರಾಜ್ಯದಲ್ಲಿದೆ. ಮನೆಗೊಂದು ವಿತರಿಸಲು ಅಡ್ಡಿ ಇಲ್ಲ. ಶಾಲಾ ಬಿಸಿಯೂಟ, ಆಸ್ಪತ್ರೆ ಸೇರಿದಂತೆ ತುರ್ತು ಸೇವೆಗಳಿಗೆ ಕೊರತೆಯಾಗದಂತೆ ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೆಲವರು ಆತಂಕಗೊಂಡು ಹೆಚ್ಚುವರಿ ಸಿಲಿಂಡರ್ ಸಂಗ್ರಹ ಮಾಡಲು ಮುಂದಾಗಿದ್ದಾರೆ. ಸಾರ್ವಜನಿಕರು ಆತಂಕಕ್ಕೆ ಒಳಗಾಗಬಾರದು. ಸಾರ್ವಜನಿಕರಿಗೆ ಅಗತ್ಯವಿರುವ ಸಿಲಿಂಡರ್ ಕಾನೂನುಬದ್ಧವಾಗಿ ಸಿಗಲಿದೆ ಎಂದರು.

ಸಚಿವ ಮುನಿಯಪ್ಪ ಹೇಳಿಕೆಯನ್ನು ಬಿಜೆಪಿ ಸದಸ್ಯರು ಮೇಜುಕುಟ್ಟಿ ಸ್ವಾಗತಿಸಿದರೆ, ಕಾಂಗ್ರೆಸ್ ಸದಸ್ಯರು ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪೆಶಾವರ: ಕಾನ್ಸುಲೇಟ್ ಕಚೇರಿ ಮುಚ್ಚಿದ ಅಮೆರಿಕ

ವಾಷಿಂಗ್ಟನ್ (ಎಪಿ): ಪಾಕಿಸ್ತಾನದ ಪೆಶಾವರದಲ್ಲಿರುವ ಅಮೆರಿಕದ ಕಾನ್ಸುಲೇಟ್ ಕಚೇರಿಯನ್ನು ಶಾಶ್ವತವಾಗಿ ಮುಚ್ಚಲು ಅಮೆರಿಕದ ವಿದೇಶಾಂಗ ಇಲಾಖೆ ನಿರ್ಧರಿಸಿದೆ.

ಕಾನ್ಸುಲೇಟ್ ಕಚೇರಿಯನ್ನು ಮುಚ್ಚುವ ನಿರ್ಧಾರವನ್ನು ವಿದೇಶಾಂಗ ಇಲಾಖೆ ಅಮೆರಿಕದ ಸಂಸತ್ತಿಗೆ ಕಳೆದ ವಾರ ತಿಳಿಸಿದೆ. ಇದರಿಂದ ವರ್ಷಕ್ಕೆ ₹69.17 ಕೋಟಿ (7.5 ಮಿಲಿಯನ್ ಅಮೆರಿಕ ಡಾಲರ್) ಉಳಿತಾಯವಾಗಲಿದೆ. ಈ ನಿರ್ಧಾರವು ಪಾಕಿಸ್ತಾನದಲ್ಲಿರುವ ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಅಮೆರಿಕ ನಾಗರಿಕರ ಮತ್ತು ಇತರ ಕಾನ್ಸುಲರ್ ಸೇವೆಗಳನ್ನು ಇಸ್ಲಾಮಾಬಾದ್‌ನಲ್ಲಿರುವ ರಾಯಭಾರ ಕಚೇರಿ ನಿರ್ವಹಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪೆಶಾವರದಲ್ಲಿರುವ ಕಾನ್ಸುಲೇಟ್‌ನಲ್ಲಿ ಅಮೆರಿಕದ 18 ರಾಜತಾಂತ್ರಿಕರು, ಇತರ ಅಧಿಕಾರಿಗಳು ಮತ್ತು 89 ಸ್ಥಳೀಯ ಸಿಬ್ಬಂದಿ ಇದ್ದಾರೆ. ಈ ಕಚೇರಿ ಮುಚ್ಚಲು ₹27.67 ಕೋಟಿ (3 ಮಿಲಿಯನ್ ಅಮೆರಿಕ ಡಾಲರ್) ವೆಚ್ಚ ಮಾಡಲಾಗುತ್ತದೆ. ಇದರಲ್ಲಿ ₹16.60 ಕೋಟಿಯನ್ನು ಸಿಬ್ಬಂದಿ ಸ್ಥಳಾಂತರಕ್ಕೆ ಬಳಸಿಕೊಳ್ಳಲಾಗುವುದು ಎಂದು ಅದು ಹೇಳಿದೆ.

ವಾಣಿಜ್ಯ ಎಲ್‌ಪಿಜಿ ಪೂರೈಕೆಗೆ ವ್ಯವಸ್ಥೆ

ಒಂದನೇ ಪುಟದಿಂದ...

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮವಾಗಿ ಇಂಧನ ಮಾರುಕಟ್ಟೆಯಲ್ಲಿ ಆಗಿರುವ ಸಮಸ್ಯೆಗಳ ಬಗ್ಗೆ ಅವರು ಲೋಕಸಭೆಗೆ ವಿವರ ಒದಗಿಸಿದರು. ವಾಣಿಜ್ಯ ಬಳಕೆ ಎಲ್‌ಪಿಜಿ ಲಭ್ಯವಾಗದೆ ದೇಶದಾದ್ಯಂತ ಹಲವು ಹೋಟೆಲ್‌ಗಳು ತಮ್ಮ ಕಾರ್ಯಾಚರಣೆ ತಗ್ಗಿಸಿವೆ, ಕೆಲವು ಹೋಟೆಲ್‌ಗಳು ವಹಿವಾಟು ನಿಲ್ಲಿಸಿವೆ. ಎಲ್‌ಪಿಜಿ ಕೊರತೆ ವಿಚಾರವಾಗಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ಸದನದಲ್ಲಿ ಕಳವಳ ವ್ಯಕ್ತಪಡಿಸಿದ್ದರು. ಅದಕ್ಕೆ ಉತ್ತರವಾಗಿ ಸಚಿವರು ಈ ಭರವಸೆ ಇತ್ತರು.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಕಾಳಸಂತೆಯಲ್ಲಿ ಮಾರಾಟ ಆಗುವುದನ್ನು ತಡೆಯುವ ಉದ್ದೇಶದಿಂದ ಕೆಲವು ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲಾಗಿದೆಯೇ ವಿನಾ, ಆತಿಥ್ಯ ಉದ್ಯಮಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಹೀಗೆ ಮಾಡಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಸರ್ಕಾರದ ಯಾವುದೇ ನಿಯಂತ್ರಣ ಇಲ್ಲದೆ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಇಲ್ಲಿ ನೋಂದಣಿ, ಬುಕಿಂಗ್ ಅಗತ್ಯ ಇಲ್ಲ. ಯಾವುದೇ ಉದ್ಯಮ ಅಥವಾ ವ್ಯಕ್ತಿ ಸಿಲಿಂಡರ್‌ಗಳನ್ನು ಖರೀದಿಸಬಹುದು. ಸಹಜ ಸಂದರ್ಭಗಳಲ್ಲಿ ಇಲ್ಲಿ ಸರ್ಕಾರದ ನಿಯಂತ್ರಣ ಇರುವುದಿಲ್ಲ. ಆದರೆ ಸಾರ್ವಜನಿಕರಲ್ಲಿ ಆತಂಕ ಹೆಚ್ಚಿರುವ, ಪೂರೈಕೆ ಕಡಿಮೆ ಇರುವ ಸಂದರ್ಭಗಳಲ್ಲಿ ಈ ಬಗೆಯ ವ್ಯವಸ್ಥೆಯು ಸಿಲಿಂಡರ್‌ಗಳ ಅಕ್ರಮ ದಾಸ್ತಾನಿಗೆ ಹಾಗೂ ಭಾರಿ ದರದಲ್ಲಿ ಅವುಗಳ ಮರುಮಾರಾಟಕ್ಕೆ ದಾರಿ ಮಾಡಿಕೊಡುತ್ತದೆ. ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಸಂಪೂರ್ಣವಾಗಿ ನಿಯಂತ್ರಣ ಮುಕ್ತವಾಗಿ ಇರಿಸಿದ್ದರೆ, ಖರೀದಿಸಿದ ಸಿಲಿಂಡರ್‌ಗಳು ಕಾಳಸಂತೆಗೆ ರವಾನೆ ಆಗುತ್ತಿದ್ದವು, ಅರ್ಹ ಗ್ರಾಹಕರಿಗೆ ಅವು ಸಿಗದಂತೆ ಆಗುತ್ತಿತ್ತು ಎಂದು ವಿವರಣೆ ನೀಡಿದರು.

‘ಇಂಧನ ಕೊರತೆ ಇಲ್ಲ’: ದೇಶದಲ್ಲಿ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಅಥವಾ ವಿಮಾನ ಇಂಧನ ಕೊರತೆ ಇಲ್ಲ ಎಂದು ಸಚಿವರು ಹೇಳಿದರು. ವಿರೋಧ ಪಕ್ಷಗಳ ಸದಸ್ಯರು ಸುಳ್ಳುಸುದ್ದಿ ಹರಡಬಾರದು ಎಂದರು. ‘ದೇಶದ 33 ಕೋಟಿ ಕುಟುಂಬಗಳ ಅಡುಗೆ ಮನೆಯಲ್ಲಿ ಅನಿಲದ ಕೊರತೆ ಉಂಟಾಗಬಾರದು ಎಂಬುದು ಸರ್ಕಾರದ ಆದ್ಯತೆ’ ಎಂದರು.

ವಿರೋಧ ಪಕ್ಷಗಳ ಸದಸ್ಯರು ಘೋಷಣೆ ಕೂಗುತ್ತಿದ್ದ ನಡುವೆಯೇ ಉತ್ತರ ನೀಡಿದ ಪುರಿ, ಎಲ್ಲ ರಾಜ್ಯಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಹೆಚ್ಚುವರಿಯಾಗಿ ಸೀಮೆಎಣ್ಣೆ ಒದಗಿಸಲಾಗಿದೆ ಎಂದು ತಿಳಿಸಿದರು.

ವಿವಿಧೆಡೆಗಳಿಂದ ಆಮದು: ಈ ಮೊದಲು ಭಾರತವು ತನ್ನ ಅಗತ್ಯದ ಶೇ 60ರಷ್ಟು ಎಲ್‌ಪಿಜಿಯನ್ನು ಕತಾರ್, ಯುಎಇ, ಸೌದಿ ಅರೇಬಿಯಾ ಮತ್ತು ಕುವೈತ್‌ನಿಂದ ಆಮದು ಮಾಡಿಕೊಳ್ಳುತ್ತಿತ್ತು. ಇನ್ನುಳಿದ ಶೇ 40ರಷ್ಟು ದೇಶದಲ್ಲಿ ಉತ್ಪಾದನೆ ಆಗುತ್ತಿದೆ.

ಈಗ ಹೆಚ್ಚುವರಿ ಮೂಲಗಳನ್ನು ಕಂಡುಕೊಳ್ಳಲಾಗಿದೆ. ಅಮೆರಿಕ, ನಾರ್ವೆ, ಕೆನಡಾ, ಅಲ್ಜೀರಿಯಾ, ರಷ್ಯಾದಿಂದ ಕೂಡ ತರಿಸಿಕೊಳ್ಳಲಾಗುತ್ತಿದೆ ಎಂದು ಅವರು ಲೋಕಸಭೆಗೆ ವಿವರಿಸಿದರು.

ಸೆಮಿಫೈನಲ್‌ನಲ್ಲಿ ಇಟಲಿ ಸವಾಲು

ಮಹಿಳಾ ಹಾಕಿ ವಿಶ್ವಕಪ್ ಅರ್ಹತಾ ಟೂರ್ನಿ ಆತ್ಮವಿಶ್ವಾಸದಲ್ಲಿ ಸಲೀಮಾ ಟೆಟೆ ಬಳಗ

ಇಂದಿನ ಪಂದ್ಯ

ಇಂಗ್ಲೆಂಡ್	V/s	ಸ್ಕಾಟ್ಲೆಂಡ್
ಹೈದರಾಬಾದ್ ಸಂಜೆ 5		
ಭಾರತ	V/s	ಇಟಲಿ
ಹೈದರಾಬಾದ್ ರಾತ್ರಿ 7.30		
ಲೈವ್		ಜಿಯೊಹಾಟ್‌ಸ್ಟಾರ್

ಹೈದರಾಬಾದ್ (ಪಿಟಿಐ): ಹಾಕಿ ವಿಶ್ವಕಪ್‌ಗೆ ಈಗಾಗಲೇ ಟಿಕೆಟ್ ಖಚಿತ ಪಡಿಸಿಕೊಂಡಿರುವ ಭಾರತ ತಂಡ ಈಗ ಎಫ್‌ಐಎಚ್ ಮಹಿಳಾ ಹಾಕಿ ವಿಶ್ವಕಪ್ ಅರ್ಹತಾ ಟೂರ್ನಿಯ ಟ್ರೋಫಿ ಗೆಲ್ಲುವ ಉತ್ಸಾಹದಲ್ಲಿದೆ. ಆ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಶುಕ್ರವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಇಟಲಿ ತಂಡವನ್ನು ಎದುರಿಸಲಿದೆ.

ಭಾರತ ವನಿತೆಯರು 'ಬಿ' ಗುಂಪಿನಲ್ಲಿ ಆಡಿದ ಮೂರು ಪಂದ್ಯಗಳಿಂದ ಏಳು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಸ್ಕಾಟ್ಲೆಂಡ್ ತಂಡ ಸಹ ಇಷ್ಟೇ ಅಂಕಗಳನ್ನು ಕಲೆಹಾಕಿದೆ. ಆದರೆ ಗೋಲು ವ್ಯತ್ಯಾಸದ ಆಧಾರದಲ್ಲಿ ಭಾರತ ಗುಂಪಿನಲ್ಲಿ ಅಗ್ರ ಸ್ಥಾನದಲ್ಲಿದೆ. ಗುಂಪು ಹಂತದಲ್ಲಿ ಭಾರತ ಎರಡು ಪಂದ್ಯಗಳನ್ನು ಗೆದ್ದು, ಒಂದನ್ನು ಡ್ರಾ ಮಾಡಿಕೊಂಡಿತ್ತು.

ಇಟಲಿ ತಂಡವು 'ಎ' ಗುಂಪಿನಲ್ಲಿ ನಾಲ್ಕು ಪಾಯಿಂಟ್‌ಗಳೊಡನೆ (ಒಂದು ಗೆಲುವು, ಒಂದು ಡ್ರಾ, ಒಂದು ಸೋಲು) ಎರಡನೇ ಸ್ಥಾನ ಗಳಿಸಿದೆ.

ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಭಾರತವು ವೇಲ್ಸ್ ವಿರುದ್ಧ ಜಯಗಳಿಸಿದ್ದು, ನವನೀತ್ ಕೌರ್ ಅವರ ಹ್ಯಾಟ್ರಿಕ್ ಗೋಲುಗಳ ಆಟ ಗಮನ ಸೆಳೆದಿತ್ತು. ಅವರು ನಾಲ್ಕು ಗೋಲುಗಳೊಡನೆ ಟೂರ್ನಿಯ ಜಂಟಿ ಗರಿಷ್ಠ ಸ್ಕೋರರ್ ಎನಿಸಿದ್ದಾರೆ.

ಇಟಲಿ ತಂಡವು, ಫೆಡೆರಿಕಾ ಕಾರ್ಟಾ ಅವರಿಂದ ಉತ್ತಮ ಆಟದ ನಿರೀಕ್ಷೆಯಲ್ಲಿದೆ. ಅವರು ತಂಡದ ದಾಳಿ ವಿಭಾಗದಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಇದುವರೆಗೆ ಮೂರು ಗೋಲುಗಳನ್ನು ಗಳಿಸಿದ್ದಾರೆ.

ಮೇಲ್ನೋಟಕ್ಕೆ ಆತಿಥೇಯ ಭಾರತವೇ ಪಂದ್ಯ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಉಭಯ ತಂಡಗಳು 2012ರಿಂದ ಈಚೆಗೆ ಏಳು ಬಾರಿ ಮುಖಾಮುಖಿಯಾಗಿವೆ. ಇದರಲ್ಲಿ ಭಾರತ ಐದು ಬಾರಿ ಜಯಗಳಿಸಿದೆ. ಇಟಲಿ ಒಮ್ಮೆ ಜಯಗಳಿಸಿದ್ದು, ಉಳಿದ ಒಂದು ಪಂದ್ಯ ಡ್ರಾ ಆಗಿದೆ. ಈ ಅಂಶವೂ ಆತಿಥೇಯ ತಂಡದ ವಿಶ್ವಾಸ ಹೆಚ್ಚಿಸಲು ನೆರವಾಗಲಿದೆ.

2026ರ ವಿಶ್ವಕಪ್‌ಗೆ ಈಗಾಗಲೇ ಅರ್ಹತೆ ಖಚಿತಪಡಿಸಿರುವುದು ಭಾರತ ತಂಡಕ್ಕೆ ಸಾಧನೆಯ ದೃಷ್ಟಿಯಿಂದ ಮಹತ್ವದ ಮೈಲಿಗಲ್ಲು ಎಂದು ಮುಖ್ಯ ತರಬೇತುದಾರ ಸ್ಯೋರ್ಡ್ ಮರಿನ್ ಬಣ್ಣಿಸಿದ್ದಾರೆ. ಈ ಟೂರ್ನಿಯಲ್ಲಿ ಆಡಿದ ರೀತಿ ನೋಡಿದರೆ ಅವರು ಎಲ್ಲಾ ರೀತಿಯಿಂದಲೂ ಮೆಚ್ಚುಗೆಗೆ ಅರ್ಹರು ಎಂದೂ ಹೇಳಿದ್ದಾರೆ.

'ಆಟಗಾರ್ತಿಯರು ಶಿಸ್ತುಬದ್ಧ ಆಟದ ಜೊತೆಗೆ ಏಕಾಗ್ರತೆ ಮತ್ತು ಗುಂಪು ಹಂತದ ಪಂದ್ಯಗಳಲ್ಲಿ ಆಕ್ರಮಣಕಾರಿ ಆಟದ ಮನೋಭಾವ ಪ್ರದರ್ಶಿಸಿದ್ದಾರೆ' ಎಂದಿದ್ದಾರೆ.

ಆದರೆ ಇಟಲಿಯನ್ನು ಲಘುವಾಗಿ ತೆಗೆದುಕೊಳ್ಳದಿರುವಂತೆ ತಮ್ಮ ತಂಡದ ಆಟಗಾರ್ತಿಯರಿಗೆ ಎಚ್ಚರಿಕೆಯನ್ನೂ ನೀಡಿದ್ದಾರೆ. 'ಇಟಲಿ ಪ್ರಬಲ ಪೈಪೋಟಿ ನೀಡುವ ಸಾಮರ್ಥ್ಯ ಹೊಂದಿದೆ. ಆ ಗುಣವನ್ನು ಈ ಟೂರ್ನಿಯಲ್ಲಿ ತೋರಿಸಿದೆ. ನಮ್ಮ ಗಮನ ತಂತ್ರಗಾರಿಕೆಗಳನ್ನು ಕಾರ್ಯಗತಗೊಳಿಸುವತ್ತ ಇರಬೇಕು' ಎಂದು ಮರಿನ್ ಕಿವಿಮಾತು ಹೇಳಿದ್ದಾರೆ.

ಭಾರತ ಹಾಕಿ ತಂಡದ ಆಟಗಾರ್ತಿಯರು ಹಾಕಿ ಇಂಡಿಯಾ ಚಿತ್ರ

ಎಫ್‌ಐಎಚ್ ವಿಶ್ವಕಪ್: ಭಾರತ ಅರ್ಹತೆ ಪಡೆದಿದ್ದು ಹೇಗೆ?

ಎಫ್‌ಐಎಚ್ ವಿಶ್ವಕಪ್ ಅರ್ಹತಾ ಟೂರ್ನಿಗಳನ್ನು ಎರಡು ಕಡೆ (ಚಿಲಿಯ ಸ್ಯಾಂಟಿಯಾಗೊ ಮತ್ತು ಭಾರತದ ಹೈದರಾಬಾದ್) ಹಮ್ಮಿಕೊಳ್ಳಲಾಗಿದೆ. ಎರಡೂ ಲೆಗ್‌ಗಳಲ್ಲಿ ತಲಾ ಎಂಟು ಗಳು ಭಾಗವಹಿಸಿದ್ದವು.

ಟೂರ್ನಿಯ ನಿಯಮಗಳ ಪ್ರಕಾರ, ಎರಡೂ ಲೆಗ್‌ಗಳಲ್ಲಿ ಮೊದಲ ಮೂರು ಸ್ಥಾನ ಪಡೆಯುವ (ಒಟ್ಟು ಆರು) ತಂಡಗಳು ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯುತ್ತವೆ. ಜೊತೆಗೆ (ಎರಡೂ ಲೆಗ್ ಸೇರಿಸಿ) ನಾಲ್ಕನೇ ಸ್ಥಾನ ಪಡೆಯುವ ವಿಶ್ವ ರ‍್ಯಾಂಕಿಂಗ್ ಉನ್ನತ ಸ್ಥಾನದ ತಂಡವೂ ವಿಶ್ವಕಪ್‌ಗೆ ಟಿಕೆಟ್ ಸಂಪಾದಿಸುತ್ತದೆ.

ಸ್ಯಾಂಟಿಯಾಗೊ ಲೆಗ್‌ನ ಅರ್ಹತಾ ಟೂರ್ನಿ ಮುಕ್ತಾಯಗೊಂಡಿದ್ದು, ಆತಿಥೇಯ ಚಿಲಿ, ಆಸ್ಟ್ರೇಲಿಯಾ ಮತ್ತು ಐರ್ಲೆಂಡ್ ತಂಡಗಳು ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದಿವೆ. ಜಪಾನ್ ನಾಲ್ಕನೇ ಸ್ಥಾನ ಪಡೆದಿದೆ. ಆದರೆ ಜಪಾನ್ ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿದೆ.

ಭಾರತ ವನಿತೆಯರು 9ನೇ ಸ್ಥಾನದಲ್ಲಿರುವ ಕಾರಣ ವಿಶ್ವಕಪ್‌ಗೆ ಸ್ಥಾನ ಈಗಾಗಲೇ ಖಚಿತವಾಗಿದೆ. ಆದರೆ, ಮೊದಲ ಮೂರರಲ್ಲಿ ಸ್ಥಾನ ಪಡೆದೂ ಅವಕಾಶ ಗಿಟ್ಟಿಸಬಹುದು. ಮಹಿಳಾ ವಿಶ್ವಕಪ್ ಟೂರ್ನಿಯು ಈ ಬಾರಿ ಪುರುಷರ ವಿಶ್ವಕಪ್ ಟೂರ್ನಿಯ ವೇಳೆಯಲ್ಲೇ– ಆಗಸ್ಟ್ 15 ರಿಂದ 30ರವರೆಗೆ ನೆದರ್ಲೆಂಡ್ಸ್ ಮತ್ತು ಬೆಲ್ಜಿಯಂನ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.

ಗಿಲ್‌ಗೆ ವರ್ಷದ ಕ್ರಿಕೆಟಿಗ ಪ್ರಶಸ್ತಿ: 15ರಂದು ಪ್ರದಾನ
ದ್ರಾವಿಡ್‌ಗೆ ಜೀವಮಾನ ಸಾಧನೆ ಗೌರವ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಅವರಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಗೌರವ ಪ್ರದಾನ ಮಾಡಲಿದೆ.

ಇದೇ 15ರಂದು ಇಲ್ಲಿ ನಡೆಯಲಿರುವ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಹುಲ್ ಅವರನ್ನು ಗೌರವಿಸಲಾಗುವುದು. ಭಾರತ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡಗಳ ನಾಯಕ ಶುಭಮನ್ ಗಿಲ್ ಅವರೂ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಭಾರತ ತಂಡವು 2024ರ ಟಿ20 ವಿಶ್ವಕಪ್ ಜಯಿಸಿದ್ದ ಸಂದರ್ಭದಲ್ಲಿ ರಾಹುಲ್ ಮುಖ್ಯ ಕೋಚ್ ಆಗಿದ್ದರು. ಕರ್ನಾಟಕದ ರಾಹುಲ್ ಅವರು ತಮ್ಮ ವೃತ್ತಿಜೀವನದಲ್ಲಿ ಭಾರತದ ಕ್ರಿಕೆಟ್ ಬೆಳವಣಿಗೆಗೆ ನೀಡಿರುವ ಕಾಣಿಕೆಗಳನ್ನು ಪರಿಗಣಿಸಿ ಬಿಸಿಸಿಐನ ಅತ್ಯುನ್ನತ ಗೌರವವನ್ನು ಪ್ರದಾನ ಮಾಡಲಾಗುತ್ತಿದೆ.

ಅವರು ಕೆಲವು ವರ್ಷಗಳ ಹಿಂದೆ ಜೂನಿಯರ್ ತಂಡಗಳ ಕೋಚ್ ಆಗಿದ್ದ ಸಂದರ್ಭದಲ್ಲಿ ಭಾರತ 19 ವರ್ಷದೊಳಗಿನವರ ತಂಡವು ವಿಶ್ವಕಪ್ ಜಯಿಸಿತ್ತು.

ರಾಹುಲ್ ದ್ರಾವಿಡ್


ಶುಭಮನ್ ಗಿಲ್

26 ವರ್ಷದ ಗಿಲ್ ಅವರು ಈಚೆಗೆ ನಡೆದ ಟಿ20 ವಿಶ್ವಕಪ್ ಟೂರ್ನಿಯ ತಂಡಕ್ಕೆ ಆಯ್ಕೆಯಾಗಿರಲಿಲ್ಲ. ಆದರೆ ಇನ್ನುಳಿದ ಎರಡೂ ಮಾದರಿಗಳಲ್ಲಿ ಅವರ ಸಾಧನೆಯನ್ನು ಪರಿಗಣಿಸಿ ಈ ಗೌರವ ನೀಡಲಾಗುತ್ತಿದೆ.

ಹೋದ ವರ್ಷದಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 983 ರನ್ ಪೇರಿಸಿದ್ದಾರೆ. ಅದರಲ್ಲೂ ಇಂಗ್ಲೆಂಡ್ ಎದುರು ನಡೆದಿದ್ದ ಟೆಸ್ಟ್ ಸರಣಿಯಲ್ಲಿ 754 ರನ್ ಗಳಿಸಿದ್ದರು. ಸುಮಾರು 70ರ ಸರಾಸರಿಯಲ್ಲಿ ಈ ರನ್‌ಗಳನ್ನು ಗಳಿಸಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಅವರು ಒಟ್ಟು 490 ರನ್ ಗಳಿಸಿದ್ದಾರೆ. ಅದರಲ್ಲಿ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸಿದ ತಂಡದಲ್ಲಿದ್ದ ಅವರು 188 ರನ್ ಗಳಿಸಿದ್ದರು. ಎರಡೂ ಮಾದರಿ ಸೇರಿ 49ರ ಸರಾಸರಿಯಲ್ಲಿ ಒಟ್ಟು 1764 ರನ್ ಗಳಿಸಿದ್ದಾರೆ. ಅದರಲ್ಲಿ ಏಳು ಶತಕ ಮತ್ತು ಮೂರು ಅರ್ಧಶತಕಗಳು ಇವೆ. ಆದರೆ ಅವರು ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಉತ್ತಮ ಫಾರ್ಮ್‌ನಲ್ಲಿ ಇರಲಿಲ್ಲ. ಹೋದ ಸಲದ ಐಪಿಎಲ್‌ನಲ್ಲಿ ಅವರು ಗುಜರಾತ್ ಟೈಟನ್ಸ್ ತಂಡದಲ್ಲಿ ಆಡಿ, 650 ರನ್ ಗಳಿಸಿದ್ದರು.

ದೇಶಿ ಕ್ರಿಕೆಟ್‌ನ 'ಉತ್ತಮ ಸಂಘಟನೆ' ಗೌರವಕ್ಕೆ ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಭಾಜನವಾಗಿದೆ.

ಆಟಗಾರರ ಕೊನೆಯ ಬ್ಯಾಚ್ ತವರಿಗೆ

ದುಬೈ (ಪಿಟಿಐ): ಟಿ20 ವಿಶ್ವಕಪ್‌ನಿಂದ ಹೊರಬಿದ್ದಿದ್ದರೂ, ಕೊಲ್ಲಿ ರಾಷ್ಟ್ರಗಳ ವಾಯುಪ್ರದೇಶ ನಿರ್ಬಂಧದ ಕಾರಣ ಕೋಲ್ಕತ್ತದಲ್ಲೇ ಸಿಲುಕಿಕೊಂಡಿದ್ದ ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಕ್ರಿಕೆಟ್ ಆಟಗಾರರ ಕೊನೆಯ ತಂಡ ತವರಿಗೆ ಪ್ರಯಾಣ ಬೆಳೆಸಿದೆ ಎಂದು ಐಸಿಸಿ ಗುರುವಾರ ಪ್ರಕಟಿಸಿದೆ.

ಪಶ್ಚಿಮ ಏಷ್ಯಾದಲ್ಲಿ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ಘೋಷಿಸಿದ ನಂತರ ಕೊಲ್ಲಿ ರಾಷ್ಟ್ರಗಳ ಮೇಲೂ ಅದರ ಪರಿಣಾಮವಾಗಿ ವಿಮಾನಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಿತ್ತು. ಹೀಗಾಗಿ ವಿಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಮರುಪ್ರಯಾಣದ ಯೋಜನೆಗೆ ವಿಘ್ನಗಳು ಎದುರಾಗಿದ್ದವು.

ವೆಸ್ಟ್ ಇಂಡೀಸ್ ತಂಡ ಈಡನ್‌ಗಾರ್ಡನ್‌ನಲ್ಲಿ ಮಾರ್ಚ್ 1ರಂದು ಭಾರತ ವಿರುದ್ಧ ಸೂಪರ್ ಎಂಟರ ಪಂದ್ಯದಲ್ಲಿ ಸೋತಿತ್ತು. ದಕ್ಷಿಣ ಆಫ್ರಿಕಾ ಮಾರ್ಚ್ 4ರಂದು ಕೊನೆಯ ಪಂದ್ಯ (ನ್ಯೂಜಿಲೆಂಡ್ ವಿರುದ್ಧ ಸೆಮಿಫೈನಲ್) ಆಡಿತ್ತು.

ವೆಸ್ಟ್ ಇಂಡೀಸ್ ತಂಡದ 9 ಆಟಗಾರರ ಮೊದಲ ತಂಡ ಈ ವಾರದ ಆರಂಭದಲ್ಲಿ ತವರಿಗೆ ಮರಳಿತ್ತು. ಉಳಿದ ಆಟಗಾರರಿಗೆ ಪ್ರತ್ಯೇಕ ವಿಮಾನಗಳಲ್ಲಿ ಸೀಟು ಕಾದಿರಿಸಲಾಗಿತ್ತು. 29 ಮಂದಿ ಆಟಗಾರರ ದಕ್ಷಿಣ ಆಫ್ರಿಕಾ ತಂಡವೂ ತವರಿಗೆ ಮರಳಿತು.

ಟೆನ್‌ಪಿನ್ ಬೌಲಿಂಗ್ ಅಗ್ರಸ್ಥಾನದಲ್ಲಿ ಅನುಕೃತಿ

ಬೆಂಗಳೂರು: ರಾಷ್ಟ್ರೀಯ ಮಾಜಿ ಚಾಂಪಿಯನ್ ಅನುಕೃತಿ ಬಿಷ್ಣೋಯಿ ಅವರು ಇಲ್ಲಿ ನಡೆಯುತ್ತಿರುವ ಎಆರ್‌ಸಿ 34ನೇ ರಾಷ್ಟ್ರೀಯ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಮುನ್ನಡೆ ಕಾಯ್ದುಕೊಂಡಿದ್ದಾರೆ.

ಅಮೀಬಾ ಬೌಲಿಂಗ್ ಸೆಂಟರ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳಾ ವಿಭಾಗದ ಸ್ಪರ್ಧೆಯಲ್ಲಿ ಅನುಕೃತಿ ಒಂದನೇ ಸುತ್ತಿನ ಅಂತ್ಯಕ್ಕೆ 2071 ಅಂಕ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. ಮಹಾರಾಷ್ಟ್ರ ಶಬೀನಾ ಕಸ್ಮಾನಿ (2048) ಎರಡನೇ ಸ್ಥಾನದಲ್ಲಿದ್ದಾರೆ.

ಪುರುಷರ ವಿಭಾಗದಲ್ಲಿ ಎರಡನೇ ಸುತ್ತಿನ ಅಂತ್ಯಕ್ಕೆ ಕರ್ನಾಟಕದ ಕಿಶನ್ ಆರ್. (3767) ಅಗ್ರಸ್ಥಾನದಲ್ಲಿ ಮುಂದುವರಿದರು.

ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ 1000
ಮೊದಲ ಬಾರಿ ಸೆಮಿಗೆ ಯುಕಿ

ಇಂಡಿಯನ್ ವೆಲ್ಸ್ (ಅಮೆರಿಕ), (ಪಿಟಿಐ): ಭಾರತದ ಯುಕಿ ಭಾಂಬ್ರಿ ಇದೇ ಮೊದಲ ಬಾರಿ ಎಟಿಪಿ ಮಾಸ್ಟರ್ಸ್ 1000 ದರ್ಜೆಯ ಟೂರ್ನಿಯೊಂದರ ಸೆಮಿಫೈನಲ್ ತಲುಪಿದ್ದಾರೆ. ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಆ್ಯಂಡ್ರೆ ಗೊರಾನ್ಸನ್ ಜೊತೆಗೂಡಿದ ಭಾಂಬ್ರಿ ನೇರ ಸೆಟ್‌ಗಳಿಂದ ಅಲೆಕ್ಸಾಂಡರ್ ಎರ್ಲರ್– ಆ್ಯಂಡ್ರೆ ವಾವಸೋರಿ ಜೋಡಿಯನ್ನು ಸೋಲಿಸಿದರು.

ಗುರುವಾರ ಸುಮಾರು ಒಂದೂವರೆ ಗಂಟೆ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ–ಸ್ವೀಡನ್ ಆಟಗಾರರ ಜೋಡಿ 6–3, 7–6 ರಿಂದ ಎರ್ಲರ್ (ಆಸ್ಟ್ರಿಯಾ)– ವಾವಸೋರಿ (ಇಟಲಿ) ಅವರನ್ನು ಸೋಲಿಸಿತು.

33 ವರ್ಷ ವಯಸ್ಸಿನ ಭಾಂಬ್ರಿ ಕಳೆದ ವರ್ಷ ಇದೇ ಟೂರ್ನಿ ಸೇರಿದಂತೆ ಈ ಹಿಂದೆ ಎರಡು ಬಾರಿ ಮಾಸ್ಟರ್ಸ್ 1000 ದರ್ಜೆಯ ಟೂರ್ನಿಗಳ ಕ್ವಾರ್ಟರ್‌ಫೈನಲ್ ತಲುಪಿದ್ದರು.

ಮೊದಲ ಸರ್ವ್‌ನಲ್ಲೇ ಶೇ 83ರಷ್ಟು ಯಶಸ್ಸು ಪಡೆದ ಭಾರತ– ಸ್ವೀಡನ್ ಆಟಗಾರರ ಜೋಡಿ ಪಂದ್ಯದಲ್ಲಿ ಮೇಲುಗೈ ಸಾಧಿಸಿತು.

ಶುಕ್ರವಾರ ನಡೆಯುವ ಸೆಮಿಫೈನಲ್ ಪಂದ್ಯದಲ್ಲಿ ಭಾಂಬ್ರಿ– ಗೊರಾನ್ಸನ್ ಜೋಡಿ, ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್– ಮೊನಾಕೊದ ವಾಲೆಂಟಿನ್ ವಾಕೆರಾಟ್ ಅವರನ್ನು ಎದುರಿಸಲಿದೆ.

ಆರ್ಥರ್–ವಾಲೆಂಟಿನ್ ಜೋಡಿ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ 6–3, 6–4 ರಿಂದ ಆ್ಯಂಡ್ರೆ ರುಬ್ಲೆವ್– ಕರೆನ್ ಕಚನೋವ್ (ರಷ್ಯಾ) ಜೋಡಿಯನ್ನು ಮಣಿಸಿತು.

ಟೆನಿಸ್ ಆಟಗಾರರಿಗೂ ಎಂಒಸಿ ನೆರವು

ಯುಕಿ ಭಾಂಬ್ರಿ

ನಾಗಲ್

ನವದೆಹಲಿ (ಪಿಟಿಐ): ಭಾರತದ ಟೆನಿಸ್ ತಾರೆಗಳಾದ ಯುಕಿ ಭಾಂಬ್ರಿ ಮತ್ತು ಸುಮಿತ್ ನಾಗಲ್ ಅವರಿಗೆ ಭಾರತ ಕ್ರೀಡಾ ಪ್ರಾಧಿಕಾರದ ವ್ಯಾಪ್ತಿಯಡಿ ಕಾರ್ಯನಿರ್ವಹಿಸುವ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ನಿಂದ ತಲಾ ₹30 ಲಕ್ಷ ಹಣಕಾಸು ನೆರವು ಒದಗಿಸಲಾಗಿದೆ.

ಇದೇ ವೇಳೆ, 2026ರ ಏಷ್ಯನ್ ಕ್ರೀಡೆಗಳಿಗೆ ಮತ್ತು 2026ರ ಡೇವಿಸ್ ಕಪ್ ಅರ್ಹತಾ ಸುತ್ತಿಗೆ ಸಜ್ಜಾಗಲು ಉದಯೋನ್ಮುಖ ಆಟಗಾರ ದಕ್ಷಿಣೇಶ್ವರ ಸುರೇಶ್ ಅವರನ್ನು 'ಟಾರ್ಗೆಟ್ ಏಷ್ಯನ್ ಗೇಮ್ಸ್ ಗ್ರೂಪ್' (ಟಿಎಜಿಜಿ)ಗೆ ಸೇರ್ಪಡೆ ಮಾಡಲಾಗಿದೆ. ಮಿಷನ್ ಒಲಿಂಪಿಕ್ಸ್ ಸೆಲ್‌ನ 169ನೇ ಸಭೆಯಲ್ಲಿ ಈ ಪ್ರಸ್ತಾವಗಳಿಗೆ ಸಮ್ಮತಿ ನೀಡಲಾಯಿತು.

ಡಬಲ್ಸ್ ವಿಶ್ವ ಕ್ರಮಾಂಕದಲ್ಲಿ ಪ್ರಸ್ತುತ 23ನೇ ಸ್ಥಾನದಲ್ಲಿರುವ ಭಾಂಬ್ರಿ ಏಷ್ಯಾದ ಅಗ್ರಮಾನ್ಯ ಡಬಲ್ಸ್ ಆಟಗಾರ ಎನಿಸಿದ್ದಾರೆ. ಫೆಬ್ರುವರಿ ಮತ್ತು ಸೆಪ್ಟೆಂಬರ್ 2026ರ ನಡುವಣ ಅವಧಿಯಲ್ಲಿ ತರಬೇತಿ ಮತ್ತು ಸ್ಪರ್ಧೆಗಳಿಗೆ ಸಜ್ಜಾಗಲು ಅವರಿಗೆ ₹28.89 ಲಕ್ಷ ನೆರವು ಮಂಜೂರು ಮಾಡಲಾಗಿದೆ. ಎಟಿಪಿ ಟೂರ್ನಿಗಳಲ್ಲಿ ಆಡಲು ಮತ್ತು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಿಗೆ ತೆರಳಲು ಈ ನೆರವು ಬಳಸಿಕೊಳ್ಳಬಹುದಾಗಿದೆ. ಭಾರತದ ಅಗ್ರ ಸಿಂಗಲ್ಸ್ ಆಟಗಾರ ನಾಗಲ್ ಅವರಿಗೆ ಮಾರ್ಚ್‌ನಿಂದ ಅಕ್ಟೋಬರ್‌ವರೆಗೆ ತರಬೇತಿ ಮತ್ತು ಟೂರ್ನಿಗಳಲ್ಲಿ ಆಡಲು ₹27.51 ಲಕ್ಷ ಮಂಜೂರು ಮಾಡಲಾಗಿದೆ.

ಜೊಕೊವಿಚ್‌ಗೆ ಜ್ಯಾಕ್ ಡ್ರೇಪರ್ ಆಘಾತ

ಇಂಡಿಯನ್ ವೆಲ್ಸ್ (ಎಎಫ್‌ಪಿ): ಹಾಲಿ ಚಾಂಪಿಯನ್ ಜ್ಯಾಕ್ ಡ್ರೇಪರ್ ಅವರು ಬುಧವಾರ ಇಂಡಿಯನ್ ವೆಲ್ಸ್ ಟೂರ್ನಿಯಲ್ಲಿ ಮೂರನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ ಅವರಿಗೆ ಆಘಾತ ನೀಡಿದರು.

ಬ್ರಿಟನ್‌ನ ಡ್ರೇಪರ್ 4-6, 6-4, 7-6 (7/5) ಅಂತರದಿಂದ ಸರ್ಬಿಯಾದ ಅನುಭವಿ ಜೊಕೊವಿಚ್ ಅವರನ್ನು ಮಣಿಸಿ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ದಾಖಲೆಯ ಐದು ಬಾರಿ ಚಾಂಪಿಯನ್ ಆಗಿರುವ ಜೊಕೊವಿಚ್ 2016ರ ಬಳಿಕ ಇಲ್ಲಿ ಮೊದಲ ಬಾರಿ ಎಂಟರ ಘಟ್ಟ ಪ್ರವೇಶಿಸುವ ಪ್ರಯತ್ನದಲ್ಲಿದ್ದರು. ಆದರೆ, 14ನೇ ಶ್ರೇಯಾಂಕದ ಡ್ರೇಪರ್ ಅದಕ್ಕೆ ಅವಕಾಶ ನೀಡಲಿಲ್ಲ.

ಅಲ್ಕರಾಜ್ ಮುನ್ನಡೆ: ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) 6-1, 7-6 (7/2) ರಿಂದ ಕ್ಯಾಸ್ಪರ್ ರೂಡ್ (ನಾರ್ವೆ) ಅವರನ್ನು ಮಣಿಸಿದರು. ಇದರೊಂದಿಗೆ ಹಾಲಿ ಋತುವಿನಲ್ಲಿ ಸತತ 15ನೇ ಗೆಲುವು ದಾಖಲಿಸಿದರು.

ಸ್ವಿಸ್ ಓಪನ್: ತರುಣ್ ಮುನ್ನಡೆ

ತರುಣ್ ಮನ್ನೆಪಲ್ಲಿ

ಬಾಸೆಲ್ (ಪಿಟಿಐ): ಭಾರತದ ಷಟ್ಲರ್ ತರುಣ್ ಮನ್ನೆಪಲ್ಲಿ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎದುರಾಳಿ ಜಪಾನ್‌ನ ಕೆಂಟಾ ನಿಶಿಮೊಟೊ ಗಾಯಾಳಾಗಿ ನಿವೃತ್ತಿಯಾದ ನಂತರ ಎರಡನೇ ಸುತ್ತು ತಲುಪಿದರು.

ವಿಶ್ವ ಕ್ರಮಾಂಕದಲ್ಲಿ 43ನೇ ಸ್ಥಾನದಲ್ಲಿರುವ ತರುಣ್ ಪುರುಷರ ಸಿಂಗಲ್ಸ್ ಆರಂಭಿಕ ಸುತ್ತಿನ ಪಂದ್ಯದಲ್ಲಿ ಜಪಾನ್ ಆಟಗಾರನ ವಿರುದ್ಧ 16-21, 21-16, 7-2ರಿಂದ ಮುನ್ನಡೆಯಲ್ಲಿದ್ದರು. ಈ ಸಂದರ್ಭದಲ್ಲಿ ಐದನೇ ಶ್ರೇಯಾಂಕದ ಕೆಂಟಾ ಭುಜನೋವಿನ ಕಾರಣಕ್ಕಾಗಿ ಸ್ಪರ್ಧೆಯಿಂದ ಹಿಂದೆ ಸರಿದರು.

ಬುಧವಾರ ತಡರಾತ್ರಿ ನಡೆದ ಪಂದ್ಯದ ಮೊದಲ ಗೇಮ್‌ನಲ್ಲಿ ತರುಣ್ ಹಿನ್ನಡೆ ಅನುಭವಿಸಿದ್ದರು. ಆದರೆ, ನಂತರದಲ್ಲಿ ಲಯ ಕಂಡುಕೊಂಡ ಅವರು ಗೇಮ್ ಸಮಬಲ ಸಾಧಿಸಿದರು. ನಿರ್ಣಾಯಕ ಗೇಮ್‌ನಲ್ಲಿ ಭಾರತದ ಆಟಗಾರ 5 ಅಂಕಗಳಿಂದ ಮುನ್ನಡೆಯಲ್ಲಿ ಇದ್ದಾಗ ಎದುರಾಳಿ ಆಟಗಾರ ನಿವೃತ್ತಿ ಪಡೆದರು.

ಕೇರಳದ ಕಿರಣ್ ಜಾರ್ಜ್ 18-21, 21-16, 16-21ರಿಂದ ಹಾಂಗ್‌ಕಾಂಗ್‌ನ ಜೇಸನ್ ಗುಣವಾನ್ ಅವರಿಗೆ ಸೋತು, ಎರಡನೇ ಸುತ್ತಿನಲ್ಲಿ ಅಭಿಯಾನ ಮುಗಿಸಿದರು.

ಹರಿಹರನ್ ಅಂಶಕರುಣನ್ ಮತ್ತು ಎಂ.ಆರ್.ಅರ್ಜುನ್ ಜೋಡಿ ಪುರುಷರ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ 17-21, 11-21ರಿಂದ ತೈವಾನ್‌ನ ಚೆನ್ ಚೆಂಗ್ ಕುವಾನ್ ಮತ್ತು ಲಿನ್ ಬಿಂಗ್-ವೀ ಅವರಿಗೆ ಮಣಿಯಿತು.

ಭಾರತದ ಉದಯೋನ್ಮುಖ ಆಟಗಾರ್ತಿ ಮಾಳವಿಕಾ ಬನ್ಸೋಡ್ ಅವರು ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಅವರು 11-21, 15-21ರಿಂದ ವಿಶ್ವದ ನಾಲ್ಕನೇ ಕ್ರಮಾಂಕದ ಪಾರ್ನಪವೀ ಚೊಚುವಾಂಗ್ (ಥಾಯ್ಲೆಂಡ್) ಅವರಿಗೆ ಶರಣಾದರು.

ಭಾರತಕ್ಕೆ ಮಣಿದ ಮ್ಯಾನ್ಮಾರ್

ಯಾಂಗೂನ್ (ಪಿಟಿಐ): ಪ್ರತೀಕಾ ಬರ್ಮನ್ ಗಳಿಸಿದ ಅವಳಿ ಗೋಲುಗಳ ನೆರವಿನಿಂದ ಭಾರತ ತಂಡ ಇಲ್ಲಿನ ತುವುನ್ನಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ 17 ವರ್ಷದೊಳಗಿನ ಮಹಿಳೆಯರ ಅಂತರರಾಷ್ಟ್ರೀಯ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ ಆತಿಥೇಯ ಮ್ಯಾನ್ಮಾರ್ ತಂಡವನ್ನು 2–0 ಗೋಲುಗಳಿಂದ ಸೋಲಿಸಿತು.

ಎಎಫ್‌ಸಿ 17 ವರ್ಷದೊಳಗಿನವರ ಮಹಿಳಾ ಏಷ್ಯನ್ ಕಪ್ ಟೂರ್ನಿಯ ಸಿದ್ಧತೆಯ ಭಾಗವಾಗಿ ಎರಡು ಸೌಹಾರ್ದ ಪಂದ್ಯಗಳನ್ನು ಆಡಲಾಗುತ್ತಿದೆ. ಗುರುವಾರ ಮೊದಲ ಪಂದ್ಯ ನಡೆಯಿತು.

17 ವರ್ಷದೊಳಗಿನವರ ಏಷ್ಯನ್ ಕಪ್ ಚೀನಾದ ಸುಝೌನಲ್ಲಿ ಮೇ 1 ರಿಂದ 17ರವರೆಗೆ ನಡೆಯಲಿದೆ. ಭಾರತದ ಜೊತೆಗೆ ಮ್ಯಾನ್ಮಾರ್ ಸಹ ಈ ಟೂರ್ನಿಗೆ ಅರ್ಹತೆ ಪಡೆದಿದೆ. ಎರಡನೇ ಸೌಹಾರ್ದ ಪಂದ್ಯ ಶನಿವಾರ ನಡೆಯಲಿದೆ.

ಹಾರ್ದಿಕ್ ಪಾಂಡ್ಯ ವಿರುದ್ಧ ದೂರು

ಪುಣೆ (ಪಿಟಿಐ): ಟಿ20 ವಿಶ್ವಕಪ್ ವಿಜೇತ ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದಾರೆಂದು ವಕೀಲರೊಬ್ಬರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಜಯಿಸಿತ್ತು. ನಂತರ ನಡೆದಿದ್ದ ತಂಡದ ಆಟಗಾರರ ಸಂಭ್ರಮಾಚರಣೆ ಗರಿಗೆದರಿತ್ತು. ಆ ಸಂದರ್ಭದಲ್ಲಿ ಹಾರ್ದಿಕ್ ಅವರು ತ್ರಿವರ್ಣ ಧ್ವಜವನ್ನು ತಮ್ಮ ಬೆನ್ನಿಗೆ ಸುತ್ತಿಕೊಂಡು ತಮ್ಮ ಸ್ನೇಹಿತೆ ಮಹಿಕಾ ಅವರೊಂದಿಗೆ ಸಂಭ್ರಮಿಸಿದ್ದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿವೆ.

ವಕೀಲ ವಾಜೀದ್ ಖಾನ್ ಅವರು ಪುಣೆಯ ಶಿವಾಜಿ ನಗರ ಪೊಲೀಸ್ ಠಾಣೆಯಲ್ಲಿ ಹಾರ್ದಿಕ್ ವಿರುದ್ಧ ದೂರು ದಾಖಲಿಸಿದ್ದಾರೆ. ಠಾಣಾಧಿಕಾರಿ ಇದನ್ನು ಖಚಿತಪಡಿಸಿದ್ದಾರೆ.

'ರಾಷ್ಟ್ರಧ್ವಜವನ್ನು ಗೌರವಿಸುವುದು ಪ್ರತಿಯೊಬ್ಬ ದೇಶವಾಸಿಯ ಆದ್ಯ ಕರ್ತವ್ಯವಾಗಿದೆ. ಅದನ್ನು ಉಲ್ಲಂಘಿಸಿದವರನ್ನು ಕಾನೂನು ಪ್ರಕಾರ ಕ್ರಮಕ್ಕೆ ಒಳಪಡಿಸಬೇಕು ಎಂದು ನಿಯಮ ಹೇಳುತ್ತದೆ. ಹಾರ್ದಿಕ್ ತ್ರಿವರ್ಣ ಧ್ವಜಕ್ಕೆ ಅವಮಾನ ಮಾಡಿದ್ದಾರೆ' ಎಂದು ದೂರಿನಲ್ಲಿ ಖಾನ್ ದಾಖಲಿಸಿದ್ದಾರೆ.

ಸುಮಿತ್‌ಗೆ ಜಾವೆಲಿನ್ ಚಿನ್ನ

ನವದೆಹಲಿ (ಪಿಟಿಐ): ಪ್ಯಾರಾಲಿಂಪಿಕ್ ಡಬಲ್ ಚಿನ್ನ ವಿಜೇತ ಜಾವೆಲಿನ್ ಥ್ರೋಪಟು ಸುಮಿತ್ ಆಂಟಿಲ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಟೋಕಿಯೊ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ ಚಿನ್ನದ ಪದಕಗಳನ್ನು ಗೆದ್ದಿರುವ ಭಾರತದ ಸುಮಿತ್ ಅವರು ಗುರುವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ (ಎಫ್43/ಎಫ್44/ಎಫ್64) ಸ್ಪರ್ಧೆಯಲ್ಲಿ 69.25 ಮೀಟರ್ ಸಾಧನೆಯೊಂದಿಗೆ ಅಗ್ರಸ್ಥಾನಿಯಾದರು.

ಪುಷ್ಪೇಂದ್ರ ಸಿಂಗ್ ಅವರು ಈಟಿಯನ್ನು 56.91 ಮೀಟರ್ ದೂರ ಎಸೆಯುವ ಮೂಲಕ ಬೆಳ್ಳಿ ಪದಕ ಗೆದ್ದರೆ, ಪೂನಂ ರಾಮ್ (49.48 ಮೀ) ಕಂಚಿನ ಪದಕ ಗೆದ್ದರು.

'ವರ್ಷದ ಕೊನೆಯಲ್ಲಿ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಪ್ಯಾರಾ ಕೂಟದತ್ತ ಹೆಚ್ಚಿನ ಗಮನಹರಿಸಿದ್ದು, 75 ಮೀಟರ್ ಗಡಿ ದಾಟುವ ಗುರಿ ಹೊಂದಿದ್ದೇನೆ' ಎಂದು ಸುಮಿತ್ ಹೇಳಿದರು.

ಪುರುಷರ 400 ಮೀಟರ್ ಟಿ13 ಸ್ಪರ್ಧೆಯಲ್ಲೂ ಭಾರತ ಪ್ರಾಬಲ್ಯ ಸಾಧಿಸಿತು. ಸುಬೋಧ್ ಭಟ್ 51.88 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರೆ, ಪ್ರಿಯಾಂಶು ಕೌಶಿಕ್ (53.19 ಸೆ) ಮತ್ತು ಅವನಿಲ್ ಕುಮಾರ್ (56.91 ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಮುತ್ತಿಕ್ಕಿದರು.

400 ಮೀಟರ್ ಟಿ53/ಟಿ54 ಸ್ಪರ್ಧೆಯ ವೀಲ್‌ಚೇರ್ ವಿಭಾಗದಲ್ಲೂ ಆತಿಥೇಯ ತಂಡವು ತನ್ನ ಪ್ರಾಬಲ್ಯ ಮುಂದುವರಿಸಿತು. ಮನೋಜ್‌ಕುಮಾರ್ 54.33 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಅನಿಲ್ ಕುಮಾರ್ (57.57 ಸೆ) ಮತ್ತು ಮಣಿಕಂಠನ್ ಜ್ಯೋತಿ (1 ನಿ.01.94ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು.

ಪುರುಷರ ಲಾಂಗ್ ಜಂಪ್ ಟಿ42/ಟಿ63 ಸ್ಪರ್ಧೆಯಲ್ಲೂ ಭಾರತ ಮೂರೂ ಪದಕ ಗೆದ್ದುಕೊಂಡಿತು. ಶಾಲಿಯೇಶ್ ಕುಮಾರ್ 5.47 ಮೀಟರ್ ಜಿಗಿತದೊಂದಿಗೆ ಚಿನ್ನದ ಸಾಧನೆ ಮಾಡಿದರು.

ಭಾರತದ ಜಾವೆಲಿನ್ ಥ್ರೋಪಟು ಸುಮಿತ್ ಆಂಟಿಲ್ –ಪಿಟಿಐ ಚಿತ್ರ

ಯುದ್ಧಾಂತ್ಯಕ್ಕೆ ಇರಾನ್ ಮೂರು ಷರತ್ತು

ಒಂದನೇ ಪುಟದಿಂದ...

'ಈ ಕುರಿತು ರಷ್ಯಾ ಮತ್ತು ಪಾಕಿಸ್ತಾನದ ನಾಯಕರ ಜತೆಗೆ ಮಾತುಕತೆ ನಡೆಸಿದ್ದೇನೆ. ಶಾಂತಿಗಾಗಿ ಇರಾನ್‌ನ ಬದ್ಧತೆಯನ್ನು ಈ ಸಂದರ್ಭದಲ್ಲಿ ನಾನು ಪುನರುಚ್ಚರಿಸಿದ್ದೇನೆ' ಎಂದು ಅವರು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

'ಇಸ್ರೇಲ್ ಮತ್ತು ಅಮೆರಿಕ ಆರಂಭಿಸಿದ ಈ ಯುದ್ಧವನ್ನು ಕೊನೆಗೊಳಿಸಲು ಇರುವ ಏಕೈಕ ಮಾರ್ಗ ಎಂದರೆ ಈ ಮೂರೂ ಷರತ್ತುಗಳಿಗೆ ಸಮ್ಮತಿ ಸೂಚಿಸಿ, ಬದ್ಧತೆ ತೋರುವುದಾಗಿದೆ' ಎಂದು ಅವರು ಬರೆದುಕೊಂಡಿದ್ದಾರೆ.

'ಒಂದು ವೇಳೆ ಅಮೆರಿಕವು ಇರಾನ್‌ನ ಬಂದರು ಸೌಲಭ್ಯಗಳ ಮೇಲೆ ದಾಳಿ ಮಾಡಿದರೆ, ಪರ್ಷಿಯನ್ ಕೊಲ್ಲಿಯಲ್ಲಿನ ಬಂದರು, ಆರ್ಥಿಕ ಕೇಂದ್ರ ಅಥವಾ ತಾಣಗಳನ್ನು ಇರಾನ್ ಸಹಜವಾಗಿಯೇ ಗುರಿಯಾಗಿಸಲಿದೆ' ಎಂದು ಇರಾನ್‌ನ ಸಶಸ್ತ್ರ ಪಡೆಗಳ ವಕ್ತಾರ ಅಬೋಲ್‌ಫಜಲ್ ಶೇಖರ್ಚಿ ಅವರು ಇರಾನ್ ಸರ್ಕಾರಿ ವಾಹಿನಿ ಮೂಲಕ ಎಚ್ಚರಿಕೆ ನೀಡಿದ್ದರು. ಇದಾದ ಕೆಲವೇ ಹೊತ್ತಿನಲ್ಲಿ ಇರಾನ್ ಅಧ್ಯಕ್ಷರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, ಮೂರು ಷರತ್ತುಗಳ ಮೂಲಕ ಕದನ ವಿರಾಮ ಕುರಿತು ಪ್ರಸ್ತಾಪಿಸಿದ್ದಾರೆ.

ಭಾರತೀಯ ನಾವಿಕ ಸಾವು: ಮಾರ್ಷಲ್ ದ್ವೀಪಗಳ ಧ್ವಜದ ಅಡಿಯಲ್ಲಿ ಪ್ರಯಾಣಿಸುತ್ತಿದ್ದ ಅಮೆರಿಕ ಒಡೆತನದ ತೈಲ ಟ್ಯಾಂಕರ್ 'ಸೇಫ್‌ಸೀ ವಿಷ್ಣು' ಹಡಗಿನ ಮೇಲೆ ಇರಾಕ್‌ನ ಬಸ್ರಾ ಸಮೀಪ ಇರಾನ್ ದಾಳಿ ನಡೆಸಿದ್ದು, ಭಾರತೀಯ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಈ ಸುದ್ದಿಯನ್ನು ಇರಾಕ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ದೃಢಪಡಿಸಿದೆ. ಅಲ್ಲದೆ ಹಡಗಿನಲ್ಲಿದ್ದ ಇತರ 15 ಭಾರತೀಯ ಸಿಬ್ಬಂದಿಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದೆ.

ಹಡಗಿನ 27 ಸಿಬ್ಬಂದಿಯನ್ನು ರಕ್ಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಪರ್ಷಿಯನ್ ಕೊಲ್ಲಿಯಾದ್ಯಂತ ಕೆಲ ದಿನಗಳಿಂದ ಇರಾನ್ ಸೇನೆಯು ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿರುವುದರಿಂದ ನೌಕಾ ಸಿಬ್ಬಂದಿಯ ಸಾವು ನೋವು ಹೆಚ್ಚಾಗುತ್ತಿದೆ.

ಭಾರತಕ್ಕೆ ಸರಕು ಸಾಮಗ್ರಿಗಳನ್ನು ಹೊತ್ತು ತರುತ್ತಿದ್ದ ಥಾಯ್ಲೆಂಡ್‌ನ 'ಮಯೂರಿ ನಾರಿ' ಹೆಸರಿನ ಹಡಗಿನ ಮೇಲೆ ಇರಾನ್ ಬುಧವಾರ ನಡೆಸಿದ್ದ ದಾಳಿಯಲ್ಲಿ ಇಬ್ಬರು ಭಾರತೀಯ ನಾವಿಕರು ಮೃತಪಟ್ಟಿದ್ದರು. ಇದೀಗ ಇನ್ನೊಂದು ದಾಳಿಯಲ್ಲಿ ಮತ್ತೊಬ್ಬರು ಮೃತಪಟ್ಟಿದ್ದಾರೆ. ವಿಶ್ವದಾದ್ಯಂತ ಹಡಗುಗಳಲ್ಲಿ ಶೇ 15ಕ್ಕಿಂತ ಹೆಚ್ಚು ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗಾಗಿ ಇರಾನ್ ಯಾವುದೇ ಹಡಗನ್ನು ಗುರಿಯಾಗಿಸಿ ದಾಳಿ ನಡೆಸಿದರೂ, ಅದು ಭಾರತೀಯ ಪ್ರಜೆಗಳನ್ನು ಹಾನಿಗೊಳಿಸುತ್ತದೆ ಎಂದು ಮೂಲಗಳು ಕಳವಳ ವ್ಯಕ್ತಪಡಿಸಿವೆ.

ಲೆಬನಾನ್ ಬೇಕಾ ಕಣಿವೆಯ ಡೌರಿಸ್ ಗ್ರಾಮದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಿಂದ ಗುರುವಾರ ದಟ್ಟ ಹೊಗೆ ಆವರಿಸಿತ್ತು ಎಎಫ್‌ಪಿ ಚಿತ್ರ

ಹೊರ್ಮುಜ್ ಜಲಸಂಧಿ ಮುಚ್ಚಲು ಮೊಜ್ತಬಾ ಸೂಚನೆ

ದುಬೈ (ಎಪಿ): ಇರಾನ್‌ನ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ಹೊರ್ಮುಜ್ ಜಲಸಂಧಿಯನ್ನು ಮುಚ್ಚುವಂತೆ ಗುರುವಾರ ಸೂಚಿಸಿದ್ದಾರೆ. ಅಮೆರಿಕ, ಇಸ್ರೇಲ್ ಮೇಲೆ ಒತ್ತಡ ಹೇರುವ ಸಾಧನವಾಗಿ ಈ ಜಲಸಂಧಿಯನ್ನು ಬಳಸುವಂತೆ ಅವರು ಕರೆ ನೀಡಿದ್ದಾರೆ.

ಹೊಸ ನಾಯಕನಾಗಿ ನೇಮಕಗೊಂಡ ಬಳಿಕ ಇದೇ ಮೊದಲ ಬಾರಿ ಅವರು ಸಂದೇಶ ಕಳುಹಿಸಿದ್ದು, ಸರ್ಕಾರಿ ವಾಹಿನಿಯ ವಾರ್ತಾ ವಾಚಕರು ಅದನ್ನು ಓದಿದರು.

ಕೊಲ್ಲಿ ಪ್ರದೇಶಗಳಲ್ಲಿನ ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಯುವುದರಿಂದ, ಅವುಗಳನ್ನು ಮುಚ್ಚಿ ಎಂದೂ ಅವರು ನೆರೆ ರಾಷ್ಟ್ರಗಳಿಗೆ ಸಂದೇಶದಲ್ಲಿ ತಿಳಿಸಿದ್ದಾರೆ.

ಯುದ್ಧದಲ್ಲಿ ಮೃತಪಟ್ಟ ಶಾಲಾ ಮಕ್ಕಳು ಸೇರಿದಂತೆ ಹತರಾದ ದೇಶದ ಪ್ರಜೆಗಳ ಪರವಾಗಿ ಪ್ರತೀಕಾರ ತೀರಿಸಿಕೊಳ್ಳಲಾಗುವುದು ಎಂದು ಅವರು ಪ್ರತಿಜ್ಞೆ ಮಾಡಿದ್ದಾರೆ.

ದಿನದ ಬೆಳವಣಿಗೆಗಳು

- ಕೊಲ್ಲಿ ದೇಶಗಳ ವಿರುದ್ಧ ಇರಾನ್ ನಡೆಸುತ್ತಿರುವ ತೀವ್ರ ದಾಳಿಗಳನ್ನು ಕೂಡಲೇ ನಿಲ್ಲಿಸುವಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಒತ್ತಾಯಿಸಿದೆ. ಈ ಸಂಬಂಧ ಭದ್ರತಾ ಮಂಡಳಿಯು ಇರಾನ್ ವರ್ತನೆಯನ್ನು 13–0 ಮತಗಳಿಂದ ತೀವ್ರವಾಗಿ ಖಂಡಿಸಿದೆ. ಇರಾನ್‌ನ ಮಿತ್ರ ದೇಶಗಳಾದ ಚೀನಾ ಮತ್ತು ರಷ್ಯಾ ದೇಶಗಳು ಮತದಾನದಿಂದ ದೂರ ಉಳಿದವು
- ಯುದ್ಧದ ಮೊದಲ ವಾರದಲ್ಲಿ ಅಮೆರಿಕಕ್ಕೆ ₹1.04 ಲಕ್ಷ ಕೋಟಿ (11.3 ಬಿಲಿಯನ್ ಡಾಲರ್) ವೆಚ್ಚವಾಗಿದೆ. ಯುದ್ಧ ಸಾಮಗ್ರಿಗಳಿಗೇ ₹46 ಸಾವಿರ ಕೋಟಿ (5 ಬಿಲಿಯನ್ ಡಾಲರ್) ಖರ್ಚಾಗಿದೆ ಎಂದು ಪೆಂಟಗನ್ ಅಮೆರಿಕದ ಸಂಸತ್ತಿಗೆ ವರದಿ ಮಾಡಿದೆ ಎಂದು ಮೂಲಗಳು ತಿಳಿಸಿವೆ
- ಇಂಧನ ಭದ್ರತೆ ಕಳವಳ ಹೆಚ್ಚಾದ ಬೆನ್ನಲ್ಲೇ, ಅಂತರರಾಷ್ಟ್ರೀಯ ಇಂಧನ ಸಂಸ್ಥೆಯು ತನ್ನ ಇತಿಹಾಸದಲ್ಲಿಯೇ ಅತಿದೊಡ್ಡ ಪ್ರಮಾಣದಷ್ಟು, ಅಂದರೆ 400 ಮಿಲಿಯನ್ ಬ್ಯಾರೆಲ್ ತೈಲವನ್ನು ಬಿಡುಗಡೆ ಮಾಡಲು ಒಪ್ಪಿದೆ. ಅಮೆರಿಕ ಸಹ ಮುಂದಿನ ವಾರದಲ್ಲಿ 172 ಮಿಲಿಯನ್ ಬ್ಯಾರೆಲ್ ತೈಲ ಬಿಡುಗಡೆಗೆ ಯೋಜಿಸಿದೆ
- ಇರಾಕ್‌ನ ಖೋರ್ ಅಲ್ ಜುಬೈರ್ ಬಂದರಿನ ಬಳಿ ಆಸ್ಟ್ರೇಲಿಯಾದ ತೈಲ ಹಡಗಿನ ಮೇಲೆ ಡ್ರೋನ್ ದಾಳಿ ನಡೆದಿದೆ. ನೌಕೆಯ 25 ಸಿಬ್ಬಂದಿಯನ್ನು ರಕ್ಷಿಸಲಾಗಿದೆ ಎಂದು ಇರಾಕ್‌ನ ಅಧಿಕಾರಿಗಳು ತಿಳಿಸಿದ್ದಾರೆ
- ಲೆಬನಾನ್‌ನ ಬೈರೂತ್‌ನ ಕಡಲತೀರದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಏಳು ಜನರು ಮೃತಪಟ್ಟಿದ್ದು, 21 ಜನರು ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ಸಂಘರ್ಷ ಆರಂಭವಾದಾಗಿನಿಂದ ಲೆಬನಾನ್‌ನಲ್ಲಿ 634 ಜನರು ಮೃತಪಟ್ಟಿದ್ದು, 7.59 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ
- ಹೊರ್ಮುಜ್ ಜಲಸಂಧಿಯಲ್ಲಿ ಸಾಗುವ ತೈಲ ಟ್ಯಾಂಕರ್‌ಗಳಿಗೆ ಅಮೆರಿಕ ನೌಕಾಪಡೆಯು ಸದ್ಯಕ್ಕೆ ಬೆಂಗಾವಲು ಕೊಡಲು ಸಾಧ್ಯವಿಲ್ಲ. ಪ್ರಸ್ತುತ ನಮ್ಮ ಎಲ್ಲ ಪಡೆಗಳು ಇರಾನ್ ಮೇಲಿನ ದಾಳಿಯಲ್ಲಿ ನಿರತವಾಗಿವೆ. ಈ ತಿಂಗಳ ಅಂತ್ಯದೊಳಗೆ ನಮ್ಮ ನೌಕಾಪಡೆ ಬೆಂಗಾವಲು ಕೊಡಲು ಸಾಧ್ಯವಾಗಬಹುದು ಎಂದು ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ತಿಳಿಸಿದ್ದಾರೆ
- ಕತಾರ್‌ನಲ್ಲಿ ಸಿಲುಕಿದ್ದ 500ಕ್ಕೂ ಹೆಚ್ಚು ಭಾರತೀಯರನ್ನು ನವದೆಹಲಿ ಮತ್ತು ಇತರ ಸ್ಥಳಗಳಿಗೆ ಸುರಕ್ಷಿತವಾಗಿ ಕಳುಹಿಸಲಾಗಿದೆ ಎಂದು ಕತಾರ್‌ನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ

ಇರಾನ್ ವಿರುದ್ಧದ ವಿಶ್ವಸಂಸ್ಥೆಯಲ್ಲಿ ನಿರ್ಣಯ ಅಂಗೀಕಾರ

ಒಂದನೇ ಪುಟದಿಂದ...

ಬಹರೇನ್ ನೇತೃತ್ವದ ಈ ನಿರ್ಣಯ ಭಾರತ ಸೇರಿ ಒಟ್ಟು 135 ಅನುಮೋದಕರನ್ನು ಹೊಂದಿತ್ತು. ನಿರ್ಣಯವು ಬಹರೇನ್, ಕುವೈತ್, ಒಮನ್, ಕತಾರ್, ಸೌದಿ ಅರೇಬಿಯಾ, ಯುಎಇ ಮತ್ತು ಜೋರ್ಡಾನ್‌ಗಳ ಪ್ರಾದೇಶಿಕ ಸಮಗ್ರತೆ, ಸಾರ್ವಭೌಮತ್ವ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕೆ ತನ್ನ ಬೆಂಬಲವನ್ನು ಪುನರುಚ್ಚರಿಸಿತು.

ಅನ್ಯಾಯ ಮತ್ತು ಕಾನೂನುಬಾಹಿರ: ಇರಾನ್

ಇರಾನ್ ವಿರುದ್ಧ ಭದ್ರತಾ ಮಂಡಳಿ ಮಂಡಿಸಿದ ಕ್ರಮವನ್ನು ಇರಾನ್ ವಿರೋಧಿಸಿದೆ. ವಿಶ್ವಸಂಸ್ಥೆಗೆ ಇರಾನ್‌ನ ಕಾಯಂ ಪ್ರತಿನಿಧಿ ಅಮೀರ್ ಸಯೀದ್ ಅವರು, 'ನಿರ್ಣಯವು ವಿಶ್ವಸಂಸ್ಥೆಯ ಸನ್ನದು ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಹೊಂದಿಕೆ ಆಗುವುದಿಲ್ಲ' ಎಂದು ಹೇಳಿದ್ದಾರೆ.

'ಯಾವುದೇ ತಪ್ಪು ಮಾಡಬೇಡಿ. ಇಂದು ಇರಾನ್, ನಾಳೆ ಈ ಸ್ಥಾನದಲ್ಲಿ ಬೇರೆ ಯಾವುದೇ ಸಾರ್ವಭೌಮ ರಾಷ್ಟ್ರ ಇರಲಿದೆ' ಎಂದು ಅವರು ಎಚ್ಚರಿಸಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ –3, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು –560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/25/25–26 ದಿನಾಂಕ : 12.03.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಬಿಎಸ್‌ಡಬ್ಲ್ಯೂಎಂಎಲ್ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಬೆಂಗಳೂರು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರತಿ ಕೆಲಸದ ಮೇಲೆ ನಿಗದಿತ ಶುಲ್ಕವನ್ನು (ಮರುಪಾವತಿಸಲಾಗುವುದಿಲ್ಲ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪಾವತಿಸಬೇಕು. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಬೇಕು. ಇತರ ವಿವರಗಳನ್ನು ಬಿಡ್ ದಾಖಲೆಯಲ್ಲಿ ನೋಡಬಹುದು.

ಕ್ರ ಸಂ	ಕಾಮಗಾರಿಗಳ ಹೆಸರು	ಕಾಮಗಾರಿಗಳ ಅಂದಾಜು ಮೊತ್ತ (ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ)	ಇಎಂಡಿ ಮೊತ್ತ	ಅವಧಿ
1	ಬೆಂಗಳೂರು ದಕ್ಷಿಣ ಕ್ಷೇತ್ರದ ಹುಲ್ಲಹಳ್ಳಿ ಜಡ ಭೂಕುಸಿತ ಸ್ಥಳ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜಡ ಭೂಕುಸಿತ ಪ್ರದೇಶ ರಕ್ಷಣೆ ಮತ್ತು ಉಪದ್ರವ ಕಡಿತ ಕಾಮಗಾರಿಗಳು, ಕಿಣ್ವ ಸಿಂಪರಣೆ, ಸುರಕ್ಷತಾ ಕ್ರಮಗಳು ಮತ್ತು ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳು ಸೇರಿದಂತೆ.	**1684.15**	16,84,158.00	9 ತಿಂಗಳು
2	ಆನೇಕಲ್ ಕ್ಷೇತ್ರದ ಚಿಕ್ಕನಾಗಮಂಗಲ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ವಾಸನೆ ಕಡಿತ ಮತ್ತು ಬಾಹ್ಯ ಮೂಲಸೌಕರ್ಯ ಕಾಮಗಾರಿಗಳು, ಕಿಣ್ವ ಸಿಂಪರಣೆ ಮತ್ತು ಸಂಬಂಧಿತ ಸುಧಾರಣಾ ಕಾರ್ಯಗಳು ಸೇರಿದಂತೆ.	**4002.00**	40,20,000.00	12 ತಿಂಗಳು

ಟೆಂಡರ್ ಕಾರ್ಯಸೂಚಿ : (1) ಬಿಡ್ ಪೂರ್ವ ಪ್ರಶ್ನೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **20.03.2026 ರಂದು ಮಧ್ಯಾಹ್ನ 15.00 ಗಂಟೆಯವರೆಗೆ** (2) ಬಿಡ್ ಪೂರ್ವ ಸಭೆಯು ದಿನಾಂಕ : **23.03.2026 ರಂದು ಮಧ್ಯಾಹ್ನ 15:00 ಗಂಟೆಗೆ** ಸಿಇ & ಸಿಜಿಎಂ–2, (ಟೆಕ್) ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು ರವರ ಕಚೇರಿಯಲ್ಲಿ ನಡೆಯಲಿದೆ (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **06.04.2026 ರಂದು ಸಂಜೆ 16.00 ಗಂಟೆಯವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.04.2026 ರಂದು 16.30 ಗಂಟೆಗೆ** (5) ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
DIPR/CP/SHIRDI SAI/6217/2025-26

MARUTI SUZUKI
NEXA
Cleaner Drives.
Greener Horizons.
Experience NEXA's S-CNG range. The conscious way to drive clean.
GRAND VITARA
XL6
S-CNG
DRIVE SMART. CHOOSE GREEN.
GREATER SAFETY | UNMATCHED FUEL EFFICIENCY | BETTER PERFORMANCE | ENHANCED COMFORT
NEXA SAFETY SHIELD
GRAND VITARA
EFFECTIVE PRICE OF ₹ 12.22 LAKH*
XL6
EFFECTIVE PRICE OF ₹ 11.80 LAKH#
SUPERIOR MILEAGE OF UP TO 26.6 km/kg**
SCAN TO CONNECT TO A SHOWROOM NEAR YOU
T&C available at your nearest dealership. *Ex. Showroom Price of Grand Vitara Delta ₹13 lakh, Consumer Offer (-) ₹20 000, Exchange Offer (-) ₹20 000, Loyalty Upgrade Offer (-) ₹20 000, e CRM Retention Scheme (-) ₹3 000, Corporate Offer (-) ₹15 000 = 12.22 lakh. #Ex. Showroom Price of XL6 Zeta ₹12.43 lakh, Consumer Offer (-) ₹25 000, e CRM Retention Scheme (-) ₹3 000, Scrappage Bonus (-) ₹25 000, Corporate Offer (-) ₹10 000= ₹11.80 lakh. The actual Effective Price mentioned may vary based on the customer's eligibility, profile, and applicable offers at the time of purchase. Offers are valid on Grand Vitara Delta Variant & XL6 Zeta Variant. Maruti Suzuki India Limited reserves the right to discontinue offers without notice, and offers may vary across variants. The above offers are valid until stocks last. Creative visualisation. Images used are for illustration purposes only. Car colour may vary due to printing on paper. **Fuel efficiency for Grand Vitara CNG variant as certified by test agency under rule 115 of CMVR 1989.